# I. ಸಂಬಂಧ

## ಆಶಯ

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು

ಹತ್ತಿರಿರಲಿ ದೂರವಿರಲಿ
ಅವನೆ ರಂಗಸಾಲೆ
ಕಣ್ಣುಕಟ್ಟುವಂಥ ಮೂರ್ತಿ
ಕಿವಿಗೆ ಮೆಚ್ಚಿನೋಲೆ

ಚಳಿಗೆ ಬಿಸಿಲಿಗೊಂದೆ ಹದನ
ಅವನ ಮೈಯ ಮುಟ್ಟೆ
ಅದೇ ಗಳಿಗೆ ಮೈಯ ತುಂಬ
ನನಗೆ ನವಿರುಬಟ್ಟೆ

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು

ಕುಂದು ಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು?
ಹೊಟ್ಟೆಗಿತ್ತ ಜೀವ ಫಲವ
ತುಟಿಗೆ ಹಾಲು ಜೇನು

**– ದ.ರಾ.ಬೇಂದ್ರೆ (ಅಂಬಿಕಾತನಯದತ್ತ)**

# ಕನ್ನಡ ಭಾಷಾ ಪತ್ರ

## ಬಿ.ಎ. ಮೂರನೆಯ ಸೆಮಿಸ್ಟರ್

## ೨೦೨೧-೨೨


ಪ್ರಧಾನ ಸಂಪಾದಕರು

ಡಾ. ಡೊಮಿನಿಕ್

ಕಾರ್ಯ ನಿರ್ವಾಹಕ ಸಂಪಾದಕರು

ಡಾ. ಕೆ.ವೈ. ನಾರಾಯಣ ಸ್ವಾಮಿ

ಪರಿಶೀಲಕರು

ಡಾ. ಬೆಳಕೆರೆ ಲಿಂಗರಾಜಯ್ಯ

ಸಂಪಾದಕರು

ಡಾ. ಎನ್. ಮಂಜುನಾಥ

ಡಾ. ಎನ್. ಉಷಾ ಕುಮಾರಿ

ಉಮ ಬಿ.ಎಂ.



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

ಬೆಂಗಳೂರು ನಗರ ವಿಶ್ವವಿದ್ಯಾಲಯ



Scanned by CamScanner

ಬೆಂಗಳೂರು
ನಗರ ವಿಶ್ವವಿದ್ಯಾಲಯ
BENGALURU
CITY UNIVERSITY

ಆಗು ನೀ ಅನಿಕೇತನ
BE BOUNDLESS

# ಕನ್ನಡ ಭಾಷಾ ಪಠ್ಯ

## ಬಿ.ಎ. ಮೂರನೆಯ ಸೆಮಿಸ್ಟರ್ ೨೦೨೧-೨೨

ಪ್ರಧಾನ ಸಂಪಾಕದರು

**ಡಾ. ಡೊಮಿನಿಕ್**

ಕಾರ್ಯ ನಿರ್ವಾಹಕ ಸಂಪಾದಕರು

**ಡಾ. ಕೆ.ವೈ ನಾರಾಯಣಸ್ವಾಮಿ**

ಪರಿಶೀಲಕರು

**ಡಾ. ಬೆಳಕೆರೆ ಅಂಗರಾಜಯ್ಯ**

ಸಂಪಾದಕರು

**ಡಾ. ಎಂ. ಮಂಜುನಾಥ**

**ಡಾ. ಎನ್. ಉಷಾಕುಮಾರಿ**

**ಉಮ ಬಿ.ಎಂ.**

Scanned by CamScanner

# ಪರಿವಿಡಿ


| | | |
|---|---|---|
| **I. ಸಂಬಂಧ** | | **1–21** |
| 1. ನಾವು ಮಕ್ಕಳಲ್ಲವೇ ? | – ಎಸ್.ಜಿ.ಸಿದ್ಧರಾಮಯ್ಯ | 2–6 |
| 2. ಸಂಬಂಧ | – ಸಬಿಹಾ ಭೂಮಿಗೌಡ | 7–11 |
| 3. ತಾಯಿಯ ಒಲವು | – ರಷ್ಯನ್ ಮೂಲ : ಮ್ಯಾಕ್ಸಿಂ ಗಾರ್ಕಿ<br>ಅನುವಾದ : ಕೆ.ವಿ.ಸುಬ್ಬಣ್ಣ | 12–16 |
| 4. ನಮ್ಮ ಮನೆಯ ದೀಪ (ಓದು ಪಠ್ಯ) | – ಹಾ.ಮಾ.ನಾಯಕ | 17–21 |
| **II. ಆಚರಣೆ** | | **22–51** |
| 1. ಪೂಜಾರಿ | – ವಿ.ಕೃ.ಗೋಕಾಕ್ | 23–24 |
| 2. ಶೂಲ | – ಡಾ.ಬೆಸಗರಹಳ್ಳಿ ರಾಮಣ್ಣ | 25–38 |
| 3. ಬೆಂಗಳೂರಿನ ಕರಗ:<br>ಚಾರಿತ್ರಿಕ, ಪೌರಾಣಿಕ,<br>ಮತ್ತು ಸಾಮಾಜಿಕ ಹಿನ್ನಲೆ | – ಡಾ.ಕೆ.ಮರುಳ ಸಿದ್ದಪ್ಪ | 39–45 |
| 4. ಹಬ್ಬ ಮತ್ತು ಬಲಿ (ಓದು ಪಠ್ಯ) | – ಡಾ.ಬಿ.ಟಿ.ಲಲಿತಾನಾಯಕ್ | 46–51 |
| **III. ಅಭಿವೃದ್ಧಿ** | | **52–67** |
| 1. ವೃಕ್ಷ ಸಂಹಾರ | – ಅಶೋಕ ನರೋಡೆ | 53 |
| 2. ಸ್ವಾತಂತ್ರ್ಯೋತ್ತರ ಭಾರತದ<br>ಅಭಿವೃದ್ಧಿ ಪ್ರಗಾಥೆ: | – ಡಾ.ಟಿ.ಆರ್.ಚಂದ್ರಶೇಖರ್ | 54–61 |
| 3. ಪ್ರತಿನಿತ್ಯವೂ ವಿಜ್ಞಾನ ದಿನವಾಗಲಿ ! | – ಸುಧೀಂದ್ರ ಹಾಲ್ದೊಡ್ಡೇರಿ | 62–64 |
| 4. ಅನನ್ಯತೆ ಅಭಿವೃದ್ಧಿಗಳ<br>ಜೊತೆ ಸಮಾನತೆ (ಓದು ಪಠ್ಯ) | – ಎಸ್.ಆರ್.ವಿಜಯಶಂಕರ | 65–67 |
| **IV. ವ್ಯಷ್ಟಿ** | | **68–93** |
| 1. ಚಿಂತಾಮಣಿಯಲ್ಲಿ ಕಂಡ ಮುಖ | – ಗೋಪಾಲಕೃಷ್ಣ ಅಡಿಗ | 69–70 |
| 2. ಬೇನ್ಯಾ | – ಯಶವಂತ ಚಿತ್ತಾಲ | 71–78 |
| 3. ಅಕ್ಕಯ್ ಬೆಳೆವ ಪರಿ<br>(ಅಕ್ಕಯ್ ಪದ್ಮಶಾಲಿ ಆತ್ಮಕಥನ) | – ನಿರೂಪಣೆ: ಡಾ.ಡೊಮಿನಿಕ್ | 79–84 |
| 4. ನಮ್ಮ ಸಮಾಜ–<br>ಒಂದು ಮೌಲ್ಯಮಾಪನ (ಓದು ಪಠ್ಯ) | – ಎಂ.ಬಸವಣ್ಣ | 85–93 |
| **ಮಾದರಿ ಪ್ರಶ್ನೆ ಪತ್ರಿಕೆ** | | **94–95** |


Scanned by CamScanner

ಬೆಂಗಳೂರು
ನಗರ ವಿಶ್ವವಿದ್ಯಾಲಯ

BENGALURU
CITY UNIVERSITY

ಆಗು ನೀ ಅನಿಕೇತನ
BE BOUNDLESS

# ಬೆಂಗಳೂರು ನಗರ ವಿಶ್ವವಿದ್ಯಾಲಯ

Scanned by CamScanner

# 1. ನಾವು ಮಕ್ಕಳಲ್ಲವೇ

– ಎಸ್.ಜಿ. ಸಿದ್ದರಾಮಯ್ಯ

ಜಗದ ತಂದೆ ತಾಯಿಗಳಿಗೆ
ನಮ್ಮದೊಂದೆ ಮನವಿ
ದುಡಿದುಡಿದು ನರಳುತಿರುವ
ನಮ್ಮ ಕಣ್ಣ ಕಂಬನಿ

ನಾವು ಮಕ್ಕಳಲ್ಲವೇ?
ನಮಗೆ ಹಕ್ಕು ಇಲ್ಲವೇ?

ನಲಿವ ಕಲಿವ ಮನಸಿದ್ದು
ದುಡಿವ ಬಲೆಗೆ ಬಿದ್ದವರು
ಆಡಿ ಕುಣಿವ ವಯಸಿನಲಿ
ಹೊಡೆತ ಬಡಿತ ತಿನ್ನುವವರು

ಅಪ್ಪ ಅಮ್ಮ ಬಂಧುಬಳಗ
ಕೂಡಿ ಆಡೋ ಗೆಳೆಯ ಬಳಗ
ಎಲ್ಲರಿಂದ ದೂರವಿದ್ದು
ದುಡಿದುಡಿದು ಸಾಯುವವರು

ಯಾವ ತಪ್ಪಿಗಾಗಿ ನಮಗೆ
ಈ ದುಡಿವ ಶಿಕ್ಷೆಯು?
ಯಾವ ಪಾಪಕಾಗಿ ನಮಗೆ
ಈ ನೋವು ನರಕವು?
ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ?
ನಮಗೆ ಬಾಲ್ಯ ಇಲ್ಲವೇ?

## ಮನೆಗೆಲಸದ ಹೆಣ್ಣುಮಗಳು

ಕುಡುಕ ಅಪ್ಪ ಸಾಲಮಾಡಿ
ನನ್ನ ಜೀತಕಿಟ್ಟನು
ಪಟ್ಟಣಕ್ಕೆ ಕರೆತಂದು
ಮನೆಕೆಲಸಕೆ ಬಿಟ್ಟನು.

ಕಸಮುಸುರೆ ತೊಳೆಯುತೀನಿ
ಬಟ್ಟೆ ಬರೆ ಒಗೆಯುತೀನಿ
ನೀರೊಳಾಡಿ ಕೈಯಿಸೆಲೆತು
ಕಾಲುಹುಣ್ಣು ಮೈಯಿನೋವು

ಯೂನಿಫಾರಂ ಹುಡುಗನನ್ನು
ಶಾಲೆಗೆಂದು ಬಿಡುತೀನಿ
ಶಾಲೆ ಮಕ್ಕಳನ್ನು ನೋಡಿ
ಮೂಕಳಾಗಿ ನಿಲ್ಲುತೀನಿ
ಅವರಂತೆ ನಾನಿಲ್ಲ
ಅವರ ನಗುವು ನನ್ನಲಿಲ್ಲ
ಆ ಪುಸ್ತಕ ಆ ಸ್ಲೇಟು
ಯಾಕೆ ನನಗೆ ಸಿಕ್ಕಲಿಲ್ಲ ?
ಹೆಣ್ಣೊಂದು ಕಲಿತಾರೆ
ಶಾಲೆಯೊಂದು ತೆರೆದಂತೆ
ಮನೆಯೆ ಮೊದಲ ಪಾಠಶಾಲೆ
ತಾಯಿ ಮೊದಲ ಗುರುವು
ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ
ನಮಗೆ ಹಕ್ಕು ಇಲ್ಲವೇ?

## ಹೋಟೆಲ್ ಬಾಲ

ಹೊಟ್ಟೆತುಂಬ ಅನ್ನವಿಲ್ಲ
ಮೈತುಂಬಾ ಬಟ್ಟೆಯಿಲ್ಲ
ಜೀತಕಿಟ್ಟ ಹೋಟೆಲಲ್ಲಿ
ಜೀವ ಹಿಂಡೋ ನೋವು ನರಕ

ತಟ್ಟೆಲೋಟ ತೊಳೆಯಬೇಕು
ಕೊಳಕು ನೆಲವ ಗುಡಿಸಬೇಕು
ಎಂಜಲನ್ನ ಚೂರುಪಾರು
ಕದ್ದು ಮುಚ್ಚಿ ತಿನ್ನಬೇಕು

ಗೋಣಿಚೀಲದೊಳಗೆ ತೂರಿ
ರಾತ್ರಿ ನಿದ್ರೆ ಮಾಡಬೇಕು
ಕತೆ ಹೇಳುವ ಅಜ್ಜಿ ಇಲ್ಲ
ತೊಡೆತೊಟ್ಟಿಲ ಜೋಗುಳಿಲ್ಲ

ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ಏಳುವುದು ತಡವಾದರೆ
ಬಡಿಯುತಾನೆ ನಮ್ಮ ದಣಿಯು.

ಬೆಳಗಿನಿಂದ ಸಂಜೆವರೆಗೆ
ಬೀದಿ ಬೀದಿ ಸುತ್ತುತೀವಿ
ಚಿಂದಿಚೂರು ಆಯುತೀವಿ
ತಿಪ್ಪೆರಾಶಿ ಕೆದಕುತೀವಿ

ನೊಣನೊರಜು ಹಾರುತಾವೆ
ಕೈಯಿಮೈಯಿ ಕಚ್ಚುತಾವೆ
ಗೊಣ್ಣೆ ಮೂಗು ಕಣ್ಣುಪಿಸುರು
ತಿನ್ನೋ ತುತ್ತು ಕಸಾಕಸುರು

ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ
ನಮಗೆ ಬಾಲ್ಯ ಇಲ್ಲವೇ ?

**ಗ್ಯಾರೇಜ್ ಬಾಲ**

ಗೆಳೆಯರೆಲ್ಲ ಕೂಡಿಕೊಂಡು
ಚಿನ್ನಿದಾಂಡು ಆಡುತಾರೆ
ಬಣ್ಣಬುಗುರಿ ಎನ್ನುತ್ತಾರೆ
ಟ್ವಿಂಕಲ್‌ಟ್ವಿಂಕಲ್ ಹಾಡುತಾರೆ

ನನ್ನ ಮಾತ್ರ ಇಲ್ಲಿ ತಂದು
ಗ್ಯಾರೇಜಿಗೆ ಹಾಕಿದಾರೆ
ನಟ್ಟುಬೋಲ್ಟು ಸ್ಪ್ಯಾನರೆಂದು
ಬೆಳ್ಳು ತಲೆಗೆ ಮಟ್ಟುತಾರೆ

ಕೈಯಿ ಮೈಯಿ ಗ್ರೀಸು ಮೆತ್ತಿ
ತಿನ್ನೋ ತುತ್ತು ಕಪ್ಪುಮಸಿ
ಮಕ್ಕಳೆಲ್ಲ ದೇವರೆಂದು
ಹೇಳುತಾರೆ ದೊಡ್ಡವರು.

**ಭಿಕ್ಷುಕ ಬಾಲ**

ಗೂಡೆ ಮಾರಮ್ಮನನ್ನು
ಅವ್ವ ಹೊತ್ತು ತಿರುಗುತಾಳೆ
ಅಪ್ಪ ಕೈಲಿ ಚಾಟಿಹಿಡಿದು
ಮೈಯಿಗೆ ಹೊಡಕೋತಾನೆ

ಕೈಲಿ ತಟ್ಟೆ ಹಿಡಿದು ನಾನು
ಅಮ್ಮ ತಾಯಿ ಬೇಡುತೇನೆ
ಹರಿವ ಕಾರು ಪಕ್ಕದಲ್ಲಿ
ರಿಂಗಿನೊಳಗೆ ಉರುಳುತೇನೆ.

ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ಗೂಡೆ ಮಾರಮ್ಮನನ್ನು
ಅವ್ವ ಹೊತ್ತು ತಿರುಗುತಾಳೆ.

ಊರು ಇಲ್ಲ ಸೂರು ಇಲ್ಲ
ಬಯಲೆ ನಮ್ಮ ಜಾಗವು
ಇಂದು ಇಲ್ಲಿ ನಾಳೆ ಅಲ್ಲಿ
ನಮಗೆ ಕೂನು ಇಲ್ಲವು.

**ಸ್ಲಂ ಬಾಲ**

ಸ್ಲಮ್ಮಿನ ಲೋಕದ
ಮಕ್ಕಳು ನಾವು
ಹಲವು ಚರಂಡಿಯೆ
ನಮ್ಮಯ ಜಾಗವು

ಎದ್ದರು ಬಿದ್ದರು
ಮಲಮೂತ್ರ
ಈಜಿಗು ಮೋಜಿಗು
ಇರುವುದೆ ಕೊಚ್ಚೆ
ಕಾನ್ವೆಂಟ್ ಮಕ್ಕಳ
ಅಪ್ಪ ಅಮ್ಮ
ಅವರ ಜೊತೆಯಲಿ
ಸ್ಕೂಟರು ಮೋಟರು

ನಮಗೆ ಶಾಲೆಯು
ಏಕಿಲ್ಲ?
ದೇವರ ಮಕ್ಕಳು
ನಾವಲ್ಲ?

– **ಎಸ್.ಜಿ. ಸಿದ್ದರಾಮಯ್ಯ**

**ಆಕರ :** ಉರಿವ ಬತ್ತಿ ತೈಲ

* * * * *

# ೨. ಸಂಬಂಧ

**– ಸಬಿಹಾ ಭೂಮಿಗೌಡ**

ಎಂದಿನಂತೆ ನಸುಕಿನಲ್ಲೆ ಎದ್ದು ಬಹಿರ್ದೆಸೆಗೆಂದು ಹೋಗಿದ್ದ ಸಾಹುಕಾರ ಬಸವಣ್ಣೆಪ್ಪನವರು ಹಿಂದಿರುಗುವ ದಾರಿಯಲ್ಲಿ ತೀವ್ರ ಎದೆನೋವು ಕಾಣಿಸಿಕೊಂಡು ಕುಸಿದುಬಿದ್ದರು. ಸಾಹುಕಾರರು ಬಿದ್ದುದನ್ನು ಕಂಡ ಸುತ್ತಲಿನ ಮಂದಿ ಓಡಿ ಬಂದು, ಅವರನ್ನು ಎತ್ತಿ ಕೂರಿಸಿ, ಮುಖಕ್ಕೆ ನೀರು ಚಿಮುಕಿಸಿದರು. ಆದರೆ ಗಜಗಾತ್ರದ ಬಸವಣ್ಣೆಪ್ಪನವರನ್ನು ಎತ್ತಿಕೊಂಡು ಬರಲು ಸಾಧ್ಯವಾಗದೆ, ಎತ್ತಿನ ಗಾಡಿಯಲ್ಲಿ ಕೂರಿಸಿಕೊಂಡು ಮನೆಯತ್ತ ಕರೆತಂದರು. ಈ ಸುದ್ದಿ ಕ್ಷಣದಲ್ಲಿ ಕಾಳ್ಗಿಚ್ಚಿನಂತೆ ಊರಲ್ಲೆಲ್ಲ ಹರಡಿತು. ಸುದ್ದಿ ಕಿವಿಗೆ ಬಿದ್ದದ್ದೆ ರಾಜವ್ವನ ಕೈಯಲ್ಲಿದ್ದ ನೀರಿನ ಚರಿಗೆ ಕೆಳಗೆ ಬಿತ್ತು. ಏನು ಎತ್ತ ಎಂದು ನೋಡದೆ, ಸೀದಾ ಬಸವಣ್ಣೆಪ್ಪನವರ ಮನೆಯತ್ತ ಓಡಿದಳು. ಅವಳನ್ನು ಕಂಡದ್ದೇ, ಸಾಹುಕಾರರನ್ನು ಬಂಡಿಯಿಂದ ಇಳಿಸಲು ನೋಡುತ್ತಿದ್ದ ಗುಂಪು ಇಬ್ಭಾಗವಾಯಿತು. ಅಲ್ಲಿಯವರೆಗೆ ನೋವಿನೊಂದಿಗೆ ಹೋರಾಡುತ್ತ ಕಣ್ಮುಚ್ಚಿದ್ದ ಬಸವಣ್ಣೆಪ್ಪನವರು ರಾಜವ್ವಳ ಧ್ವನಿಗೆ ಮೆಲ್ಲನೆ ಕಣ್ತೆರೆದರು. ಒಂದು ಕ್ಷಣ ಇಬ್ಬರ ಕಣ್ಣುಗಳು ಕೂಡಿದವು. ಮರುಗಳಿಗೆಯಲ್ಲಿ ಸಾಹುಕಾರ ಗೋಣು ವಾಲಿತು. ಎಲ್ಲರೂ ಜಗತ್ತೇ ಸ್ತಬ್ಧವಾದಂತೆ ಮರಗಟ್ಟಿ ಹೋದರು. ಮುಂದೇನು ಮಾಡಬೇಕು ಎಂಬುದೇ ಹೊಳೆಯದೆ ಅವರಿಗೆ ಕೈಚೆಲ್ಲುವಂತಾಯಿತು. ನಿಧಾನವಾಗಿ ಯಾಂತ್ರಿಕವೆಂಬಂತೆ ಕಳೇಬರವನ್ನು ಅವರ ಮನೆಯೊಳಗೆ ಇರಿಸಿದರು. ಇಡೀ ಮನ ಬಣಗುಟ್ಟುತ್ತಿತ್ತು. ಒಳಗೆ ಒಂದು ನರಪಿಳ್ಳೆಯೂ ಇಲ್ಲ. ಯಾರೋ ಅವರ ಹೆಂಡತಿ ಮಕ್ಕಳಿಗೆ, ಬಂಧು-ಬಾಂಧವರಿಗೆ ತಂತಿ ನೀಡಲು ಓಡಿದರು. ಯಾವತ್ತೂ ಆ ಮನೆಯೊಳಗೆ ಕಾಲಿಡದ ರಾಜವ್ವ ಸೀದಾ ಒಳನುಗ್ಗಿ, ಪಡಸಾಲೆಯಲ್ಲಿದ್ದ ಕಳೇಬರದ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು, "ಯಾರಾದರೂ ಬಾಯಿಗೆ ನೀರು ಹಾಕ್ರಿ" ಎಂದು ಗೊಗರೆಯತೊಡಗಿದಳು.

"ಏನ್ ಸ್ವಾಭಿಮಾನ ಅಂತೀನಿ ಸಾಹುಕಾರ್ದು ! ಅಷ್ಟ್ ಎದೀನೋವು ಇದ್ರೂ, ದಾರ್‍ಯಾಗ ತಮ್ಮ ಮನಿ ಬಾಜೂದಾಗ ಇತ್ತಲ್ಲ ಅಂತ ಮಂದಿ ಗಾಡೀನ ಅಲ್ಲೇ ತರಬ್ಯಾಕ ಹೋದ್ರ, ಬ್ಯಾಡಂತ ಸನ್ನಿ ಮಾಡದ್ರಲ್ಲ ! ಅವಾದ್ರೂ ಎಂಥ ಮೂಳಗಳು ಅಂತೀನಿ. ಯಾಕ? ಏನಾತು ? ಅಂತೇನಾರS ಹತ್ರ ಬಂದ್ರ ? ಖೂನS ಇಲ್ದವ್ರಂಗ ಕೂತಿದ್ರೂ ಅಂತೀನಿ!" ಎಂದ ಫಕೀರಪ್ಪ.

"ಅಲ್ಲಾ ಕಟ್ಟೀಮ್ಯಾಗ ಯಾರಿದ್ರು? ಸಾವ್ಕಾರ್‍ರ ತಮ್ಮನ್ ಮಕ್ಳಿಗೆ ಗೊತ್ತಾತಾ ಇಲ್ಲಾ? ಇಂಥಾ ವ್ಯಾಳ್ಯಾದಾಗೂ ಏನ್ ಹಗತನ ಸಾಧಿಸ್ತಾರಾ ಅಂತೀನಿ ! ಅಂವ ಶರಣಪ್ಪ ಹಂಗಲ್ಲ. ಅವಂಗ ದೊಡ್ಡಪ್ಪನ್ನ ಕಂಡ್ರ ಕಾಳ್ಜಿ ಐತಿ. ಅವಂಗ ಸುದ್ದಿ ಮುಟ್ಟಿಸ್ರಿ" ಎಂದ ಸಾಹುಕಾರರ ಮನೆಆಳು ಚಂದಪ್ಪ.

ಅಷ್ಟೊತ್ತಿಗೆ ಸುತ್ತಮುತ್ತಲ ಮನೆಗಳಿಂದ ಬಂದ ಹೆಂಗಸರು ಬಾಗಿಲಲ್ಲೇ ಇಣುಕಿ ನೋಡುತ್ತ ರಾಜವ್ವಳನ್ನು ಒಳಗೆ ಕಂಡು ಗಾಬರಿಗೊಳ್ಳುತ್ತ ಪಿಸುಗುಟ್ಟತೊಡಗಿದರು.

'ಅಲ್ಲಾ ಕಳಕವ್ವ, ರಾಜವ್ವನ್ನ ನೋಡಿದ್ಯಾ? ಸ್ವಾಮಿಗಳು ಬರೂ ಹೊತ್ತಾಗ ಆಕಿ ಅಲ್ಲಿದ್ರ ಮತ್ತರಗಳಿ ಆಗ್ತೈತಿ. ಆಕಿನ ಅಲ್ಲಿಂದ ಎಬ್ಬಿಸ್ಬೇಕಿತ್ತಲ್ಲಬೇ" ಎಂದಳು ಲಕ್ಷ್ಮವ್ವ.

"ಹೂಂ. ನೋಡ್ ನಗ ಹೊಳೀಲಿಲ್ಲ. ಅಂದ್ದಂಗ ಸಾಹುಕಾರ್ರು ಅಕೀನ್ನ ನೋಡೂತನ್ಕ ಜೀವS ಕೈಯಾಗ ಹಿಡದಿದ್ರು ಅನ್ಸತ್ತನೋಡಬೇ. ಅಕೀ ಮಾರಿ ನೋಡೂತ್ಲೆ ಚೆಂಡ್ ಚೆಲ್ಲೀದ್ರಂತ ನೋಡ್. ಅಕೀ ಪುಣ್ಯಾಅರ ಎಷ್ಟ್ ಇರಬೇಕ್ ಅಂತೀನಿ" ಎಂದಳು ಕಳಕವ್ವ.

“ಹೀಂಗಂತೀಯಾ? ಎಲ್ಲಾ ನಾವ್ ನಾವ್ ಪಡದ್ ಬಂದಿರೂದು. ಅಲ್ಲಾ ಮನ್ನೆಮನ್ನೆರ ಮತ್ತೆ ಜಗಳ ಮಾಡ್ಕೊಂಡು ಸಾವ್ಕಾರ್ರ ಹೇಣ್ತಿ ತೌರಿಗೆ ಹೋದ್ಲಲ್ಲ ! ಇಲ್ಲೇ ಇದ್ದಿದ್ರ ಕೊನೀಗಾಲ್ದಾಗ ಎರಡ್ ಕಾಳ್ ನೀರರ ಹಾಕೂ ಭಾಗ್ಯ ಅಕಿಗೆ ಸಿಗ್ತಿತ್ತಲ್ಲ”.

“ಐ ಬಿಡು, ರಾಜವ್ವ, ಏನ್ ಹೆಣ್ತಿಗಿಂತ ಕಡಿಮಿ ಮಾಡ್ಯಾಳ? ಸಾಬ್ರಾಕಿ ಆದ್ರೇನಾತ್, ಮೂವತ್ ಮೂವತ್ತೈದು ವರ್ಷದಿಂದ ನಾವ ನೋಡ್ಲಾಕತ್ತೀವಲ್ಲ....ಸಾವ್ಕಾರ್ರೂ ಚೆನ್ನವ್ವಗೂ ಕಡ್ಮಿ ಮಾಡಿಲ್ಲ, ರಾಜವ್ವಗೂ ಕಡಿಮಿ ಮಾಡಿಲ್ಲ. ಇಬ್ರ ಮಕ್ಳನ್ನೂ ಒಂದೇ ರೀತೀಲೆ ನೋಡ್ಕೊಂಡಾರ, ಲಗ್ನ ಮಾಡ್ಯಾರ. ಈ ಮುದಿ ವಯಸ್ನಾಗೂ ಗಂಡನ್ನ ಕ್ಷಮಿಸ್ದೆ ಹ್ಯಾವಾ ಮಾಡ್ಕೊಂಡ್ ನಿಂತ್ರ ಏನ್ ಬಂದಂಗಾತು ಅಂತೀನಿ”.

“ಏ ಶರಣಪ್ಪ ಗಡಾದ ಶಿವಮ್ಮ ಅದಾಳಲ್ಲ. ಅಕೀಗ ಮದ್ಲ ಸುದ್ದಿ ಮುಟ್ಸಿಸ್ರೋ. ಈ ಭಾವನ ಮ್ಯಾಲ ಭಾಳ ಅಕ್ಕರಿಕಿ ಇಟ್ಕೊಂಡಾಳ ಪಾಪ. ಇನ್ನ ಆಕಿ ಮ್ಯಾಲೇಳ್ಯೂದಕ್ಕ ಭಾಳ ದಿವ್ಸ ಹಿಡೀತಾವ ಅನ್ಸತ್ತ”.

“ರಾಜವ್ವನ ಮಗಳು ಶಿಮೊಗ್ಗದಾಗ ಅದಾಳಂತಲ್ಲ, ಅಕಿಗೂ ಸುದ್ದಿ ಕಳ್ಸು ಅನ್ಬೇಕಿತ್ತು. ಸಾವ್ಕಾರ್ರಿಗೆ ತಮ್ಗಳು ಈರವ್ವನ ಮ್ಯಾಲೆ ಇದ್ದಷ್ಟು ಪ್ರೀತಿ ಸುಂದ್ರವ್ವನ ಮ್ಯಾಲೂ ಇತ್ತು. ನಾಕೈದು ವರ್ಷಾತ ಏನ. ಮಗಳು ಅಳಿಯ ಗಾಡಿ ಮಾಡ್ಕೊಂಡು ಶಿಮೊಗ್ಗದ ಸುತ್ತಮುತ್ತ ಊರೆಲ್ಲ ತೋರ್ಸಿದ್ರು ಅಂತ ಸಾವ್ಕಾರ್ರು ಎಲ್ರ ಜೋಡೀಲೆ ಏನ್ ಖುಷೀಲೆ ಹೇಳ್ತಿದ್ರು”.

“ನೀ ಏನ ಅನ್ನಬೇ, ಸಾವ್ಕಾರ್ರಿಗೆ ಇಂಥಾ ಗತಿ ಬರ್ಬಾರ್ದಿತ್ತು. ಅವ್ರು ಇವ್ರು ಅಂತ ಭೇದ ಮಾಡ್ದ ಅಣ್ಣ ತಮ್ದೀರ್ನ ದಾರೀಗೆ ಹಚ್ಚಿದ್ರು; ಅವ್ರಿಗೆ ಅಂತ ಮನಿ ಕಟ್ಸಿ ಕೊಟ್ರು; ಅವ್ರ ಮಕ್ಳನ್ನ ಹಚ್ಕೊಂಡ್ರು..... ಆದ್ರ ಕೊನೀಗಾಲಕ್ಕ ನೋಡ್ ಹಿಂಗ್ ತಮ್ಮ ಮನಿಯಾಗ ಒಂದ್ ನರಪಿಳ್ಳೆ ಇಲ್ದಾಂಗ ಆತಲ್ಲಬೇ.....”

ಇವರು ಮಾತು ಇನ್ನೂ ಮುಂದುವರಿಯುತ್ತಿತ್ತೇನೋ, ಅಷ್ಟರಲ್ಲಿ ಸಾವ್ಕಾರ್ರ ಹೆಂಡತಿ ಚನ್ನಮ್ಮ ಮತ್ತು ಮಗಳು ಈರವ್ವ ಬಾಯಿ ಬಡಿದುಕೊಳ್ಳುತ್ತಾ ಬರುವುದು ದೂರದಿಂದ ಕಂಡುಬಂದಿತು. ಅದನ್ನು ಕಂಡದ್ದೇ ತಡ, ಕಳಕವ್ವ ಮತ್ತು ಲಕ್ಷ್ಮವ್ವ ದುಡುದುಡನೆ ಹೋಗಿ ರಾಜವ್ವಳ ಕಿವಿಯಲ್ಲಿ ಉಸುರಿ, ಹೆಚ್ಚು ಕಡಿಮೆ ಅವಳನ್ನು ಮನೆಯಿಂದ ಹೊರಗೆ ಎಳದುಕೊಂಡೇ ಬಂದು ಮೂಲೆಯಲ್ಲಿ ಕೂರಿಸಿದರು.

**– 2 –**

ಸುಂದ್ರವ್ವ ಬರುವಷ್ಟರಲ್ಲಿ ಹೊತ್ತು ಇಳಿದಿತ್ತು. ಊರ ಸಮಸ್ತರು ಮುಂದಿನ ಕಾರ್ಯಕ್ಕೆ ಅವಸರಿಸುತ್ತಿದ್ದರು. ಕಡೆಯ ಬಾರಿಗೆ ಅಪ್ಪನ ಮುಖ ನೋಡುವ ಅವಕಾಶವಾದರೂ ಸಿಕ್ಕಿತಲ್ಲ. ಅದೇ ಪುಣ್ಯ ಎಂಬ ಭಾವ ಸುಂದ್ರವ್ವಳಲ್ಲಿ ದಟ್ಟವಾಗಿತ್ತು. ಈರವ್ವ, ಸುಂದ್ರವ್ವ ಮುಖಮುಖ ನೋಡಿಕೊಂಡರು. ಯಾರು ಯಾರಿಗೆ ಸಮಾಧಾನ ಹೇಳಬೇಕು? ಇಬ್ಬರೂ ಭೇಟಿಯಾಗಿ ನಾಕೈದು ವರ್ಷಗಳೇ ಉರುಳಿವೆ. ಮಕ್ಕಳಿಗೆ ಬೇಸಿಗೆ ರಜೆ ಬಂದಾಗ, ಊರಿಗೆ ಬರುವುದು ರೂಢಿ. ಹಾಗೆ ಬಂದಾಗ ಇಬ್ಬರೂ ತಮ್ಮ ಸುಖ ದುಃಖ ಹಂಚಿಕೊಳ್ಳುತ್ತಿದ್ದರು. ತಮ್ಮ ಮಕ್ಕಳು ಜೊತೆಯಾಗಿ ಆಡುವುದು, ಗುದ್ದಾಡುವುದನ್ನು ದೂರದಿಂದಲೇ ನೋಡಿ ಹರ್ಷಿಸುತ್ತಿದ್ದರು. ಮಕ್ಕಳು ಬೆಳೆದಂತೆ ಅವರ ರಜೆಗಳ ವ್ಯತ್ಯಾಸದಿಂದ ಇತ್ತೀಚೆಗೆ ಇಬ್ಬರ ಭೇಟಿ ತಪ್ಪುತ್ತಾ ಬಂದಿದೆ. ಇವತ್ತೂ ಮಕ್ಕಳಿಲ್ಲದೆ ಒಬ್ಬೊಬ್ಬರೇ ಬಂದಿದ್ದಾರೆ!

ಕ್ರಿಯೆಗಳೆಲ್ಲ ಮುಗಿದು, ತಲೆಗೆ ನೀರೆರೆದುಕೊಂಡು ಈರವ್ವ, ಸುಂದ್ರವ್ವ ಕೂತಿದ್ದಾರೆ. ಸುಂದ್ರವ್ವನ ತಗ್ಗಿನ ಕಣ್ಣುಗಳು ಆಕಸ್ಮಾತ್ ತನ್ನ ಕೈಗಳತ್ತ ಹೊರಳಿದವು. ಅಪ್ಪ ಮಾಡಿಸಿಕೊಟ್ಟ ಬಿಲವಾರ ಮತ್ತು ಪಾಟ್ಲಿ ಅಲ್ಲಿ ಮಿನುಗುತ್ತಿದ್ದವು. ಮರುಕ್ಷಣದಲ್ಲಿ ಈರವ್ವನ ಕೈಯತ್ತ ನೋಡಿದಳು. ಏನೂ ವ್ಯತ್ಯಾಸವಿಲ್ಲ. ಅವೇ ಮಾದರಿಯ ಬಿಲವಾರ, ಪಾಟ್ಲಿ ಅಲ್ಲಿವೆ. ಎಲ್ಲೂ ಯಾವತ್ತೂ ತಮ್ಮ ನಡುವೆ ವ್ಯತ್ಯಾಸ ಮಾಡದ ಅಪ್ಪನ ವ್ಯಕ್ತಿತ್ವ. ಆಕೆಯ ಕಣ್ಣೆದುರು ಬಂದಿತು. ಸುಂದ್ರವ್ವ ಈರವ್ವನನ್ನು ದಿಟ್ಟಿಸಿದಳು. ಅವಳದೂ ಅದೇ ನೋಟ ! ಬಾಲ್ಯದಿಂದಲೂ ಹೀಗೇ ಸಾಗಿದೆ. ಒಂದೇ ರೀತಿಯ ಗೊಂಬೆಗಾಗಿ, ಮುತ್ತಿನ ಸರಕ್ಕಾಗಿ, ಲಂಗ, ಸೀರೆಗಾಗಿ ಅಪ್ಪನೊಂದಿಗೆ ಜಗಳಾಡಿದ್ದು; ತಾನು ತಂದಿದ್ದರೂ ಇಲ್ಲವೆಂದು

ಕೈಯಾಡಿಸಿ, ಸತಾಯಿಸಿ, ಇನ್ನೇನು ಕಣ್ಣೀರು ತುಳುಕಿತು ಅನ್ನುವಷ್ಟರಲ್ಲಿ ತಂದುದನ್ನು ಮುಂದೆ ಹಿಡಿಯುತ್ತಿದ್ದ ಅಪ್ಪನ ಚಿತ್ರ ಈರವ್ವಳ ಸ್ಮೃತಿಯಲ್ಲಿ ಹಾದುಹೋಯಿತು. ಹಿರಿಯರ ಕೋಪತಾಪಗಳಾವುವೂ ಇವರ ಸ್ನೇಹವನ್ನು ಒಡೆಯುವಷ್ಟು ಸಮರ್ಥವಾಗಿರಲಿಲ್ಲ. ತೆಳುವಾದ ಮಂಕು ಕವಿಯುವ ಮೊದಲೆ ಅಪ್ಪನ ವಾತ್ಸಲ್ಯ ಅವರನ್ನು ತಬ್ಬುತ್ತಿತ್ತು.

ಮಗ್ಗುಲಲ್ಲೇ ಇದ್ದ ಸುಂದ್ರವ್ವನಿಗೆ ಇನ್ನಿಷ್ಟು ಅಂಟಿಕೊಂಡಂತೆ ಕೂತ ಈರವ್ವ "ಯಾಕಬೇ ಒಬ್ಬಾಕೀನ ಬಂದ್ಯಾ"? ಎಂದಳು.

"ಹೂಂನಬೇ ಮಕ್ಕಿಗೆ ಪರೀಕ್ಷ ನಡದಾವ, ಮತ್ತ ಮನೀಕಡೆ ಯಾರರ ಇರ್ಬೇಕಲ್ಲ. ನೀನೂ ಒಬ್ಬಾಕೀನ ಬಂದ್ಯಾ"?

"ಹೂಂನವ. ನಮ್ ಅತ್ತಿಗೂ ವಯಸ್ಸಾತು. ಯಜಮಾನ್ರು ಕೆಲ್ಸದ ಮ್ಯಾಲ ಊರಿಗೆ ಹೋಗಿದ್ರS. ತೀಳಿತಿದ್ದಂಗ ದಡದಡ ಬಂದ್ ಬಿಟ್ಟೆ ನೋಡ್".

ಏನೋ ನೆನಪಾಗಿ ಸುಂದ್ರವ್ವನ ಮುಖ ಗಂಭೀರವಾಯಿತು. ತನ್ನೊಂದಿಗೆ ಗಂಡನೂ ಬರಬೇಕೆಂದು ಆಕೆ ನಿರೀಕ್ಷಿಸಿದ್ದಳು. ಆತ ಮನಸ್ಸು ಮಾಡಿದ್ದರೆ ಅದು ಕಷ್ಟವೂ ಆಗುತ್ತಿರಲಿಲ್ಲ. ಆದರೆ.... ತನ್ನ ಆಸೆಯನ್ನು ಗಂಡನ ಮೇಲೆ ಹೇರುವ ಧೈರ್ಯ ಮಾತ್ರ ಆಕೆಗೆ ಇರಲಿಲ್ಲ. ಇದಕ್ಕೆಲ್ಲ ಕಾರಣ ಇತ್ತಲ್ಲ. ಅದೇನು ಸಣ್ಣ ಕಾರಣವೇ? ಅಥವಾ ಬರೆದುದನ್ನು ಅಳಿಸಿಹಾಕುವಂತೆ ಅವಳ ಭೂತಕಾಲವನ್ನು ಅಳಿಸಿಹಾಕಲು ಬಂದೀತೆ? ಅವಳಿಗೊಂದು ಸಾಮಾಜಿಕವಾದ ಸ್ಥಾನಮಾನವನ್ನು ನೀಡಿದ, ಗೌರವವನ್ನು ತಂದುಕೊಟ್ಟ ಗಂಡನಿಗೆ ಉಪದೇಶ ಹೇಳುವಷ್ಟು ಸಲಿಗೆಯಾಗಲಿ, ಅಧಿಕಾರವಾಗಲಿ ಆ ಮನೆಯಲ್ಲಿ ಆಕೆಗೆ ಎಲ್ಲಿಂದ ಬರಬೇಕು ? ಇದಕ್ಕೆ ಮೂಲ ಭಿತ್ತಿಯಾಗಿ ಎದುರು ನಿಂತದ್ದು....ಅದೇ.....

ತವರಿನಲ್ಲಿ ಸುಂದ್ರವ್ವಳಾಗಿ ಪರಿಚಿತಳಾದರೂ ವಿವಾಹಾನಂತರ ಅವಳು ಸಾಹಿರಾ ಆಗಿದ್ದಾಳೆ. ಅವಳ ಈ ಇಬ್ಬಂದಿತನ ರಾಜವ್ವನಿಗೆ ಒದಗಿರಲಿಲ್ಲ. ಹಿಂದೂಗಳ ಜೊತೆಯಲ್ಲಿ ಬೆಳೆದು, ಅವರ ನಂಬಿಕೆಗಳನ್ನೇ ಅಂತರ್ಗತ ಮಾಡಿಕೊಂಡವರು ಅವರು. ಸುತ್ತಲಿನವರು ಕರೆದ ಹಿಂದೂ ಹೆಸರುಗಳಿಂದಲೇ ಗುರುತಿಸಿಕೊಂಡವರು. ಮುಂದೆ ತಾವು ಮುಸಲ್ಮಾನರೆಂಬುದನ್ನೇ ಆ ತಾಯಿ–ಮಗಳು ಮರೆತಿದ್ದರು. ನೆನಪಿಸಬೇಕಾದ ಮುಲ್ಲಾಗಳೂ ಆ ಊರಲ್ಲೇ ಇದ್ದಿರಲಿಲ್ಲ. ಇಂಥ ಸಂಬಂಧ ಆ ಊರಲ್ಲಿ ಹೊಸತೂ ಆಗಿರಲಿಲ್ಲ. ಅವರ ಭಾಷೆ, ಉಡುಗೆ, ಆಹಾರ ಎಲ್ಲವೂ ಸುತ್ತಲ ಎಲ್ಲರಂತೆಯೇ ಇದ್ದವು. ಧರ್ಮ ಅವರ ಚರ್ಮದಿಂದ ಆಳಕ್ಕೆ ಇಳಿದಿರಲಿಲ್ಲ. ಹೀಗಿರುವಾಗ ಧರ್ಮದ ಪ್ರಶ್ನೆ ಎದುರಾದದ್ದೇ ಸುಂದ್ರವ್ವಳ ವಿವಾಹದ ಸಂದರ್ಭದಲ್ಲಿ! ಈ ಬೆಳವಣಿಗೆಯೇ ಸುಂದ್ರವ್ವ ಮತ್ತು ಈರವ್ವರ ಕೌಟುಂಬಿಕ ಸಂಬಂಧಗಳ ಮೇಲೂ ಪ್ರಭಾವ ಬೀರತೊಡಗಿತ್ತು. ಸಾಹಿರಾ ಆಗಿದ್ದ ಸುಂದ್ರವ್ವಳ ಗಂಡನಿಗೆ ಮಾವನ ಬಗ್ಗೆ ಗೌರವಗಳಿದ್ದರೂ ಸಾರ್ವಜನಿಕವಾಗಿ ಅವರನ್ನು ಒಪ್ಪಿಕೊಳ್ಳುವುದು ಮಾತ್ರ ಬಿಸಿತುಪ್ಪವಾಗಿತ್ತು. ಅತ್ತೆ–ಮಾವನವರನ್ನು ಸತ್ಕರಿಸಿ, ಊರೆಲ್ಲ ತೋರಿಸುವ ಔದಾರ್ಯ ತೋರಿದರೂ, ಪಟ್ಟಣದವರ ಹಲವು ಪ್ರಶ್ನೆಗಳಿಗೆ ಖಾಸಿಂ ಸಾಹೇಬರು ಉತ್ತರಿಸಲು ತಡಕಾಡಬೇಕಾಗುತ್ತಿತ್ತು ಅಂಥ ಸಂದರ್ಭಗಳಲ್ಲಿ.

"ನಿಮ್ ಅಪ್ಪಂಗ ಹೇಳು, ಮನಿಯಾಗಿದ್ದಾಗ ಬರೀ ಬನಿಯನ್ನಾಗ ಇರಬ್ಯಾಡ ಅಂತ. ಆ ಉಳ್ಳಾಗಡ್ಡಿ ಪೋರಿ ಹಂಗ ಇರೂ ಬನಿಯನ್‌ನಿಂದ ಅವ್ರ ಬೆಳ್ಳಿ ಕರಡಿಗಿ ಎಲ್ರ ಕಣ್ಣೂ ಬೀಳತ್ತ, ಮದ್ಲ ಇಲ್ಲಿ ಮಂದಿ ಒಂದ್ ನಮೂನಿ, ಅಂಥಾದ್ರಾಗ ಇದು ಸಿಕ್‌ಬಿಟ್ರ ಕೇಳ್‌ಬೇಕಾ? ಸ್ವಲ್ಪ ಸೂಕ್ಷ್ಮಾಗಿ ಇರ್ಬೇಕು ಅಂತ ಹೇಳು ನೀನ" ಎಂದು ಸಿಡಿಮಿಡಿಗುಟ್ಟುತ್ತಿದ್ದರು.

ಗಂಡನ ಮಾತನ್ನು ತಪ್ಪೆನ್ನಲೂ ಆಗದೆ, ಅಪ್ಪನಿಗೆ ಗಂಡ ಹೇಳಿದ ವಿಚಾರವನ್ನು ಮುಟ್ಟಿಸಲೂ ಆಗದೆ ಸುಂದ್ರವ್ವ ಒದ್ದಾಡಿದ ದಿನಗಳೆಷ್ಟು ! ಅಜ್ಜನ ಪೂಜೆ, ವಿಭೂತಿಪಟ್ಟೆ ಇವುಗಳನ್ನು ಕುರಿತಂತೆ ಮಕ್ಕಳ ಕುತೂಹಲದ ಪ್ರಶ್ನೆಗಳನ್ನಾದರೂ ನಿವಾರಿಸಬಲ್ಲಳು. ಆದರೆ.....

ಅತ್ತ ಈರವ್ವನದು ಇನ್ನೊಂದು ಬಗೆ. ಆಕೆಯ ಗಂಡನಿಗೆ ಮಡದಿ ಆಗಾಗ ಊರಿಗೆ ಹೋಗುವುದು, ಸುಂದ್ರವ್ವನೊಂದಿಗಿನ ಆಕೆಯ ಸಖ್ಯ, ಇಬ್ಬರ ಮಕ್ಕಳೂ ಬೆಳೆಯುವ ಕ್ರಮ ಹಿತವಿಲ್ಲ. ಹೀಗಾಗಿ ಹೆಂಡತಿಗೆ ಖಡಾಖಂಡಿತ ಹೇಳಿ ಮನಸ್ಸು ನೋಯಿಸುವುದಕ್ಕೂ ಆಗದೆ, ಅವಳ ಜೊತೆಯಲ್ಲಿ ತಾನು ಊರಿಗೆ ಹೋಗುವುದನ್ನೇ ತಪ್ಪಿಸುತ್ತಿದ್ದ, ಇವೆಲ್ಲದರ ಪರಿಣಾಮ ಇತ್ತೀಚಿನ ವರ್ಷಗಳಲ್ಲಿ ಸ್ಪಷ್ಟ ರೂಪ ಪಡೆದುಕೊಳ್ಳುತ್ತಿತ್ತು. "ಇದೆಲ್ಲಾ ಎಷ್ಟ್ ಕಾಲ? ನಮ್ ಮಕ್ಳ

ತಲೀಗೆ ಈ ಪ್ರೀತಿ ಅಂತಃಕರಣ ಎಲ್ಲಿ ಉಳೀತೈತಿ" ಎಂದು ಇಬ್ಬರೂ ನಿಟ್ಟುಸಿರು ಬಿಡುತ್ತಿದ್ದರು. ಈಗ ಇಲ್ಲಿವರೆಗೆ ಅವರನ್ನು ಜೋಡಿಸುತ್ತಿದ್ದ ಮುಖ್ಯ ಕೊಂಡಿಯೇ ಕಳಚಿಕೊಂಡಿರುವಾಗ, ತಮ್ಮದು ಇದೇ ಕಡೆಯ ಭೇಟಿಯೇನೋ ಎಂಬಂತೆ ಆತಂಕದಿಂದ ಈರವ್ವ, ಸುಂದ್ರವ್ವ ಪರಸ್ಪರರನ್ನು ನೋಡುತ್ತಿದ್ದಾರೆ; ತಲ್ಲಣವನ್ನು ಹಂಚಿಕೊಳ್ಳುತ್ತಿದ್ದಾರೆ.

– 3 –

ಸಾಹುಕಾರ ಬಸವಣ್ಣೆಪ್ಪನವರು ಲಿಂಗೈಕ್ಯರಾಗಿ ತಿಂಗಳು ಉರುಳಿದೆ. ಅವರ ಶಿವಗಣಾರಾಧನೆ ಅದ್ದೂರಿಯಾಗಿ ನೆರವೇರಿದೆ. ಸಾಹುಕಾರರ ವಕೀಲರು ಹೇಳಿ ಕಳಿಸಿದ್ದಾರೆಂದು ಆ ಮನೆಯಲ್ಲಿ ಎಲ್ಲರೂ ಮತ್ತೆ ಸೇರಿದ್ದಾರೆ. ವಕೀಲ ಮಹಂತಪ್ಪನವರು ವಿಲ್ ಅನ್ನು ಒಡೆಯುವ ಮೊದಲು ಸುತ್ತ ಒಮ್ಮೆ ಕಣ್ಣಾಡಿಸಿದರು. ರಾಜವ್ವ ಎಲ್ಲೂ ಕಾಣಲಿಲ್ಲ. ಪಕ್ಕದಲ್ಲಿದ್ದವರ ಕಿವಿಯಲ್ಲಿ ಉಸುರಿಸಿದರು. ಅವರು ಓಡಿಹೋಗಿ ಪಕ್ಕದ ಬೀದಿಯಲ್ಲಿದ್ದ ರಾಜವ್ವನನ್ನು ಬಲವಂತದಿಂದ ಕರೆತಂದರು. ಅವಳನ್ನು ಕಂಡದ್ದೇ ಚನ್ನವ್ವನ ಹುಬ್ಬು ಕೊಂಕಾಗಿ ಮೂಗು ಮೇಲೇರಿತು.

"ಏಯ್ ಅಲ್ಲೇ ನಿಂದ್ರು. ಈ ಮನೀ ಹೊಸಲ್ ತುಳೀಬ್ಯಾಡ. ನನ್ ಗಂಡನ್ನ ನುಂಗಿ ಹಾಕಿದಾಕಿ ನೀನS. ನನ್ನ ಇಷ್ಟವರ್ಷ ಗೋಳಾಡ್ಸಿದ್ದು ಸಾಕಾಗ್ಲಿಲ್ಲಾ ನಿಂಗ ? ಕಟ್ಕೊಂಡಾಕಿ ನಾನು ಇಲ್ಲಿ ಮರಮರ ಮರಗ್ತಾ ಇದ್ರ ನೀನ್ ಸುಖ ಸುರ್ಕೋತಿದ್ದಿ. ಈಗ ಇನ್ನ ಏನ್ ಆಶಾ ಇಟ್ಗೊಂಡು ಇಲ್ಲಿ ಹಿರಿಯಾಕ ಬಂದೀ ಅಂತೀನಿ. ಇಲ್ಲೀ ತನ್ಕಾ ನನ್ ಗಂಡನ್ನ ಹಿಂಡಿ ಹಿಪ್ಪಿ ಮಾಡಿದ್ದು ಸಾಕಾಗ್ಲಿಲ್ಲಾ ನಿಂಗ? ......." ಎಂದು ಚನ್ನಮ್ಮ ಸುಭಾಮರ್ಯಾದೆಯನ್ನೂ ಮೀರಿ ಆರ್ಭಟಿಸತೊಡಗಿದಳು. ವಕೀಲ ಮಹಂತಪ್ಪನವರು ತಕ್ಷಣ ಎಚ್ಚೆತ್ತುಕೊಂಡು, "ನೋಡ್ ಚನ್ನಮ್ಮಾ, ನಿನಗ್ ಅವರ್ ಹ್ಯಾಂಗ ಯಜಮಾನ್ರೋ ಆಕೀಗೂ ಅವರ್ ಯಜಮಾನ್ರ ! ವಿಲ್‌ನಾಗ ಏನೈತಿ ಅದು ಇಬ್ರ ಸಮಕ್ಷಮವಾದಾಗ ಬಗಿಹರೀಬೇಕು ಅಂತ ನಾನS ಆಕಿನ ಕರಿಸೀನಿ. ಈಗ ಮುಂದಿನ್ ಕೆಲ್ಸ ಮಾಡಕ ನನಗ ಸೌಡ್ ಕೊಡ್ತೀಯಾ?" ಎಂದು ಗಂಭೀರವಾಗಿ ನುಡಿದರು. ತನ್ನ ರೋಷ, ಅಸಹಾಯಕತೆ ಮತ್ತು ದುಃಖಗಳ ಒತ್ತಡಕ್ಕೆ ಚನ್ನಮ್ಮ ಒಳಗೊಳಗೇ ಬಿಕ್ಕುತ್ತಾ ಕುಳಿತರು. ಇನ್ನೊಂದು ತುದಿಯಲ್ಲಿ ಈರವ್ವ, ಸುಂದ್ರವ್ವ ಇನ್ನಷ್ಟು ಹತ್ತಿರಕ್ಕೆ ಸರಿದು ಪರಸ್ಪರ ಅಂಟಿಕೊಂಡಂತೆ ಕುಳಿತರು.

ಗಂಭೀರ ಧ್ವನಿಯಲ್ಲಿ ವಕೀಲರು ಓದಿದ ವಿಲ್ಲನ್ನು ಎಲ್ಲರೂ ಕೇಳುತ್ತಿದ್ದಾರೆ. ಚನ್ನಮ್ಮ ತಮ್ಮ ಕಿವಿಯನ್ನು ತಾವೇ ನಂಬದಾದರು. ಇಪ್ಪತ್ತೆರಡೆಕರೆ ಮಸಾರಿ ಹೊಲ, ಹತ್ತೆಕರೆ ಎರೆಹೊಲ, ಮನೆ ಎಲ್ಲವನ್ನೂ ಗಂಡ ತಮಗೇ ಬಿಟ್ಟುಕೊಟ್ಟಿದ್ದಾರೆ. ರಾಜವ್ವನ ಸುದ್ದಿಯೇ ಇಲ್ಲ! ತಾನು ಕೊನೆಗೂ ತನ್ನ ಗಂಡನನ್ನು ಅರಿತುಕೊಳ್ಳಲೇ ಇಲ್ಲವೇ? ಎಂದು ಆಘಾತಗೊಂಡರು. ಓರೆಗಣ್ಣಿಂದ ರಾಜವ್ವನನ್ನು ನೋಡಿದರು. ಆಕೆಯಲ್ಲಿ ಯಾವ ಬದಲಾವಣೆಯೂ ಕಂಡುಬರಲಿಲ್ಲ. ಎಲ್ಲವೂ ತನಗೆ ಗೊತ್ತಿತ್ತು ಎಂಬ ಮುಖಭಾವವಿತ್ತು. ಚನ್ನಮ್ಮ ಕಣ್ಣನ್ನು ಇನ್ನೊಂದೆಡೆ ಹೊರಳಿಸಿದರು. ಗಂಡನ ತಮ್ಮನ ಮಕ್ಕಳ ಮುಖ ಪೆಚ್ಚಾಗಿತ್ತು. ಶರಣಪ್ಪ ಮತ್ತು ಶಿವಮ್ಮ ಮಾತ್ರ ಇದೆಲ್ಲ ಸುಸೂತ್ರವಾಗಿ ಸಾಗುತ್ತಿರುವುದರ ಬಗ್ಗೆ ಸಮಾಧಾನ ಹೊಂದಿದಂತೆ ಕಂಡುಬರುತ್ತಿದ್ದರು. ಈರವ್ವ ಮತ್ತು ಸುಂದ್ರವ್ವರತ್ತ ದೃಷ್ಟಿ ಹರಿಸಿದಾಗ ಚನ್ನಮ್ಮ ಅಧೀರರಾದರು. ಇಷ್ಟು ವರ್ಷಗಳ ತಮ್ಮ ಗುದ್ದಾಟ ಕೊಸರಾಟಗಳಾಗುವುವೂ ಅವರ ಸ್ನೇಹವನ್ನು ಘಾಸಿಗೊಳಿಸಿರಲಿಲ್ಲ. ಮತ್ತೆ ರಾಜವ್ವನತ್ತ ದೃಷ್ಟಿ ಹರಿಸಿದರು. "ಯಾವ್ದು ತನಗೆ ಇಷ್ಟ್ ಹ್ಯಾವ ಹುಟ್ಟೂ ಹಂಗ ಮಾಡಿದ್ದು? ಎರಡೆರಡ್ ಮನಿ ಮಾಡಿಕೊಂಡೋರು ತನ್ನ ಗಂಡ ಒಬ್ರ ಅಲ್ಲಲ್ಲ. ಆದ್ರೂ ತನಗೆ ಯಾಕ ಇದನ್ನ ಕೊನೀತನ್ಕ ಒಪ್ಗೋಳ್ಳಾಕ ಆಗಲಿಲ್ಲಾ? ರಾಜವ್ವನ ಗುಣಾನ? ಸೌಂದರ್ಯಾನ? ಅಲ್ಲಾ ತಾನ್ ಎಷ್ಟೇ ಹೊಂದಿಕೋಬೇಕು ಅಂದಾಗ್ಲೂ ರಾಜವ್ವನ ಮನೀಗೆ ಹೋಗೋದನ್ನ ಬಿಡಲಾರ್ದ ಗಂಡನ ಮ್ಯಾಲಿನ ಸಿಟ್ಟಾ? ..... ಹಂಗಂತ ಮರೀಬೇಕು ಅಂದ್ರ ರಾಜವ್ವ ಏನ್ ಸಂಪನ್ನಿ ಅನ್ನಾಕಾದ್ದಾ? ಅಪರೂಪಕ್ಕೊಮ್ಮಿ ತಾನು ಈ ಮನೀಗೆ ಬಾಳಾಕ ಅಂತ ಬಂದಾಗೆಲ್ಲ ಉರ್‌ಮಾರಮ್ಮನಂಗ ಉರೀತಿರ್ಲಿಲ್ಲಾ? ಹಂಗಾರ ಆಸ್ತಿಯಾಗ ಆಕೀಗೆ ಏನೂ ಬರ್ದಿಲ್ಲ ಅಂತ ತಿಳ್ದೂ ಹ್ಯಾಂಗ ಸುಮ್ಕ ಕುಂತಾಳಲ್ಲ? ರಾಜವ್ವನ ಬಗ್ಗೆ ತನಗ ಇಲ್ಲೀತನ್ಕ ಚಾಡಿ ಹೇಳ್ತಿದ್ರಲ್ಲ ಅವರ್ ಮಾತು ಖರೇನಾ ಸುಳ್ಳಾ?" ಎಂಬ ದ್ವಂದ್ವ ಚನ್ನಮ್ಮನಲ್ಲಿ ಆರಂಭವಾಯಿತು.

ವಕೀಲರು ರೋಖ ಹಣದ ವಿಲೇವಾರಿ ಬಗ್ಗೆ ಮಾತಾಡತೊಡಗಿದರು. "ಬ್ಯಾಂಕ್‌ನಾಗ ಇರೂ ಒಂದ್ ಲಕ್ಷದಾಗ ಇಪ್ಪತ್ತೈದು ಸಾವ್ರ ಶರಣಪ್ಪಗ ಅಂಗಡಿ ಇಟ್ಕೊಳ್ಳಾಕ, ಹತ್ ಸಾವ್ರ ದಿನಾ ಅಡಿಗೀ ಮಾಡಿ ಹಾಕ್ತಿದ್ದ ಕಳಕವ್ವಗ, ಹತ್ತ ಸಾವ್ರ ಮನೀ ಆಳ್‌ಮಗ ಚಂದಪ್ಪಗ ಕೊಡಬೇಕು. ಉಳಿದದ್ದು ಚನ್ನವ್ವನ ಮನ್ಸಿಗೆ ಬಂದಂಗ ವಿಲೇವರಿ ಆಗಬೇಕು" ಎಂದು

ವಿಲ್ ಓದಿ ಮುಗಿಸಿದರು. ತಂಗಿಗೆ ಆಗಲಿರುವ ಅನ್ಯಾಯ ತಡೆಯಲೆಂದು ಬಂದಿದ್ದ ಚನ್ನವ್ವನ ಅಣ್ಣಂದಿರು ಬೇಸ್ತು ಬಿದ್ದಿದ್ದರು. ಶಿವಮ್ಮನ ಮನಸ್ಸು ಭಾರವಾಗಿತ್ತು.

"ಹೂಂ.....ನಮ್ ಭಾವನ್ದು ದೊಡ್ ಮನ್ಸು. ಅವರ್ ಸಣ್ಣಾವ್ರಿದ್ದಾಗ ಯಾರ್ದೋ ಮನಿಗೆ ದತ್ತಕ್ಕ ಹೋದ್ರಂತ. ಅಲ್ಲೀ ಅನುಕೂಲದಾಗ ತಮ್ಮಂದ್ರ ಬಡತನಾನ ಕಣ್ಣೇಲೆ ನೋಡ್ಲಾರ್ದೆ ಎಲ್ಲಾನೂ ಇವ್ರಿಗೆ ಸುರ್ದ. ಒಬ್ರರS ನೆಟ್ಗ ಅವರ್ನ ಅರ್ಥ ಮಾಡ್ಕೊಳಿಲ್ಲ. ಅವರ್ಗೆ ನೆಮ್ದಿ ತರ್‌ಲಿಲ್ಲ...." ಎಂದು ಪೇಚಾಡುತ್ತಿದ್ದಳು. ಅಷ್ಟರಲ್ಲಿ ಒಂದು ನಿರ್ಧಾರಕ್ಕೆ ಬಂದ ಚನ್ನಮ್ಮ ಕಣ್ಣೊರೆಸಿಕೊಂಡು "ಅವರ್ ಹೇಳಿದ್ವಾಂಗ ರೊಕ್ಕಾ ಕೊಡೋರಿಗೆ ಕೊಡ್ರಿ. ಉಳಿದದ್ ರೊಕ್ಕಾನ ಸುಂದ್ರವ್ವನ ಹೆಸ್ರಾಗ ಹಚ್ಚ್ರಿ. ಮನಿ ಬಂಗಾರನ ಈರವ್ವ ಮತ್ತ ಸುಂದ್ರವ್ವರಿಗ ಸಮಪಾಲು ಮಾಡ್ರೀ" ಎಂದರು.

**ಆಕರ :** ಸುವರ್ಣ ಕಥಾ ಸಂಕಲನ – ಸಂಪಾದಕರು: ಕೃಷ್ಣಮೂರ್ತಿ ಹನೂರು, ಭಾನುಮುಷ್ತಾಕ್

* * * * *

# ೩. ತಾಯಿಯ ಒಲವು

– ರಷ್ಯನ್ ಮೂಲ : ಮ್ಯಾಕ್ಸಿಂ ಗಾರ್ಕಿ
ಅನುವಾದ : ಕೆ.ವಿ. ಸುಬ್ಬಣ್ಣ

ಕೆಲವು ವಾರಗಳಿಂದಲೂ ಶತ್ರುಪಡೆ ನಗರವನ್ನು ಉಕ್ಕಿನ ಕೋಟೆಯ ಹಾಗೆ ಬಳಸಿ ಕೂತಿತ್ತು. ಇರುಳು, ಪಾಳೆಯದೆದುರು ಉರಿಯುತ್ತಿದ್ದ ಹೊಡಚಲುಗಳ ಬೆಂಕಿನಾಲಗೆ ಮಸಗಪ್ಪಿನ ಕಾವಳವನ್ನು ತೂರಿಬಂದು ಸಾವಿರ ಕೆಂಡಗಣ್ಣುಗಳಾಗಿ ಕೋಟೆಯ ಗೋಡೆಯನ್ನು ತಾಗುತ್ತಿತ್ತು. ಮತ್ಸರದಿಂದೆಂಬಂತೆ ಉರಿದು ಜಾಗೃತಗೊಳಿಸುವ ಆ ಬೆಂಕಿ ನಗರದಲ್ಲೆಲ್ಲ ಭಯಾನಕವಾದ ಕಾಳ ಯೋಚನೆಗಳನ್ನು ಹೊಡೆದೆಬ್ಬಿಸುತ್ತಿತ್ತು.

ಕೋಟೆಯ ಬುಡದಲ್ಲಿ ನಿಂತು ನೋಡಿದಾಗ – ಶತ್ರುಗಳು ಉರುಲಿಕ್ಕಿದಂತೆ ನಗರವನ್ನು ಸುತ್ತಿ ಬಿಗಿಯುತ್ತ ಬರುತ್ತಿರುವುದು ಕಾಣಿಸುತ್ತಿತ್ತು; ದೂರದಲ್ಲಿ ಬೆಂಕಿಯ ಸುತ್ತಲೂ ಕಪ್ಪು ನೆರಳುಗಳು ಮುತ್ತಿ ಕುಳಿತಿರುವುದು ತೋರುತ್ತಿದ್ದಿತು. ಕೊಬ್ಬಿದ ಕುದುರೆಗಳ ಕೆನೆತ, ಯುದ್ಧದಲ್ಲಿ ಜಯ ಸಿದ್ಧವೆಂದು ಭರವಸೆ ಪಡೆದ ಶತ್ರುಪಡೆಯುವರ ಹಾಡು ನಗು ಅಟ್ಟಹಾಸಗಳು ಅಲ್ಲಿಗೂ ಕೇಳಿಬರುತ್ತಿದ್ದವು. ಶತ್ರು ಜನರ ಅಟ್ಟಹಾಸದ ಧ್ವನಿಗಿಂತ ಕರ್ಕಶವಾದ ಶಬ್ದ ಕಿವಿಗೆ ಇನ್ನಾವುದಿದ್ದೀತು?

ನಗರಕ್ಕೆ ನೀರು ಒದಗಿಸುತ್ತಿದ್ದ ಹೊಳೆಗಳೆಲ್ಲವನ್ನೂ ಶತ್ರುಗಳು ಹೆಣಗಳಿಂದ ತುಂಬಿಸಿಬಿಟ್ಟಿದ್ದರು. ನಗರದ ಗೋಡೆಗಳಿಗೆ ಹಬ್ಬಿ ಕಂಗೊಳಿಸುತ್ತಿದ್ದ ದ್ರಾಕ್ಷಿಯ ಬಳ್ಳಿಗಳನ್ನು ಭಸ್ಮಗೊಳಿಸಿದರು. ಹೊಲಗಳನ್ನು ತುಳಿದು ಪಯಿರನ್ನು ನೆಲಸಮ ಮಾಡಿದರು. ಹಣ್ಣಿನ ತೋಟಗಳನ್ನು ಕಡಿದು ಧ್ವಂಸ ಮಾಡಿದರು. ಇಂತಹದು ಒಂದೇ ಎರಡೇ–ಒಟ್ಟಿನಲ್ಲಿ ನಗರವನ್ನು ಬತ್ತಲೆಗೊಳಿಸಿ ಬಿಟ್ಟಿದ್ದರು ಆ ವೈರಿಗಳು. ದಿನ ಬೆಳಗಾದರೆ ತುಬಾಕಿಗಳು ನಗರದ ಮೇಲೆ ಮದ್ದುಗುಂಡುಗಳ ಮಳೆಗರೆಯುತ್ತಿದ್ದವು.

ನಗರದ ಓಣಿಓಣಿಗಳಲ್ಲಿ, ಯುದ್ಧದಿಂದ ಶೋಷಿತರಾಗಿ ಹಸಿವಿನಿಂದ ಬಳಲಿ ಮಂಕಾದ ಸೈನಿಕರ ತುಣಕುಪಡೆಗಳು ಗಸ್ತು ಹಾಕತೊಡಗಿದ್ದವು. ಮನೆಮನೆಯ ಕಿಟಕಿಗಳಿಂದ ಗಾಯಗೊಂಡವರ ನರಳಿಕೆ, ಸ್ಮರಣೆಯಿಲ್ಲದವರ ಹುಚ್ಚುಮಾತು, ಹೆಂಗಸರ ಮೊರೆಯಿಡುವ ಪ್ರಾರ್ಥನೆ, ಮಕ್ಕಳ ಪ್ರಲಾಪ–ಎಲ್ಲವೂ ಬೆರೆತು ಹೊರಬರುತ್ತಿತ್ತು. ಜನಗಳು ಪಿಸುಮಾತಿನಲ್ಲಿ ಗುಸುಗುಟ್ಟುತ್ತಿದ್ದರು, ಹೇಳುತ್ತಿದ್ದಂತೆ ಅರ್ಧದಲ್ಲೇ ನಿಲ್ಲಿಸಿಬಿಡುತ್ತಿದ್ದರು. ವಾತಾವರಣದ ಬಿಗಿಯಲ್ಲಿ ಸಿಕ್ಕ ಆ ನಗರದ ಜನ ಭಯಜಾಗೃತರಾಗಿದ್ದರು..... ದಿನದಿನಕ್ಕೂ ಶತ್ರುಗಳು ಸುತ್ತಮುತ್ತ ಮುಂದುವರಿಯುತ್ತಿದ್ದರು.

ಎಲ್ಲಕ್ಕಿಂತ ಅಸಹ್ಯವೆಂದರೆ ಆ ರಾತ್ರಿಗಳು. ರಾತ್ರಿಯ ಗಂಭೀರ ನೀರವದಲ್ಲಿ ಅಳುನರಳಿಕೆಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. ಶತ್ರು ಶಿಬಿರದಿಂದ ಕಣ್ಣು ತಪ್ಪಿಸಿಕೊಂಡು ಬೆಟ್ಟದ ಕಣಿವೆಯ ಬುಡದಿಂದ ಕಪ್ಪು ಛಾಯೆಗಳು ನಗರದ ಗೋಡೆಯ ದಿಕ್ಕಿಗೆ ಕದ್ದು ನುಸುಳಿ ಬರುತ್ತಿರುವುದು ಕಾಣಿಸುತ್ತಿತ್ತು.....ಬೆಟ್ಟದ ಕರಿಯಂಚಿನಿಂದ ಚಂದ್ರ ಹುಟ್ಟಿಬರುತ್ತಿದ್ದ, ಕತ್ತಿಯ ಪೆಟ್ಟಿನಿಂದ ನುಗ್ಗುನುಗ್ಗಾದ ರಕ್ತಸಿಕ್ತವಾದ ಗುರಾಣಿಯ ಹಾಗೆ!

ನಗರದ ಜನರೆಲ್ಲ ಅಸಹಾಯಕತೆಯಿಂದ ಎದೆಯೊಡೆದು ಕೂತು ಬಿಟ್ಟಿದ್ದರು. ಕಾಳಗದ ನೋವಿನಲ್ಲಿ ಹಸಿವಿನ ಸಂಕಟದಲ್ಲಿ ದಿನದಿನಕ್ಕೂ ಅವರ ಗೆಲುವಿನ ಹಂಬಲ ಕ್ಷಯಿಸುತ್ತಿತ್ತು. ಭಯದಿಂದ ಅವರು ಮೂಡಿಬರುವ ಚಂದ್ರನ ಕಡೆ ದುರುಗಟ್ಟಿಕೊಂಡು ನೋಡುತ್ತಿದ್ದರು. ಬೆಟ್ಟದ ಮೇಲಿನ ಶತ್ರುಶಿಬಿರಗಳ ಛಾಯೆ ವಕ್ರವಾದ ಕೋರೆದಾಡೆಗಳ ಹಾಗೆ ತೋರುತ್ತಿದ್ದವು – ಎಲ್ಲವೂ ಅವರಿಗೆ ಮತ್ತೆ ಮತ್ತೆ ಸಾವಿನ ನೆನಪನ್ನೇ ತಂದೊಡ್ಡುತ್ತಿದ್ದವು. ಅವರ ಭೀತ ಚೇತನಗಳಿಗೆ ಸಾಂತ್ವನ ಕೊಡಲು ಆಕಾಶದಲ್ಲಿ ಒಂದು ನಕ್ಷತ್ರ ಕೂಡ ಮಿನುಗುತ್ತಿರಲಿಲ್ಲ.

ಮನೆಯಲ್ಲಿ ದೀಪವನ್ನು ಹಚ್ಚಲು ಸಹ ಜನ ಹೆದರುತ್ತಿದ್ದರು. ಭಾರವಾದ ಕತ್ತಲೆ ನಗರವನ್ನು ನುಂಗಿ ಕೂತಿತ್ತು. ಆ ಕಾಳ್ಗತ್ತಲೆಯಲ್ಲಿ, ಒಬ್ಬ ಹೆಣ್ಣು, ತಲೆಯಿಂದ ಕಾಲಿನವರೆಗೆ ಕಪ್ಪು ಬಟ್ಟೆ ಧರಿಸಿ ರಸ್ತೆಯಲ್ಲಿ ಮುಗ್ಗರಿಸುತ್ತ ಮೌನವಾಗಿ ನಡೆದಿದ್ದಳು, ನೀರಿನ ಆಳದಲ್ಲಿ ತಡಕುತ್ತ ತೇಲುವ ಮೀನಿನ ಹಾಗೆ!

ಆಕೆಯನ್ನು ಕಂಡಾಗ ಅಲ್ಲಿದ್ದ ಜನ ಒಬ್ಬರಿಗೊಬ್ಬರು ಗುಸುಗುಡ ತೊಡಗಿದರು.

"ಯಾರು, ಅವಳೆ?"

"ಹೌದು, ಅವಳೆ?"

ಕೆಲವರು ಹಿಂದೆ ಸರಿದು ಮನೆಯೊಳಕ್ಕೆ, ರಸ್ತೆಯ ಕಮಾನಿನ ಹಿಂಬದಿಗೆ ನುಸುಳಿಕೊಂಡರು; ಕೆಲವರು ಅವಳಿಗಿಂತ ಮುಂದಾಗಿ ಬೇಗ ಬೇಗ ತಲೆತಗ್ಗಿಸಿ ಓಡತೊಡಗಿದರು. ರಸ್ತೆಯ ಕಾವಲುಗಾರನೊಬ್ಬ ಕಠಿಣ ಸ್ವರದಲ್ಲಿ ಕೂಗಿ ಹೇಳಿದ :

"ಮತ್ತೆ ಹೊರಟುಬಿಟ್ಟೆಯಾ ? ಎಚ್ಚರಿಕೆ. ಹೀಗೆ ಹೊರಟರೆ ಯಾರಾದರೂ ನಿನ್ನನ್ನು ಕೊಂದುಹಾಕುತ್ತಾರೆ; ಬಿಡಿಸಲು ಕೂಡ ಒಬ್ಬನು ಬರುವುದಿಲ್ಲ....."

ಆಕೆ ಕೊಂಚ ಹಿಂದೆ ಸರಿದು ಅಲ್ಲಿಯೇ ನಿಂತಳು. ರಕ್ಷಕ ದಳದವರು ಮುಂದೆ ಸಾಗುತ್ತಿದ್ದರು. ಆಯುಧಪಾಣಿಗಳಾಗಿದ್ದ ಆ ಸಿಪಾಯಿಗಳು – ಅಸಹ್ಯವಾಗಿಯೋ ಅಸಾಧ್ಯವಾಗಿಯೋ–ಆಕೆಯ ಮೇಲೆ ಕೈಯೆತ್ತಲಿಲ್ಲ; ಶವವೆನ್ನುವಂತೆ ಆಕೆಯನ್ನು ತಪ್ಪಿಸಿಕೊಂಡು ಬದಿಗೆ ಹಾದುಹೋದರು. ಮತ್ತೆ ಈಕೆ ಏಕಾಕಿಯಾಗಿ ಕತ್ತಲೆಯಲ್ಲಿ ಸದ್ದಿಲ್ಲದೆ ಸಾಗುತ್ತಿದ್ದಳು. ರಸ್ತೆಯಿಂದ ರಸ್ತೆಗೆ, ನಗರದ ದುರಾದೃಷ್ಟವೇ ಮೂರ್ತೀಭವಿಸಿ ನಡೆದ ಹಾಗೆ. ಸುತ್ತಲಿನ ಕಾಳಗಪ್ಪಿನಿಂದ ಅಲೆಯಲೆಯಾಗಿ ನೋವಿನ ಕೂಗುಗಳ ಹೊರಟಿದ್ದವು. ನರಳುವ ಧ್ವನಿ, ಅಳು, ಮೊರೆ, ಗೆಲುವಿನ ಆಸೆಯನ್ನು ತೊರೆದ ಸಿಪಾಯಿಗಳು ಗೊಣಗುತ್ತಿದ್ದುದು–ಎಲ್ಲವೂ ಆಕೆಯನ್ನು ಬೆನ್ನಟ್ಟಿ ಹಿಂಬಾಲಿಸುತ್ತಿದ್ದವು......

ಆ ನಗರದ ಪ್ರಜೆಯಾಗಿ, ತಾಯಿಯಾಗಿ ಆಕೆ ತನ್ನ ಮಗನ ಬಗ್ಗೆ ಯೋಚಿಸತೊಡಗಿದ್ದಳು. ನಗರವನ್ನು ನಾಶಮಾಡಲು ಬಂದ ವೈರಿಪಡೆಯ ನಾಯಕ ತನ್ನ ಮಗ–ಚೆಲುವ. ಉಲ್ಲಸಿ ಆದರೆ ನಿಷ್ಕರುಣಿ. ಕೆಲವೇ ದಿನಗಳ ಆಕೆ ತನ್ನ ಮಗನನ್ನು ಹೆಮ್ಮೆಯಿಂದ ನೋಡಿದ್ದಳು. ದೇಶದ ಜನಗಳಿಗೆ ಉಪಕಾರಿಯಾಗಿ, ಅವರ ಒಲವಿನ ನಾಯಕನಾಗಿ, ಅಗ್ರಗಾಮಿ ಶಕ್ತಿಯಾಗಿ ಬಾಳುವ ಪುತ್ರನೊಬ್ಬನನ್ನು ತನ್ನ ನಾಡಿಗೆ–ತಾನು ಹುಟ್ಟಿ ಬೆಳೆದ, ತನ್ನ ಮಗನೂ ಹುಟ್ಟಿ ಪಾಲಿತನಾದ ಆ ಮಮತೆಯ ಗೂಡಿಗೆ ಅಮೂಲ್ಯ ಕಾಣಿಕೆಯಾಗಿ ಒಪ್ಪಿಸಿದ್ದೇನೆಂದು ಗರ್ವಪಟ್ಟಿದ್ದಳು. ಪ್ರೇಮಿಸುತ್ತಿದ್ದ ನೂರಾರು ಅದೃಶ್ಯ ಬಂಧನಗಳಿಂದ ಆಕೆಯ ಹೃದಯ ಬಿಗಿದಿದ್ದಿತು–ತನ್ನ ಪೂರ್ವಿಕರು ಯಾವ ಕಲ್ಲುಗಳಿಂದ ಮನೆಗಳನ್ನು, ನಗರವನ್ನು, ಕೋಟೆಯನ್ನು ಕಟ್ಟಿ ನಿಲ್ಲಿಸಿದ್ದರೋ ಆ ಪುರಾತನ ಶಿಲೆಗಳಿಗೆ, ತನ್ನ ಬಂಧುವರ್ಗದ ಮೂಳೆ ಮೂಳೆಯೂ ಮಣ್ಣಾಗಿ ಅರಳಿದ್ದ ಆ ತಾಯಿಭೂಮಿಗೆ; ಅಲ್ಲಿ ಹುಟ್ಟಿ ಹಾರಾಡುತ್ತಿದ್ದ ಬಗೆಬಗೆಯ ಕಟ್ಟುಕತೆಗಳಿಗೆ, ಹಾಡುಗಳಿಗೆ, ಜನಗಳ ಆಸೆ ಹಂಬಲಗಳಿಗೆ, ಆ ಹೆಣ್ಣಿನ ಹೃದಯ ತನ್ನ ಒಲವಿನ ವಸ್ತುವನ್ನು ಕಳೆದುಕೊಂಡು ಒಳಗೊಳಗೇ ಅಳುತ್ತಿತ್ತು, ಗೋಳಿಡುತ್ತಿತ್ತು. ತನ್ನಲ್ಲಿ ಉರಿಯತೊಡಗಿದ್ದ ಪುತ್ರಪ್ರೇಮ ಹಾಗೂ ದೇಶಪ್ರೇಮ–ಇವುಗಳಲ್ಲಿ ಯಾವುದು ಹೆಚ್ಚೆಂದು ನಿರ್ಧರಿಸಲು ಆಕೆ ಮತ್ತೆ ಮತ್ತೆ ತೂಗಿ ನೋಡುತ್ತಿದ್ದಳು; ತನ್ನ ಹೃದಯದ ತಕ್ಕಡಿಯಲ್ಲಿ. ಆದರೆ ಆಕೆಯ ಶ್ರಮ ನಿರರ್ಥಕವಾಯಿತು, ಚಿತ್ತ ನಿರ್ಧಾರಶೂನ್ಯವಾಯಿತು.

ಹೀಗೆಯೇ ಆಕೆ ರಾತ್ರಿಯೆಲ್ಲ ಅಲೆಯುತ್ತಿದ್ದಳು, ರಸ್ತೆ ರಸ್ತೆಗಳಲ್ಲಿ, ರಸ್ತೆಗಳಲ್ಲಿ ಜನ ತಿರುಗುವುದೇ ಅಪರೂಪವಾಗಿತ್ತು. ಅವರಲ್ಲಿ ಕೂಡ ಅನೇಕರು ಆಕೆಯನ್ನು ಗುರುತಿಸಲಾಗದೆ, ಆ ಕಾಳಮೂರ್ತಿ, ತಮಗೆ ತೀರ ಸಮೀಪವಾಗುತ್ತಿದ್ದ ಮೃತ್ಯುವಿನ ಪ್ರತಿಮೆಯೆಂದೇ ಭಾವಿಸಿದರು. ಆಕೆಯನ್ನು ಗುರುತಿಸಿದ ಕೆಲವರು ಮೌನವಾಗಿ ಹಿಂತಿರುಗಿ ನಡೆದರು, ಆ ಕೊಲೆಗಡುಕನ ತಾಯಿಯಿಂದ ದೂರವಾಗಿ.

.....ಒಂದು ದಿನ, ಆಕೆ ಹೀಗೆಯೇ ರಸ್ತೆ ರಸ್ತೆಗಳಲ್ಲಿ ಅಲೆಯುತ್ತಿದ್ದಾಗ, ಅಲ್ಲಿನ ಜನರಹಿತವಾದ ಒಂದು ಮೂಲೆಯಲ್ಲಿ, ಕೋಟೆಯ ಬದಿಗೆ ಗೋಳಿಡುತ್ತಿದ್ದ ಹೆಣ್ಣೊಬ್ಬಳನ್ನು ಕಂಡಳು. ಅವಳ ಎದುರಲ್ಲಿ ಒಂದು ಶವ ಕಟ್ಟಿಗೆಯ ತುಂಡಿನ ಹಾಗೆ ಬಿದ್ದಿತ್ತು. ಮಣ್ಣಿನ ಬೊಂಬೆಯಂತೆ ಅಲುಗದೆ ಕುಳಿತಿದ್ದ ಆ ಹೆಣ್ಣು, ತನ್ನ ನೋವು ತುಂಬಿದ ಮುಖವನ್ನು ಆಕಾಶಕ್ಕೆ ತಿರುಗಿಸಿ ನಕ್ಷತ್ರಗಳಿಗೆ ಮೊರೆಯಿಡುವಂತೆ ಹಂಬಲಿಸುತ್ತಿದ್ದಳು. ಕೋಟೆಯ ಮೇಲುಭಾಗದಲ್ಲಿ ಪ್ರಹರಿಗಳು ಆಯುಧವನ್ನು ಕಲ್ಲಿಗೊರಗಿಸಿ ಮೆಲುದನಿಯಲ್ಲಿ ಮಾತನಾಡತೊಡಗಿದರು.

ಕೊಲೆಗಡುಕನ ತಾಯಿ ಆ ಹೆಣ್ಣಿನ ಬಂದು ಕೇಳಿದಳು;

“ನಿನ್ನ ಗಂಡನೇನು?” – ಆ ಶವವನ್ನು ಸೂಚಿಸಿ.

“ಅಲ್ಲ”.

“ನಿನ್ನ ತಮ್ಮ?”

“ನನ್ನ ಮಗ, ನನ್ನ ಗಂಡನನ್ನು ಹದಿಮೂರು ದಿನಗಳ ಹಿಂದೆಯೇ ಕೊಂದು ತೀರಿಸಿದರು; ಈ ದಿನ ನನ್ನ ಮಗನ ಸರದಿ ಬಂತು”.

ತನ್ನ ಮೊಳಕಾಲಿನ ಮೇಲೆ ಎದ್ದು, ಆ ಹತನಾದವನ ತಾಯಿ ದೈನ್ಯದಿಂದ ಹೇಳಿದಳು;

“ದೇವಮಾತೆಗೆ ಎಲ್ಲವೂ ತಿಳಿದಿರುತ್ತದೆ. ಆಕೆ ಎಲ್ಲವನ್ನೂ ಕಣ್ಣಾರೆ ಕಾಣುತ್ತಾಳೆ. ಆಕೆಗೆ ನಾನು ಕೃತಜ್ಞಳಾಗಿದ್ದೇನೆ!”

“ಕೃತಜ್ಞಳಾಗಿದ್ದೀಯೆ! – ಏಕೆ?” ಈಕೆ ಕೇಳಿದಳು.

ಈ ನಗರವನ್ನು ನಾನು ಇಷ್ಟು ದಿನವಾದರೂ ನೆಲಸಮ ಮಾಡದೆ ಬಿಟ್ಟಿರುವುದು ನಿನಗಾಗಿ; ನೀನು ಅಲ್ಲಿಯೇ ಇದ್ದುದು ನನ್ನ ಮಾಂಸದಲ್ಲಿ ಮುಳ್ಳು ಸೇರಿಕೊಂಡಂತಾಗಿತ್ತು. ಒಮ್ಮೆಲೇ ಗುಡಿಗಟ್ಟಿ ಬರುತ್ತಿದ್ದ ಯಶಸ್ಸು ಅದರಿಂದಾಗಿ ತಡೆಯಿತು.....ಇನ್ನು ನನಗೆ ಭಯವಿಲ್ಲ. ನಾಳೆಯೇ ಆ ಹುಚ್ಚರ ನಗರವನ್ನು ಧೂಳೀಪಟ ಮಾಡಿಬಿಡುತ್ತೇನೆ!”

“ಆ ನಗರದ ಒಂದೊಂದು ಕಲ್ಲೂ ನಿನ್ನನ್ನು ಮಗುವಾದಾಗಿನಿಂದ ಬಲ್ಲುದು; ಮಗುವೆಂದೇ ಇಂದಿಗೂ ಸ್ಮರಿಸಿಕೊಳ್ಳುತ್ತದೆ”, ಆಕೆ ಹೇಳಿದಳು.

“ಕಲ್ಲುಗಳು! ಹ್ಞು, ಮನುಷ್ಯ ಮಾತನಾಡುವಂತೆ ಮಾಡುವವರೆಗೂ ಅವು ಮೂಕವಾಗಿಯೇ ಇರುತ್ತವೆ. ಕಲ್ಲುಗಳೇ ಏಕೆ, ಬೆಟ್ಟಗುಡ್ಡಗಳೆಲ್ಲ ನನ್ನನ್ನು ಕುರಿತು ಮಾತಾಡುತ್ತಿರಬೇಕು – ಹಾಗೆ ಮಾಡುವುದೇ ನನ್ನ ಹಂಬಲ!”

“ಆದರೆ ಮನುಷ್ಯರು?” – ಆಕೆ ಪ್ರಶ್ನಿಸಿದಳು.

“ನಿಜ ಮನುಷ್ಯರು–ನಾನು ಅವರನ್ನು ಮರೆತೇಬಿಟ್ಟಿದ್ದೆ. ಹೌದು ತಾಯಿ, ನನಗೆ ಅವರೂ ಬೇಕು. ಕಾರಣ, ವೀರರು ಮನುಷ್ಯರ ಸ್ಮೃತಿಯಲ್ಲಿ ಮಾತ್ರವೇ ಅಮರವಾಗುವುದು!”

ಆಕೆ ಹೇಳಿದಳು :

“ಯಾವನು ಮೃತ್ಯುವನ್ನು ಶಕ್ತಿಹೀನನ್ನಾಗಿ ಮಾಡಿ ಬಾಳನ್ನು ಸೃಷ್ಟಿಸುತ್ತಾನೋ, ಯಾವನು ಮರಣವನ್ನು ಜಯಿಸುತ್ತಾನೋ ಆತನೇ ನಿಜವಾದ ವೀರ”.

“ಸುಳ್ಳು !” ಆತ ವಿರೋಧಿಸಿ ಹೇಳಿದ, “ದೇಶವನ್ನು ಸೃಷ್ಟಿಸುವವನಷ್ಟೇ, ಅದನ್ನು ಧ್ವಂಸ ಮಾಡುವವನೂ ಕೂಡ ಕೀರ್ತಿಶಾಲಿಯಾಗುತ್ತಾನೆ. ನೋಡು ತಾಯಿ, ರೋಂ ನಗರವನ್ನು ಯಾರು ಕಟ್ಟಿದರೆಂಬುದು ಯಾರಿಗೂ ಸರಿಯಾಗಿ ತಿಳಿದಿಲ್ಲ; ಆದರೆ ಅಲಾರಿಕ್‌ನ ಹೆಸರು ನಮ್ಮೆಲ್ಲರಿಗೂ ಸುಪರಿಚಿತವಾಗಿದೆ. ಹಾಗೆಯೇ ಉಳಿದ ದೇಶ ವಿಧ್ವಂಸಕರೂ.....”

“ಎಲ್ಲ ಹೆಸರುಗಳನ್ನೂ ಮಣ್ಣುಗೂಡಿಸಿ ಮರೆಯುವ ಹೆಸರುಗಳು ಅವು” – ಆಕೆ ವ್ಯಂಗ್ಯವಾಗಿ ಹೇಳಿದಳು.

ಸೂರ್ಯ ಅಸ್ತವಾಗುವವರೆಗೂ, ಸಂಜೆ ಇಳಿಯುವವರೆಗೂ ಅವರು ಹೀಗೆಯೇ ವಾದಿಸಿಕೊಂಡರು. ಆತನ ಮಾತಿನ ಉಬ್ಬರ ಏರಿದಂತೆಲ್ಲ ಆಕೆ ಮಾತನಾಡುವುದು ಕಡಿಮೆಯಾಗುತ್ತ ಬಂದಿತು; ಹೆಮ್ಮೆಯಿಂದ ಮೇಲಕ್ಕೆ ಎತ್ತಿದ ತಲೆ ಮೆಲ್ಲಮೆಲ್ಲನೆ ಅವನತವಾಗುತ್ತಿತ್ತು.

ತಾಯಿಯೇ ಸೃಷ್ಟಿಶಕ್ತಿ, ವಿಧ್ವಂಸವನ್ನು ಕುರಿತು ಆಡುವ ಮಾತೆಲ್ಲವೂ ಆಕೆಗೆ ವಿರುದ್ಧವಾಗಿ ಆಡಿದ ಮಾತುಗಳೇ ಆಗುತ್ತವೆ. ಆದರೆ ಆತನಿಗೆ ಅದರ ಅರಿವಿರಲಿಲ್ಲ. ಆತ ತಿಳಿಯಲಿಲ್ಲ, ತನ್ನ ಬುದ್ಧಿ ತನ್ನ ಅಸ್ತಿತ್ವಕ್ಕೆ ವಿರುದ್ಧವಾಗಿ ವಾದಿಸುತ್ತಿದೆಯೆಂದು.

ತಾಯಿ ಯಾವಾಗಲೂ ಮೃತ್ಯುವಿಗೆ ವಿರುದ್ಧಳಾಗಿಯೇ ಇರುತ್ತಾಳೆ. ಮಾನವ ಮಂದಿರಕ್ಕೆ – ಈ ಮಮತೆಯ ಗುಡಿಗೆ–ಮೃತ್ಯುವನ್ನು ಕೊಂಡು ಬರುವ ಕಾಳಹಸ್ತವನ್ನು ಆಕೆ ದ್ವೇಷಿಸುತ್ತಾಳೆ. ಆದರೆ ಮಗನಿಗೆ ಮಾತ್ರ ಇದು ಅರ್ಥವಾಗಿರಲಿಲ್ಲ. ಎದೆಯನ್ನು ಮರುಭೂಮಿಯನ್ನಾಗಿ ಮಾಡುವ ಕೀರ್ತಿಕಾಮದ ಕೋಡುಮಂಚಿನಲ್ಲಿ ಆತ ಕುರುಡಾಗಿ ಹೋಗಿದ್ದ.

ಅಲ್ಲದೆ, ಆತನಿಗೆ ತಿಳಿದಿರಲಿಲ್ಲ – ತಾಯಿ ಒಂದೊಂದು ಸಲ ಎಷ್ಟು ಕ್ರೂರಿಯೂ ಕುಶಲೆಯೂ ಆಗಿರುತ್ತಾಳೆ ಎನ್ನುವುದು; ತಾನು ಪಡೆದು ಪಾಲಿಸುವ ಜೀವಕೋಟಿಗೆ ಮೃತ್ಯು ಎದುರಾದ ಹೊತ್ತಿನಲ್ಲಿ ಎಂಥ ನಿರ್ಭೀತ ಯೋಧಳಾಗುತ್ತಾಳೆ ಎನ್ನುವುದು.

ಆಕೆ ತಲೆ ತಗ್ಗಿಸಿ ಕೂತಿದ್ದಳು. ಎಣೆಯಿಲ್ಲದಷ್ಟು ಸಂಪತ್ತನ್ನು ಸುರಿದು ತನ್ನ ಮಗ ಕಟ್ಟಿಸಿದ ಬಿಡಾರದ ಕಿಟಕಿಯಿಂದ ದೂರದ ನಗರ ಕಾಣಿಸುತ್ತಿತ್ತು. ಅಲ್ಲಿಯೇ ತಾನು ಮೊದಲ ಸಲಕ್ಕೆ ಬದುಕಿನ ಹಿತವಾದ ಮೃದು ಕಂಪನವನ್ನು ಕಂಡು ಅನುಭವಿಸಿದ್ದಳು; ಅಲ್ಲಿಯೇ ಈ ಮಗುವನ್ನು–ದೊಡ್ಡವನಾಗಿ ತನ್ನ ನಗರವನ್ನೇ ನಾಶಮಾಡಲು ಹಂಬಲಿಸುತ್ತಿರುವ ಈ ಮಗುವನ್ನು–ಪಡೆಯುವ ಸಲುವಾಗಿ ಕಾತರದ ಮೈಬೇನೆಯಿಂದ ಬಳಲಿದ್ದಳು.

ಅಸ್ತಮಿಸುತ್ತಿರುವ ಸೂರ್ಯನ ಕೆಂಪು ಕಿರಣಗಳು ನಗರದ ಗೋಡೆ ಗೋಪುರಗಳನ್ನು ರಕ್ತರಂಜಿತವಾಗಿಸಿದ್ದವು. ಮನೆ ಮನೆಗಳ ಕಿಟಕಿಯ ಬಾಗಿಲುಗಳಲ್ಲಿ ಕೆಂಪುಬಣ್ಣದ ದುಃಖದೃಷ್ಟಿ ಬೀರಿ ಮೆರೆದಿತ್ತು. ಒಟ್ಟು ನಗರವೇ ಗಾಯಗಳ ಮುದ್ದೆಯಾಗಿ, ಒಂದೊಂದು ಗಾಯದಿಂದಲೂ ಜೀವದ ರಕ್ತಧಾರೆ ಅಜಸ್ರವಾಗಿ ಚಿಮ್ಮುತ್ತಿದ್ದ ಹಾಗ ಕಾಣುತ್ತಿತ್ತು. ಬರುಬರುತ್ತ ನಗರವೆಲ್ಲ ಕತ್ತಲೆಯಲ್ಲಿ ಮುಳುಗಿ ಸ್ಮಶಾನವಾದಂತಾಯಿತು. ಮೇಲೆ ಆಕಾಶದಲ್ಲಿ ನಕ್ಷತ್ರಗಳು ಬೆಳಗುತ್ತಿದ್ದವು. ಗೋರಿಯ ಮೇಲಿನ ಮೊಂಬತ್ತಿಗಳ ಹಾಗೆ.

ಶತ್ರುಗಳ ಗಮನವನ್ನು ಸೆಳೆಯಬಾರದೆಂದು, ಭೀತರಾಗಿ ಮನೆಯಲ್ಲಿ ದೀಪವನ್ನೂ ಉರಿಸದಿದ್ದ ಆ ಕತ್ತಲೆಯ ಮನೆಗಳು, ಆಕೆಗೆ ಅಲ್ಲಿನಿಂದಲೇ ಕಾಣಿಸುತ್ತಿದ್ದವು. ಕತ್ತಲೆಯಲ್ಲಿ ಮುಚ್ಚಿ, ಹಣ ತುಂಬಿ ಇಡಿಕಿರಿದ ಆ ಬೀದಿಗಳು ಕೂಡ ಆಕೆಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಸಾವನ್ನೇ ಎದುರುನೋಡುತ್ತಿದ್ದ ಅಲ್ಲಿನ ಜನಗಳ ಮುಚ್ಚುಬಾಯಿಯ ಪಿಸುಮಾತು ಕೂಡ ಆಕೆಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಆಕೆ ಎಲ್ಲವನ್ನೂ ನೋಡುತ್ತಿದ್ದಳು, ಎಲ್ಲವನ್ನೂ ಕೇಳುತ್ತಿದ್ದಳು. ತನಗೆ ಅಷ್ಟು ಹತ್ತಿರವಾಗಿ, ಪ್ರಿಯವಾಗಿ ಎದೆಗೆ ತಾಗಿ ನಿಂತಿತ್ತು ಆ ನಗರ. ತನ್ನ ಅಂತಿಮ ನಿರ್ಧಾರಕ್ಕಾಗಿ ಮೂಕವಾಗಿ ಕಾಯುತ್ತ ನಿಂತಂತಿತ್ತು. ತನ್ನ ನಗರದ ಎಲ್ಲಾ ಜನರ ತಾಯಿ ತಾನು ಎಂದು ಭಾಸವಾಗುತ್ತಿತ್ತು ಆಕೆಗೆ.

ಕರಿದಾದ ಬೆಟ್ಟದ ಶಿಖರಗಳಿಂದ, ರೆಕ್ಕೆಬಂದ ಕುದುರೆಗಳಂತೆ ಮೋಡಗಳು ಕಣಿವೆಗಿಳಿದು ಆ ಮೃತನಗರದ ಮೇಲೆ ಎರಗುತ್ತಿದ್ದವು.

ಆಕೆಯ ಮಗ ಹೇಳುತ್ತಿದ್ದ :

"ಬಹುಶಃ ಈ ರಾತ್ರಿಯೇ ನಾವು ಮುತ್ತಿಗೆ ಹಾಕಬಹುದು. ರಾತ್ರಿ ಮಾತ್ರ ಕಪ್ಪುಗಟ್ಟಿಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು ! ಕಣ್ಣೆದುರು ಸೂರ್ಯ ಉರಿಯುತ್ತಿರುವಾಗ, ಆಯುಧಗಳ ಝಳ ಕಣ್ಣನ್ನು ಕುರುಡು ಮಾಡುತ್ತಿರುವಾಗ ಕೊಲ್ಲುವುದು ಕಷ್ಟ. ಎಷ್ಟೋ ಹೊಡೆತಗಳು ಗುರಿತಪ್ಪಿ ಹೋಗುತ್ತವೆ".

ಮಾತಾಡುತ್ತಿರುವ ಹಾಗೆ ಆತ ತನ್ನ ಹರಿತವಾದ ಕತ್ತಿಯನ್ನು ಪರೀಕ್ಷಿಸಿಕೊಳ್ಳುತ್ತಿದ್ದ.

ತಾಯಿ ಹೇಳಿದಳು:

"ಬಾ, ಮಗು, ನನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿಕೋ. ಸ್ವಲ್ಪ ವಿಶ್ರಾಂತಿ ಪಡೆ...... ನೀನು ಚಿಕ್ಕವನಾಗಿದ್ದಾಗ ಎಷ್ಟು ಹರ್ಷದಿಂದಿರುತ್ತಿದ್ದೆ, ಯೋಚಿಸಿ ನೋಡು. ಪ್ರತಿಯೊಬ್ಬರೂ ನಿನ್ನನ್ನು ಎಷ್ಟು ಪ್ರೀತಿಸುತ್ತಿದ್ದರು....."

ತಾಯಿ ಹೇಳಿದಂತೆ ಆತ ತನ್ನ ತಲೆಯನ್ನು ಆಕೆಯ ತೊಡೆಯ ಮೇಲಿಟ್ಟು ಕಣ್ಣು ಮುಚ್ಚಿಕೊಂಡು ಹೇಳಿದ:

"ನಾನು ಈ ಜಗತ್ತಿನಲ್ಲಿ ನಿಜವಾಗಿ ಪ್ರೀತಿಸುವ ವಸ್ತುಗಳು ಎರಡು – ಒಂದು ಕೀರ್ತಿ, ಅದನ್ನು ಬಿಟ್ಟರೆ ನೀನು. ಏಕೆಂದರೆ ನಾನು ಇಷ್ಟು ಕೀರ್ತಿ ಪಡೆಯಲು ಕಾರಣಳಾದವಳೇ ನೀನು".

"ಹೆಣ್ಣುಗಳು?" ಆಕೆ ಮಗನ ಮುಖದ ಮೇಲೆ ಬಾಗಿ ಮೃದುವಾಗಿ ಕೇಳಿದಳು.

"ಓ ! ಹೆಣ್ಣುಗಳು ಎಷ್ಟು ಜನವಿಲ್ಲ? – ಸಂಖ್ಯೆಯಿಲ್ಲದಷ್ಟು ! ತೀರಾ ಹಿತವಾದ ವಸ್ತುಗಳೆಲ್ಲವೂ ಒಂದಲ್ಲ ಒಂದು ಕಾಲಕ್ಕೆ ಬೇಸರ ತರುತ್ತವೆ. ಹೆಣ್ಣುಗಳ ಕತೆಯೂ ಅಷ್ಟೇ!"

"ನಿನಗೆ ಮಕ್ಕಳೂ ಬೇಡವೇನು?" – ಅದು ತಾಯಿಯ ಕೊನೆಯ ಪ್ರಶ್ನೆ.

"ಏತಕ್ಕಾಗಿ ಯಾರ ಕೈಯಿಂದಾದರೂ ಸಾಯಲಿಕ್ಕೇನು ? ನನ್ನಂಥವರೇ ಯಾರಾದರೊಬ್ಬರು ಅವುಗಳನ್ನು ಕೊಂದು ಹಾಕಿದರೆ?..... ಅದರಿಂದ ನನಗೆ ತೀರ ಸಂಕಟವಾದೀತು. ಅಲ್ಲದೆ ಆ ಹೊತ್ತಿಗೆ ನಾನು, ಸೇಡು ತೀರಿಸಿಕೊಳ್ಳಲು ಕೂಡ ಆಗದಷ್ಟು ಅಶಕ್ತನಾಗಿ ಬಿಟ್ಟಿದ್ದರೆ?....."

"ನೀನು ಸುಂದರವಾಗಿದ್ದೀಯೆ, ನಿಜ. ಆದರೆ ನಿನ್ನ ಹೃದಯ ಮಿಂಚಿನ ಕತ್ತಿಯ ಹಾಗೆ ಕ್ರೂರವಾಗಿದೆ" – ಆಕೆ ನಿಟ್ಟುಸಿರುಬಿಡುತ್ತ ಹೇಳಿದಳು.

"ನಿಜ, ಮಿಂಚಿನಂತೆಯೆ" – ಆತ ಮಂದಹಾಸದಿಂದ ಉತ್ತರಿಸಿದ.

.....ಮತ್ತೆ ಸ್ವಲ್ಪ ಹೊತ್ತಿನಲ್ಲಿ, ಆತ ಮಗುವಿನ ಹಾಗೆ ತನ್ನ ತಾಯಿಯ ತೊಡೆಯ ಮೇಲೆ ತಲೆಯಿಟ್ಟು ನಿದ್ರಿಸುತ್ತಿದ್ದ.

ತನ್ನ ಮಗನ ಹೃದಯ ಎಲ್ಲಿ ಸ್ಪಂದಿಸುತ್ತಿದೆ ಎನ್ನುವುದನ್ನು ಅವಳಿಗಿಂತಲೂ ಚೆನ್ನಾಗಿ ಅರಿತವರಾರು? – ಆಕೆ ತನ್ನ ಕರಿಯಸೆರಗನ್ನು ಮಗನ ಮೇಲೆ ಹೊದಿಸಿ, ತನ್ನ ಬಳಿಯಲ್ಲಿದ್ದ ಬಾಕುವೊಂದನ್ನು ಹೊರಗೆ ತೆಗೆದು ಆತನ ಎದೆಗೆ ಬಲವಾಗಿ ನಾಟಿಸಿದಳು. ಅತ್ತಿತ್ತ ಹೊರಳಿ ಮರುಕ್ಷಣದಲ್ಲಿ ಆತ ಕೊನೆಯುಸಿರನ್ನೆಳೆದ. ಅಲ್ಲಿಂದ ಆಕೆ ತನ್ನ ಮಗನ ಶವವನ್ನು ಎತ್ತಿ ಕೆಳಗೆಸೆದಳು. ಹೊರಗೆ ಬಂದು ನಿಂತು ತನ್ನ ನಗರದ ಕಡೆ ನೋಡಿ ಹೇಳಿದಳು :

"ನಗರದ ಒಬ್ಬ ಪ್ರಜಳಾಗಿ ನನ್ನ ನಾಡಿನ ಕ್ಷೇಮಕ್ಕೆ ನನ್ನ ಕೈಲಾದದ್ದನ್ನು ಮಾಡಿ ಮುಗಿಸಿದ್ದೇನೆ. ಇನ್ನು ತಾಯಿಯಾಗಿ ನನ್ನ ಮಗನ ಜೊತೆಗೇ ಹೋಗಲು ಬಯಸುತ್ತೇನೆ ! ನನ್ನ ದೇಶಕ್ಕೆ ಉತ್ತಮನಾದ ಮತ್ತೊಬ್ಬ ಮಗನನ್ನು ಕೊಡುವ ಶಕ್ತಿ ನನಗಿಲ್ಲ. ನನ್ನ ಬಾಳು ಇನ್ನು ಯಾರಿಗೂ ಉಪಯೋಗವಾಗಬಾರದು".

ತನ್ನ ಮಗನ ರಕ್ತದಿಂದ–ತನ್ನ ರಕ್ತದಿಂದ–ಇನ್ನೂ ಬಿಸಿಯಾಗಿದ್ದ ಆ ಬಾಕುವನ್ನು ಆಕೆ ದೃಢವಾದ ಕೈಗಳಿಂದ ತನ್ನ ಎದೆಗೆ, ಗುರಿತಪ್ಪದೆ ಸರಿಯಾಗಿ, ಬಲವಾಗಿ ನಾಟಿಸಿಕೊಂಡಳು; ನೊಂದ ಎದೆಯನ್ನು ಹುಡುಕಿಕೊಳ್ಳಲು ಎಷ್ಟು ಹೊತ್ತು ಬೇಕು?

* * * * *

# 4. ನಮ್ಮ ಮನೆಯ ದೀಪ (ಓದು ಪಠ್ಯ)

– ಹಾ.ಮಾ. ನಾಯಕ

ನಮ್ಮ ಮನೆಯಲ್ಲೊಂದು ಪಾರಿಜಾತದ ಹೂವು ಅರಳುತ್ತಿದೆ. ಹೌದು, ನನ್ನ ಹಾಗೂ ವಸುಂಧರೆಯ ಮುದ್ದಿನ ಮಗು. ಅಲ್ಲ ಮಗಳು ರಮಾ, ನಮ್ಮ ಪಾಲಿಗೆ ಪಾರಿಜಾತದ ಹೂವೆ ! ಅಷ್ಟೇ ಕೋಮಲ ಅವಳು. ನಾವೂ ಹಾಗೆಯೇ ನೋಡಿಕೊಂಡು ಬಂದಿದ್ದೀವೆ – ಆ ಹೂವನ್ನು. ಅವಳ ಬಗ್ಗೆ ನನಗಿಂತ ಸ್ವಲ್ಪ ಕಟುವಾಗಿ ವರ್ತಿಸಿದರೂ ವಸುಂಧರೆಯ ಪ್ರೀತಿ ನನ್ನ ಪ್ರೀತಿಗೇನೂ ಕಡಿಮೆಯಾದುದಲ್ಲ – ಎಂಬುದು ನನಗೀ ಅರ್ಥವಾಗಿದೆ.

ರಮಾ, ತಾಯಿಯಂತೆಯೇ ಕುಳ್ಳಿ ಎಂಬುದೇನೋ ನಿಶ್ಚಿತ. ಸಮಯ ಸಿಕ್ಕಿದಾಗಲೆಲ್ಲಾ ನಾನೂ ವಸುಂಧರೆಯೂ ರಮಾ ಯಾರಂತೆ ಎಂಬ ಬಗ್ಗೆ ವಿಪುಲವಾಗಿ ಚರ್ಚೆ ಮಾಡುತ್ತೇವೆ. ನಾನೇನೂ ಸಾಮಾನ್ಯಕ್ಕೆ ಬಿಡುವವನಲ್ಲ. ಎಷ್ಟೋ ಬಾರಿ ಸೋತು ಸುಮ್ಮನಾಗಿದ್ದಾಳೆ ಅವಳು. ಆದರೆ ಆ ವಿಚಾರದ ಚರ್ಚೆ ಇನ್ನೂ ನಿಂತಿಲ್ಲ.

"ನೋಡಿ, ಬೇರೆ ವಿಚಾರ ಬೇಡ, ರಮಾ ನನ್ನ ಹಾಗೆಯೇ ಕುಳ್ಳಿಯಾಗುತ್ತಾಳೆ". ನನಗೂ ಗೊತ್ತು ಅವಳು ನನ್ನ ಹಾಗೆ ಉದ್ದವಾಗಿ ಬೆಳೆಯುವುದಿಲ್ಲವೆಂದು, ಆದರೂ ಕೇಳುತ್ತೇನೆ : "ಹಾಗೆಂದು ಯಾವ ಆಧಾರದ ಮೇಲೆ ಹೇಳುತ್ತಿಯೊ?"

ವಸುಂಧರೆ ಹೇಳುತ್ತಾಳೆ, ಕಣ್ಣಿನಲ್ಲೊಮ್ಮೆ ಕುಡಿಮಿಂಚು ಹಾರಿಸಿ, "ಉದ್ದವಾಗಿ ಬೆಳೆಯುವ ಹೆಣ್ಣುಮಕ್ಕಳಿಗೆ ಬೆರಳುಗಳು ನೀಳವಾಗಿರುತ್ತವೆ. ನಮ್ಮ ರಮಾಳ ಬೆರಳು ನೋಡಿ, ಎಷ್ಟು ಪುಟ್ಟದಾಗಿದೆ".

ಇದೇನೋ ಹೊಸ ಸಿದ್ಧಾಂತ, ನಾನಿದುವರೆಗೂ ಕೇಳಿಲ್ಲ. ಆದರೂ ಅವಳ ಮಾತಿಗೆ ಸುಮ್ಮನಾಗುತ್ತೇನೆ. ಅವಳು ನಗುತ್ತಾ ತನ್ನ ಗೆಲುವಿಗೆ ಪತಾಕೆ ಹಾರಿಸುತ್ತಾಳೆ. ಅಷ್ಟರಲ್ಲಿ ನಾನು ಉಸುರುತ್ತೇನೆ – ಅವಳಿಗೇ ಕೇಳಿಸದ ಹಾಗೆ "ಸದ್ಯ, ಎತ್ತರದಲ್ಲಿ ತಾಯಿಯ ಹಾಗಿದ್ದಾಳೆ, ಬಣ್ಣದಲ್ಲಿ ಹಾಗಿದ್ದಿದ್ದರೆ ದೇವರೇ ಗತಿ!" ಇಂಥಾ ಮಾತು ಬಹುಬೇಗ ಅವಳಿಗೆ ಕೇಳಿಸುತ್ತದೆ. ಮತ್ತೆ ಮಾತಿಲ್ಲದೆ ಓರೆಗಣ್ಣಿನಲ್ಲಿ ನೋಡಿ ಮೌನಿಯಾಗುತ್ತಾಳೆ. ಆಗ ನನಗಂತೂ ಇಲ್ಲದ ಉತ್ಸಾಹ ಬರುತ್ತದೆ.

"ಯಾರಂತೆ ಇದ್ದಾಳೆ ರಮಾ?"

ಆ ದಿನ ಇನ್ನೊಮ್ಮೆ ಆ ಪ್ರಶ್ನೆ ಬರುವುದಿಲ್ಲ ಅವಳಿಂದ. ವಸುಂಧರೆ ಚೊಚ್ಚಲು ಬಸುರಿಯಾಗಿದ್ದಾಗ ಮಗು ಗಂಡಾಗಿದ್ದರೆ ಎಂದುಕೊಳ್ಳುತ್ತಿದ್ದೆ ದಿನವೂ. ಅವಳೇನು ಬಯಸಿದ್ದಳೊ ನಾನಾಗ ಕೇಳಿರಲಿಲ್ಲ. ಬಹಳ ಸ್ವಾರಸ್ಯವಾದ ಉತ್ತರ ಬರುತ್ತಿತ್ತು. ನನಗೆ ಗೊತ್ತು ಅಂಥ ಉತ್ತರ ಕೊಡುವುದರಲ್ಲಿ ನಮ್ಮ ಮನೆಯ ದೊಡ್ಡ ಕುಳ್ಳಿ ತುಂಬಾ ಜಾಣೆ.

ಮಗು ಹುಟ್ಟಿ ಮೂರು ತಿಂಗಳಾದ ಮೇಲೆ ವಸುಂಧರೆ ಆ ಕುಲುಕುಲು ನಗುವನ್ನು ತನ್ನ ಸೊಂಟದ ಮೇಲೆ ಕೂರಿಸಿಕೊಂಡು ಬಂದಾಗ ನನ್ನ ಹಿಂದಿನ ಬಯಕೆ ಪೂರ್ಣವಾಗಿ ಮರೆತುಹೋಗಿತ್ತು. ಹೆಣ್ಣಾದರೇನು? ಗಂಡಾದರೇನು? ಮನೆಗೊಂದು ಮುದ್ದಾದ ಮಗುವನ್ನು ತಂದಿದ್ದಳು – ಮೋಹದ ಮಡದಿ. ಮಲ್ಲಿಗೆಯ ಹೂವು ಬೇಕೆಂದಾಗ ಕೋಲುಮಲ್ಲಿಗೆಯೇನು? ಚಪ್ಪರ ಮಲ್ಲಿಗೆಯೇನು? ಹೆಚ್ಚು ಕಡಿಮೆ ಎಲ್ಲಾ ಒಂದೆ. ಒಂದೇ ಸೊಂಪು, ಒಂದೇ ಕಂಪು.

ಮಗು ರಮಾ ಮನೆಗೆ ಬಂದ ಮೊದಲ ದಿನಗಳಲ್ಲಿ ಕೈಯಲ್ಲಿ ಎತ್ತಿಕೊಳ್ಳುವುದಕ್ಕೆ ಹೆದರಿಕೆಯಾಗುತ್ತಿತ್ತು. ಎಲ್ಲಿ ಜಾರಿಹೋಗುವುದೋ ಎಂದು. ವಸುಂಧರೆ ಮಾತ್ರ ಬಹಳ ಸುಲಭವಾಗಿ ಅತ್ತಿತ್ತ ಆಡಿಸುತ್ತಾ ಎತ್ತಿ ಇಳಿಸುತ್ತಿದ್ದಳು. ತಾಯಿಯ ಜನ್ಮಸಿದ್ಧ ಹಕ್ಕು ಅದು. ಆದರೆ ಅವಳು ಹೆಮ್ಮೆಪಡುತ್ತಿದ್ದಳು. "ಅಯ್ಯೋ! ಇಷ್ಟು ಚಿಕ್ಕಮಗುವನ್ನೆತ್ತಿಕೊಳ್ಳಲು ಹೆದರುತ್ತೀರ! ಯಾಕಾದೀರಿ ನೀವು?" ಇದು ನನ್ನ ಮೇಲೆ ಅವಳೆಸಯುತ್ತಿದ್ದ ರಾಮಬಾಣ.

ಅವಳು ಒಳಗೆ ಕೆಲಸಕ್ಕೆ ಹೋದಾಗ ಮಗುವನ್ನು ಪುಟ್ಟ ರಬ್ಬರಿನ ಹಾಸಿಗೆ ಮೇಲೆ ಮಲಗಿಸಿ, "ಆಡಿಸುತ್ತಿರಿ" ಎಂದು ಆಜ್ಞೆ ಮಾಡುತ್ತಾಳೆ. ಏನು ಆಡಿಸುವುದು ಅಷ್ಟು ಚಿಕ್ಕಮಗುವನ್ನು? ಕೈಕಾಲು ಆಡಿಸಲು ಎಂದು ಆ ಕಡೆ ಈ ಕಡೆ ಒದ್ದಾಡುತ್ತಿತ್ತು ಆ ಮಗು. ಮೃದುವಾಗಿ ತನ್ನ ತುಂಬು ಕೆನ್ನೆಗಳನ್ನು ಸರಿಸಿ ಹಾಲು ಆರದ ತುಟಿಗಳಲ್ಲಿ ನಗುತ್ತಿತ್ತು ಕುಲಕುಲನೆ. ಮರೆಯಲಾರದಂಥ ಆ ಅದ್ಭುತ ನೋಟವನ್ನೆ ನಾನು ಕಣ್ಣರಳಿಸಿ ನೋಡುತ್ತಾ ಕುಳಿತಿರುತ್ತಿದ್ದೆ. ತಾಯಿ ಬೇಕೆಂದೆನಿಸಿದಾಗ ಮಗುವೇ ಅತ್ತು ಕರೆಯುತ್ತಿತ್ತು. ಮಗುವಿನ ಕಡೆಗೆ ಬಂದ ತಾಯಿ ಮತ್ತೊಮ್ಮೆ ನನ್ನನ್ನು ಅವಳ ಮಾತಿನ ಬಾಣದಲ್ಲಿ ಸಿಕ್ಕಿಸುತ್ತಿದ್ದಳು. "ಏನಪ್ಪ ಇದು ? ಒಂದು ಮಗುವನ್ನು ಸುಮ್ಮನಿರಿಸಲು ಬರುವುದಿಲ್ಲ".

ಕಣ್ಣಿನಲ್ಲೆ ನಗುತ್ತಿದ್ದಳು. ತುಂಟ ಹುಡುಗಿ ನನ್ನ ಅವಸ್ಥೆಯನ್ನು ನೋಡಿ, ನನಗನಿಸುತ್ತಿತ್ತು 'ಎಂಥ ಹುಡುಗಿಯಿವಳು? ಅರ್ಥವಿಲ್ಲದ ಮಾತನಾಡುತ್ತಾಳೆ. ಈ ಮಗುವಿಗೂ ಈ ಮಾವನ ಮಗಳಿಗೂ ಏನೂ ವ್ಯತ್ಯಾಸವೇ ಇಲ್ಲ'. ಆ ಮಾತು ಇಂದಿಗೂ ಹಾಗೆಯೆ ಸತ್ಯವಾಗಿ ಉಳಿದಿದೆ. ವಸುಂಧರೆ ಮಗುವಿನ ತಾಯಾಗಿ ಎರಡೂವರೆ ವರ್ಷಗಳಾಗಿದ್ದರೂ ಇಂದಿಗೂ ಅವಳು ಮಗುವಾಗಿಯೆ ಇದ್ದಾಳೆ, ಮಗುವಿನಂತೆಯೇ ಆಡುತ್ತಾಳೆ. ಹಾಗೆಯೇ ನಡೆಯುತ್ತಾಳೆ.

ಅವಳ ಮುಗ್ಧತೆಯನ್ನೇ ಕುತೂಹಲದಿಂದ ನೋಡುವ ನಾನು ಹೇಳುತ್ತೇನೆ :

"ಏನು ಮಗುವಿನಂತೆ ಆಡುತ್ತೀಯೇ ?"

"ಹೌದು, ಮತ್ತೆ, ನಮ್ಮಮ್ಮನಿಗೆ ನಾನೆಂದೂ ಮಗುವೆ".

ಏನು ಹೇಳಬೇಕು ಇಂಥ ಮಾತಿಗೆ ? ಇಂಥವೇ ನೂರಾರು ಮಾತನಾಡುತ್ತಾಳೆ ದಿನವೂ, ಮದುವೆಯಾದ ಹೊಸದರಲ್ಲಿ ಅವಳಿಗೆ ತುಂಬ ತೊಂದರೆಕೊಡುತ್ತಿದ್ದೆನಂತೆ. ಅವೆಲ್ಲ ನೆನಪಿದೆ. ಆದರೆ ಹೇಳಲಾರೆ. ಆ ನೆನಪುಗನ್ನು ವಸುಂಧರೆಯೇ ತುಂಬಾ ಸ್ವಾರಸ್ಯವಾಗಿ ಹೇಳುತ್ತಾಳೆ. ಅವಳು ದಿನವೂ ಅಳುತ್ತ ಕುಳಿತಿದ್ದುದೂ ಉಂಟಂತೆ. ಇಂಥವೆ ದಿನಗಳು ಮುಂದೆಲ್ಲ ಬಂದರೆ ತಾನು ಬಾಳಬೇಕಾದ ವರ್ಷಗಳನ್ನೆಲ್ಲಾ ಈ ಮನೆಯಲ್ಲಿ ಹೇಗೆ ಕಳೆಯಲಿ ಎಂದು ದಿನವೆಲ್ಲ ಯೋಚನೆ ಮಾಡುತ್ತಿದ್ದಳಂತೆ. ಮದುವೆಯಾದ ಮೇಲೆ, ಮಕ್ಕಳಾದ ಮೇಲೆ ಸಂಸಾರ ಬೆಳೆದು ತೊಂದರೆ ಹೆಚ್ಚಾಗಿ, ಗಂಡಸಿನ ಸಿಡುಕು ಮತ್ತೆ ಹೆಚ್ಚಾಗುತ್ತದೆ ಎಂದು ಯಾರೋ ಅವಳಿಗೆ ಹೇಳಿದ್ದರಂತೆ. ಚೊಚ್ಚಲು ಸಂಭ್ರಮಕ್ಕೆ ಅವಳು ತವರುಮನೆಗೆ ಹೋಗುವಾಗ ಈ ಮಾತು ನೆನಪಾಗಿ ದಾರಿಯುದ್ದಕ್ಕೂ ಮೌನವಾಗಿ ಕಣ್ಣೀರು ಕರೆದಿದ್ದಳಂತೆ......

ಇದರಲ್ಲಿ ಎಷ್ಟೆಲ್ಲವನ್ನು ನಂಬಬೇಕೊ ನನಗೆ ತಿಳಿಯದು. ಆದರೆ ರಮಾ ಮನೆಗೆ ಬಂದ ಮೇಲೆ ನನ್ನ ಬಾಳಿಗೆ ಬೆಳದಿಂಗಳು ತರುವಳೆಂದು ನಂಬಿದ್ದೆ ಎಂದು ವಸುಂಧರೆ ಹೇಳುವ ಮಾತಿನಲ್ಲಿ ನನಗೂ ಪೂರ್ಣ ಸಮ್ಮತಿ. ಆಮೇಲೆ ನಾನೂ ಬಹಳ ಬದಲಾಯಿಸಿದ್ದೇನೆಂದು ಈಗ ನನಗೂ ಅರ್ಥವಾಗುತ್ತಿದೆ. ವಸುಂಧರೆಯ ಬಾಳಿನಲ್ಲಿ ಒಂದು ಆಸೆ, ಧೈರ್ಯ ಮೂಡಿಸಿದ ರಮಾ ನನ್ನ ಬಾಳಿಗೂ ಒಂದು ಹೊಂಗನಸಿನ ಉಯ್ಯಾಲೆ ಕಟ್ಟಿದ್ದಾಳೆ. ಇವೆಲ್ಲಕ್ಕೂ ಮಿಗಿಲಾಗಿ ನನಗೂ ಅವಳಿಗೂ ನಡುವಿನ ಸೇತುವೆಯಾಗಿದ್ದಾಳೆ.

ಇನ್ನೆರಡು ವರ್ಷಗಳಾದ ಮೇಲೆ ನಾವಿಬ್ಬರೂ ರಮೆಯೆದುರು ಈಗಿನಷ್ಟು ಸರಸವಾಡುವುದು ಸಾಧ್ಯವಾಗದೆ ಹೋದರೂ ಮದುವೆಯ ಮೊದಲ ದಿನಗಳಿಗಿಂತ ಹೆಚ್ಚಾಗಿ, ಈಗ ಮಗುವಾದ ಮೇಲೆ ನಾವು ಹತ್ತಿರವಾಗಿದ್ದೇವೆ; ಹೊಂದಿಕೊಂಡಿದ್ದೇವೆ. ನಮ್ಮಿಬ್ಬರ ಬಾಳುವೆಯ ಬಳ್ಳಿ ಹೂಬಿಟ್ಟ ಪಾರಿಜಾತವೇ ನಮ್ಮಿಬ್ಬರ ಒಲುಮೆಯ ಬೆಸುಗೆಯಾಗಿದೆ; ಜೀವನದ ಸಾರವಾಗಿದೆ. ಹಾಗೆಂದೇ ನನ್ನ ಮತ್ತು ವಸುಂಧರೆಯ ಕಣ್ಣುಗೊಂಬೆಗಳಲ್ಲಿ ಯಾವತ್ತೂ ಈ ಪುಟ್ಟ ಮಗಳ ಚಿತ್ರವೇ ತೇಲುತ್ತಿರುತ್ತದೆ. ಅವಳು ನಡೆಯುವಲ್ಲಿ ನಾವೂ ನಡೆಯುತ್ತಿದ್ದೇವೆ. ಅವಳು ನಗುವಲ್ಲಿ ನಾವೂ ನಗುತ್ತಿದ್ದೇವೆ.

ಎಂಥ ಮಾಟಗಾತಿ ನಮ್ಮ ರಮಾ? ನಮ್ಮಿಬ್ಬರನ್ನೂ ಅವಳು ಆಡಿಸುತ್ತಿದ್ದಾಳೆ. ಪುಂಗಿಯ ಎದುರಿನ ಹಾವಿನಂತೆ ನಾವೂ ಅವಳ ಎಳೆಬಾಳಿನ ಪುಂಗಿಯ ನಿನಾದಕ್ಕೆ ಮೈಮರೆತು ನರ್ತಿಸುತ್ತಿದ್ದೇವೆ.

ನನ್ನ ಮನೆಗೆ ಬಂದ ಮೇಲೆ ವಸುಂಧರೆ ಮಗುವಿನೊಡನೆ ತವರಿಗೆ ಹೊರಡುವಾಗ ನನಗೆ ತುಂಬ ಬೇಸರವಾಗುತ್ತದೆ; ದುಃಖವಾಗುತ್ತದೆ. ನನ್ನ ಹೃದಯದ ಬೇರನ್ನೇ ವಸುಂಧರೆ ತನ್ನೊಂದಿಗೆ ಕಿತ್ತುಕೊಂಡು ಹೋಗುತ್ತಿದ್ದಾಳೇನೋ

ಎನಿಸುತ್ತದೆ. ದಾರಿಯ ಕೊನೆಯಲ್ಲಿ ಗಾಡಿ ಬಹಳ ದೂರ ಹೋಗಿ ಕಣ್ಮರೆಯಾಗುವ ತನಕ ಅವರನ್ನೇ ನೋಡುತ್ತಿರುತ್ತೇನೆ. ಪುಟ್ಟ ಮಗು ಕೈಯಾಡಿಸುತ್ತ ತಾಯ ತೊಡೆಯೇರಿ ಪಯಣ ಬೆಳೆಸುವ ಚಿತ್ರವನ್ನೇ ಮನದಲ್ಲಿ ಮೂಡಿಸಿಕೊಂಡು ಮತ್ತೆ ಅವರು ಮನೆಗೆ ಬರುವ ತನಕ ದಿನ ಕಳೆಯುತ್ತಿರುತ್ತೇನೆ.

ಪಾರಿಜಾತದ ಹೂವು, ಆ ಹೂವನ್ನು ಹೊತ್ತು ನನ್ನ ಆಸರೆಯಲ್ಲಿ ಬೆಳೆಯುತ್ತಿರುವ ಎಳೆಯ ಪಾರಿಜಾತದ ಗಿಡದ ಮೇಲೆ ಕುಳಿತ ಪಾರಿಜಾತದ ಹಕ್ಕಿ ಮನೆಯಲ್ಲಿ ಇಲ್ಲದ ಮೇಲೆ ಹೇಗೆ ಆ ಮನೆಯಲ್ಲಿ ದಿನಗಳೆಯಬೇಕು? ಎಲ್ಲಿ ಹೋದರೆ ಎಲ್ಲಿ ಬಂದರೆ ಅಲ್ಲಿ ಅದರದೇ ನೆನಪು. ನನ್ನ ಪುಟ್ಟ, ಮರಿ ಹೊಸಲು ಹತ್ತಿ ಇಳಿಯುವ ಸಾಹಸ, ತಾಯಿಯ ಸೆರಗಿನ ಮರೆಯಲ್ಲಿ ನೃತ್ಯಗೈಯ್ಯುವ ಸೊಬಗು–ನೂರೊಂದು ಚಿತ್ರ ನೆನಪಿನ ಹಾಳೆಗಳ ಮೇಲೆ ಉರುಳುತ್ತಿರುತ್ತದೆ.

ತೊದಲು ಮಾತನಾಡುತ್ತಾ ತಾಯಿಯ ಬಳಿಯಿಂದ ತಂದೆಯ ಬಳಿಗೆ, ತಂದೆಯಿಂದ ತಾಯಿಯ ಬಳಿಗೆ ಅಲೆದಾಡುತ್ತಾ ಮನೆ ತುಂಬ ಜೀವತಂದಿದ್ದಾಳೆ ರಮಾ. ಈ ಜೀವನ, ನನಗಾಗಲಿ ವಸುಂಧರೆಗಾಗಲಿ ಸುಖದ ಆಗರವಾಗೇನೂ ಇಲ್ಲ; ದುಃಖದ ಸೆರಗಿನಲ್ಲಿ ಕಹಿಯಾದ ನೆನಪಿನಲ್ಲಿ, ನೋವಿನ ನೂರು ದಾರಿಗಳಲ್ಲಿ ನಾವಿಬ್ಬರೂ ನಡೆಯುತ್ತಿದ್ದೇವೆ. ಇಂಥ ಜೀವನದಲ್ಲಿ ನನಗೆ ಒಂದು ಆಸೆಯನ್ನು ಮಾರ್ಮಿಕವಾಗಿ ಅವಳು ಪಾಠ ಕಲಿಸಿ ಶಾಂತಿ ಮೂಲಮಂತ್ರವನ್ನು ಬೋಧಿಸುವ ಮಹಾಗುರುವಾಗಿದ್ದಾಳೆ.

ನಮ್ಮಿಬ್ಬರ ಪಾಲಿಗೂ ರಮಾ ಗುರುವೆ!

ಬೆಳಿಗ್ಗೆ ಐದು ಗಂಟೆಗೆ ಎದ್ದು, ಎಂಟರ ತನಕ ದುಡಿಯುವ ವಸುಂಧರೆ ರಾತ್ರೆ ಹಾಸಿಗೆಗೆ ಬಂದಾಗ ರಮೆಯನ್ನು ಎದೆಯ ಮೇಲೆ ಕೂರಿಸಿಕೊಂಡು ಅವಳ ನಗುವನ್ನೇ ನೋಡುತ್ತಿರುತ್ತಾಳೆ. ಮೂಲೆಯಲ್ಲಿ ಕುಳಿತು ಬರೆಯುವ ನನಗೆ ತಾಯಿ ಮಕ್ಕಳು ಚಿರಂತನವಾದ ಸ್ಫೂರ್ತಿಯಾಗಿದ್ದಾರೆ.

ರಮಾ ಬೆಳೆಯುತ್ತ ಬಂದ ಹಾಗೆಲ್ಲಾ ವಸುಂಧರೆಗೆ ಕೆಲಸಗಳು ಹೆಚ್ಚಾಗುತ್ತದೆ. ನನ್ನ ಕೆಲಸವೂ ಮೊದಲಿನ ಹಾಗೆ ಸುಲಲಿತವಾಗಿ ನಡೆಯುತ್ತಿಲ್ಲ. ಅವಳು ಎಲ್ಲಿ ಹೋಗುತ್ತಾಳೆ. ಏನು ಮಾಡುತ್ತಾಳೆ – ಎಂದು ಅವಳ ಮೇಲೆ ಕಣ್ಣಿಟ್ಟೇ ಇರಬೇಕು. ಮನೆಯ ಬಿಡುವಿಲ್ಲದ ಕೆಲಸಗಳಲ್ಲೂ ಕಾಲಕಾಲಕ್ಕೆ ಸರಿಯಾಗಿ ಅವಳ ಕೆಲಸ ಮುಗಿಸಬೇಕು. ರಮಾ ಇಂದಿಲ್ಲ ನಾಳೆ ಬೆಳೆದು ದೊಡ್ಡವಳಾದ ಮೇಲೆ ವಸುಂಧರೆಯನ್ನು ಕೂರಿಸಿ ಅವಳೇ ಕೆಲಸ ಮಾಡಿಯಾಳು. ಆದರೆ ನನಗೆ ಈ ಸುಖ, ಈ ನೆಮ್ಮದಿ, ಕೈತುಂಬಿದ ಕೆಲಸಗಳಲ್ಲೂ ದೊರಕುವ ಆಹ್ಲಾದ ಆಗ ಇನ್ನೆಲ್ಲಿ ಬಂದಾವು?

ಈ ದಿನಗಳೆಲ್ಲ ಆಗೊಂದು ಕನಸಾಗಿ ಉಳದಾವು!

"ಏನಯ್ಯಾ, ಯಾರಿಗೊ ಹುಟ್ಟಿದ ಮಗುವೊಂದು ನಿನಗೆ ಹುಟ್ಟಿದೆಯೆ?" ಎಂದು ನನ್ನ ಗೆಳೆಯರೆಲ್ಲ ಅಣಕಿಸುತ್ತಾರೆ. "ರಮಾ ಹುಟ್ಟಿ ಸದ್ಯ ನೀವು ಮನೆಯಲ್ಲಿಯೇ ಇರುವಂತೆ ಮಾಡಿ ಕಾಲಕಾಲಕ್ಕೆ ಊಟ ನಿದ್ದೆಗೆ ಅವಕಾಶ ಕಲ್ಪಿಸಿದ್ದಾಳೆ" ಎಂದು ವಸುಂಧರೆ ಪ್ರಶಂಸಿಸುತ್ತಾಳೆ. ಯಾರ ಮಾತು ನಿಜ? ರಮಾ ಹುಟ್ಟುವ ಮುನ್ನ ನಮ್ಮ ಮನೆಯಲ್ಲಿ ಕಾಲು ಕಟ್ಟಿರಲಿಲ್ಲ. ಮೂರು ಘಂಟೆಗೆ ಊಟ, ಮನಸ್ಸು ಬಂದಾಗ ನಿದ್ದೆ, ಈಗ ಹಾಗಿಲ್ಲ. ರಮಾ ಊಟಕ್ಕೆ ಹೋಗಬೇಕಾದರೆ ಜೊತೆಗೆ ಅಣ್ಣನಿಲ್ಲದಿದ್ದರೆ ಆಗುವುದಿಲ್ಲ. ಅವಳ ಪಕ್ಕದಲ್ಲಿ ನಾನೇ ಕುಳಿತುಕೊಳ್ಳಬೇಕು. ಎಲ್ಲಾದರೂ ಹೊರಗೆ ಹೊರಟರೆ 'ಎಲ್ಲಿಗೆ' ಎನ್ನುತ್ತಾಳೆ. ತಾನು ಬರುತ್ತೇನೆಂದು ಹಟ ಹಿಡಿಯುತ್ತಾಳೆ. ಇಲ್ಲದಿದ್ದರೆ 'ಹೋಗಬೇಡ, ಇಲ್ಲೇ ಇರು, ನನಗೆ ಚಿತ್ರ ಬರೆದುಕೊಡು, ಗಾಡಿಮಾಡಿಕೊಡು' ಎಂದೆಲ್ಲಾ ಹೇಳುತ್ತಾ ಅಂಗಿಯ ಕೊನೆಯ ಹಿಡಿದು ನಿಲ್ಲಿಸುತ್ತಾಳೆ. ರಾತ್ರೆ ನಾನು ಬರುವುದು ತಡವಾದರೆ ಅವಳು ಕೇಳುತ್ತಾಳಂತೆ 'ಕತ್ತಲಾಯಿತಲ್ಲಾ, ಅಣ್ಣ ಇನ್ನು ಹೇಗೆ ಬರುತ್ತಾರೆ?' ಎಂದು.

ರಮೆಯ ಮಾತು ನನಗೆ ಸಂಗೀತದಷ್ಟೇ ಸಂತೋಷ ಕೊಡುತ್ತದೆ. ಆ ತೊದಲು ಮಾತು ನನಗೇನೂ ಅರ್ಥವಾಗುವುದಿಲ್ಲ. ಆದರೆ ವಸುಂಧರೆ ಉಬ್ಬಿನಿಂದ ತನಗೊಬ್ಬಳಿಗೇ ಅರ್ಥ ಎಂದ ಹಾಗೆ ಮಗಳ ಮಾತನ್ನೆಲ್ಲ ____ ಹೇಳುತ್ತಾಳೆ. ಅವಳೊಡನೆ ಚರ್ಚೆ ಮಾಡಲಾರದೆ, ಅವಳು ಹೇಳಿದ್ದಕ್ಕೆಲ್ಲ 'ಹೂ' ಎಂದು ತಲೆಯಾಡಿಸುತ್ತೇನೆ. ವಸುಂಧರೆ ಅರ್ಥಮಾಡಿ ಹೇಳಿ ವಿವರಿಸುವ ಮಾತಿಗಿಂತ ಏನೋ ತಿಳಿಯುವ ರಮೆಯು ತೊದಲು ಮಾತೇ ನನಗೆ ಪ್ರಿಯವೆನಿಸುತ್ತದೆ.

ಮನೆಗೆ ಬಂದು ಮಾತನಾಡುವವರನ್ನೆಲ್ಲ ತುಂಬ ಗಮನವಿಟ್ಟು ನಿರೀಕ್ಷಿಸಿ ಅವರು ಹೋದ ಮೇಲೆ ಅದೇ ಮಾತನ್ನು ಹೇಳಲು ಪ್ರಯತ್ನಿಸುತ್ತಾಳೆ.

ನಾನು ಅವಳನ್ನು ಒಮ್ಮೊಮ್ಮೆ 'ರಾಮೀ' ಎಂದು ಕರೆಯುತ್ತೇನೆ; ವಸುಂಧರೆ 'ರಮಾ; ಎಂದು ಕರೆಯುತ್ತಾಳೆ. ಅವಳ ಹೆಸರು 'ರಮಾಮಣಿ'.

ಆದರೂ ನಿನ್ನ ಹೆಸರೇನೆಂದು ಕೇಳಿದರೆ ಹೇಳುತ್ತಾಳೆ–ತಾಯಿಯ ಮಗಳು 'ರಮಾ' ಆಗಂತೂ ವಸುಂಧರೆ ಆನಂದದಿಂದ 'ನೋಡಿ, ನನ್ನ ಮಗಳನ್ನು' ಎಂದು ಕೂಗಾಡಿ ಅವಳನ್ನು ಬಾಚಿ ತಬ್ಬಿಕೊಳ್ಳುತ್ತಾಳೆ. 'ಅಣ್ಣ ತುಂಬ ಕೆಟ್ಟವರಲ್ಲೇನು, ರಮಾ ?' ಎಂದು ಕೇಳುತ್ತಾಳೆ. ತೇಲುಗಣ್ಣಿಂದ ನನ್ನ ಕಡೆ ನೋಡುತ್ತಾ ಅದಕ್ಕೆ ರಮಾ 'ಹೌದು, ಚಿತ್ರ ಬರೆದುಕೊಡುವುದಿಲ್ಲ, ಕೆಟ್ಟವರು' ಎನ್ನುತ್ತಾಳಂತೆ. ಮುಯ್ಯಿಗೆ ಮುಯ್ಯಿ ತೀರಿಸಲು ನಾನು ಕೇಳುತ್ತೇನೆ; 'ಮಾಮಿ ಕೆಟ್ಟವರಲ್ಲವೇ, ರಮಾ ?" ಆಗ ರಮಾ ಅವಳೊಡನೆ ನೋಡುತ್ತಾಳೆ ತುಂಬಗೆನ್ನೆ ಸರಿಸಿ, 'ಮಾಮಿ' ಎಂಬ ಮಾತೊಂದು ನನಗೆ ಅರ್ಥವಾಗುತ್ತದೆ'. ವಸುಂಧರೆ ವಿವರಿಸುತ್ತಾಳೆ : "ಮಾಮಿ, ಒಳ್ಳೆಯವರು, ಹಪ್ಪಳ ಕೊಡುತ್ತಾರೆ".

ದಿನಗಳೆಲ್ಲಾ ಹೀಗೆ ಕಳೆದುಹೋಗುತ್ವೆ. ರಮಾ ನೀಡುವ ಸಂತೋಷ ನಮ್ಮಿಬ್ಬರಿಗೆ ಮಾತ್ರವಲ್ಲ; ನಮ್ಮ ಮನೆಯ ಮೊದಲನೆಯ ಮೊಮ್ಮಗಳು ಅವಳು; ಮನೆಯವರಿಗೆಲ್ಲ ಕೈಗೊಂಬೆ ! ಮನೆಯ ಒಕ್ಕಲು ಮಕ್ಕಳೆಲ್ಲ ಬಂದು ನಮಗಿಂತ ಮೊದಲೇ ಅವಳನ್ನು ಮಾತಾಡಿಸುತ್ತಾರೆ. ಅಜ್ಜ, ಅಜ್ಜಿ, ಚಿಕ್ಕಪ್ಪ, ಅತ್ತೆ ಎಲ್ಲರಿಗೂ ಅವಳು ಸೊಗವೆ, ಎಲ್ಲರ ಬಾಯಲ್ಲೂ ರಮಾ, ರಮಾ.

ಆದರೆ ಅವರಿಗೆಲ್ಲ ಅಷ್ಟು ಹೊಂದಿಕೊಂಡಿಲ್ಲ. ಆದರೆ ನಾನು–ವಸುಂಧರೆ ಇಬ್ಬರೇ ಹೊಂದಿಕೊಳ್ಳುತ್ತೇವೆ. ತಾಯಿ, ತಂದೆ ಎಂಬ ಮಾತಿನಿಂದ ನಾನು ಹೀಗೆ ಹೇಳುತ್ತಿಲ್ಲ. ನಿಜವಾಗಿಯೂ ರಮಾ ಅಷ್ಟು, ಚಿಕ್ಕ ಹುಡುಗಿಯಾದರೂ ನಮ್ಮಿಬ್ಬರ ಜೊತೆ ಬೆಳೆಸಿದಷ್ಟು ಸಲಿಗೆ ಇನ್ನಾರ ಬಳಿಯೂ ಇಲ್ಲ. ಅದೇಕೋ ನಾ ಕಾಣೆ. ನಮ್ಮ ಬಳಿ ಹಾಗೆ ಆಟವಾಡುವ ಮಗು ಅವರ ಬಳಿ ಹೋದಕೂಡಲೇ ಸುಮ್ಮನೆ ಕುಳಿತುಕೊಳ್ಳುವುದನ್ನು ನೋಡಿ ನಮ್ಮ ತಾಯಿ ಕೇಳುತ್ತಾರೆ :

"ಏನಾದರೂ ಹೇಳಿಕೊಟ್ಟಿದ್ದೀರೇನು – ಗಂಡ ಹೆಂಡತಿಯರು – 'ಜೊತೆಗೆ ಹೋಗಬೇಡ ಎಂದು?'

ವಸುಂಧರೆ ಹೇಳುತ್ತಾಳೆ : "ಏನು ರಮಾ, ಹಾಗಂತ ಹೇಳಿಕೊಟ್ಟಿದ್ದೇವೆಯೇನು?"

"ಹೂಂ" ಎಂದು ರಮಾ ಎಲ್ಲರನ್ನೂ ನಗಿಸುತ್ತಾಳೆ.

ನನ್ನ ಬಾಳುವೆಯ ಬೆಟ್ಟದಡಿಗಳಲ್ಲಿ ಹಸುರು ಹುಲ್ಲಿನ ತಟದ ಮೇಲೆ ಮಂಜುಳನಾದ ಗೈದು ಹರಿಯುವ ಪುಟ್ಟ ಬೆಳ್ಳಿನೊರೆಗಳ ತೊರೆಯೊಂದು ಹರಿಯುತ್ತಿದೆ. ಆ ತೊರೆಯ ಜವುಗಿನಲ್ಲಿಯ ನಮ್ಮ ಮನೆ ಹಸುರಾಗಿದೆ. ನೂರು ಸಹಸ್ರ ನಗುವಿನ ಹೂವು ಅರಳಿ ನಿಂತುಕೊಂಡಿವೆ. ಹೂಗಿಡಗಳ ಹಿಂದೆ ಬಣ್ಣಬಣ್ಣದ ನವಿಲು ಬಂದು ಜಾಗರ ಮಾಡುತ್ತಿವೆ. ಗರಿಗೆದರಿದ ತೊರೆಯ ನಿನಾದದ ನಡುವೆ ಗಾನದ ಅಲೆಯು ತೇಲಿಬರುತ್ತದೆ. ಮೃದುಮಧುರವಾಗಿ ಆ ತೊರೆ ಬರುತ್ತದೆ; ಆ ಹೂಗಳು ಬಾಡವು, ಮಂಜುಳ ನಿನಾದ ಕರಗಿಹೋಗದು.

ರಮೆ, ರಮೆಯಂಥ ಮಕ್ಕಳಿರುವ ತನಕ ಎಂಥ ಬರಡು ನೆಲವೂ ಹೀಗೆ ಹಸುರಾದೀತು!

ಒಂದು ಸಲ ನೀಲಿಯಾಕಾಶವನ್ನು ಮುಟ್ಟುವ ಪಶ್ಚಿಮ ಘಟ್ಟಗಳ ತುದಿಯಲ್ಲಿ ವರ್ಣವರ್ಣದ ಮುಗಿಲುಗಳೂ ತೇಲುತ್ತಿದ್ದುದನ್ನು ಕಣ್ಣರಳಿಸಿ ರಮಾ ನೋಡುತ್ತಾ ಕುಳಿತಿದ್ದಳಂತೆ – ಕದಲದೆ, ಮಗು ಆಟವಾಡಲು ಜೊತೆಯವರಿಲ್ಲದೆ ಕೊರಗುತ್ತದೆ ಎಂದುಕೊಂಡು ಅಜ್ಜಿ ಬೇಗ ಬೇಗ ವಸುಂಧರೆಯನ್ನು ಕರೆದು ಹೇಳಿದರಂತೆ! 'ಮಗು ಆಟಕ್ಕೆ ಜೊತೆಯಿಲ್ಲದೆ ಕೊರಗುತ್ತಿದೆ. ನೀನಂತೂ ಅದರ ಜೊತೆಗೆ ಮಗುವಿನ ಚಿಂತೆಯನ್ನೇ ಮರೆತುಬಿಟ್ಟಿದ್ದೀಯೆ!'

ತುಂಟ ಹುಡುಗಿ ಸುಮ್ಮನಿರಬೇಕಾಗಿತ್ತು, ನಗುತ್ತಾ ಹೇಳಿದಳಂತೆ : "ಸದ್ಯಕ್ಕಂತೂ ಆ ಯೋಚನೆಯಿಲ್ಲ. ಆದರೆ ಅವಳ ಜೊತೆಗಾಗಿ ಹುಟ್ಟುವುದರ ಜೊತೆಗೆ ಇನ್ನಾರು ಎಂಬ ಚಿಂತೆ ಹಿಡಿಯುತ್ತದೆ ಆ ಹೊತ್ತಿಗೆ" ಏನು ಹೇಳಬೇಕು ಈ ಮಾತಿಗೆ!

ನಿಜ, ಮಕ್ಕಳು ಬೆಳೆಯುತ್ತ ಹೋದಂತೆಲ್ಲಾ ಅವು ನಮಗೆ ನೀಡುವ ಆನಂದ ಕಡಿಮೆಯಾಗುತ್ತಾ ಹೊಗುತ್ತದೆ. ನಾವು ಬೆಳೆದ ಮಕ್ಕಳಿಂದ ದೂರವಾಗಿ ಆನಂದವನ್ನು ಹುಡುಕಿ ಎಳೆಮಕ್ಕಳನ್ನರಸುತ್ತಾ ಹೋಗುತ್ತೇವೆ.

ಆದರೆ ರಮೆಯಂಥ ಮಕ್ಕಳು ಎಷ್ಟೇ ಬೆಳೆಯಲಿ ಅವು ನಮಗಿತ್ತ ಸುಖದ ನೆನಪು ಸಾಕು, ನಮ್ಮ ಬಾಳನ್ನು ಬೆಳಗಲಿಕ್ಕೆ, ಗಾಳಿ ಸುಯ್ಯದಿದ್ದರೆ, ಎಣ್ಣೆ ಬತ್ತಿ ಉಳಿದರೆ, ಯಾವ ಕಾಲಕ್ಕೂ ಇಂಥ ದೀಪಗಳು ನಮ್ಮ ಮನೆಯನ್ನು–ಮನೆಮನೆಯನ್ನು–ತಮ್ಮ ದಿವ್ಯಪ್ರಭೆಯಿಂದ ಕಾಂತಿಯುತವನ್ನಾಗಿರಿಸುತ್ತವೆ.

ರಮಾ ನಮ್ಮ ಮನೆಯ ಅಂಥ ದೀಪ!

**ಆಕರ :** ಶತಮಾನದ ಲಲಿತ ಪ್ರಬಂಧ – ಸಂಪಾದಕರು : ಗುರುಲಿಂಗ ಕಾಪಸೆ

* * * * *

# II. ಆಚರಣೆ

## ಆಶಯ

ವ್ರತಾಚಾರವೆಂದು ಹೆಸರಿಟ್ಟುಕೊಂಡಿಪ್ಪರಯ್ಯಾ!
ವ್ರತವೆಂದರೇನು? ಆಚಾರವೆಂದರೇನು?
ಅನ್ಯರು ಮಾಡಿದ ದ್ರವ್ಯವನೊಲ್ಲದಿಪ್ಪುದು ವ್ರತವೆ?
ಆರನು ಕರೆಯದಿಪ್ಪುದು ಆಚಾರವೆ?
ಪರಸ್ತ್ರೀ ಪರಧನಂಗಳಲ್ಲಿ ನಿಂದೆಗೆ ಒಡಲಾಗದಿದ್ದುದೆ ವ್ರತ.
ಸರ್ವಭೂತಹಿತವಾಗಿ ದಯವಿದ್ದುದೆ ಆಚಾರ.
ಇಂತೀ ಕ್ರೀಯನರಿತು, ಕ್ರೀಯ ಶುದ್ಧತೆಯಾಗಿ ನಿಂದುದೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದ ನೇಮ.

– ಅಕ್ಕಮ್ಮ

# 1. ಪೂಜಾರಿ

**– ವಿ.ಕೃ. ಗೋಕಾಕ್**

ಶಿವಾಲಯದ ಪೂಜಾರಿಗೆ ವೈಕುಂಠದ ತಾರತಮ್ಯ ಗೊತ್ತು.
ಬಂದವರ ಮೋರೆ ನೋಡಿ ಮಣಿ ಹಾಕುತ್ತಾನೆ.
ಯಾರ ಪೂಜೆ ಹೇಗಾಗಬೇಕೋ ಅಂತೆಸಗುತ್ತಾನೆ.
ದೇವರ ಪೂಜೆ? ಅದೇನು ಮಹಾ!
ಮನೆಯ ಮಗ ಲಿಂಗಕ್ಕೆ ನೀರೆರಚುತ್ತಾನೆ!
ಗುಡಿಯನ್ನಿಲ್ಲಿ ಕಟ್ಟಿತೇಕೆ? ಇಷ್ಟು ಜನ ಯಾತ್ರಿಕರಿಲ್ಲಿ ಬರುವುದೇಕೆ?
ಪೂಜಾರಿಗೆ ಗೊತ್ತಿಲ್ಲ.

ಈ ಸುಂದರ ದೃಶ್ಯವೇ ದೇವಾಲಯ,
ಈ ತುಂಗೋತ್ತುಂಗ ಶಿಖರವೇ ಮಹಾಲಿಂಗ –
ಇದೆಲ್ಲವನ್ನು ಅವನರಿಯ.
ಒಂದು ಮಾತ್ರ ಅವನಿಗೆ ಗೊತ್ತು :
ಯಾತ್ರಿಕರು ತನ್ನ ಸಂಸಾರರಥವನ್ನೆಳೆಯುವರೆಂದು!

ಯಾತ್ರಿಕರ ಬರವನ್ನು ಭದ್ರಪಡಿಸುವದೆಂತು ?
ಅಗಾಧ ದೃಶ್ಯದ ಆಕರ್ಷಣವನ್ನು ಅವನರಿಯ.
ಏನಾದರೊಂದು ಪವಾಡವನ್ನು ತೋರಿಸಿ! ಅಲ್ಲವೆ ?
ಸ್ವಯಂಭೂ ಲಿಂಗದಲ್ಲಿ ಬಿಟ್ಟ ಐದು ಬಿರುಕುಗಳನ್ನು ಗುರುತಿಸಿ.
"ಇವು ಐದು ನದಿಗಳ ಉಗಮ : ಅಂತೇ ಸ್ಥಾನ ಪವಿತ್ರತಮ :"
ಎಂದು ಸಂಶೋಧಿಸಿದ.
ತನ್ನನ್ನೇ ತಾನು ವಂಚಿಸಿಕೊಂಡು ಬಂದವರನ್ನೆಲ್ಲ ಮೋಸಗೊಳಿಸಿದ.
ಪಾಂಡವರ ಕಾಲದ ಪುರಾಣವನ್ನು ಹೇಳಿ ತಂಡುಲಕ್ಕೆ ದಾರಿ ಮಾಡಿಕೊಂಡ.

ಅಯ್ಯಾ! ಪೂಜಾರಿ! ಬದಿಗಿದ್ದ ವಿಶ್ರಾಂತಿಗೃಹವನ್ನು ನೋಡು!
ಅಲ್ಲಿ ನೂರಾರು ಜನ ಬಂದಿಳಿಯುತ್ತರೆ.
ಕೆಲವರು ಮಾತ್ರ ನಿನ್ನೆಡೆಗೆ ಬರುತ್ತಾರೆ.
ಸುತ್ತಣ ರಮ್ಯತೆಯನ್ನು ಕಣ್ದಣಿಯೆ ನೋಡುತ್ತಾರೆ.

ಅಲ್ಲಿಯ ಬಟ್ಲರನಿಗೆ ಸಂಸ್ಕೃತ ಬರುವುದಿಲ್ಲ.
ಆದರೆ ನಿನಗಿಂತ ಆತ ಸುಸಂಸ್ಕೃತನಿರಬಹುದಲ್ಲ ?
ಕಿಗ್ಗಳ ಸಂವತ್ಸರದ ಕಗ್ಗ ನೀನು : ಅತ್ಯಾಧುನಿಕನವ.
ನಿಮ್ಮಿಬ್ಬರಲ್ಲಿ ಯಾರು ಹೆಚ್ಚು? ಬಟ್ಲರನೋ? ಪೂಜಾರಿಯೋ?

ನೂಲೆಳೆಯಿಂದ ಕೊರಳು ಕತ್ತರಿಸಿದಂತೆ ಬಟ್ಲರನು ಹಣವೆತ್ತಿದರೆ,
ನೂಲೆಳೆ ಧರಿಸಿ ನೀನೂ ಅದೇ ಹವಣಿನಲ್ಲಿರುವಿ.
ಅಸುರೀ ಸಮಾಜದ ಅರೆ ಒಕ್ಕಲು ನೀವು.
ಭಕ್ತಿ–ಜ್ಞಾನ–ಸುಕೃತಿಗಳ ಸಮನ್ವಯವನ್ನು ಗಳಿಸಿ
ಮಾನವರ ಬಟ್ಟೆಯಲ್ಲಿ ನೀವು ಬರುವುದೆಂದು?
ಬಂದ ಹಣ ವ್ಯಕ್ತಿತ್ವಧಾರಣಕ್ಕೆ,
ಗೆಯ್ದ ಗೆಯ್ಮೆ ವಿಶ್ವವಿಕಾಸಕ್ಕೆ –
ಎಂಬ ತಿಳಿವು ಅಂಕುರಿಸುವುದೆಂದು?

**ಆಕರ :** ನವ್ಯ ಕಾವ್ಯ – ವಿ.ಕೃ. ಗೋಕಾಕ್

* * * * *

# 2. ಶೂಲ

– ಡಾ. ಬೆಸಗರಹಳ್ಳಿ ರಾಮಣ್ಣ

ಮುತ್ತುರಾಯನ ಬೆಟ್ಟದ ಮೇಲಿರುವ ಗುಡಿಯಲ್ಲಿ ಪೂಜೆ ಮಾಡಿಸಿಕೊಂಡು ಜಯರಾಮು, ಗೌರಿಯೊಡನೆ ದಢದಢನೆ ಮೆಟ್ಟಿಲಿಳಿಯತೊಡಗಿದ್ದಾನೆ. ಮೆಟ್ಟಿಲುಗಳಿಗೆ ನೋವಾಗಬಾರದೆನ್ನುವಂತೆ ಒಂದೊಂದೇ ಹೆಜ್ಜೆ ಹಾಕುತ್ತ, ಮೈತುಂಬ ಸೆರಗು ಹೊದ್ದುಕೊಂಡು, ಮುಡಿ ತುಂಬ ಮಲ್ಲಿಗೆ ಮುಡಿದು, ಹಣೆಯಲ್ಲಿ ಎದ್ದು ಕಾಣುವ ಕುಂಕುಮದ ಬೊಟ್ಟಿಟ್ಟು, ಕೈತುಂಬ ಚಿನ್ನದ ಬಳೆಗಳ ಜೊತೆಗೆ ಹಸಿರು–ಕೆಂಪು ಗಾಜಿನ ಬಳೆಗಳನ್ನು ತೊಟ್ಟು, ಹಣ್ಣುಕಾಯಿಯ ತಟ್ಟೆಯನ್ನು ಹಿಡಿದುಕೊಂಡು ನಾಚುತ್ತ ನಾಚುತ್ತ ಎಲೆ ಅಂಬಿನಂತೆ ಬರುವ ತನ್ನ ಗೌರಿಯನ್ನು ತನ್ನ ಕಣ್ಣಿನ ಗೊಂಬೆಯಲ್ಲೇ ಹೀರಿ ಜೋಪಾನ ಮಾಡಿ ಮಡಗಿಕೊಳ್ಳುವವನಂತೆ, ಸಿಹಿತಿಂಡಿಯನ್ನು ಕಂಡಾಗ ಬಾಯಲ್ಲಿ ಜೊಲ್ಲಾಡಿಸುತ್ತ ತವಕಿಸುವ ಎಳೆಯ ಮಗುವಿನಂತೆ ಜಯರಾಮು ಮೂವತ್ತು–ನಲವತ್ತು ಮೆಟ್ಟಿಲು ಕೆಳಗೆ ಇಳಿದು ನೋಡುತ್ತ ನಿಂತ. ಗೌರಿಗೆ ತನ್ನ ಪ್ರಿಯಕರನ ನೋಟವನ್ನು ಕಂಡು ಎದೆ ತುಂಬಿದ ಕೆರೆ ಆಯಿತು. ಜಯರಾಮು ಹತ್ತಿರ ಬಂದಂತೆಯೇ ಕೇಳಿದ : "ಗೌರಿ ಮುತ್ತುರಾಯನ್ನ ಏನು ಕೇಳಿದೆ?"

ಗೌರಿ ನಗುತ್ತ ನಾಚುತ್ತ ನಿಂತಳು. ಜಯರಾಮು ಹಿಡಿದ ಪಟ್ಟು ಬಿಡಲಿಲ್ಲ. ಗೌರಿ ನಾಚಿ ನೀರಾಗಿ ಹೇಳಿದಳು: "ನಿಮ್ಮ ಕೈಹಿಡಿಯೋ ಭಾಗ್ಯ ಕೊಡು ಮುತ್ತುರಾಯಪ್ಪ ಅಂತ ಅಡ್ಡಬಿದ್ದು ಕೇಳಿಕೊಂಡೆ, ನೀವೇನು ಕೇಳಿಕೊಂಡ್ರಿ".

"ನಾನೇ ? ಮುತ್ತುರಾಯ, ಸದಾ ನನಗೆ ನನ್ನ ಗೌರಿಯ ತುಟಿಗಳ ಜೇನುತುಪ್ಪದಂತಹ ಮುತ್ತುಗಳು ಸಿಗ್ತಾ ಇರಲಿ ಅಂತ ಕೇಳಿಕೊಂಡೆ!" ಎಂದು ಅವಳ ಕೈಯನ್ನು ಫಕ್ಕನೆ ಹಿಡಿದುಕೊಂಡ. ಹಿಡಿದುಕೊಂಡ ರಭಸಕ್ಕೆ ಸನ್ನಿವೇಶದ ಉದ್ವೇಗಕ್ಕೆ ಗೌರಿಯ ಬಲ ಅಂಗೈಯನ್ನು ಅಲಂಕರಿಸಿದ್ದ ಪೂಜೆಯ ತಟ್ಟೆ ಇನ್ನೇನು ಬಿದ್ದು ಸಾಮಗ್ರಿಗಳೆಲ್ಲ ಚೆಲ್ಲಾಪಿಲ್ಲಿ ಆಗಬೇಕು; ಜಯರಾಮು ತಟ್ಟೆಯನ್ನು ಹಿಡಿದುಕೊಂಡ. ಗೌರಿ ಜಯರಾಮುವಿನ ನುಡಿಗಳು ನೀಡಿದ ಎಲ್ಲೆ ಅರಿಯದ ಸುಖದಿಂದ ತನ್ನ ತಲೆಯನ್ನು ಒಂದಷ್ಟು ಕ್ಷಣಗಳು ಜಯರಾಮುವಿನ ವಿಶಾಲ ಎದೆಯ ಮೇಲೆ ಮಡಗಿದಳು. ತಲೆಯನ್ನು ನೇವರಿಸಿ ಮಲ್ಲಿಗೆಯ ಘಮಗುಡುವ ವಾಸನೆಯನ್ನು ಹೀರುತ್ತ ಜಯರಾಮು ಕೇಳಿದ : "ಗೌರಿ ನನ್ನ ಎದೆಗೆ ಕಿವಿಗೊಟ್ಟು ಕೇಳ್ತಾ ಇದ್ದೀಯಲ್ಲ, ಏನು ಕೇಳಿಸ್ತಾ ಅದೆ ನಿನಗೆ?"

"ಗಂಡಸರ ನಂಬಬೇಡ ಅಂತ ಹೇಳ್ತಾ ಅದೆ !"

"ಆ ಮಾತು ಹೆಂಗಸರಿಗೆ ಹೇಳು ! ಮೊದಲೇ ಗಾದೆ ಇಲ್ವೆ : ಮೀನಿನ ಹೆಜ್ಜೆ ಗುರುತು ಹಿಡಿದ್ರೂ ಹಿಡೀಬೋದು, ಹೆಂಗಸರ ಗುಟ್ಟು ತಿಳಿಯೋದು ಕಷ್ಟ ಅಂತ!"

ಜಯರಾಮುವಿನ ಈ ಮಾತುಗಳು ಗೌರಿಯನ್ನು ಕೆಣಕಿದವು. ತಟ್ಟೆಯನ್ನು ಕೆಳಕ್ಕಿಟ್ಟು ಅವನ ಮುಖಕ್ಕೆ ಮುಖ ಕೊಟ್ಟು ಕಣ್ಣಿಗೆ ಕಣ್ಣು ಅಂಟಿಸಿ ಕೇಳಿದಳು: "ನನ್ನ ಕಣ್ಣು ನೋಡಿ ಹೇಳಿ: ಇವು ಏನು ಹೇಳ್ತವೆ ಅಂತ". ಜಯರಾಮು ತನ್ನ ಬೊಗಸೆಯಲ್ಲಿ ಗೌರಿಯ ಮುಖವನ್ನು ಹಿಡಿದುಕೊಂಡ. ಸನ್ನಿವೇಶದ ಒತ್ತಡದಿಂದ ಗೌರಿಯ ಮುಖದ ಮಾಂಸಖಂಡಗಳು ನವಿರಾಗಿ ಕಂಪಿಸುತ್ತಿದ್ದವು. ಅವಳ ಕಣ್ಣುಗಳಲ್ಲಿ ಒಂದು ಬಗೆಯ ಹೇಳಲಾರದ ಹೊಳಪು, ಬರೆಯಲಾಗದ ನೋವು, ಬತ್ತದ ಪ್ರೇಮ ಅವನಿಗೆ ಎದ್ದು ಕಾಣತೊಡಗಿದವು. ಅರಿವಿಲ್ಲದಂತೆಯೇ ಅವನ ಮುಂಗೈ ಕಂಪಿಸತೊಡಗಿ ಹಾಗೆಯೇ ಗೌರಿಯ ಮೃದುವಾದ ಕಪೋಲಗಳನ್ನು ಸವರತೊಡಗಿದವು. ಗೌರಿಗೂ ಎಂದೂ ಜಯರಾಮುವಿನೊಡನೆ ಇದ್ದಾಗ ಆಗದ ಸುಖ ಆಗಲಾರಂಭಿಸಿತು. ಹದವಾದ ಬಿಸಿಲಿಗೆ ಚಳಿಯಲ್ಲಿ ಮೈಯನ್ನು ಒಡ್ಡುವಂತೆ ಜಯರಾಮುವನ್ನು ಅವಳ ಕೈಗಳು ನುಲಿದುಕೊಂಡವು. ಯೌವ್ವನದ ಕಾವಿನಲ್ಲಿ ಮಾತಿನ ಸರವೇ ಕಡಿದುಬಿದ್ದುದನ್ನು ಗಮನಿಸಿದ ಜಯರಾಮು ಹೇಳಿದ:

"ನಿನ್ನ ಕಣ್ಣು ನಿನ್ನವಲ್ಲ, ನನ್ನವು ಗೌರಿ!"

"ಸತ್ಯವೇ ಈ ಮಾತು?"

"ಮುತ್ತುರಾಯನ ಆಣೆಗೂ ಗೌರಿ, ಈ ಮಾತು ಸತ್ಯ ! ಎಂದು ತಟ್ಟೆಯ ಬಟ್ಟಲಲ್ಲಿದ್ದ ಕುಂಕುಮವನ್ನು ತೆಗೆದು ಆಲಿಂಗನದ ಆಘಾತಕ್ಕೆ ಈಡಾಗಿ ತನ್ನ ಅಂದವನ್ನು ಕಳೆದುಕೊಂಡಿರುವ ಕುಂಕುಮದ ಬೊಟ್ಟನ್ನ ಸರಿಪಡಿಸಿದ. ಮುಡಿಯ ಮೇಲೆ ಕೈ ಆಡಿಸಿ, ನಾಚುತ್ತ ನೆಲನೋಡುತ್ತ ನಿಂತ ಗೌರಿಯ ಮುಖವನ್ನು ನೋಡಿ: 'ಎಲೈ ಭದ್ರೆ ! ನನ್ನ ಮೇಲೆ ಕೋಪವೇ? ಮುಖ ಎತ್ತಿ ಈ ನಿನ್ನ ಪ್ರಾಣಕಾಂತನನ್ನು ನೋಡು" ಎಂದು ತಾನು ಭೀಮನ ಪಾತ್ರವನ್ನು ಅಭಿನಯಿಸುತ್ತೇನೆಂಬುದರ ಕುರುಹಾಗಿ ಸಂಭಾಷಣೆಯ ತುಣುಕೊಂದನ್ನು ಎಸೆದ. ಗೌರಿ ತಟ್ಟೆಯನ್ನು ಕೈಗೆತ್ತಿಕೊಂಡು: "ಮೂರ್ಹೊತ್ತು ಬೇಕಾದ್ರೆ ನಾಟಕ ಆಡ್ಕಂಡು ನಿಂತಿರೀ ಅಂದ್ರೆ ನಿಂತಿರೋಕೆ ಸರಿ!" ಎಂದು ಹುಸಿಮುನಿಸನ್ನು ಮುಖದ ಮೇಲೆ ತಂದುಕೊಂಡು, ಜಯರಾಮುವಿಗೆ ಬಾಳೆಯಹಣ್ಣಿನ ಚಿಪ್ಪನ್ನೇ ನೀಡಿದಳು.

ಜಯರಾಮು ತಮ್ಮ ತೆಂಗಿನತೋಟದಲ್ಲಿ ಕುಳಿತು ತಿನ್ನುವ ಆಸೆಯಿಂದ ಗೌರಿಯನ್ನು ಕರೆದುಕೊಂಡು ಒಳಕ್ಕೆ ಹೋದ.

ತೆಂಗು, ಬಾಳೆ, ಅಡಿಕೆ ಮರಗಳಿಂದ ತೋಟ ಸಮೃದ್ಧಿಯಾಗಿ ಬೀಗುತ್ತ ನಿಂತಿದೆ. ಬಾಯಾರಿದವರ ಬಾಯಲ್ಲಿ ನೀರೂರಿಸುವ ತೆಂಗಿನ ಗೊನೆಗಳನ್ನು ಕಂಡು ಜಯರಾಮು, ಗೌರಿ "ಬೇಡಿ, ಬೇಡಿ, ನೀವು ಮರ ಹತ್ತಬೇಡಿ!" ಎಂದರೂ ಕೇಳದೆ ಗಡವನಂತೆ ತೆಂಗಿನಮರವೊಂದನ್ನು ಹತ್ತಿ ನಾಲ್ಕಾರು ಎಳನೀರನ್ನು ಕಿತ್ತುಹಾಕಿದ. ಇವನು ಎಳನೀರನ್ನು ಕೀಳುವ ಸಂಭ್ರಮದಲ್ಲಿದ್ದಾಗ 'ಕೆಂಜಿರುವೆ' ಗಳು ಮೈಯನ್ನು ಆಕ್ರಮಿಸಿ ಮುತ್ತಿಕ್ಕಲು ಪ್ರಾರಂಭಿಸಿದವು. ಜಯರಾಮು ಕೆಂಜಿರುವೆಗಳ ಮುತ್ತಿನ ರುಚಿಯನ್ನು ಉತ್ಪ್ರೇಕ್ಷೆ ಮಾಡಿ: "ಹೋ! ಹೋ!" ಎಂದು ಕುಣಿಯಲಾರಂಭಿಸಿದ. ಗೌರಿಗೆ ನಗು ತಡೆಯಲಾಗಲಿಲ್ಲ. 'ಬನ್ನಿ ಇಲ್ಲಿ, ಒಳ್ಳೆ ಎಳಮಗೂನಂಗೆ ಆಡೂರಿ' ಎಂದು ಅಂಗಿಯನ್ನು ಮೇಲೆತ್ತಿ ಬೆನ್ನಿನ ಮೇಲೆ ಕತ್ತಿನ ಬಳಿ ಹರಿದಾಡುತ್ತಿದ್ದ ಕೆಂಜಿರುವೆಗಳನ್ನು ಹಿಡಿದು ಬಿಸಾಡಿದಳು. ಆದರೆ ಇನ್ನೂ ಕೆಲವು ಜಯರಾಮುವಿನ 'ರಹಸ್ಯ ಸ್ಥಾನ' ಕ್ಕೆ ಮುತ್ತಿಗೆ ಹಾಕುವ ಸೂಚನೆಗಳನ್ನು ಗುರುತಿಸಿದ ಜಯರಾಮು: "ಇಲ್ಲೇ ಬಂದೆ" ಎಂದು ಬೇಲಿಯ ಮರೆಗೆ ನಡೆದ. ಈ ಗುಟ್ಟನ್ನು ತಿಳಿಯಲಾರದಷ್ಟು ಪೆದ್ದಿಯೇ ಗೌರಿ! "ನಿಮಗೆ ಹಂಗೇ ಆಗಬೇಕು" ಎಂದು ಬಾಯಿಗೆ ಸೆರಗನ್ನು ತುರುಕಿಕೊಂಡು ನಗು ತಡೆದುಕೊಂಡಳೂ. ತನ್ನ ರಹಸ್ಯ ಸ್ಥಾನವನ್ನು ಮುತ್ತಿಗೆ ಹಾಕಲು ಹವಣಿಸುತ್ತಿದ್ದ ಕೆಂಜಿರುವೆಗಳ ಹುಟ್ಟಡಗಿಸಿದ ಜಯರಾಮು ತೋಟದ ಗುಡಿಸಲಿನಲ್ಲಿ ಗುಪ್ತವಾಗಿ ಇರಿಸಿದ್ದ ಮಚ್ಚನ್ನು ತೆಗೆದುಕೊಂಡು ಎಳನೀರನ್ನು ಕೆತ್ತಲು ಪ್ರಾರಂಭಿಸಿದುದನ್ನು ಕಂಡು ಗೌರಿ : "ನಿಮ್ದು ಎಲ್ಲ ಉಲ್ಟ-ಪಲ್ಟ ! ಎಳನೀರು ಕುಡಿದು ಬಾಳೇಹಣ್ಣು ತಿಂದಾರೆ !" ಎಂದಳು. ಜಯರಾಮು : "ನೀನು ಮುಂದೆ ನಿಂತಿದ್ರೆ ಎಲ್ಲ ಮರೆತು ಹೋಯ್ತದೆ ನಂಗೆ" ಎಂದು ಮಚ್ಚು, ಎಳನೀರನ್ನು ಕೆಳಕ್ಕೆಸೆದು ಅವಳ ತೋಳುಗಳನ್ನು ಮೃದುವಾಗಿ ಹಿಡಿದುಕೊಂಡ. ಹದವಾದ ಎಳನೀರು, ಬಾಯಿಗೆ ರುಚಿಯಾದ ಬಾಳೇಹಣ್ಣು, ಎಲ್ಲಕ್ಕಿಂತಲೂ ಮಿಗಿಲಾಗಿ ಜೇನುಗೂಡಿನಂತೆ ಮುಂದಿರುವ ಗೌರಿ! ಇದಕ್ಕೆ ಹಿಮ್ಮೇಳವಾಗಿ ನಿಂತಿರುವ ತೋಟದ ಏಕಾಂತತೆ! ಗೌರಿಯನ್ನು ಹಾಗೆ ತಬ್ಬಿ ಮಲಗಿಸಿಕೊಂಡು ಅವಳ ತಲೆಯನ್ನು ತನ್ನ ಎಡತೊಡೆಯ ಮೇಲೆ ಇಟ್ಟುಕೊಂಡು, ಮುಖವನ್ನೇ ನೋಡುತ್ತ ದೇಹದ ಹಳ್ಳ ದಿಣ್ಣೆಗಳ ಆಳ ವಿಸ್ತಾರಗಳನ್ನು ಅವನ ಕೈಗಳು ಅಳೆಯಲಾರಂಭಿಸಿದುವು. ಗೌರಿ ಬಹಿರಂಗವಾಗಿ 'ಬೇಡಿ ಥೂ!' ಎಂದರೂ ಅಂತರಂಗದಲ್ಲಿ 'ಬೇಕು ಬೇಕು' ಎನ್ನುವಂತೆ ಮೈಯನ್ನು ಸ್ಪಂದಿಸತೊಡಗಿದಳು. ಜಯರಾಮು ಬಾಳೆಹಣ್ಣೊಂದನ್ನು ಸುಲಿದು ಒಂದು ತುದಿಗೆ ತನ್ನ ಬಾಯಿ ಹಾಕಿ; ಇನ್ನೊಂದು ತುದಿಯನ್ನು ಗೌರಿಯ ಬಾಯಲ್ಲಿ ಇಟ್ಟು 'ತಿನ್ನು' ಎಂದು ಬಲವಾಗಿ ತುರುಕಿದ. ಗಂಡು ಮೈಯ ವಿಚಿತ್ರ ಕಾವಿನ ಅಮಲಿನಲ್ಲಿ ಗೌರಿಗೆ ಯಾವುದೂ ಬೇಡ ಎನ್ನಿಸಲಿಲ್ಲ. ಬಾಳೇಹಣ್ಣನ್ನು ಯಾರು ತಿಂದರೋ ಏನು ಕತೆಯೋ! ಗೌರಿಯ ತುಟಿ ನಾಲಿಗೆ ಮಾತ್ರ ಜಯರಾಮುವಿಗೆ ಜೇನಿಗಿಂತಲೂ ಮಿಗಿಲಾದ ರುಚಿಯನ್ನು ನೀಡಿದುವು.

ಜಯರಾಮುವಿನ ದೇಹದಲ್ಲಿ, ದೀವಳಿಗೆಯ ಹೋರಿಯಷ್ಟು ಉತ್ಸಾಹ, ಬಲ ಧುಮುಗುಡಲಾರಂಭಿಸಿತು. ಗೌರಿಯನ್ನು ತನ್ನ ದೇಹಕ್ಕೆ ಅಂಟಿಸಿಕೊಂಡಷ್ಟೂ ತನ್ನ ಬಲ ಇಮ್ಮಡಿಯಾಗುತ್ತಿರುವುದನ್ನು ಗಮನಿಸಿ, ಗೌರಿಯ ಕೈಗಳು ಬಲವಾಗಿ ತನ್ನ ನಡುವನ್ನು ಬಳಸಿ, ಅವಳು ಮೌನವಾಗಿರುವುದನ್ನು ಕಂಡು ಸದಾ ಗೌರಿ ಒಡನೆ ಹೀಗೆಯೇ ಇದ್ದುಬಿಡಬೇಕೆನ್ನಿಸಿ:

"ಗೌರಿ"

"ಹಾಂ!"

"ಹೀಗೇ ನಾವು ಜೊತೇಲಿರುವಾಗ್ಲೇ ಸಾವು ಬಂದ್ರೆ ಬಲು ಮಜ ಅಲ್ವೇ?" ಎಂದ.

"ಥೂ! ಯಾಕೆ ಈ ಅನಿಷ್ಟದ ಮಾತಾಡೀರಿ" ಎಂದು ಗೌರಿ ಮುಂದೆ ಮಾತನಾಡದಂತೆ ಅವನ ತುಟಿಗಳನ್ನು ನುಂಗಿಬಿಟ್ಟಳು.

"ಲೇ! ಮನೆಹಾಳಿ, ಮಾನಗೆಟ್ಟವಳೆ?" – ಬೆಚ್ಚುವಂತೆ ಗಂಡಸಿನ ಧ್ವನಿ ಬಂದುದನ್ನು ಕೇಳಿ ಇಬ್ಬರೂ ದಿಢೀರನೆ ಮೇಲೆದ್ದು ನೋಡಿದರು. ತೋಟದ ಬಾಗಿಲಲ್ಲಿ ಗೌರಿಯ ಅಣ್ಣ ಪುಟ್ಟಸ್ವಾಮಿ ಕೈಯಲ್ಲಿ ಬೆಟ್ಟುಕತ್ತಿಯನ್ನು ಹಿಡಿದುಕೊಂಡು ಇಬ್ಬರನ್ನೂ ರಗರಗನೆ ಉರಿಯುತ್ತಿರುವ ಕಣ್ಣುಗಳಲ್ಲೇ ನುಂಗಿಬಿಡುವಂತೆ ನೋಡುತ್ತ ನಿಂತಿದ್ದಾನೆ!

"ಲೋ ಸೂಳೇಮಗನೆ, ನನ್ನ ತಂಗಿ ಕೆಡಿಸೋಕೆ ಎಷ್ಟು ದಿನದಿಂದ ಕಾದು ನಿಂತಿದ್ದೆ" ಎಂದು ಜಯರಾಮನ ಕಡೆ ನುಗ್ಗಿದ.

"ಕಂಡೋರ ಹೆಣ್ಣುಮಗಳ ಕೆಡಿಸಿ ನಡು ನೀರೇಲಿ ಕೈಬಿಡೋಕೆ ನಾನು ಅಪ್ಪನಗುಟ್ಟಿದ ಮಗ, ಅಡ್ಡನಾಡಿ ಅಲ್ಲ!" ಎಂದು ಜಯರಾಮು ಮಚ್ಚನ್ನು ಕೈಗೆತ್ತಿಕೊಂಡ.

"ನಿನ್ನದು ಅಡ್ಡನಾಡಿ, ಬೆರಕೆ ವಂಶ ಅಂತ ಸುತ್ತಮುತ್ತಲ ಊರಿಗೆಲ್ಲ ತಿಳಿದದೆಕನೋಗೋ ದರ್ವೇಸಿ ನನ್ನ ಮಗನೆ".

"ಯಾರದೋ ಅಡ್ಡನಾಡಿ, ಬೆರಕೆ ವಂಶ" ಜಯರಾಮು ಉರಿಯುವ ಕೊಳ್ಳಿಯಂತೆ ಮುನ್ನುಗ್ಗಿದ. ಗೌರಿ: "ಅಯ್ಯಯ್ಯೋ" ಎಂದು ಕಣ್ಣು ಮುಚ್ಚಿ ಬಿಡುವುದರೊಳಗೆ ಇಬ್ಬರ ಮಧ್ಯೆ ಬಂದಳು. ಪುಟ್ಟಸ್ವಾಮಿ ಬೀಸಿದ ಬೆಟ್ಟುಕತ್ತಿಯ ಏಟು 'ಚಕ್ಕೆಂದು' ಅಪ್ಪಳಿಸಿತು. ರಕ್ತ 'ಚಲ್' ಎಂದು ಚಿಮ್ಮಿತು. "ಅಯ್ಯೋ!" ಎಂದು ನೆಲಕ್ಕೆ ಬಿದ್ದು ಕತ್ತು ಕುಯ್ದ ಮರಿ ಒದ್ದಾಡುವಂತೆ ಒದ್ದಾಡತೊಡಗಿದಳು.

ಜಯರಾಮುವಿಗೆ ಕೋಪ ಕೇತಾರಮುಟ್ಟಿತು. ಪುಟ್ಟಸ್ವಾಮಿ ತನ್ನ ತಂಗಿಯ ಅನಿರೀಕ್ಷಿತ ಕೊಲೆಯಿಂದ ಬೆಚ್ಚಿ ಬೆವರಿನ ಮುದ್ದೆ ಆಗಿ, ರಕ್ತಸ್ನಿಗ್ಧವಾದ ಮಚ್ಚನ್ನು ಹಿಡಿದುಕೊಂಡು ಓಡತೊಡಗಿದ. ಅವನು ಮುಂದೆ ಮುಂದೆ : ಜಯರಾಮು ಹಿಂದೆ ಹಿಂದೆ. ಕೆರೆಯ ಏರಿ ಸಿಕ್ಕಿತು. ಇನ್ನೇನು ಪುಟ್ಟಸ್ವಾಮಿ ಜಯರಾಮು ಕೈಗೆ ಸಿಗಬೇಕು. ಅಷ್ಟರಲ್ಲಿ ತಪ್ಪಿಸಿಕೊಂಡು ಕೆರೆಗೆ ಹಾರಿದ. ಜಯರಾಮೂ ಹಾರಿದ. "ಲೋ ಪುಟ್ಟಸ್ವಾಮಿ ನೀನು ಇವತ್ತು ತಪ್ಪಿಸಿಕೊಂಡ್ರೆ, ನೀನೆ ಅಪ್ಪನಗುಟ್ಟಿದ ಮಗ!" ಎಂದು ರಭಸದಿಂದ ಈಜುತ್ತ ಗಬಕ್ಕನೆ ಅವನ ಜುಟ್ಟನ್ನು ಎಡಮುಷ್ಟಿಯಲ್ಲಿ ಹಿಡಿದುಕೊಂಡು ಬಲ ಎಲ್ಲವನ್ನೂ ಬಿಚ್ಚುಮಚ್ಚಿನಿಂದ ಬಾರಿಸಿದ. ಚಿಮ್ಮದ ರಕ್ತಕ್ಕೆ ನೀರು ಕೆಂಪಾಗಿ ಪುಟ್ಟಸ್ವಾಮಿಯ ದೇಹದ ಚಲನೆ ತಗ್ಗಿದಾಗ, ಬಿಡದೆ ಮತ್ತೆ ಮತ್ತೆ ಮಚ್ಚಿನಲ್ಲಿ ಕೊಚ್ಚಿದ. ರುಂಡ ಮುಂಡಗಳು ಬೇರೆ ಬೇರೆ ಆಗಿ, ತಾನೇ ರಕ್ತದ ಕೆರೆ ಒಂದರಲ್ಲಿ ಅದ್ದಿಹೋದಂತಾಗಿ ! ಜೊತೆಗೆ ತನ್ನ ದೇಹದಿಂದಲೂ ರಕ್ತಸುರಿಯಲಾರಂಭಿಸಿ ನಿತ್ರಾಣವೆನ್ನಿಸಿ ಕಣ್ಣುಗಳಿಗೆ ಕತ್ತಲೆ ನುಗ್ಗಿ ಹೆಪ್ಪುಕಟ್ಟಿದಂತಾಗಿ ಜಯರಾಮು ಧಿಗ್ಗನೆ ಹಾಸಿಗೆಯ ಮೇಲೆ ಎದ್ದು ಕುಳಿತ.

ತಾನು ಕಂಡದ್ದು ಕನಸೆ? ಅಥವಾ ನಿಜವೆ? ಸುತ್ತಮುತ್ತ ಗೌರಿ ಹಾಗೂ ಪುಟ್ಟಸ್ವಾಮಿಯ ಹೆಣಗಳಿಗಾಗಿ ಹುಡುಕಿದ. ನಿತ್ಯ ಮಲಗುವಾಗ ತಲೆ ಕೆಳಗೆ ಮಡಗಿಕೊಳ್ಳುವ ಮಚ್ಚು ಸಿಕ್ಕಿತು. ಮಚ್ಚಿನಿಂದ ರಕ್ತ ಸೋರುತ್ತಿದೆಯೋ

ಏನೋ ಎಂದು ಸಂಶಯ ಬಂದು, ಬೆಂಕಿ ಕಡ್ಡಿ ಗೀರಿ ನೋಡಿ 'ಇಲ್ಲ' ಎಂದು ಸಮಾಧಾನಪಡಿಸಿಕೊಂಡು ಸಿಗರೇಟು ಸೇದಲಾರಂಭಿಸಿದ.

"ಕನಸಿನಲ್ಲಿ ಮೊದಲು ಕಂಡಂತೆ ಈಗ ಗೌರಿ ಮಗ್ಗುಲಲ್ಲಿದ್ದರೆ: ಕೆನ್ನೆಗೆ ಕೆನ್ನೆ ಕೊಟ್ಟು ಮಲಗಿದ್ದರೆ ಎಂಥ ಸ್ವರ್ಗಸುಖ! ಇದರ ಬದಲು ಕೊನೆಯಲ್ಲಿ ಕಂಡಂತೆ ರಕ್ತ ಚೆಲ್ಲಿದರೆ ? ರಕ್ತ ಚೆಲ್ಲಿದರೆ ಚೆಲ್ಲಲಿ, ಗೌರಿಗೂ ನನಗೂ ಮಧ್ಯೆ ಬಂದವರ ಹೆಣಗಳು ಉರುಳಿದರೆ ಉರುಳಿ ಹೋಗಲೇಳು!" – ಜಯರಾಮು ಹಲ್ಲು ಕಡಿದ.

ಕಣಜ ಹಿಡಿಸದೆ ತಾನು ಮಲಗಿದ್ದ ಕಿರುಮನೆಯಲ್ಲಿ ರಾಶಿಹಾಕಿದ್ದ ಬತ್ತವನ್ನು ತಿನ್ನಲು ರಾಶಿಗೆ ದಾಳಿ ಇಟ್ಟಿದ್ದ ಇಲಿ ಹಿಂಡುಗಳ 'ಗಿಜಿ–ಗಿಜಿ' ಸದ್ದಿನಿಂದ ರೇಗಿ : "ಬಡ್ಡೆತ್ತವ್ವ! ಬೆಳೆದ ಬತ್ತ ಎಲ್ಲ ನಿಮಗೆ ಆಯ್ತು, ನಾಳಾಕೆ ಬೋನು ಮಡಗಿ ಹಿಡಿದು ನಿಮ್ಮ ಶೂಲಕ್ಕೇರಿಸ್ತೀನಿ" ಎಂದು ಲೈಟು ಹಾಕಿದ. ಇಲಿಗಳು ಕದದ ಸಂದಿಯಲ್ಲಿ ಪೇರಿ ಕಿತ್ತುವು.

ಹಜಾರದಲ್ಲಿ ಮಲಗಿದ್ದ ಕೆಂಪೇಗೌಡರು : "ಲೋ ಜಯರಾಮು, ಇಲಿಗಳೇನಲ್ಲ? ನಾನು ಹೊತಾರೆಯೇ ಬಡ್ಕೊಂಡೆ ಎಲ್ಲಾನೂ ಮೂಟೆ ಕಟ್ಟುಹಾಕಿ ಅಂತ. ನನ್ನ ಮಾತು ಅಂದ್ರೆ ನಿನಗೂ ನಿಮ್ಮಣ್ಣನ್ಗೂ ಒಂದು ರೋಮಕ್ಕೂ ಬೆಲೆಯಿಲ್ಲ!"

"ಸುಮ್ಮನೆ ಮಲೀಕಪ್ಪ, ನಾಳಾಕೆ ಬೋನು ಮಡಗಿ ಈ ಸೂಳೇಮಗನ ಇಲೀನೆಲ್ಲ ಹಿಡಿದು ನೇಣಾಕದೇ ಹೋದರೆ.....ಹಾಂ!" ಎಂದು ಹಲ್ಲುಕಡಿದು ಲೈಟು ಆರಿಸಿ, ಹಾಸಿಗೆಯ ಮೇಲೆ ಉರುಳಿಕೊಂಡು ಕಣ್ಣು ಮುಚ್ಚಿದ. ಕಣ್ಣು ತುಂಬ ಗೌರಿಯೇ ಮೂಡಿನಿಂತಳು.

**– 2 –**

ನಾಲ್ಕು ವರ್ಷಗಳ ಹಿಂದಿನ ಮಾತು.

ಮಂಡ್ಯದಿಂದ ಬಿ.ಎಸ್ಸಿ., ಕೊನೆ ವರ್ಷದ ಪರೀಕ್ಷೆ ಕಟ್ಟಿ ಜಯರಾಮು ಊರಿಗೆ ಬಂದಿದ್ದಾಗ ಮುತ್ತುರಾಯನ ಬೆಟ್ಟದ ಅಂಚಿನಲ್ಲಿ ಕಾಲುವೆಗೆ ಅಂಟಿಕೊಂಡಂತಿರುವ ತಮ್ಮ ತೋಟದ ಕಡೆಗೆ ತಿರುಗಾಡಿಕೊಂಡು ಬರಲೆಂದು ಸಂಜೆ ಹೋದ. ತೋಟದ ಮಲ್ಲಿಗೆ ಅಂಟಿನಲ್ಲಿ ಹೂವ ಸೋಸುತ್ತಿರುವುದನ್ನು ಕಂಡು "ಯಾರು ತೋಟದೇಲಿ? ಯಾರ ಹೇಳಿ ಕೇಳಿ ಬಂದೆ?" ಎಂದು ಜೋರಾಗಿ ಅಂದ ಮಾತುಗಳಿಗೆ ಉತ್ತರ ನೀಡದೆ ಆ ವ್ಯಕ್ತಿ ತನ್ನ ಕ್ರಿಯೆಯಲ್ಲಿ ಮಗ್ನವಾಗಿದೆ. ಜಯರಾಮುವಿಗೆ ಅವಮಾನವಾದಂತಾಗಿ, ಇನ್ನೂ ನಾಲ್ಕಾರು ಹೆಜ್ಜೆಗಳು ಮುಂದುವರಿದು ಕೂಗಿದ : "ಯಾವೊಳು ಅವ್ಳು? ಕಿವಿ ಏನಾದ್ರೂ ಕಿವುಡೆ?"

"ನೋಡು ಯಾರು ಅಂತ ! ನಿನಗೆ ಕಣ್ಣು ಕಾಣಿಸೂದಿಲ್ವೆ ?" – ಕೋಪದಿಂದ ಹೂವು ಕುಯ್ಯುತ್ತಿದ್ದ ಹೆಣ್ಣು ಜಯರಾಮು ಕಡೆಗೆ ಮುಖಮಾಡಿ ಸೆಟೆದುನಿಂತು ಹೇಳಿದಳು. ಜಯರಾಮು ಅವಕ್ಕಾಗಿ ಹೋದ. ತಮ್ಮ ಕೇರಿಯ ಶೂಲದ ವೆಂಕಟೇಗೌಡರ ಮಗಳು – ಗೌರಿ ! ಒಂದು ವರ್ಷದೊಳಗೆ ಹೂಹಿಸಲಾರದಷ್ಟು ಅಗಾಧವಾದ ಬದಲಾವಣೆಗಳು ಅವಳಲ್ಲಿ ಮೂಡಿ ನಿಂತಿವೆ ! ಗಿಣಿಮೂಗು, ಗೆರೆಯಂತ ಹುಬ್ಬಿನ ಕೆಳಗೆ ಮಿಣುಕು ಹುಳುವಿನಂತಹ ಕಣ್ಣುಗಳು, ತುಂಬಿದ ಕೆನ್ನೆ, ನಡುತನಕ ಜೋಲಾಡುವ ಜಡೆ; ರವಿಕೆಗೆ ಸವಾಲೆಸೆದು ಬೆಳೆದಿರುವ ಎದೆಗಳು – ಎಲ್ಲಕ್ಕಿಂತಲೂ ಮಿಗಿಲಾಗಿ ಮಡಿಲಲ್ಲಿ ಹೂವು ಕಟ್ಟಿಕೊಂಡು ಗಂಡಿನ ಮುಖಕ್ಕೆ ಮುಖ ಕೊಟ್ಟು ನಿಂತಿರುವ ಠೀವಿ : ಹೋರಿಯನ್ನು ಕೆಣಕಲು ನಿಂತ ಕಡಸಿನ ನೆನಪು ತಂದು ಜಯರಾಮು ಪೆದ್ದು ಪೆದ್ದಾಗಿ ಗೌರಿಯನ್ನೇ ನೋಡುತ್ತಾ ನಿಂತ.

"ಯಾಕೆ ಗುರ್ತು ಸಿಗಲಿಲ್ವೆ ? ಕಾಲೇಜು ಮೆಟ್ಟಿಲು ತುಳಿದೋರ್ಗೆ ನಾವೆಲ್ಲಿ ನೆನ್ಪು ಬಂದೇವು ? ತಮ್ಮ ತೋಟದ ಹೂವು ತಾವೇ ತಗೊಳಿ ಜಯರಾಮಪ್ಪನೋರೆ !" ಎಂದು ಸರ್ರನೆ ಮುಂದಕ್ಕೆ ಬಂದು ಹೂವಿನ ರಾಶಿಯನ್ನು ಮುಂದೆ ಗುಡ್ಡೆ ಹಾಕಿ ಮುಖ ಸಿಂಡರಿಸಿಕೊಂಡು ತೋಟದ ಬಾಗಿಲ ಕಡೆ ತಿರುಗಿದ ಗೌರಿಯನ್ನು ಜಯರಾಮು "ನನ್ನ ಯಾಕೆ ಜಯರಾಮಪ್ಪನೋರೆ ಅಂದಿ? ನಾನೇನು ಮುದುಕನೆ !" ಎಂದು ಕೇಳಿದ.

"ನನ್ದು ತಪ್ಪಾಯ್ತು ಮಹಾಸ್ವಾಮಿ, 'ಜಯರಾಮಣ್ಣಾರೆ' ಅಂದೆ. ಸರಿಯೇ?"

"ನಾನ್ಯಾಕೆ ನಿನಗೆ ಅಣ್ಣ ಆಗಾನೆ ! ಪುಟ್ಟಸ್ವಾಮಿ ಅವನಲ್ಲ !"

"ಇನ್ನೇನು ಅಂತ ಕರೀಬೇಕು ನಿನ್ನ? ಮಹಾರಾಜ ಹೂವು ಕಿತ್ತಿದ್ದು ತಪ್ಪಾಯ್ತು ಅಂತ ಕಾಲಿಗೆ ಬೀಳಬೇಕಾಗಿತ್ತೇನೊ!"

ಕೋಪದಿಂದ ಕಂಗೊಳಿಸುತ್ತಿದ್ದ ಗೌರಿಯ ಮುಖವನ್ನು ಒಲುಮೆ ಚಿಮ್ಮುವ ಕಣ್ಣುಗಳಿಂದ ನೋಡುತ್ತ ಮಂಡಿಯೂರು ಕುಳಿತು, ಹೂವೆಲ್ಲವನ್ನೂ ಶೇಖರಿಸಿಕೊಂಡು ಗೌರಿಯ ಮುಂದೆ ಬಂದು ಹೇಳಿದ : "ನನ್ನ ಮಹಾರಾಜ ಅನ್ನಬೇಡ ಗೌರಿ : ಜಯರಾಮು ಅನ್ನು".

"ಜಯರಾಮ ಅಂತ ನಿನ್ನ ಹೆಸರಿಡಿದು ಕರೀಕೆ ನಾನೇನು ನಿನ್ನ ಹೆಂಡತಿಯೆ?"

"ಮುಂದಕ್ಕೆ ನನ್ನ ಹೆಂಡತಿ ಆಗು ! ಬೇಡ ಅಂದ್ನೆ ನಾನು?"

"ಹಾಂ ! ಎಲ್ಲಿಗೆ ಬಂದೆ ನೋಡ್ದ !" ಎಂದು ಗಕ್ಕನೆ ತಿರುಗಿ ಜಯರಾಮುವಿನ ಕೆನ್ನೆಗೆ ಹೊಡೆಯಲು ಬಲಗೈಯನ್ನು ಎತ್ತಿದವಳೇ ಹಾಗೆಯೇ ಗೊಂಬೆಯಂತೆ ನಿಂತುಕೊಂಡಳು. ನೋಡುತ್ತಾಳೆ ! ಬೊಗಸೆಯಲ್ಲಿ ಹೂವುಗಳನ್ನೆಲ್ಲ ಜೋಪಾನವಾಗಿ ಹಿಡಿದುಕೊಂಡು, ದೇವರಿಗೆ ಅರ್ಪಿಸುವ ಪೂಜಾರಿಯಂತೆ ಜಯರಾಮು ನಿಂತಿದ್ದಾನೆ.

ಗೌರಿಯ ಮನಸ್ಸು ಹೂವಾಗಿ ಹೋಯಿತು.

ರೆಪ್ಪೆ ಅಲುಗಿಸದೆ ನೋಡುತ್ತ ನಿಂತಳು.

ಜಯರಾಮು : "ಹೂವು ತಗೋ ಗೌರಿ. ನನಗ್ಯಾಕೆ? ಮುಡಿಯೋಕೆ ಜಡೆ ಇದ್ದಾದೆ ನನಗೆ?" ಎಂದ.

"ಮನೆಗೆ ತಕ್ಕೊಂಡ್ಹೋಗಿ – ನಿಮ್ಮ ದೇವರಿಗೆ ಆಯ್ತವೆ".

"ನನ್ನ ಮನೆದೇವರು ಎದುರ್ಗೇ ನಿಂತಿರುವಾಗ ಇನ್ನಾವ ದೇವರಿಗೆ ಮುಡಿಸಲಿ?"

ಇಂಥ ಹೊಸ ಮಾತನ್ನು ಗೌರಿ ನಿರೀಕ್ಷಿಸಿರಲಿಲ್ಲ. ಆಶ್ಚರ್ಯ, ಭಯ, ನಾಚಿಕೆಯಿಂದ ಜಯರಾಮುವನ್ನು ನೋಡುತ್ತ ನಿಂತಳು.

'ತಗೋ ಗೌರಿ, ಹೂವು ನನ್ನ ಕೈಯ ಕಾವಿನಿಂದ ಬಾಡೋಯ್ತವೆ!" ಎಂದಾಗ ಎಚ್ಚರಾಗಿ ಕೈ ನೀಡಿದಳು. ಬೊಗಸೆಗೆ ಹೂವು ತುಂಬಿದ ಜಯರಾಮು ಮಿಂಚಿನ ವೇಗದಲ್ಲಿ ಮೃದುವಾಗಿ ಹಿಡಿದುಕೊಂಡ.

"ಥೂ! ಬುಡಿ. ಯಾರಾರ ಕಂಡಾರು" ಗೋಗರೆದಳು ಗೌರಿ.

"ಕೈ ಹಿಡಿದದ್ದು ಬುಡೋಕಲ್ಲ ಗೌರಿ!"

"ಇದೇ ಆಡಿದ ಮಾತೆ?"

"ಹೂಂ!" ಎಂದವನೆ ಜಯರಾಮು ಅವಳ ಮುಂಗೈಯನ್ನು ಬಲವಾಗಿ ಹಿಡಿದುಕೊಂಡ. ಇವರಿಬ್ಬರ ಪ್ರೇಮ ಪ್ರಕರಣಕ್ಕೆ ನಾಂದಿ ಹಾಡಿದ ಹೂವುಗಳು ಬಾಡಿ ನೆಲದ ಮೇಲೆ ಬಿದ್ದು ಅನಾಥವಾದುವು. ಇದನ್ನು ಗಮನಿಸಿದ ಜಯರಾಮು ಹೂವುಗಳನ್ನು ಮತ್ತೆ ತೆಗೆದುಕೊಳ್ಳಲು ಬಗ್ಗಿದಾಗ: "ಬಾಡಿಹೋದ ಹೂವು ನಂಗೆಬ್ಯಾಡಿ!"

"ಪ್ರೀತಿಯಿಂದ ಕದ್ದು ಕುಯ್ದ ಹೂವುಗಳು ಈಗ ಬ್ಯಾಡ ಅಂದ್ರೆ?"

"ನನಗೆ ಬೇಕಾದ ಹೂವು ನನಗೆ ಸಿಗ್ತು!" ಎಂದವಳೆ ಗೌರಿ ಅಲ್ಲಿ ನಿಲ್ಲಲಾರದೆ ತಮ್ಮ ತೋಟದ ಬಾವಿಯ ಕಡೆಗೆ ಹೆಜ್ಜೆ ಹಾಕಿದಳು.

ಅಂದಿನಿಂದ ಇಬ್ಬರ ಇದೆಯಲ್ಲೂ ಪ್ರೀತಿಯ ಗಿಡ ಮೂಡಿ ಸೊಂಪಾಗಿ ಬೆಳೆದು ಪೊದೆಗಟ್ಟಿಕೊಂಡಿತು. ನಾಲ್ಕು ವರ್ಷಗಳ ಅವಧಿಯಲ್ಲಿ ಗೌರಿಯನ್ನು ಕಾಣಲು ಅದೆಷ್ಟು ವಿಶ್ವಪ್ರಯತ್ನಗಳನ್ನು ಜಯರಾಮು ಮಾಡಿದ್ದ: ಕದ್ದು ಕದ್ದು

ತೋಟದ ಬಳಿ ಭೇಟಿ ಆಗುತ್ತಿದ್ದ ಕಾಲದಲ್ಲಿ ಆತಂಕವಿದ್ದರೂ ಅದೆಂಥ ಮೈಬಿಸಿ! ಮಾತು ನಿಂತು ಒಬ್ಬರನ್ನೊಬ್ಬರು ಕಣ್ಣಲ್ಲೇ ನುಂಗುತ್ತ ನಿಂತ ನಿಮಿಷಗಳಿಗೆ ಬೆಲೆ ಕಟ್ಟುವುದು ಯಾರಿಂದ ಸಾಧ್ಯ ?

ಕಳೆದ ಸಾರಿ ಗೌರಿಯನ್ನು ತೋಟದ ಬಳಿ ಕಂಡಾಗ ಜಯರಾಮುವಿಗೆ ಮೈ ಉರಿಯುತ್ತಿತ್ತು. ಕಿವಿಗೆ ಬಿದ್ದ ಮಾತುಗಳು ಕಣಜ ಕಡಿದಂತೆ ಕಾಡುತ್ತಿದ್ದವು. ಜಯರಾಮುವಿನ ಮುಖದ ಮಾಂಸಖಂಡಗಳು ಸೆಟೆದು ನಿಂತಿರುವುದನ್ನು ಕಂಡು ಗೌರಿ ಬೆಚ್ಚಿದರೂ ತಕ್ಷಣವೇ ಚೇತರಿಸಿಕೊಂಡು : "ಇದೇನು ಇವತ್ತು ಗಡಿಗೆ ಮುಖ ಮಾಡ್ಕೊಂಡಿದೀರಲ್ಲ".

"ನಂ ಮನೆಯವರು ಹೆಣ್ಣು ಕೊಡಿ ಅಂತ ಮನೆಬಾಗಿಲ್ಗೆ ಬಂದ್ರೆ–ಅಡ್ಡನಾಡಿ ವಂಶದೋರಿಗೆ ಕೊಡೋದಿಲ್ಲ ಅಂತ ನಿಮ್ಮಪ್ಪ, ಅಣ್ಣ ಅನ್ನಬೋದೆ?"

"ಅಂದೋರು ನಮ್ಮಪ್ಪ, ಅಣ್ಣ–ನಾನಲ್ವಲ್ಲ".

"ಅವರಂದ್ರೆ ನೀನು ಅಂದಂಗೆಯೇ!"

"ನೀವು ಕೈ ಹಿಡಿಯೋದು ನನ್ನ ತಾನೆ?"

"ಹುಂ"

"ಸುಮ್ಕಿರಿ ..... ಮನಸ್ಸಿಗೆ ಸಮಾಧಾನ ತಂದ್ಕೊಳ್ಳಿ".

"ಗೌರಿ.....ಇನ್ನೊಂದು ಮಾತು ಕಿವಿಗೆ ಬೀಳ್ತು. ನಿನ್ನ ನಾಡಗೌಡರ ಮಗ ಶಂಕರ ಇಂಜಿನಿಯರ್ ಆಗವನೆ ಅವನಿಗೇ ಕೊಡಬೇಕು. ಬೇಕಾದರೆ ಲಕ್ಷ ಖರ್ಚಾಗಲಿ ! ಅಂತ ನಿಮ್ಮಣ್ಣ ಪುಟ್ಟಸ್ವಾಮಿ ಅಂತಿದ್ದನಂತೆ? ಆಗಲೇ ಒಳಗೊಳಗೇ ಮಾತುಕತೆಯೂ ಮುಗಿದಿದೆ ಅಂತ ಊರಿಗೆ ಊರೇ ಕುಣೀತಾ ಅದೆ–ನಿಜವೆ?"

"ನಿಜ! ಕುಣಿದ್ರೆ ಕುಣೀಲಿ ಬುಡಿ. ನಿಮಗೆ ಹೆದರಿಕೆಯೇ? ನಾನು ಶೂಲದ ವಂಶದೇಲಿ ಹುಟ್ಟಿದೋಳು. ಇದು ಜ್ಞಾಪಕದೇಲಿರಲಿ".

"ಗೌರಿ, ನೀನು ಶೂಲದ ವಂಶದಲ್ಲಿ ಹುಟ್ಟಿದೋಳು. ನಾನು ಅಡ್ಡನಾಡಿ ವಂಶದವನು! ನಮ್ಮ ಸೋದರತ್ತೆ ಯಾರನ್ನೋ ಕರಕಂಡು ಕಣ್ಣಿಗೆ ಕಾಣಿಸದಂಗೆ ಹೊರಟುಹೋದಳಂತೆ.... ಅಂತ ವಂಶ...."

"ಸಾಕು..... ನಿಲ್ಲಿಸಿ!" ಗೌರಿ ಗಂಭೀರವಾಗಿ ನುಡಿದಳು. ಈ ಮಾತುಗಳಲ್ಲಿ ನೋವು ಪ್ರೀತಿ ಜಿನುಗುತ್ತಿದ್ದವು. ಜಯರಾಮುವಿನ ಮುಖವನ್ನೇ ಕಣ್ಣಿಗೆ ಕಣ್ಣು ಸೇರಿಸಿ ನೋಡುತ್ತ ಗೌರಿ, ತನ್ನ ಎದುರಿಗೆ ದೂರದಲ್ಲಿದ್ದ ಕಲ್ಲಿನ ಕಡೆ ಬೆಟ್ಟು ಮಾಡಿ ತೋರಿಸಿ ಕೇಳಿದಳು: "ಆ ಕಲ್ಲು ಯಾವುದು?"

"ಮಾಸ್ತಿಕಲ್ಲು!"

"ಮಾಸ್ತಿಕಲ್ಲು ಅಂದ್ರೆ ಗಂಡ ಸತ್ತಾಗ ಅವನ ಜೊತೇಲಿ ಬೆಂಕಿಗೆ ಬಿದ್ದು ಬೂದಿ ಆದೋಳ ನೆನಪಿಗೆ ನೆಡೋ ಕಲ್ಲು ಅಲ್ವೆ?"

"ಹೂಂ ! ಗೌರಿ, ಇದಕ್ಕೂ ನಮಗೂ ಏನು ಸಂಬಂಧ?"

"ಸಂಬಂಧ ಇಲ್ವೆ ! ಗಂಡಸರು ಹೆಂಗಸ ಅರ್ಥ ಮಾಡ್ಕೋಕೆ ಬಲು ರಾಗಿ ಬೀಸಬೇಕು. ನಾನು ಬಾಳುದ್ರೂ ನಿಂಜೊತೇಲಿ" ಸತ್ರೂ ನಿಂಜೊತೇಲೇ!!"

"ನಮಗೆ ಇನ್ನೂ ಮದುವೆಯೇ ಆಗಿಲ್ಲ ಗೌರಿ".

"ಗಂಡಸರು ಎಷ್ಟು ಬೇಗ ಕೈಹಿಡಿದದ್ನೇ ಮರೆತುಬಿಡ್ತೀರಿ. ನಮ್ಮ ಮದುವೆ ಆಗಿ ಎಷ್ಟು ವರ್ಷ ಆಯ್ತು ಏನು ಕತೆ!"

"ಎಷ್ಟು ವರ್ಷ ಆಯ್ತು ಗೌರಿ?"

"ಆಗಲೆ ನಾಲ್ಕು ವರ್ಷಗಳಾದೊ ! ಹೂವುಗಳು ಮಾತ್ರ ಸಾಕ್ಷಿ ! ಮನುಷ್ಯರಲ್ಲ !"

ಗೌರಿಯ ಮಾತಿನ ಚಮತ್ಕಾರಕ್ಕೆ, ಮನಸ್ಸಿನ ಗಟ್ಟಿತನಕ್ಕೆ ಜಯರಾಮು ಬೆಪ್ಪಾಗಿಹೋದ. ಸಂತೋಷದಿಂದ ಕೇಳಿದ : "ನನ್ನ ಜೊತೇಲಿ ಸಾಯ್ತೀಯ? ನಾನು ಏನು ಮಾಡಿದ್ರೂ ಸುಮ್ಮನಿರ್ತೀಯಾ? ನಾನು ಇಲ್ಲೇ ನಿನ್ನ ಮಾನಭಂಗಮಾಡಿದ್ರೂ.....?"

"ನನ್ನ 'ಮಾನ' ನಿಮ್ಮದೇ ಆಗಿರುವಾಗ ಇನ್ನು ಆದ ನೀವು 'ಭಂಗ' ಮಾಡೋದು ಹೇಗೆ?" ಎಂದು ಬಂದವಳೇ ಕತ್ತನ್ನು ತೋಳುಗಳಿಂದ ಬಳಸಿದುದೇ ತಡ. ಜಯರಾಮುವಿನ ಗಂಡಸುತನಕ್ಕೆ ಸವಾಲು ಎಸೆದಂತಾಗಿ ತೋಟದ ನೆಲವೇ ಹಾಸಿಗೆ ಆಯಿತು! ಜಯರಾಮು ಬಿಸಿ ಉಸಿರುಬಿಟ್ಟ.

ಈ ಘಟನೆ ನಡೆದು ಹದಿನೈದು ದಿನಗಳಾಗಿವೆ. ದಿನಗಳು ಉರುಳಿದಂತೆ, ಗೌರಿ ತನ್ನ ಕೈಯಿಂದ ತಪ್ಪಿಹೋಗುವುದು ಖಚಿತವಾಗತೊಡಗಿದೆ. ಮನೆಯಲ್ಲಿ ಅಪ್ಪ-ಅವ್ವ, ಅಣ್ಣ-ಎಲ್ಲ, 'ಹೆಣ್ಣು ಕೊಡೋದಿಲ್ಲ ಅಂದೋರ ಮನೆ ಮೆಟ್ಟಿಲು ಹತ್ತೋದು ಅಂದ್ರೆ ಬದುಕಿ ಸತ್ತಂಗೆ ! ಬಿ.ಎಸ್ಸಿ. ಓದಿರೋ ನಿನ್ನಂಥ ಗಂಡ್ಗೆ ಹತ್ತು-ಹನ್ನೆರಡು ಸಾವಿರ ವರದಕ್ಷಿಣೆ ಸುರಿದು ಅದ್ದೂರಿಯಾಗಿ ಮದ್ವೆ ಮಾಡಿಕೊಡೋಕೆ ಸಾವಿರ ಜನ ಅವ್ರೆ! ನೀನು 'ಹೂಂ' ಅನ್ನು ಕೈ ತೊಳ್ಕೊಂಡು ಮುಟ್ಟಬೇಕು ಅಂತ ಹೆಚ್ಚು ತಂದು ಮದ್ವೇ ಮಾಡ್ತೀವಿ. ಶೂಲದ ವಂಶದೋರು ಅಂದ್ರೆ ಅವರಿಗೆ ತಲೆಮೇಲೆ ಎರ್ಡು ಕೊಂಬವ " ನಮ್ಮ ಅಡ್ಡನಾಡಿ ವಂಶದೋರು ಅಂತ ಆಡ್ಕೊಂಡೋರು ತಾಕೆ ತಿರ್ಗ ಹೆಣ್ಣುಕೊಡಿ ಅಂತ ನೀನು ಯಾರನ್ನಾದರೂ ಕಳಿಸಿದ್ರೆ, ನಾವೆಲ್ಲ ನೀರೋ ನೇಣೋ ನೋಡ್ಕೋತೀವಿ!" ಎಂದು ಸಿಡಿಯುತ್ತಿರುವನದನು ನೆನೆದು ಜಿಗುಪ್ಸೆಗೊಂಡ.

ಮತ್ತೆ 'ಗಿಜಿ ಗಿಜಿ' ಎನ್ನುತ್ತ ಇಲಿಗಳ ಹಿಂಡು ಬತ್ತದ ರಾಶಿಗೆ ದಾಳಿ ಇಡಲು ಬರುತ್ತಿರುವ ಸದ್ದು ಕೇಳಿ: "ಚುಡಿ-ಚುಡೀ, ಹಾಳೋದೋವ ನಿಮ್ಮ ನಾಳಾಕೆ ಶೂಲಕ್ಕೇರಿಸದೇ ಹೋದರೆ.....ನಾನು....." ಎಂದು ನೊರನೊರನೆ ಹಲ್ಲುಕಡಿದ.

– 3 –

ಮುಂಜಾವಿಗೇ ಎದ್ದು ಜಯರಾಮು ತೋಟದ ಕಡೆ ನಡೆದ.

ಹಿಂದೆ ವರ್ಷಕ್ಕೊಂದು ಸಾರಿ ತಪ್ಪದೆ ನಡೆಯುತ್ತಿದ್ದ ಶೂಲದ ಹಬ್ಬ. ಈಗ ಐದು ವರ್ಷಗಳು ಕಳೆದ ನಂತರ ಊರಿಗೆ ಊರೇ ಸಿದ್ಧತೆ ನಡೆಸುತ್ತಿದೆ. 'ಶೂಲದ ಹಬ್ಬ' – ಉಳಿದ ಹಬ್ಬಗಳಂತೆ ಸದರವಾದ ಹಬ್ಬವಲ್ಲ. ಈ ಹಬ್ಬದ ಪ್ರಾಮುಖ್ಯತೆ ಮತ್ತು ಸಂಕೇತಗಳು ತೀರ ಈಚಿನ ಜನಕ್ಕೆ ಸ್ಪಷ್ಟವಾಗಿ ತಿಳಿಯದಿದ್ದರೂ ಮೊದಲಿನಷ್ಟೇ ಶ್ರದ್ಧೆಯಿಂದ ನಡೆಸಲು ಎಲ್ಲ ಯತ್ನಗಳೂ ನಡೆಯುತ್ತವೆ. ಹಬ್ಬ ಒಂದು ತಿಂಗಳು ಎನ್ನುವಂತೆ ಊರಿನಲ್ಲಿ ಮೆಣಸಿನಕಾಯಿ ಸುಡುವಂತಿಲ್ಲ. ಮರಿ ಕುಯ್ದು ಮಾಂಸ ಪಾಲು ಹಾಕುವಂತಿಲ್ಲ. ಶೂಲದ ಬೋರೆಯಲ್ಲಿ ಒಂದು ಆಳುದ್ದದ ನಾಲ್ಕು ಗುಂಡಿಗಳನ್ನು ಕೀಳುವವರು ಮುಸಲ್ಮಾನರು ! ಅರವತ್ತು ಅಡಿಗಳಷ್ಟು ಎತ್ತರವಿರುವ ನಾಲ್ಕು ಅಡಿಕೆ ಮರಗಳನ್ನು ಊರಿನ ನೂರಾರು ಬಲಿಷ್ಟ ಯುವಕರು ನೆಲಕ್ಕೆ ಬೀಳದಂತೆ ಕಡಿದು, ಮಾರಮ್ಮನ ಗುಡಿಗೆ ತಂದು ಪೂಜಿಸಿ; ಎಲ್ಲಿಯೂ ನೆಲಕ್ಕೆ ತಾಕಿಸದೆ ಎಚ್ಚರಿಕೆಯಿಂದ ಶೂಲದ ಬೋರೆಗೆ ಸಾಗಿಸಿ ಮತ್ತೆ ಪೂಜೆಮಾಡಿ; ತುದಿಗೆ ಶೂಲ ಆಡುವವರು ನಿಂತುಕೊಳ್ಳಲು ಮಣೆ ಜೋಡಿಸಿ ನಂತರ ನೆಡುತ್ತಾರೆ.

ಶೂಲದ ಹಬ್ಬದ ದಿನ ಮಾರಮ್ಮನ ಪೂಜೆಯನ್ನು ಕೆರೆಯಿಂದ ಶೂಲದ ಬೋರೆಗೆ ಹುಮ್ಮಸ್ಸಿನಿಂದ ತಮಟೆಗಳ ಕಹಳೆಗಳ ಸದ್ದಿನ ನಡುವೆ, ಭಕ್ತರ ಕಾಕು ಕೇಕೆಗಳೊಡನೆ ತಂದು; ಅಲ್ಲಿಂದ ಪೂಜೆ ಮಾರಮ್ಮನ ಗುಡಿಗೆ ನಡೆದು ಅಲ್ಲಿ ಪೂಜೆ ನಡೆಯುತ್ತಿದ್ದಂತೆಯೇ ಶೂಲ ಆಡುವವರು, ಬಲಿ ಬೀಳುವವರು ಬರುತ್ತಾರೆ. ಎಲ್ಲರೂ ತೀರ್ಥ ಹಾಕಿಸಿಕೊಂಡು ಬೋರೆಗೆ ಬರುತ್ತಾರೆ. ಬಲಿಯವರು ಬಿದ್ದನಂತರ, ಶೂಲ ಆಡುವವರು ಮರಹತ್ತಿ ಆಡತೊಡಗುತ್ತಾರೆ. ಅಲ್ಲಿಂದ-ಇಲ್ಲಿಗೆ ಬಳಕುತ್ತ ಇನ್ನೇನು ನೆಲಕ್ಕೇ ಮಲಗಿಬಿಟ್ಟವೇನೋ ಎನ್ನುವಂತೆ ತೂಗುವ ಮರಗಳನ್ನು ಆಡುವವರನ್ನು ಜನರು ಉಸಿರುಕಟ್ಟಿ ನೋಡುತ್ತ ನಿಂತುಬಿಡುತ್ತಾರೆ! ಒಮ್ಮೊಮ್ಮೆ ಹಿಂದಿನ ಕಾಲದಲ್ಲಿ ಶೂಲ ಆಡುವವರು ಪಕ್ಕದಲ್ಲಿರುವ ಮನೆಗಳ ಬೆನ್ನೆಂಚನ್ನು ಬಗ್ಗಿ ಎತ್ತಿಕೊಳ್ಳುತ್ತಿದ್ದುದೂ ಉಂಟಂತೆ!

ನಾಡಗೌಡರು ಕೊಟ್ಟ 'ಪೀಡಗಡವು' ಮರಿಯನ್ನು ಕಡಿದು ಮಾಲೆಮರ (ಮಧ್ಯದ ಶೂಲ ಆಡುವ ಮರ)ದ ಸುತ್ತ ಎಳೆದ ನಂತರ ಬಲಿಯವರನ್ನು ಎತ್ತುಕೊಂಡು, ಶೂಲದವರನ್ನು ಕರೆದುಕೊಂಡು ಮಾರವ್ವನ ಗುಡಿಗೆ ದೌಢಾಯಿಸುವ ಆ ದೃಶ್ಯ!

ಅನಂತರ ಬಿಸಿರಕ್ತದ ಪ್ರಾಯದ ಹುಡುಗರು ಶೂಲದ ಮರಗಳನ್ನೇರಿ, ಒಬ್ಬರನ್ನೊಬ್ಬರು ಮೀರಿಸಿ ಶೂಲ ಆಡತೊಡಗುತ್ತಾರೆ. ಆಡುವಾಗ ಪ್ರಾಯದ ಹುಡುಗಿಯ ಕಣ್ಣಿಗೆ ಬಿದ್ದು ಅವರೇನಾದರೂ ಕಿರುನಗೆ ಬೀರಿದರೆಂದರೆ ತೀರಿತು. ನೋಡುವವರ ಎದೆ ನಡುಗುವಂತೆ ರಭಸದಿಂದ ಆಡತೊಡಗುತ್ತಾರೆ. ಇಷ್ಟೆಲ್ಲ ನಡೆಯುತ್ತಿರುವಾಗ ಊರಿನ ಪ್ರಮುಖರನ್ನು ಅಶ್ಲೀಲವಾಗಿ ಆದರೆ ಕಾವ್ಯಶೈಲಿಯಲ್ಲಿ ಬೈಯ್ಯುವ 'ದಿಮ್ಮಿಸಾಲೆ'ಯ ಪಾತ್ರಧಾರಿ.

ಎಲ್ಲ ಮುಗಿದ ನಂತರ ಶೂಲ ಆಡಿದವರಿಗೆ, ಶೂಲ ಬೋರೆಯ ಸರಹದ್ದಿಗೆ ಅಂಟಿಕೊಂಡಿರುವ ಶೆಟ್ಟರ ಮನೆಯಲ್ಲಿ ಊಟ, ಉಪಚಾರ. ಶೂಲದ ದಿನ ಈ ಶೆಟ್ಟರ ಮನೆಯಲ್ಲಿ ಎಳನೀರಿನಲ್ಲಿ ದೀಪ ಉರಿಯುವುದಂತೆ!

ಹಬ್ಬ ಮುಗಿದ ಒಂದು ತಿಂಗಳ ನಂತರ ಮರಗಳನ್ನು, ಪೂಜೆ ಮಾಡಿದ ನಂತರ ಹರಿಜನರು ಭಕ್ತಿಯಿಂದ ಕೀಳುತ್ತಾರೆ.

ಈ ಶೂಲದ ಹಬ್ಬ ಎಂದರೆ ಜಯರಾಮುವಿಗೆ ನೂರಾಳಿನ ಬಲ ಬರುತ್ತದೆ. ಕಳೆದ ಸಲ ಶೂಲ ಆಡುವವರು ನಿಲ್ಲಿಸಿದ ನಂತರ ಮಾಲೆ ಮರವನ್ನೇರಿ ನಿಂತವರೆಲ್ಲ ಥರಥರನೆ ನಡುಗುವಂತೆ ಮರವನ್ನು ಬಳುಕಿಸಿ, ಪಾಲಿಸುತ್ತ ಎಲ್ಲ 'ಸಾಕು ಸಾಕು' ಎಂದು ಕೂಗಿದರೂ ಲೆಕ್ಕಿಸದೆ ಶೂಲವಾಡಿದ್ದ. ಈ ಸಾರಿ ಮಾಲೆಮರವನ್ನು ಹತ್ತಿ ಶೂಲ ಆಡಬೇಕಾದವನು ಗೌರಿಯ ಅಣ್ಣ–ಪುಟ್ಟಸ್ವಾಮಿ, ಇದನ್ನು ನೆನೆದು ಜಯರಾಮು ಹಲ್ಲುಕಡಿದು. 'ಈ ಹಕ್ಕು ತನ್ನ ವಂಶಕ್ಕಿದ್ದರೆ? ತನಗೂ ಮದುವೆ ಆಗಿದ್ದರೆ? ಶಾಸ್ತ್ರಬದ್ಧವಾಗಿ ಮರ ಏರಿ ನೋಡುವವರ ಮೈ ರೋಮವೆಲ್ಲ 'ಜುಂ' ಎನ್ನುವಂತೆ ಶೂಲ ಆಡಬಹುದಿತ್ತು. ಯಾರಿಗೆ 'ಧಂ' ಅದೆ? ಯಾರು ಅಡ್ಡನಾಡಿ? ಅನ್ನೋದನ್ನು ತೋರಿಸಬಹುದಾಗಿತ್ತು' ಎಂದು ಯೋಚಿಸುತ್ತ ತೋಟದ ಕಡೆ ಬಿರುಸಾಗಿ ಹೆಜ್ಜೆಹಾಕತೊಡಗಿದ.

ಅರಿವಿಲ್ಲದಂತೆಯೇ ಮಾಸ್ತಿಕಲ್ಲಿನ ಮುಂದೆ ಬಂದು ನಿಂತುಕೊಂಡ. ತನಗೆ ಬುದ್ಧಿ ತಿಳಿದಂದಿನಿಂದ ಎಷ್ಟು ಸಾರಿ ಈ ಕಲ್ಲನ್ನು ನೋಡಿರಲಿಲ್ಲ? ಅದೆಷ್ಟು ಸಾರಿ ತಮ್ಮ ಮನೆಗಳಲ್ಲಿ ಹೊಸ ಸೀರೆಗಳನ್ನು ತಂದಾಗ ಈ ಕಲ್ಲಿಗೆ, ಬಳೆ–ಕುಂಕುಮಗಳನ್ನು ಅರ್ಪಿಸಿ ಪೂಜೆ ಮಾಡಿರಲಿಲ್ಲ ? ತಾನು ಭಕ್ತಿಯಿಂದ ಕೈಮುಗಿದಿರಲಿಲ್ಲ? ಸೂಕ್ಷ್ಮವಾಗಿ ಕಲ್ಲಿನ ಮೇಲೆ ಶಿಲ್ಪಿ ಕೆತ್ತಿರುವ ಚಿತ್ರಗಳನ್ನು ನೋಡಿದ. ತುದಿಯಲ್ಲಿ ತಪಸ್ಸಿನ ಭಂಗಿಯಲ್ಲಿ ಕುಳಿತಿರುವ ಹೆಣ್ಣು–ಗಂಡಿನ ಚಿತ್ರ. ಇವರ ಎಡ–ಬಲದಲ್ಲಿ ಸೂರ್ಯ–ಚಂದ್ರ, ಮಧ್ಯಭಾಗದಲ್ಲಿ ಹೆಂಗಸಿನ ಎತ್ತಿದ ತೋಳು. ಇದರ ಕೆಳಗಡೆ ಒಬ್ಬರ ಹೆಗಲ ಮೇಲೊಬ್ಬರು ಕೈಹಾಕಿಕೊಂಡು ಎಡಗೈಯಲ್ಲಿ ಮಾದಲದಹಣ್ಣು! ಗಂಡಿನ ಬಲಗೈಯಲ್ಲಿ ಎತ್ತಿ ಹಿಡಿದುಕೊಂಡಿರುವ ಕಠಾರಿ! ಹೆಣ್ಣಿನ ಎಡಗೈಯಲ್ಲಿ ಮಾದಲದಹಣ್ಣು! ಸಂತಸದಿಂದ ಗಂಡನೊಡನೆ ತನ್ನನ್ನೇ ಸುಟ್ಟುಕೊಂಡ ಆ ಮಹಾ ಪತಿವ್ರತೆಯ ಚಿತ್ರವನ್ನು ನೋಡಿ ಜಯರಾಮು ರೋಮಾಂಚನಗೊಂಡ. ಆ ಮಹಾಸತಿಯ ಬಲಗೈಯನ್ನು ಮುಟ್ಟಿ ನೋಡಿದ. ಇದೇ ಕಲ್ಲನ್ನು ತೋರಿಸಿ ಗೌರಿ ಹೇಳಿದ್ದ ಮಾತುಗಳನ್ನು ನೆನೆದು, ಮತ್ತೆ ಚಿತ್ರಗಳನ್ನೇ ನೆಟ್ಟ ದೃಷ್ಟಿಯಲ್ಲಿ ನೋಡತೊಡಗಿದಂತೆಯೇ ಆ ಚಿತ್ರಗಳಿಗೆ ಜೀವ ಬಂದು, ಗಂಡು ತಾನಾಗಿ ಹೆಣ್ಣು ಗೌರಿ ಆಗಿ ಒಬ್ಬರನ್ನೊಬ್ಬರು ಕೈಹಿಡಿದು ನಿಂತಿದ್ದಾರೆ! ಅಂದರೆ ಗೌರಿ ಚಿತೆ ಏರಲು ಸಿದ್ಧಳಾಗಿದ್ದಾಳೆ! ಜಯರಾಮು ಬೆಚ್ಚಿದ. ಗೌರಿ ಚಿತೆ ಏರಬೇಕಾದರೆ ತಾನು ಸಾಯಬೇಕು!

ವಾಸ್ತವಪ್ರಪಂಚಕ್ಕೆ ಬಂದು ತನ್ನ ಎದೆಯ ಮೇಲೆ ಕೈಯಿಟ್ಟು ನೋಡಿಕೊಂಡ. ಎದೆ ಗುಂಡಿಗೆ ನಗಾರಿಯಂತೆ ಬಾರಿಸುತ್ತಿದೆ. ಬೆಳಗಿನ ಗಾಳಿ ತಣ್ಣಗೆ ಬೀಸುತ್ತಿದ್ದರೂ ಹಣೆಯಲ್ಲಿ ಬೆವರ ಹನಿಗಳು ಸಾಲುಗಟ್ಟಿದುವು. ಚೌಕದಿಂದ ಮುಖ ಹಣೆ ಸೀಟಿಕೊಂಡ. ಇದೆಂಥ ಕಲ್ಪನೆ ! ಮತ್ತೆ ದೃಷ್ಟಿಸಿ ನೋಡಿದ. ಅದೇ ಹೆಣ್ಣು–ಗಂಡುಗಳು; ಅದೇ ಸೂರ್ಯ ಚಂದ್ರ ಮತ್ತು ಸೂರ್ಯ ಚಂದ್ರರಿರುವತನಕ ಎಲ್ಲರಿಗೂ ಆದರ್ಶವಾದ ಪತಿವ್ರತೆಯ ಬಲಗೈ! ನಿಟ್ಟುಸಿರುಬಿಟ್ಟು, ಬಲವಂತವಾಗಿ ಹೆಜ್ಜೆಗಳನ್ನು ಕಿತ್ತುಹಾಕುತ್ತ ತಮ್ಮ ತೋಟದ ಕಡೆ ನಡೆದ.

ದೂರದಲ್ಲಿ ನೋಡುತ್ತಾನೆ : ನಾಡಗೌಡ ಅಣ್ಣೇಗೌಡರ ತೋಟದ ಬಳಿ ನೂರಾರು ಜನ ಘೇರಾಯಿಸಿದ್ದಾರೆ. ಅಂದರೆ ಹಬ್ಬಕ್ಕಾತಿ ಶೂಲದ ಬೋರೆಯಲ್ಲಿ ಪ್ರತಿಷ್ಠಾಪಿಸಬೇಕಾದ ಅಡಿಕೆ ಮರಗಳನ್ನು ಕಡಿಯಲು ಬೆಳಿಗ್ಗೆ ಎದ್ದು ಮಾರಮ್ಮನ ಗುಡಿಯಲ್ಲಿ ಪೂಜೆ ಮಾಡಿಸಿಕೊಂಡು, ಹಣೆಯಲ್ಲಿ ಕುಂಕುಮದ ಬೊಟ್ಟು ಧರಿಸಿ, ಕಿವಿಗೆ ದೇವರ ಪ್ರಸಾದದ ಹೂವುಗಳನ್ನು ಮುಡಿದು ಬಂದಿರಬೇಕು. ಕಳೆದ ಸಾರಿ ತಾನೂ ಶೂಲದ ಹಬ್ಬದ ಬಹುಮುಖ್ಯ ಅಂಗವಾದ, ಅಡಿಕೆ ಮರಗಳನ್ನು ಕಡಿಯುವ ಕಾರ್ಯದಲ್ಲಿ ಭಾಗಿ ಆಗಿರಲಿಲ್ಲವೆ? ಮನೆ ಮನೆಗೂ ಒಬ್ಬ ಗಂಡಾಳು ಬರಬೇಕೆಂದು ಹೇಳುತ್ತಿದ್ದವರು ಈ ಸಾರಿ ಏಕೆ ನಮ್ಮ ಮನೆಗೆ ಹೇಳಲಿಲ್ಲ ? ಈ ಕುತಂತ್ರ ಎಲ್ಲ ಆ ಪುಟ್ಟಸ್ವಾಮಿಯದೇ ಇರಬೇಕು. ಜಯರಾಮು ಹಲ್ಲುಗಳನ್ನು ಮಸೆದ. ಕೋಪದಿಂದ ಅಣ್ಣೇಗೌಡರ ತೋಟದ ಕಡೆ ಧಾವಿಸಿದ.

ಜಯರಾಮು ಬಂದುದನ್ನು ಕಂಡು ಗುಂಪಿನಲ್ಲಿದ್ದ ಇವರ ಚೆಡ್ಡಿ ಸ್ನೇಹಿತ ನಾಗರಾಜ ಚುಡಾಯಿಸುವ ಧ್ವನಿಯಲ್ಲಿ ಹೇಳಿದ: "ಏನೋಮಾರಾಯ ಈಗ ಬತ್ತಾ ಇದ್ದಿ–ಮಹಾರಾಜನಂಗೆ! ಅಪರೂಪಕ್ಕೆ ಐದು ವರ್ಷಕ್ಕೆ ನಡೀತಾ ಅದೆ ಹಬ್ಬ".

"ನನ್ನ ಕರೆದಿದ್ದೋರು ಯಾರಪ್ಪ? ನಾವೆಲ್ಲ ಅಡ್ಡನಾಡಿಗಳು! ನಾವು ಮರ ಕಡಿದರೆ ದೇವರು ಮೆಚ್ತಾನೆ?" – ಈ ಮಾತಿನ ಹಿನ್ನೆಲೆ ನಾಗರಾಜನಿಗೆ ಮಾತ್ರವಲ್ಲ, ಇಡೀ ಗುಂಪಿಗೆ ಗೊತ್ತಿದೆ. ಅಲ್ಲೇ ನಿಂತು ಎತ್ತರವಾದ, ಗಟ್ಟಿಯಾದ ಅಡಿಕೆ ಮರವನ್ನು ಆಯ್ಕೆ ಮಾಡುವುದರಲ್ಲಿ ನಿರತನಾಗಿದ್ದ ಪುಟ್ಟಸ್ವಾಮಿಯನ್ನು ಈ ಮಾತುಗಳು ಕೆಣಕಿದಂತಾಗಿ, 'ಎಲ್ಲಾಗರ್ೂ ಮನೆಬಾಗಿಲ್ಗೆ ಒಬ್ಬ ಆಳು ಕಳಿಸೋಕಾದದೆ? ತಮಟೆ ಸಾರಿಸಿರಲಿಲ್ವೆ? ತೀಟೆ ಇದ್ದರೆ ಗುಡಿತಕ್ಕೆ ಬರಬೇಕಾಗುತ್ತಪ! ಯಾವ ಯಾವ ವಂಶದೋರ್ಗೆ ಏನು ಏನು ಹಕ್ಕು ಇರಬೇಕೋ ಹಿಂದಿನಿಂದ ನಡಕೊಂಡು ಬಂದದ್ದು: ಅವರವರಿಗೆ ಇದ್ದೇ ಅದೆ".

ಜಯರಾಮುವನ್ನು ಕುದಿಯುವ ಬೆಲ್ಲದ ಕೊಪ್ಪರಿಗೆಗೆ ಹಿಡಿದು ಎಸೆದಂತಾಯಿತು.

"ಶೂಲ ಆಡೋಕೆ ಇರೋ ವಂಶದೋರೇ ಮರಗಳ ಕಡಕೋ ಹೋಗಬೇಕಪ್ಪ !"

"ಕಡ್ಕೊಂಡು ಬಾ ಅಂತ ನಿನ್ನ ಯಾರೂ ಇಲ್ಲಿ ಕಾಲು ಕಟ್ಕೊಂಡು ಬಂದಿದ್ದರೆ? ಸುಮ್ನೆ ಬಾಯಿ ಮುಚ್ಚುಕೊಂಡು ನಿಂತ್ಕೊ".

ಮಾತು ಕಾವೇರುತ್ತಿರುವುದನ್ನು ಕಂಡು ಪರಿಸ್ಥಿತಿಯನ್ನು ತಿಳಿಮಾಡಲು ನಾಗರಾಜು ಹೇಳಿದ:

"ಸುಮ್ಮನಿರ್ರಪ್ಪ. ಭಾವ–ಭಾವಮೈದುನ್ನು ಯಾಕೆ ಹಿಂಗೆ ಕಚ್ಚಾಡೀರಿ!"

ಈ ಮಾತಿಗೆ ಎಲ್ಲ ಗೊಳ್ಳೆಂದು ನಕ್ಕರು. ಪುಟ್ಟಸ್ವಾಮಿಗೆ ಉರಿಯುವ ಗಾಯದ ಮೇಲೆ ಹುಳಿ ಹಿಂಡಿದಂತಾಗಿ ನಾಗಜರಾಜನ ಕಡೆ ತಿರುಗಿ : "ಲೇ! ಇವ್ನು ಯಾಕೋ ನನ್ನ ಭಾವ ಆದಾನು? ಅಡ್ಡನಾಡಿಗೋಳಿಗೆಲ್ಲ ಹೆಣ್ಣು ಕೊಡೋಕೆ ನಂ ಮನೇಲಿ ಯಾರೂ ಕಿತ್ತೂ ನಿಂತಿಲ್ಲಕನ!"

"ಯಾರು ಅಡ್ಡನಾಡಿ? ಲೇ! ನಿಮ್ಮ ವಂಶದೇಲೇ ಏನ್ಲ ಹೆಣ್ಣು ಇರೋದು? ಕಾಸುಗೊಂದು ಕೊಸರಿಗೊಂದು ಬಿದ್ದವೆ? ಎಂದು ಜಯರಾಮು ಅಲ್ಲೇ ಬಿದ್ದಿದ್ದ ಗೊದ ಮೊಟ್ಟೆಯನ್ನು ಎತ್ತಿಕೊಂಡು ಪುಟ್ಟಸ್ವಾಮಿಯ ಕಡೆ ನುಗ್ಗಿದ. ಪುಟ್ಟಸ್ವಾಮಿ ಕೈಯಲ್ಲಿದ್ದ ಕೊಡಲಿಯನ್ನೇ ಹಿಡಿದುಕೊಂಡು ಮುಂದೆ ಬಂದ.

"ಹೋ! ಹೋ! ಸುಮ್ಮನಿರ್ರಪ್ಪ. ಬಂದಿರೋದು ದೇವರ ಕೆಲಸಕ್ಕೆ. ನಿಮ್ಮ ದಮ್ಮಯ್ಯ ಅಂತೀವಿ" ಎನ್ನುತ್ತ ಕೆಲವರು ಅಡ್ಡಬಂದರು. ಇನ್ನೂ ಕೆಲವರು ಹಿಡಿದು ಸಮಾಧಾನ ಪಡಿಸಿದರು. ಪುಟ್ಟಸ್ವಾಮಿಯ ಕೈಯಿಂದ ಬಲವಂತವಾಗಿ ಕೊಡಲಿ ಕಿತ್ತುಕೊಂಡರು. ನಾಗರಾಜ: "ನಾನು ಇವತ್ತು ಹೊತಾರೆ ಎಳಿತ್ಲೇ ಯಾರ ಮುಖ ನೋಡಿದ್ನಪ್ಪ? ಥೂತ್ತೇರಿ" ಎಂದು ಜಯರಾಮು ಹತ್ತಿರ ಬಂದು: "ಲೋ! ಜಯರಾಮು ಸುಮ್ಮನಿರ್ರಪ್ಪ–ನಿನಗೆ ಕೈಮುಗಿತೀನಿ. ಅಪರೂಪದ ಹಬ್ಬಕ್ಕೆ ಅಡ್ಡಿಮಾಡಬೇಡಿ" ಎಂದು ಗೊದಮೊಟ್ಟೆಯನ್ನು ಕಿತ್ತೆಸೆದು, 'ಬಾ ಇಲ್ಲಿ, ಮಾಲೆ ಮರಕ್ಕೆ ಸರಿಯಾದ ಮರ ಹುಡ್ಕು. ನಾವಿಬ್ಬರೇ ಕಡೀವ' ಎಂದು ಒಂದಷ್ಟು ಜನರನ್ನು ಕರೆದುಕೊಂಡು ತೋಟದ ಮಧ್ಯಕ್ಕೆ ಹೊರಟ.

ಜಯರಾಮು ತೋಟದಲ್ಲೇ ಅತ್ಯಂತ ಎತ್ತರವಾದ ಮರ ಒಂದನ್ನು ಹುಡುಕಿ, ನಾಗರಾಜನ ಕೈಯಿಂದ ಕೊಡಲಿ ಕಿತ್ತುಕೊಂಡು ರಭಸದಿಂದ ಬುಡವನ್ನು ಕದಿಯತೊಡಗಿದ. ಉಳಿದವರು ಇನ್ನು ಮೂರು ಮರಗಳನ್ನು ಹುಡುಕಿ ಕಡಿಯಲು ಪ್ರಾರಂಭಿಸಿದರು.

**– 4 –**

ತೋಟದಿಂದ ಜೋಪಾನವಾಗಿ ನೆಲಕ್ಕೆ ತಾಕದಂತೆ ಮಾರಮ್ಮನ ಗುಡಿ ಬಳಿಗೆ ಬಂದು ಹೆಗಲ ಮೇಲೆ ಇದ್ದ ಹಾಗೆಯೇ ಪೂಜೆ ಮಾಡಿಸಿ, ತೀರ್ಥ ಹಾಕಿಸಿ, ಮಣೆ ಜೋಡಿಸಿ ಶೂಲದ ಬೋರೆಗೆ ತಂದರು. ದೊಡ್ಡಮರವನ್ನು ಮಧ್ಯದ ಗುಂಡಿಗೆ ನಿಲ್ಲಿಸಿ ಬಿಗಿಯಾಗುವಂತೆ ಮಣ್ಣು–ಕಲ್ಲು ಹಾಕಿ ಗಿಡಿದರು. 'ಮಾಲೆಮರ' ಸಿದ್ಧವಾಯಿತು. ನಾಗರಾಜ ಪುಟ್ಟಸ್ವಾಮಿಯನ್ನು ಕೂಗಿ ಹೇಳಿದ: "ಬಾರೋ ಮಾರಾಯ, ಪರೀಕ್ಷೆ ಮಾಡ್ಕೊ. ಮೊದಲೇ ನಿನಗೂ ಜಯರಾಮುವಿಗೂ ಆಗೋದಿಲ್ಲ ಅಂತ ಸಡಿಲವಾಗಿ ನೆಟ್ಟವರೆ ಅಂದೀಯೆ! ಇದರಲ್ಲಿ ಸೂಲ ಆಡಬೇಕಾಗಿರೋ ದಣಿ ನೀನು".

ಪುಟ್ಟಸ್ವಾಮಿ ಮಾತನಾಡಿದ ಸುಮ್ಮನೆ ಕಣಜದ ಕೈಯಲ್ಲಿ ಕಡಿಸಿಕೊಂಡವನಂತೆ ನೋಡಿದ. "ಲೋ! ನಾಗರಾಜ ನಿಂದು ಯಾವಾಗ್ಲೂ ಕೆಡಸಣ್ಣನ ಕಥೆಯೇ! ಒಸಿ ಸುಮ್ಮನಿರು ನಿನ್ ದಮ್ಮಯ್ಯ, ಉರಿಯೋ ಗಾಯಕ್ಕೆ ಉಪ್ಪು–ಉಳಿ ಹಚ್ಚಬ್ಯಾಡ!" – ನಾಗರಾಜ ತೆಪ್ಪಗಾದ.

ಮಾಲೆಯ ಮರದ ಮೂರು ದಿಕ್ಕಿಗೆ ಮೂರು ಶೂಲದ ಮರಗಳು ಎದ್ದು ನಿಂತುವು. ಐದು ವರ್ಷಗಳ ನಂತರ ಶೂಲದ ಬೋರೆಯಲ್ಲಿ ರಂಗಸಜ್ಜಿಕೆ ಸಿದ್ಧವಾಗಿ ಮೂಡಿದ ಹೊಸ ಕಳೆಯನ್ನು ಕಂಡು ಎಲ್ಲ ಹಿಗ್ಗಿದರು.

ಜಯರಾಮುವಿನ ದೇಹ ಮಾಲೆಮರದ ಎತ್ತರವನ್ನು ಕಂಡು ಬಿಸಿ ಆಯಿತು. "ಪುಟ್ಟಸ್ವಾಮಿ ಇದನ್ನೂ ಹತ್ತಿ ಧಿಮಾಕಿನಿಂದ ಶೂಲವಾಡುತ್ತಾನೆ. ಇವನು ಆಡುವ ತನಕ ಯಾರೂ ಆಡುವಂತಿಲ್ಲ! ಆಹಾ! ಈ ಅವಕಾಶ ನನಗೆ ಇದ್ದಿದ್ದರೆ?"

ಮಾಲೆಮರವನ್ನೇ ಕಣ್ಣಿನಲ್ಲಿ ಇಂಗಿಸಿಕೊಳ್ಳುವವನಂತೆ ನೋಡಿದ.

**– 5 –**

ಮರಗಳನ್ನು ನೆಟ್ಟು ಇಪ್ಪತ್ತ ಒಂಬತ್ತು ದಿವಸಗಳು ಕಳೆದ ಬೆಳಿಗ್ಗೆ ಇಡಿ ಊರೆಲ್ಲ ಹಬ್ಬದ ಸಿರಿಯಲ್ಲಿ ಅದ್ದಿಹೋಯಿತು. ಸಾಯಂಕಾಲ ಮಂಚಮ್ಮ ಹಾಗೂ ಮರ್ಸಂಕಮ್ಮನ ಗುಡಿಯಲ್ಲಿ ಸಂಭ್ರಮವೋ ಸಂಭ್ರಮ. ಇನ್ನು ಊರನ್ನು ಕಾಯುವ ಮಾರಮ್ಮನ ಗುಡಿಯ ಮುಂದೆ ಕೇಳಬೇಕೆ : ದೊಡ್ಡ ಜಾತ್ರೆಯೇ ನೆರೆಯಿತು. ಮೀಸಲು ನೀರು ಹಾಗೂ ಪೂಜೆಯನ್ನು ತರಲು ತಮಟೆ, ನಗಾರಿ, ಕೊಂಬು–ಕಹಳೆಗಳ ಸಮೇತ ಗುಡ್ಡಪ್ಪನನ್ನು ಕರೆದುಕೊಂಡು ಕೆರೆಯ ತಡಿಗೆ ಹೊರಟರು. ಹೊಂಬಾಳೆಯನ್ನು ಪೂಜಿಸಿದ ಎಂಬತ್ತು ವರ್ಷದ ಗುಡ್ಡನ ಮೈಮೇಲೆ 'ಅಮ್ಮ' ಬಂದು ಓಲಾಡತೊಡಗಿದಳು. ಗುಡ್ಡಪ್ಪ "ಓ! ಹೋ!!" ಎಂದು ಕೇಕೇ ಹಾಕಿದ. ಪೂಜೆಯನ್ನು ನಾಲ್ಕು ಜನ ಎತ್ತಿ ಪೇಟದಿಂದ ಅಲಂಕೃತವಾದ ಅವನ ತಲೆಯ ಮೇಲೆ ಮಡಗಿದರು. ತಮಟೆ ನಗಾರಿಗಳು ಹುಚ್ಚೆದ್ದು ಸದ್ದು ಮಾಡಿದುವು. ಊರಿನ ಅಗಸರು ಎಚ್ಚರಿಕೆಯಿಂದ ನೀಡಿದ ನಡೆಮುಡಿಯ ಮೇಲೆ ತಮಟೆ ನಗಾರಿಗಳ ಸದ್ದಿಗೆ ಲಯಬದ್ಧವಾಗಿ ಕುಣಿಯುತ್ತ ಮಾರಮ್ಮನ ಪೂಜೆ ಶೂಲದ ಬೋರೆಗೆ ಹೋಯಿತು.

ಶೂಲದ ಬೋರೆಗೆ ಪೂಜೆ ದಯಮಾಡಿಸಿದುದೇ ತಡ–ಎಳ್ಳೆರಚಿದರೆ ನೆಲಕ್ಕಿಳಿಯದಂತೆ ಘೇರಾಯಿಸಿದ್ದ ಜನ ಇಬ್ಭಾಗವಾಗಿ ಪೂಜೆಗೆ, ಅದರ ಪರಿವಾರಕ್ಕೆ ಎಡೆಮಾಡಿಕೊಟ್ಟಿತು. ಜನರ ಗುಂಪನ್ನು ಕಂಡು ಎಂಬತ್ತು ವರ್ಷದ ಗುಡ್ಡಪ್ಪನ ದೇಹದಲ್ಲಿ ವರ್ಣಿಸಲಾಗದ ಮಿಂಚೊಂದು ಸುಳಿದಂತಾಗಿ : "ಕಾ–ಕಾ! ಹೋ....ಹೋ!!" ಎಂದು ಕೇಕೆ ಹಾಕಿ, ಕಣ್ಣು ಮರಳಿಸಿ ತಮಟೆ ನಗಾರಿ ಬಡಿಯುವವರನ್ನು ಬೆದರಿಸಿ ಕುಣಿಯಲಾರಂಭಿಸಿದ. ಎರಡು ಕೈಗಳನ್ನು ಬಿಟ್ಟು ಕುಣಿಯತೊಡಗಿದ. ತನಗೆ ಅಡ್ಡ ಬಂದವರಿಗೆ ಬಲಗೈನ ಬೆತ್ತದಿಂದ ಬಾರಿಸಿದ. ಏಟು ತಿಂದವರು ಖುಷಿಯಿಂದ ಗುಡ್ಡಪ್ಪನ ಕಾಲಿನಗತಿ ಅನುಸರಿಸಿ ತಾವೂ ಕುಣಿಯತೊಡಗಿದರು.

"ಕಾಕೀ ಹೊ ಹೋ!" ಶೂಲದ ಬೋರೆಗೆ ಜೀವ ಬಂದು ಗುಡುಗಿದಂತೆ ಕುಣಿಯುವವರು ಕಾಕು ಹಾಕಿದ ಸದ್ದು ಬಾಣಮುಟ್ಟಿತು.

ಪೂಜೆಯನ್ನು ಹೊತ್ತುಕೊಂಡು ಏನನ್ನೋ ತಕ್ಷಣವೇ ಜ್ಞಾಪಿಸಿಕೊಂಡವನಂತೆ ಗುಡ್ಡಪ್ಪ ಮಾರಮ್ಮನ ಗುಡಿ ಬಳಿಗೆ ಬಂದ. ಪೂಜೆಯ ಹಿಂದೆಯೇ ಮಂಚಮ್ಮನ ಗುಡಿಯಲ್ಲಿ ಮತ್ತು ಮರ್ಸಂಕಮ್ಮನ ಗುಡಿಯಲ್ಲಿ ನಿಯಮಕ್ಕನುಸಾರವಾಗಿ ಬಲಿ ಬಿದ್ದ ನಾಲ್ವರ ದೇಹಗಳನ್ನು ಹೊತ್ತುಕೊಂಡು ಬಂದರು. ಅಷ್ಟರಲ್ಲಿ ಶೂಲ ಆಡುವ ನಾಲ್ವರೂ ಅಲ್ಲಿಗೆ ಬಂದು ನಿಂತರು. ಪೂಜೆಗೆ ಆರತಿ ಮಾಡಿ ಇಳುಕಿದ ಮೇಲೆ ಗುಡ್ಡಪ್ಪ ಗರ್ಭಗುಡಿಗೆ ನಡೆದು ಅಮ್ಮನಿಗೆ ಭಕ್ತಿಯಿಂದ ವಂದಿಸಿ ಮಂಗಳಾರತಿ ಮಾಡಿ, ಬಲಿ ಬಿದ್ದವರಿಗೆ ಮತ್ತು ಶೂಲದವರಿಗೆ ತೀರ್ಥ ಎರಚಿದ.

ತೀರ್ಥ ಎರಚಿದುದೇ ತಡ ಶೂಲ ಆಡುವವರು ಬೋರೆ ಕಡೆ ಓಡಿದರು : ಇವರ ಹಿಂದೆ ಬಲಿಬಿದ್ದವರನ್ನು ಹೊತ್ತುಕೊಂಡು ಒಂದಷ್ಟು ಜನ ಓಡಿದರು. ಇದನ್ನು ಕಂಡು ಜನರಿಗೆ ಉತ್ಸಾಹ ಎಲ್ಲೆ ಮೀರಿತು. ಮಾಲೆಯ ಮರದ ಕೆಳಗಿನ ಗುಂಡಿಯಲ್ಲಿ ಒಬ್ಬ ಬಲಿ ಅವನು ತಪಸ್ಸು ಮಾಡುವವನಂತೆ ಕುಳಿತ : ಇನ್ನೊಬ್ಬ ರಪ್ಪನೆ ಬಲಿ ಬಿದ್ದ, ಇನ್ನಿಬ್ಬರನ್ನು ಹೆಣದಂತೆ ಎತ್ತಿಕೊಂಡಾಗ ಅವರ ನೆಂಟರಿಷ್ಟರು ಬಾಯಿ ಬಡಿದುಕೊಂಡು ಅಳತೊಡಗಿದರು. ಶೂಲ ಆಡುವವರು ಅವರವರ ಮರಗಳ ಬಳಿ ಬಂದು ನಿಂತು ಹಗ್ಗವನ್ನು ಕಣ್ಣಿಗೆ ಭಕ್ತಿಯಿಂದ ಒತ್ತಿಕೊಂಡು, ಭೂತಾಯಿಗೆ ನಮಸ್ಕರಿಸಿ ಹತ್ತತೊಡಗಿದರು. ಮಾಲೆ ಮರದ ಮುಂದೆ ನಿಂತು ಪುಟ್ಟಸ್ವಾಮಿ ನಮಸ್ಕರಿಸಿದ. ತನ್ನ ಎದುರಿಗೇ ನಿಂತಿರುವ ಜಯರಾಮುವನ್ನೊಮ್ಮೆ ದೃಷ್ಟಿಸಿ ಸರಸರನೆ ಮರವನ್ನು ಎರತೊಡಗಿದ. ಜನ ಉತ್ಸಾಹದಿಂದ "ಹೋ ಹೋ" ಎಂದರು. ತಮಟೆ ನಗಾರಿಗಳು ಸುತ್ತಮುತ್ತ ನಿಂತಿರುವವರ ಕಿವಿಯ ತಮಟೆಗಳು ಸಿಡಿಯುವಂತೆ ಸದ್ದುಮಾಡಿದುವು. ಎಲ್ಲ ಮೇಲೇರಿ ಮಣೆಗಳ ಮೇಲೆ ನಿಂತು ಮರಗಳ ತುದಿಗಳನ್ನು ಹಿಡಿದುಕೊಂಡುದೇ ತಡ ಕಹಳೆಗಳು ಮೊಳಗಿದುವು.

– 6 –

ಕೆಳಗೆ ದೃಷ್ಟಿಸಿ ನೋಡಿದ ಪುಟ್ಟಸ್ವಾಮಿಗೆ ಕೆಳಗೆ ಗುಂಡಿಯಲ್ಲಿ ತಪಸ್ಸು ಮಾಡುವವನಂತೆ ಕುಳಿತಿರುವ ಬಲಿಯವನನ್ನ ಕಂಡು ಕಾಲುಗಳಲ್ಲಿ ಶಕ್ತಿಯೇ ಉದುಗಿದಂತಾಗಿ ಮಾಲೆಮರದ ತುದಿಯನ್ನು ಗಪ್ಪನೆ ತಬ್ಬಿಕೊಂಡ. ಉಳಿದ ಮೂರು ಕಂಬಗಳಲ್ಲಿ ಶೂಲ ಆಡುವವರು ಪ್ರಾರಂಭಿಸಿದ್ದಾರೆ. ಮಾಲೆ ಮರ ಅತ್ತಂದಿತ್ತ–ಇತ್ತಿಂದಿತ್ತ ಬಳುಕುತ್ತ ಉಯ್ಯಾಲೆ ಆಡಬೇಕಾದದ್ದು, ಪುಟ್ಟಸ್ವಾಮಿಯ ತೂಕಕ್ಕೆ ತಲೆದೂಗುತ್ತ ನಿಂತಿದೆ. ಜನ : "ಓ! ಅಯ್ಯಯ್ಯೋ!!" ಎಂದಿತು. ಈ ಕೂಗು ಪುಟ್ಟಸ್ವಾಮಯನ್ನು ಮತ್ತಷ್ಟು ಅಧೀರನನ್ನಾಗಿ ಮಾಡಿತು. ಇನ್ನೂ ಬಿಗಿಯಾಗಿ ತಬ್ಬಿಕೊಂಡ. ಮುಚ್ಚಿದ ಕಣ್ಣುಗಳನ್ನು ತೆರೆದರೆ ಎಲ್ಲಿ ಭಯ ಇನ್ನೂ ಹೆಚ್ಚಾಗಿ ಬೀಳುವೆನೋ ಎಂದು ಬಲವಾಗಿ ಮುಚ್ಚಿದ. ವೆಂಕಟೇಗೌಡರಿಗೆ ಅವಮಾನದ ಜೊತೆಗೆ : ಕೆಳಗೆ ಬಿದ್ದು ಮಗನೆಲ್ಲಿ ಸಾಯುವನೋ ಎಂಬ ಭಯವೋ ಅತಿ ಆಗಿ "ಲೋ ಮಗ ನಿನ್ನ ಕೈಲಿ ಆಗದಿದ್ದರೆ ಇಳಿದು ಬುಡೋ! ಹಗ್ಗ ಬಲಗೈಗೆ ತಗೋಳ್ಳೋ!" ಎಂದು ಬಲ ಬಿಟ್ಟು ಕೂಗಿದರು. ಪುಟ್ಟಸ್ವಾಮಿ ಜಗ್ಗಲಿಲ್ಲ. ದೂರದಲ್ಲಿ ಹೆಂಗಸರ ಗುಂಪಿನಲ್ಲಿ ತನ್ನ ಅವ್ವ, ಅತ್ತಿಗೆ ಒಡನೆ ನಿಂತಿರುವ ಗೌರಿಗೆ, ಅಣ್ಣನ ಈ ಸ್ಥಿತಿ ಕಂಡು ಕಣ್ಣಲ್ಲಿ ನೀರು ಇಳಿಯತೊಡಗಿದುವು. ಎಂದೂ ಶೂಲದ ಹಬ್ಬದ ಚರಿತ್ರೆಯಲ್ಲಿ ಇಂಥ ಘಟನೆಯನ್ನು ಕಾಣದ ಜನ ಗುಸುಗುಡುತ್ತ ಅಸಹಾಯಕವಾಗಿ ನೋಡತೊಡಗಿದರು.

"ಯಾರಾದರೂ ಹತ್ತಿ ಅವನ್ನ ಇಳಿಸಿಕೊಳ್ರಪ್ಪ" ಎಲ್ಲ ಕೂಗುವವರೆ : ಮರ ಹತ್ತುವ ಭೂಪತಿಗಳು ಯಾರೂ ಮುಂದೆ ಬರಲಿಲ್ಲ. ಈ ಪರಿಸ್ಥಿತಿಯನ್ನು ಕಂಡು ಅನೇಕ ಬಾರಿ ನೋಡುವವರು ಸೈ ಎನ್ನುವಂತೆ ಶೂಲವಾಡಿದ್ದ ವೆಂಕಟೇಗೌಡರು ಒಂದೆರಡು ಆಳುದ್ದ ಹತ್ತಿದವರು, ಕಾಲುಗಳು ಬೆಂಡಾದಂತಾಗಿ ಸರ್ರನೆ ಕೆಳಕ್ಕೆ ಜಾರಿಬಿದ್ದರು. ಜ್ಞಾನ ತಪ್ಪಿತು. ಆಕಾಶ ಅಲ್ಲಾಡುವಂತೆ ಜನ "ಹೋ" ಎಂದಿತು. ಕೆಲವರು "ಗೌಡರಿಗೆ ದೇವರು ಮೈಮೇಲೆ ಬಂದದೆ" ಎಂದರು. ಇನ್ನೂ ಕೆಲವರು, "ಏನೋ ಮೈಲಿಗೆ ಆಗದೆ" ಎಂದು ಗಾಳಿಹಾಕಿ ತಲೆಗೆ ನೀರು ತಟ್ಟಿದರು. ಯಾವುದೋ ಒಂದು ಧ್ವನಿ ಹೇಳಿತು. "ಯಾರೋ ಆಗದ ಅಡಕಸವಿ ವಂಶದ ಸೂಳೆಮಕ್ಕಳು ಕೊಳ್ಳೇಗಾಲಕ್ಕೆ ಹೋಗಿ ಮಾಡಿಸಿಬುಟ್ಟವರೆ!" ಈ ಮಾತು ಬಂದ ಕಡೆ ತಿನ್ನುವಂತೆ ಕಣ್ಣು ಕೆಂಪಗೆ ಮಾಡಿ ಜಯರಾಮು ನೋಡಿದ. ನಾಡಗೌಡರ ಹಿರಿಯ ಮಗ

ಪುಟ್ಟೇಗೌಡ ನಿಂತಿದ್ದ. ಅಲ್ಲೇ ಅವನ ಗೋಮಾಳೆಯನ್ನು ಹಿಸುಕಿ ಸಾಯಿಸಬಿಡಬೇಕೆನ್ನಿಸಿದರೂ ತಡೆದು ಹೇಳಿದ : "ಅಣ್ಣಾ! ನೀನೇ ಒಂದು ಕೈ ನೋಡಣ್ಣ. ನಾಡಗೌಡರ ಮನೆತನದೋನು! ಜೊತೆಗೆ ಆ ಮಾಲೆಮರವೂ ನಿಮ್ಮ ತೋಟದ್ದೇ ಅಲ್ವೆ?"

ಪುಟ್ಟೇಗೌಡನ ಬಾಯಿಗೆ ಚೆಂಡು ತುರುಕಿದಂತಾಗಿ ತಲೆತಗ್ಗಿಸಿದ. ಜಯರಾಮು ಪಂಚೆಯನ್ನು ಬಿಚ್ಚಿಸೆದು ಅಂಗಿಯನ್ನು ಕಳಚಿದ. ಹಗ್ಗವನ್ನು ಕಣ್ಣಿಗೆ ಒತ್ತುಕೊಂಡು ಸರಸರನೆ ಮರವನ್ನು ಏರಿ, ಶೂಲದ ಮಣೆಯ ಕೆಳಭಾಗವನ್ನು ಸೇರಿದ, ಮರ ಮುದುಕಿಯ ತಲೆಯಂತೆ ತೂಗಲಾರಂಭಿಸಿತು. ಜನರ ಸದ್ದು ಅಡಗಿಹೋಯಿತು.

ಪರಿಸ್ಥಿತಿಯ ಗಂಭೀರತೆಯನ್ನು ಕಂಡು ಗೌರಿಯ ಹೃದಯ ಕಂಪಿಸಿತು. ಹತೋಟಿಗೆ ತಂದುಕೊಂಡಳು. ದುರಂತದ ಸುಳಿಯಲ್ಲಿ ಬಿದ್ದಿರುವವರಲ್ಲಿ ಒಬ್ಬ ರಕ್ತ ಹಂಚಿಕೊಂಡ ಒಡಹುಟ್ಟು; ಮತ್ತೊಬ್ಬ ತನಗಾಗಿ ರಕ್ತವನ್ನೇ ಧಾರೆ ಎರೆಯಲು ಸಿದ್ಧವಿರುವ ತನ್ನ 'ಸರ್ವಸ್ವ'.

ಶೂಲದ ಮಣೆಯನ್ನು ಬಲಗೈಯಲ್ಲಿ ಎಟಕಿಸಿ ಹಿಡಿದುಕೊಂಡು ಜಯರಾಮು, ಮೇಲಕ್ಕೆ ಕತ್ತೆತ್ತಿ ನೋಡುತ್ತಿರುವ ಗೌರಿಯ ಕಣ್ಣುಗಳನ್ನೇ ನೇರವಾಗಿ ದೃಷ್ಟಿಸಿದ. ಗೌರಿಯ ಮುಂದೆ ಸಾಹಸವನ್ನು ಪ್ರದರ್ಶಿಸಲು ಅವಕಾಶ ದೊರಕಿಸಿಕೊಟ್ಟ ಮಾರಮ್ಮನಿಗೆ ವಂದಿಸಿದ. ಎಡಗೈಯಲ್ಲಿ ಹಗ್ಗವನ್ನು ನುಲಿದು ಬಿಗಿಯಾಗಿ ಉಡದಂತೆ ಹಿಡಿದುಕೊಂಡ. ಪುಟ್ಟಸ್ವಾಮಿಯ ಎದುರುಗಡೆ ಖಾಲಿ ಇರುವ ಶೂಲದ ಮಣೆಯ ಮತ್ತೊಂದು ಭಾಗದಲ್ಲಿ ನಿಂತು, ಮರ ಜಾಸ್ತಿ ಅಲುಗಾಡಿ ಆಯತಪ್ಪದಂತೆ ಹತೋಟಿಗೆ ತಂದು ಮೆಲ್ಲಗೆ ಹೇಳಿದ: "ಪುಟ್ಟಸ್ವಾಮಿ ಧೈರ್ಯ ತಂದ್ಕೋ ಕಣ್ಣು ಬುಡು" ಎಂದ. ಪುಟ್ಟಸ್ವಾಮಿಯ ದೇಹ ಕಂಪಿಸುತ್ತಿತ್ತು. ಅವನು ಆ ಸ್ಥಿತಿಯಲ್ಲಿ ಹೇಗೆ ಅಷ್ಟು ಎತ್ತರದಲ್ಲಿ ನಿಂತಿದ್ದಾನೋ! ಎನ್ನಿಸಿ ಜಯರಾಮು "ಪುಟ್ಟಸ್ವಾಮಿ ಕಣ್ಣುಬುಡೋ! ನನ್ನ ಪ್ರಾಣನಾದರೂ ಕೊಟ್ಟು ನಿನ್ನ ಉಳಿಸಿಕೋತೀನಿ!!" ಎಂದ. ಈ ಮಾತುಗಳು ಕಿವಿಗಳ ಮೇಲೆ ಬಿದ್ದ ಪುಟ್ಟಸ್ವಾಮಿಗೆ ಧೈರ್ಯ ಬಂದು ಕಣ್ಣುಬಿಟ್ಟು ನೋಡಿದ. ತನ್ನ ಎದುರಿಗೆ ಮರದ ತುದಿಯನ್ನು ಹಿಡಿದುಕೊಂಡು ಎದುರುಗಡೆ ಜಯರಾಮು ನಿಂತಿದ್ದಾನೆ. ತಾನು ಯಾರನ್ನು ತುಚ್ಚನೆಂದು ಎಣಿಸಿದ್ದನೋ ಅವನೇ ತನ್ನನ್ನು ಬದುಕಿಸಲು ಬಂದಿದ್ದಾನೆ! ತಲೆ ತಗ್ಗಿಸಿದ. ಜಯರಾಮು "ಪುಟ್ಟಸ್ವಾಮಿ ನಾನು ಮೆಲ್ಲಗೆ ಮಣೆ ಕೆಳಕ್ಕೆ ಇಳೀತೀನಿ. ನೀನು ನಿಧಾನವಾಗಿ ಹಗ್ಗ ಹಿಡಿದುಕೊಂಡು ನನ್ನ ಭುಜದ ಮೇಲೆ ಕೂತ್ಕೊ. ಹೆದರಬೇಡ. ನಿನ್ನ ಮೈ ರೋಮ 'ಚುಳ್' ಅನ್ನದಂಗೆ ಇಳಿಸ್ತೀನಿ" ಎಂದವನೇ ಮಣೆಯ ಕೆಳಕ್ಕೆ ಬಂದು, ಜನರ ಎದೆ ಗುಂಡಿಗೆ 'ಜಲ್' ಎನ್ನುವಂತೆ, ಸೂಕ್ಷ್ಮವಾಗಿ ಪುಟ್ಟಸ್ವಾಮಿಯನ್ನು ಹೆಗಲ ಮೇಲೆ ಕೂರಿಸಿಕೊಂಡ. ಜ್ಞಾನ ಬಂದು ಎಲ್ಲವನ್ನೂ ಕಾತರದಿಂದ ನೋಡುತ್ತ ಕುಳಿತಿದ್ದ ವೆಂಕಟೇಗೌಡರಿಗೆ ಇದನ್ನು ನೋಡಿ, ಏನಾದರೂ ಆಯತಪ್ಪಿದರೆ ಏನುಗತಿ! ಎನ್ನಿಸಿ ಪ್ರಾಣ ಬಂದು ಗಂಟಲಲ್ಲಿ ಸಿಕ್ಕಿಕೊಂಡಂತಾಯಿತು. ಜಯರಾಮು ಮೆಲ್ಲಗೆ ಇಳಿಯಲು ನೋಡಿದ. ಮರ ಬಳುಕಿ ಆಯತಪ್ಪಬಹುದೆನ್ನಿಸಿ, ತನ್ನ ಎಡಗೈಯಿಂದ ಪುಟ್ಟಸ್ವಾಮಿಯ ಕಾಲುಗಳನ್ನು ತನ್ನ ಎದೆಗೆ ಬಲವಾಗಿ ತಬ್ಬಿಕೊಂಡು ಹಗ್ಗವನ್ನು ದೂರಕ್ಕೆ ತಳ್ಳಿದ. ಬಲಗೈಯಲ್ಲಿ ಮರವನ್ನು ಬಲವಾಗಿ ತಬ್ಬಿಕೊಂಡ. ಜನ ಬೆರಗಾಗಿ ನೋಡುತ್ತಿದ್ದಂತೆಯೇ, ಪುಟ್ಟಸ್ವಾಮಿಗೆ 'ಹೆದರಬೇಡ ಧೈರ್ಯವಾಗಿರು' ಎಂದವನೆ ಕಣ್ಣು ಮಿಟುಕಿಸುವುದರೊಳಗೆ ಕೋತಿಯಂತೆ ಮೇಲಿಂದ ಕೆಳಕ್ಕೆ ಜಾರಿದ, ಪುಟ್ಟಸ್ವಾಮಿಯನ್ನೂ ಹೂ ಇಳಿಸಿದಂತೆ ಕೆಳಕ್ಕೆ ಇಳಿಸಿದ. ಊರೆಲ್ಲ "ಹೋ! ಭೇಷ್, ಗಂಡು ಎಂದರೆ ಗಂಡುಕಣಪ್ಪ' ಎಂದು ಕೂಗುತ್ತಿದ್ದಂತೆಯೇ ಜಯರಾಮು ಮತ್ತೆ ಮರವನ್ನು ಏರಿ, ಮಣೆಯ ಮೇಲೆ ನಿಂತು ಸುತ್ತ ನೋಡಿದ.

ಜನರಲ್ಲಿ 'ಗುಸಗುಸ' ಆರಂಭವಾಯಿತು. ಮದುವೆ ಆಗದವರು ಬಲಿ ಬೀಳುವ ಹಾಗೂ ಇಲ್ಲ; ಶೂಲ ಆಡುವಂತೆಯೂ ಇಲ್ಲ! ಆದರೆ ಜಯರಾಮುವಿಗೆ ಕೈಗೆ ಸಿಕ್ಕಿದ ಮಾಲೆಮರ ಬಿರುಗಾಳಿಗೆ ಸಿಕ್ಕಿದ ಬಳ್ಳಿಯಂತೆ ಉಯ್ಯಾಲೆ ಆಡತೊಡಗಿತು. ಉಳಿದ ಮೂರು ಶೂಲದವರೂ ಆಡಲು ಆರಂಭಿಸಿದರು. ಒಮ್ಮೆ ವೇಗವಾಗಿ ನೆಲದ ಕಡೆ ಬಂದ ಮರವನ್ನು ಗಕ್ಕನೆ ನಿಲ್ಲಿಸಿದ ಜಯರಾಮು; ತನ್ನ ಚಾಕಚಕ್ಯತೆಗೆ ದಂಗಾದ ಜನವನ್ನು ಠೀವಿಯಿಂದ ನೋಡಿ ಗೌರಿ ನಿಂತಿದ್ದ ಕಡೆ ದೃಷ್ಟಿ ಚೆಲ್ಲಿದ. ಗೌರಿ ಸಂತೋಷದ ಕಣಜವಾಗಿ ಆದರೆ ಆತಂಕದಿಂದ ತನ್ನ ಕಡೆಯೇ ನೋಡುತ್ತಿದ್ದಾಳೆ! ಖುಷಿಯಿಂದ ಮತ್ತೆ ಆರಂಭಿಸಿದ. ಮರ ಬಳಕುತ್ತ ಭೂಮಿಯ ಕಡೆ ವಾಲಿತು. ಬೀಳುವವನಂತೆ ನಟಿಸಿ, ಎಡಗೈಯಲ್ಲಿ ಮರದ ತುದಿ

ಹಿಡಿದುಕೊಂಡು, ಬಲಗೈಯನ್ನು ಜನರ ಕಡೆ ಚಾಚಿದ. ಗೌರಿಯ ಎದೆ 'ಝಲ್' ಎಂದಿತು. ಜನ : "ಅಯ್ಯಯ್ಯೋ! ಕೈ ತಪ್ಪಿದರೆ ಗತಿ ಏನಪ್ಪ!" ಎಂದು 'ಹೋ' ಎಂದು ಬಾಯಿ ಮೇಲೆ ಕೈ ಮಡಗಿಕೊಂಡಿತು. ಜಯರಾಮು ನಗುತ್ತ ಮಾಲೆಯ ಮರದೊಡನೆ ಗಗನದ ಕಡೆಗೆ ಚಿಮ್ಮಿದ. ಜಯರಾಮುವಿನ ಸಾಹಸವನ್ನು ಕಂಡು ಉತ್ತೇಜಿತರಾದ ಉಳಿದವರೂ ಹುಮ್ಮಸ್ಸಿನಿಂದ ಅಡತೊಡಗಿದರು.

ಮಾಲೆಯಮರ ಉಯ್ಯಾಲೆ ಆಡುತ್ತಿದ್ದಂತೆಯೇ ಜಯರಾಮುವಿನ ಮನಸ್ಸು ಜನರ ಬಾಯಲ್ಲಿ ಜನಜನಿತವಾಗಿರುವ ಶೂಲದ ಹಬ್ಬದ ಹಿನ್ನೆಲೆಯ ಕತೆಯನ್ನು ನೆನೆಯಿತು. ಹಿಂದೆ ಊರನ್ನು ಕಟ್ಟುವಾಗ 'ನೆಲಶಾಂತಿ' ಗಾಗಿ ನಾಲ್ವರು ಗಂಗಾಮತಸ್ಥರು, ನಾಲ್ಕು ದಿಕ್ಕಿನಲ್ಲಿ ನಾಲ್ಕು ಮರಗಳನ್ನು ನೆಟ್ಟು, ಅವುಗಳ ಕೆಳಗೆ ದೊಡ್ಡ ತ್ರಿಶೂಲಗಳನ್ನು ನೆಟ್ಟು ಮರಗಳನ್ನೇರಿ ತ್ರಿಶೂಲಗಳ ಮೇಲೆ ಬಿದ್ದು ತಮ್ಮ ಎದೆಗುಂಡಿಗೆ ರಕ್ತವನ್ನು ನೆಲಕ್ಕೆ ಚಲ್ಲಿ ಅಮರರಾದರಮತೆ !! ಅವರ ನೆನಪಿಗಾಗಿ ಈ ಶೂಲದ ಹಬ್ಬ !!

ಜಯರಾಮು ನೋಡಿದ. ತನ್ನ ಮುಂದೆ ಎಡಗಡೆಗಿರುವ ಮಹಡಿಯ ಮೇಲೆ ನಿಂತು ಶಂಕರ ಗೌರಿಯನ್ನು ತಿನ್ನುವವನಂತೆ ನೋಡುತ್ತಿದ್ದಾಗ, ಇನ್ನೇನು ಇಪ್ಪತ್ತು ದಿವಸಗಳು ಕಳೆದು ತಾಳಿಯನ್ನು ಗೌರಿಯ ಕತ್ತಿಗೆ ಬಿಗಿದರೆ ಸಾಕು : ಗೌರಿ ಅವನವಳಾಗುತ್ತಾಳೆ. ಗೌರಿ ಶಂಕರನ ಕೈಯಲ್ಲಿ ! ಜಯರಾಮು ನೊರನೊರನೆ ಹಲ್ಲು ಕಡಿದು ತನ್ನ ಬಲ ಎಲ್ಲವನ್ನೂ ಕಾಲುಗಳಲ್ಲಿ ಕ್ರೋಢೀಕರಿಸಿ ರಭಸದಿಂದ ತೂಗುತ್ತಿರುವ ಮರವನ್ನು ಜಗ್ಗಿದ, ರೊಯ್ಯನೆ ಭೂಮಿಯ ಕಡೆ ಮರ ಬಂದ ವೇಗವನ್ನು ಕಂಡು ಜನ ತಮ್ಮ ತಲೆಗೆ ಅಪ್ಪಳಿಸಿಬಿಟ್ಟಿತೇನೋ ಎಂದು ಬೆಚ್ಚಿ ಬಾಯಿಯ ಮೇಲೆ ಕೈ ಮಡಗಿಕೊಂಡರು.

'ನಾನು ಶೂಲದ ವಂಶದವಳು! ನಮ್ಮ ಮದುವೆ ಆಗಿ ಎಷ್ಟು ವರ್ಷಗಳಾದೊ ! ನಾಲ್ಕು ವರ್ಷಗಳಾದುವಲ್ಲ!!

'ಅದು ಮಾಸ್ತಿಕಲ್ಲು ಅಲ್ವೆ ? ಗಂಡ ಸತ್ತಾಗ ಅವನ ಜೊತೇಲೇ ಬೆಂಕಿಗೆ ಬಿದ್ದು ಸತ್ತವಳ ನೆನಪಿಗೆ ನಿಲ್ಲಿಸಿದ ಕಲ್ಲು' – ಗೌರಿ ಆಡಿದ್ದ ಮಾತುಗಳು ನೆನಪಿಗೆ ಬಂದು ಜಯರಾಮುವಿನ ಮೈರೋಮವೆಲ್ಲ 'ಜುಂ' ಎಂದು ನೆಟ್ಟಗಾದುವು.

ಆದರೆ.....ಮೊನ್ನೆದಿನ ಅದೇಗೆ ಮನೆ ಶಾಸ್ತ್ರಕ್ಕೆ ಒಪ್ಪಿ, ಗಂಡಿನ ಮನೆಯವರು ತಂದ ಸೀರೆ ರವಿಕೆ ತೊಟ್ಟು ಹಸೆಮಣೆಯ ಮೇಲೆ ಕುಳಿತುಕೊಂಡಳು. ಜಯರಾಮುವಿನ ದೇಹ ಕೋಪದಿಂದ ಕಂಪಿಸಿತು. ಮತ್ತೆ ನೋಡಿದ. ಶಂಕರ ಅದೇ ಆಸೆಯ ನೋಟದಿಂದ ಗೌರಿಯನ್ನು ನೋಡುತ್ತಿದ್ದಾನೆ. ಆದರೆ ಗೌರಿ ಮಾತ್ರ ತನ್ನನ್ನೇ ರೆಪ್ಪೆ ಉಯ್ಯದೆ ನೋಡುತ್ತಿದ್ದಾಳೆ!

ಮನೆಶಾಸ್ತ್ರ ಆಗಿದೆ. ಇನ್ನು ಲಗ್ನಕಟ್ಟಿಸಿ ಲಗ್ನಪತ್ರಿಕೆ ಹಂಚಿದ ಮೇಲೆ ಕತೆ ಮುಗಿಯಿತು. ಗೌರಿ ತನಗೆ ದಕ್ಕುವುದಿಲ್ಲ! ಗೌರಿ ತನಗೆ ಇಲ್ಲದ ಮೇಲೆ ಈ ಭೂಮಿಯ ಮೇಲೆ ಇದ್ದರೆಷ್ಟು ಬಿಟ್ಟರೆಷ್ಟು? ತನಗೂ ಗೌರಿಗೂ ದೈವ ಸೃಷ್ಟಿಸಿದ ಹೂವಿನ ಎದುರು ಮದುವೆ ಆಗಿ ನಾಲ್ಕು ವರ್ಷಗಳಾಗಿವೆ. ಅವಳ ಗಂಡ ನಾನು ಬದುಕಿರುವಾಗಲೇ ನನ್ನೆದುರೇ ಅವಳಿಗೆ ಮತ್ತೆ ಮದುವೆಯೆ? – ಮೈರಕ್ತವೆಲ್ಲ ಕಣ್ಣಿಗೇ ನುಗ್ಗಿದಂತಾಗಿ ಜಯರಾಮುವಿನ ಕಣ್ಣುಗಳು ರಗರಗನೆ ಉರಿಯತೊಡಗಿದವು.

ಮತ್ತೆ ಆಕಾಶದ ಕಡೆಗೆ ರೊಯ್ಯನೆ ಮರ ಬಳಕುತ್ತ ಮಿಂಚಿನಂತೆ ಹೊರಟಿದ್ದನ್ನು ಜಯರಾಮು ಹತೋಟಿಗೆ ತಂದುಕೊಂಡ. ಜನರೆಲ್ಲ 'ಇನ್ನು ಸಾಕು ಇಳಿಯಿರಿ' ಎಂದು ಅಕ್ಕಪಕ್ಕದ ಶೂಲದವರೆಗೆ, ಜಯರಾಮುವಿನ ಕೂಗಿ ಹೇಳುತ್ತ ಸನ್ನೆ ಮಾಡತೊಡಗಿದರು. ಜಯರಾಮು ಲೆಕ್ಕಿಸಲಿಲ್ಲ. ಕೆಳಗೆ ನೋಡಿದ, ಶಂಕರ ಗೌರಿಯನ್ನು ತಿನ್ನುವಂತೆ ನೋಡುತ್ತಲೇ ಇದ್ದಾನೆ. ಮದುವೆ ಆಗಿಯೇ ಆಗುತ್ತದೆ. ತನ್ನ ಗೌರಿ ಪ್ರಸ್ಥದ ಕೋಣೆಯಲ್ಲಿ ಶಂಕರನ ತೋಳತೆಕ್ಕೆಯಲ್ಲಿ – ಛೇ! ಹಲ್ಲುಗಳು ಪುಡಿಗಟ್ಟಿ ಹೋದವೋ ಎನ್ನುವಂತೆ ಸದ್ದು ಮಾಡಿದುವು. ಪಾದಗಳ ತುಳಿತಕ್ಕೆ ಸಿಕ್ಕಿದ ಮಣೆ ಕಿರುಗುಟ್ಟಿ, ಬುಡ ಅಲುಗುವಂತೆ ಮಾಲೆಮರ ತೂಗತೊಡಗಿತು. ಗೌರಿಯನ್ನು ಹಾಗೆಯೇ ಮೇಲೆತ್ತಿಕೊಂಡು, ಶಂಕರನ

ಎದುರು, ಸಾವಿರಾರು ಜನರೆದುರು ಆಲಂಗಿಸಿ ಹಾಗೆಯೇ ಕಣ್ಮುಚ್ಚಿದರೆ! ಗೌರಿಯ ಕಡೆ ದೃಷ್ಟಿ ಚೆಲ್ಲಿ ಮೈಶಕ್ತಿ ಎಲ್ಲವನ್ನೂ ಬಿಟ್ಟು ಜಗ್ಗಿದ ರಭಸಕ್ಕೆ......

"ಲಟ್......ಲಠೀರ್......" ಮಧ್ಯಕ್ಕೆ ಮಾಲೆಮರ ಮುರಿದು, ಮರದೊಡನೆ ಧರೆಗೆ ಮಿಂಚಿದ ವೇಗದಲ್ಲಿ ಜಯರಾಮುವಿನ ದೇಹ ಬಂದು ಅಪ್ಪಳಿಸಿತು! ನೋಡುತ್ತಿದ್ದವರು ನಡುಗಿದರು. ದೂರ ಹೋಗಿದ್ದವರು ಸರ್ರನೆ ಸುತ್ತಿಕೊಂಡರು.

"ಜಯರಾಮೂ......"

ಚಿಟ್ಟನೆ ಚೀರಿದ ಗೌರಿ ಸುತ್ತುಗಟ್ಟಿದ ಜನರನ್ನು ಸೀಳಿ ಬಂದವಳೆ, ರಕ್ತದಲ್ಲಿ ಅದ್ದಿಹೋದ ಜಯರಾಮುವಿನ ದೇಹದ ಮೇಲೆ ಬಿದ್ದು ಅಪ್ಪಿಕೊಂಡಳು.

ಈ ಅನಿರೀಕ್ಷಿತ ದುರಂತವನ್ನು ನೋಡುತ್ತಿದ್ದವರನ್ನು ನೂಕಿದ ಪುಟ್ಟಸ್ವಾಮಿ ಕ್ರೋಧದಿಂದ "ನಮ್ಮ ಮನೆತನದ ಮರ್ಯಾದೆಯ ಎಲ್ಲರೆದುರೂ ಮಣ್ಣುಪಾಲು ಮಾಡಿದ" ಎಂದು ಗೌರಿಯ ಮುಡಿಯನ್ನು ಹಿಡಿದು ಬಲ ಬಿಟ್ಟು ಎಳೆದ. ಜಯರಾಮುವಿನ ರಕ್ತಸ್ನಿಗ್ಧ ದೇಹವನ್ನು ಉಡದಂತೆ ಅಪ್ಪಿಕೊಂಡಿದ್ದ ಗೌರಿಯ ದೇಹ ಹಾಗೆಯೇ ನಿಮಿರಿ ನಿಂತಿತು!

"ಅಯ್ಯೋ! ಗೌರಿ!!"

ಶೂಲದ ಬೋರೆಯ ಗರ್ಭ ಕಂಪಿಸುವಂತೆ ಪುಟ್ಟಸ್ವಾಮಿ ಕಿರುಚಿದ.

**ಆಕರ :** ಡಾ. ಬೆಸಗರಹಳ್ಳಿ ರಾಮಣ್ಣ ಸಮಗ್ರ ಕಥನ ಸಾಹಿತ್ಯ

* * * * *

# ೩. ಬೆಂಗಳೂರಿನ ಕರಗ
# ಚಾರಿತ್ರಿಕ, ಪೌರಾಣಿಕ ಮತ್ತು ಸಾಮಾಜಿಕ ಹಿನ್ನೆಲೆ

– ಡಾ.ಕೆ. ಮರುಳ ಸಿದ್ದಪ್ಪ

ಧಾರ್ಮಿಕ ಆಚರಣೆಯೊಂದರ ಐತಿಹಾಸಿಕ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಅರಸುತ್ತಾ ಹೋಗುವುದು ಬಿಸಿಲ್ಗುದುರೆಯ ಬೆನ್ನುಹತ್ತಿ ಹೋದಂತೆ ವ್ಯರ್ಥ ಸಾಹಸವಾಗುವುದುಂಟು. ಏಕೆಂದರೆ, ಪ್ರಚಾರದಲ್ಲಿರುವ ಒಂದು ಆರಾಧನೆಯಲ್ಲಿ ಒಂದಕ್ಕೊಂದು ಸಂಬಂಧವಿಲ್ಲವೆಂಬಂತೆ ತೋರುವ ಹಲವು ಭಿನ್ನ ನಂಬಿಕೆ ಮತ್ತು ಆಚರಣೆಗಳು ಬೆರೆತು ಹೋಗಿರುತ್ತವೆ. ಇದರಲ್ಲಿ ಯಾವುದು ಪ್ರಾಚೀನ? ಮತ್ತಾವುದು ಇತ್ತೀಚಿನದು? ಎಂಬುದನ್ನು ಕರಾರುವಕ್ಕಾಗಿ ನಿರ್ಧರಿಸುವುದು ಸುಲಭವಾದ ಕೆಲಸವಲ್ಲ. ಒಮ್ಮೊಮ್ಮೆ ಐತಿಹ್ಯಗಳೇ ಪುರಾಣಗಳಾಗುತ್ತವೆ; ವ್ಯತ್ಯಾಸಗಳನ್ನು ನಿಖರವಾಗಿ ಬೇರೆಮಾಡಿ ಗುರುತಿಸುವುದು ಸುಲಭವಲ್ಲ.

ಬೆಂಗಳೂರಿನ ಕರಗದ ಉತ್ಸವವನ್ನೇ ನಿದರ್ಶನಕ್ಕೆ ತೆಗೆದುಕೊಂಡರೆ ಅಲ್ಲಿ ಸ್ಪಷ್ಟವಾಗಿ ಶಕ್ತಿ ದೇವತಾರಾಧನೆಯ ಕುರುಹುಗಳು ಸಿಗುತ್ತವೆ. ವಸಂತ ಋತುವಿನಲ್ಲಿ ಚೈತ್ರಮಾಸದಲ್ಲಿ ಈ ಉತ್ಸವ ನಡೆಯುತ್ತದೆ. ಒಂಬತ್ತು ದಿನಗಳ ಆಚರಣೆಗಳ ಬಳಿಕ ಹುಣ್ಣಿಮೆಯ ದಿನದಂದು ಕರಗದ ಮೆರವಣಿಗೆ ಊರ ಸರಹದ್ದಿನಲ್ಲೆಲ್ಲಾ ಸುತ್ತಾಡುತ್ತದೆ. ಇಡೀ ಆಚರಣೆಯಲ್ಲಿ ಕಂಡುಬರುವ ಹರ್ಷ ಆಮೋದಗಳು ಇದೊಂದು ಜೀವ ಸಮೃದ್ಧಿಯ (Fertility Cult) ವಸಂತೋತ್ಸವವೆಂದು ಸಾರಿ ಹೇಳುವಂತಿದೆ. ಕರಗ ಶಕ್ತಿಯನ್ನು ಹೊರುವವಳು ದ್ರೌಪದಿ ದೇವಿ ಮತ್ತು ಗುಡಿಯಲ್ಲಿ ಪಂಚ ಪಾಂಡವರ, ಕುಂತಿ, ದ್ರೌಪದಿ, ಕೃಷ್ಣರ ವಿಗ್ರಹಗಳಿವೆ. ನಿತ್ಯ ಪೂಜೆ ನಡೆಯುವುದು ಶಕ್ತಿಪೀಠ ಮತ್ತು ಈ ವಿಗ್ರಹಗಳಿಗೆ. ಈ ಅಂಶವನ್ನು ಗಮನಿಸಿದರೆ ಇದೊಂದು ಪೂರ್ವಿಕರ ಆರಾಧನೆ (ancesstral worship) ಇರಬಹುದೇ? ಎಂದೂ ಸಂದೇಹ ಬರುತ್ತದೆ. ಶೈವ–ವೈಷ್ಣವವೆಂಬ ಎರಡೂ ಸಂಪ್ರದಾಯಗಳ ಪ್ರಭಾವ ಈ ಆರಾಧನೆಯ ಮೇಲಾಗಿದೆ. ಗ್ರಾಮದ ಗಡಿ ಸಂರಕ್ಷಣಾ ದೇವತೆಯ ಆರಾಧನೆಯ ಲಕ್ಷಣಗಳೂ ಇವೆ. ಹಿಂದೆ ಯಥೇಚ್ಛವಾಗಿ ಪ್ರಾಣಿಬಲಿಯನ್ನು ಕೊಡುತ್ತಿದ್ದರಂತೆ. ಈಗ ಇದು ಸಂಪೂರ್ಣ ನಿಂತುಹೋಗಿದೆ. ವೈದಿಕೇತರ ಶೂದ್ರ ಸಂಸ್ಕೃತಿಯ ಈ ಆರಾಧನೆಗೆ ಈಗ ಸಂಸ್ಕೃತ ಮಂತ್ರಗಳು ಪ್ರವೇಶಿಸಿವೆ. ಈ ಎಲ್ಲ ವಿವರಗಳಲ್ಲಿ ಕಂಡುಬರುವ ವೈವಿಧ್ಯತೆಗೆ ತಕ್ಕಂತೆ ವಾಕ್ ಪರಂಪರೆಯಲ್ಲಿ ಪ್ರಚಾರದಲ್ಲಿರುವ ಸಂಗತಿಗಳು ಅತಿಶಯೋಕ್ತಿಯಿಂದ, ಕೇವಲ ಭಕ್ತಿ ಮತ್ತು ಶ್ರದ್ಧೆಗಳಿಂದ ಕೂಡಿವೆ. ವಿವರ ಪೂರ್ಣವಾದ ಐತಿಹಾಸಿಕ ದಾಖಲೆಗಳಿಲ್ಲದಿರುವುದರಿಂದ ಒಬ್ಬೊಬ್ಬ ವ್ಯಕ್ತಿಯೂ ತನ್ನ ಕಲ್ಪನಾಶಕ್ತಿಗನುಸಾರವಾಗಿ ಒಂದೊಂದು ಹೊಸ ಸಂಗತಿಯನ್ನು ಸೇರಿಸುತ್ತಾ ಹೋಗುತ್ತಾರೆ. ಇರುವ ಅಲ್ಪಸ್ವಲ್ಪ ಚಾರಿತ್ರಿಕ ದಾಖಲೆಗಳಾದರೂ ಕರಗಕ್ಕೆ ಬಿಟ್ಟ ದತ್ತಿಯನ್ನು ಕುರಿತಿವೆ. ಈ ದಾಖಲೆಗಳು ಕರಗ ಆರಾಧನೆಯ ಧಾರ್ಮಿಕ ಹಿನ್ನೆಲೆ, ಪ್ರಾಚೀನತೆ ಮತ್ತು ಆಚರಣೆಗಳ ವಿವರಗಳಿಗೆ ಸಂಬಂಧಿಸಿದಂತೆ ಬೆಳಕು ಚೆಲ್ಲುವುದಿಲ್ಲ. ಶಾಸನಗಳಲ್ಲಿ 'ಕರಗ' ಎಂದಿದ್ದ ಮಾತ್ರಕ್ಕೆ ಅದು ಧರ್ಮರಾಯಸ್ವಾಮಿ ಕರಗವೇ ಆಗಬೇಕಿಲ್ಲ. ಕರಗದ ಸಂಪ್ರದಾಯ ಅತ್ಯಂತ ಪ್ರಾಚೀನವಾದುದು ಮಾತ್ರವಲ್ಲ; ವೈವಿಧ್ಯಮಯವಾದುದು.

'ಕರಗ' ಎಂಬುದಕ್ಕೆ ನೀರು ತುಂಬುವ ಕಲಶ, ಕುಂಭ, ಗಡಿಗೆ ಅಥವಾ ಕೊಡ ಎಂದು ಸಾಮಾನ್ಯಾರ್ಥವಿದೆ. ಕಲಶವೆಂದರೆ ಲೋಹದಲ್ಲಿ ಮಾಡಿದ್ದೆಂದೂ, 'ಕರಗ' ವೆಂದರೆ ಮಣ್ಣಿನಲ್ಲಿ ಮಾಡಿದ್ದೆಂದೂ ವಾಡಿಕೆಯಲ್ಲಿರುವ ಅರ್ಥ. ಎರಡೂ ಧಾರ್ಮಿಕ ಆಚರಣೆಗೆ ಸಂಬಂಧಿಸಿದಂತೆ ಪ್ರಚಾರದಲ್ಲಿರುವ ಶಬ್ದಗಳು. ಪ್ರಾಚೀನರಿಗೆ ಮಣ್ಣಿನ ಗಡಿಗೆ, ನೀರು ಮತ್ತು ಬೆಂಕಿಯನ್ನು ಕಾಪಾಡುವ ಸಾಧನ. ಉಗ್ರ ಚಳಿಯಿಂದ, ಕಾಡು ಪ್ರಾಣಿಗಳಿಂದ ರಕ್ಷಣೆ ಕೊಡುವ ಬೆಂಕಿಯೇ ಆಹಾರವು ಸವಿಯಾಗಿರುವಂತೆ ಬೇಯಿಸಲು ಆದಿಮಾನವನಿಗೆ ಸಹಾಯ ಮಾಡುತ್ತಿತ್ತು. ಕಾಪಾಡುವ ದೇವತೆಯೂ

ಕಾಡುಕಿಚ್ಚಾಗಿ ಹೆದರಿಸುತ್ತಿದ್ದ ಬಹುರೂಪಿ ಅಗ್ನಿಯನ್ನು ಆದಿಮಾನವರು ಹಲವು ಬಗೆಯಲ್ಲಿ ಆರಾಧಿಸುತ್ತಿದ್ದರು. ಇಂತಹ ಅಗ್ನಿಯನ್ನು ಕಾಪಾಡುವ ಸಾಧನವಾದ ಮಡಕೆಯನ್ನೇ 'ಕರಗ' ದ ರೂಪದಲ್ಲಿ ಪೂಜಿಸುವುದು. ಈ ಕರಗ ಅಥವಾ ಕುಂಭ, ಮಾತೃದೇವತೆಯ ಸಂಕೇತವೂ ಹೌದು. ಮಾತೃದೇವತಾ ಸಂಪ್ರದಾಯದ ಹಲವು ಆರಾಧನೆಗಳಲ್ಲಿ ಕಲಶ ಅಥವಾ ಕುಂಭ ಪೂಜೆಗೆ ಆದ್ಯತೆಯಿದೆ.

ತಿರುಚಿನಾಪಳ್ಳಿ ಜಿಲ್ಲೆಯ ಹಳ್ಳಿಯೊಂದರಲ್ಲಿ ಕುರುಂಬಿಯಮ್ಮನ ಆರಾಧನೆಗೆ ಸಂಬಂಧಿಸಿದಂತೆ ವಿದ್ವಾಂಸರೊಬ್ಬರು ಕೊಟ್ಟಿರುವ ವಿವರಣೆಗಳು ಸ್ಪಷ್ಟವಾಗಿ ಕರಗದ ಆಚರಣೆ ಮಾತೃದೇವತಾ ಸಂಪ್ರದಾಯಕ್ಕೆ ಸೇರಿದುದೆಂಬುದನ್ನು ಸಿದ್ಧಪಡಿಸುತ್ತವೆ. ತಮಿಳುನಾಡಿನಲ್ಲಿ ಕಾಲರಾ ದೇವತೆಗೆ ಸಂಬಂಧಿಸಿದಂತೆಯೂ 'ಕರಗ' ದ ಆರಾಧನೆಯಿದ್ದು ಅದರ ವಿವರಗಳು ಹೀಗಿವೆ : ಹಳ್ಳಿಯ ಅಗಸನೇ ಕಾಲರಾ ದೇವಿಯ ಪೂಜಾರಿ. ಆತ ಆಕೆಯ ಮಗನೆಂದೇ ನಂಬಿಕೆಯಿದೆ. ಕರಗವನ್ನು ಹೊತ್ತ ಪೂಜಾರಿ, ಒಂದು ಕೈಯಲ್ಲಿ ಕುಡುಗೋಲು, ಮತ್ತೊಂದರಲ್ಲಿ ಬೇವಿನಸೊಪ್ಪನ್ನು ಹಿಡಿದು ಊರಲ್ಲೆಲ್ಲಾ ಕುಣಿಯುತ್ತಾ ಮೆರವಣಿಗೆ ಬರುತ್ತಾನೆ. ದಿನವೆಲ್ಲಾ ಊರ ಜನರಿಗೆ ಬಡಬಗ್ಗರಿಗೆ ಅನ್ನ ಸಂತರ್ಪಣೆ ಇರುತ್ತದೆ. ಕತ್ತಲಾದ ಮೇಲೆ ವಾದ್ಯ ಸಮೇತ 'ಕರಗ' ದ ಮೆರವಣಿಗೆ ಊರಲ್ಲೆಲ್ಲಾ ಸುತ್ತಾಡಿ ಗಡಿ ಸರಹದ್ದಿಗೆ ಬಂದು ಸೇರುತ್ತದೆ. ಮೆರವಣಿಗೆಯ ಹಾದಿಯಲ್ಲಿ ಕೊಡಲಾದ ಬಲಿಯಿಂದ ಸಂಗ್ರಹಿಸಿದ ರಕ್ತ ಮತ್ತು ಕರಗದ ಮಡಕೆಯನ್ನು ಊರ ಗಡಿ ಸರಹದ್ದಿನಲ್ಲಿ ಇರಿಸಿ ಬರುವರು. ಬಲಿ ಮತ್ತು ಆರಾಧನೆಗಳಿಂದ ಸಂತೃಪ್ತಳಾದ ದೇವಿ ಸಾಂಕ್ರಾಮಿಕ ಜಾಡ್ಯದಿಂದ ಊರನ್ನು ರಕ್ಷಿಸುವಳೆಂದೂ, ಇಷ್ಟಾಗಿಯೂ ಕಾಲರಾ ಬೇನೆ ತಲೆದೋರಿದರೆ, ಅದಕ್ಕೆ ಪೂಜಾರಿಯ ಅಪವಿತ್ರ ನಡತೆಗಳೇ ಕಾರಣವೆಂದೂ ಜನರು ತರ್ಕಿಸುತ್ತಾರೆ. ಒಂದು ಊರಿನ ಗಡಿ ಸರಹದ್ದಿನಲ್ಲಿಟ್ಟ ಕರಗದ ಮಡಕೆಯನ್ನು ಮತ್ತೊಂದು ಹಳ್ಳಿಯವರು ಎತ್ತಿಕೊಂಡು ಒಯ್ದು ಅವರ ಊರಿನಲ್ಲಿ ಆರಾಧನೆಯನ್ನು ಸಾಂಗವಾಗಿ ನೆರವೇರಿಸಿ ಮತ್ತೊಂದು ಹಳ್ಳಿಯ ಗಡಿಗೆ ತಲುಪಿಸುತ್ತಾರೆ. ಹೀಗೆ ಹಳ್ಳಿಯಿಂದ ಹಳ್ಳಿಗೆ ಕರಗದ ಕುಂಭವು ನಾಡಿನಲ್ಲೆಲ್ಲಾ ಸಂಚರಿಸುತ್ತಾ ಮುಂದೆ ಸಾಗುತ್ತದೆ. ಕಾಲರಾದಂತೆ ಉಳಿದ ಅನೇಕ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ 'ರೋಗಾಧಿದೇವಿ' ಯರನ್ನು ತೃಪ್ತಿಪಡಿಸಲೂ 'ಕರಗ' ದ ಉತ್ಸವ ಮಾಡುವ ವಾಡಿಕೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿಯೂ ಪ್ರಚಾರದಲ್ಲಿದೆ.

ಗ್ರಾಮದ ಗಡಿ ಸರಹದ್ದನ್ನು ಸಂರಕ್ಷಿಸುವ ಗ್ರಾಮದೇವತಾ ಆಚರಣೆಗಳಲ್ಲಿಯೂ 'ಕರಗ' ದ ಉತ್ಸವದ ವಾಡಿಕೆಯಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ತಿರುಚಿನಾಪಳ್ಳಿಯ ಸಮೀಪದ ಒಂದು ಹಳ್ಳಿಯಲ್ಲಿ ಗ್ರಾಮ ದೇವತೆಯ ಹತ್ತು ದಿನಗಳ ಉತ್ಸವದ ಆಚರಣೆಗಳಿದ್ದು, ಎಂಟನೆ ದಿನ ಹಸಿ ಮಣ್ಣಿನ ಕರಗಗಳನ್ನು ದೇವಸ್ಥಾನದಲ್ಲಿಯೇ ಮಾಡಲಾಗುತ್ತದೆ. ಒಂಬತ್ತನೆಯ ದಿನ ಅಲಂಕರಿಸಿದ 'ಕರಗ' ದ ಮೆರವಣಿಗೆ ನಡೆಯುತ್ತದೆ. ಬೇಯಿಸಿದ ಅನ್ನವಿರುವ ಹೊಸ ಮಡಕೆಯಲ್ಲಿ ಹೋತನ ಗಂಟಲಿನಿಂದ ಹರಿದು ಬರುವ ಬಿಸಿರಕ್ತವನ್ನು ಸಂಗ್ರಹಿಸಿ ವಿಧಿವತ್ತಾದ ಆಚರಣೆಗಳನ್ನು ಊರ ಗಡಿಯ ಕಲ್ಲುಗಳ ಸುತ್ತ ನಡೆಸಲಾಗುತ್ತದೆ. ಈ ಆಚರಣೆ ತಮಿಳುನಾಡಿನ ಅನೇಕ ಭಾಗಗಳಲ್ಲಿ ಇಂದಿಗೂ ಪ್ರಚಾರದಲ್ಲಿದೆ. ಬೆಂಗಳೂರಿನ 'ಕರಗ' ದ ಉತ್ಸವದ ವಿವರಗಳಿಗೆ ಈ ಆರಾಧನೆಯೊಂದಿಗೆ ಸ್ವಲ್ಪ ಹೊಂದಾಣಿಕೆಯಿರುವುದು ಗಮನಾರ್ಹವಾಗಿದೆ.

ವಹ್ನಿ ಕುಲದವರು ಆಚರಿಸುವ 'ಕರಗ' ವು ವಿಶಿಷ್ಟ ಬಗೆಯಿದು. ತಮಿಳುನಾಡಿನಲ್ಲಿ ಈ ಜನ ಬಹುಸಂಖ್ಯಾತರು; ಕರ್ನಾಟಕದಲ್ಲಿ ಕೋಲಾರ, ಆನೇಕಲ್ಲು, ಹೊಸಕೋಟೆ, ದೇವನಹಳ್ಳಿ, ಮಾಲೂರು, ಚಿಕ್ಕಬಳ್ಳಾಪುರ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಚೆದುರಿದಂತಿದ್ದು ಇವರು ಆಚರಿಸುವ ಕರಗದ ಉತ್ಸವಕ್ಕೂ ಮಹಾಭಾರತದ ಪೌರಾಣಿಕ ವ್ಯಕ್ತಿಗಳಿಗೂ ಸಂಬಂಧ ಕಲ್ಪಿಸಲಾಗಿದೆ. ಧರ್ಮರಾಯನ ದೇವಸ್ಥಾನವೆಂದೇ ಕರೆಯಲಾಗುವ ಈ ದೇವಾಲಯಗಳಲ್ಲಿ ಪಂಚಪಾಂಡವರು, ದ್ರೌಪದಿ, ಕುಂತಿ ಮತ್ತು ಕೃಷ್ಣರ ವಿಗ್ರಹಗಳಿದ್ದು, ನಿತ್ಯಪೂಜೆ ಸಲ್ಲುತ್ತದೆ. ಬೆಂಗಳೂರು ನಗರ ಒಂದರಲ್ಲಿಯೇ ಶಿವಾಜಿನಗರ, ಕಿಲಾರಿ ರಸ್ತೆ, ಕಲಾಸಿಪಾಳ್ಯ ಮತ್ತು ಅಲಸೂರುಪೇಟೆ– ಹೀಗೆ ನಾಲ್ಕು ಸ್ಥಳಗಳಲ್ಲಿ ಧರ್ಮರಾಯನ ಗುಡಿಗಳಿವೆ. ಈ ಎಲ್ಲ ದೇವಸ್ಥಾನದವರೂ ತಮ್ಮದೇ ಅತಿ ಪ್ರಾಚೀನ ದೇವಾಲಯವೆಂದೇ ವಾದಿಸುತ್ತಾರೆ. ವರ್ಷಕ್ಕೊಮ್ಮೆ ಕರಗದ ಉತ್ಸವ ಇಲ್ಲೆಲ್ಲಾ ವಿಜೃಂಭಣೆಯಿಂದ ನಡೆಯುತ್ತದೆ. ನಗರ ಕಾರ್ಪೋರೇಷನ್ ಆಫೀಸ್ ಸಮೀಪದ ಅಲಸೂರುಪೇಟೆ ಧರ್ಮರಾಯಸ್ವಾಮಿ ದೇವಾಲಯದ 'ಕರಗ' ದ ಉತ್ಸವ ಮಾತ್ರ ಹೆಚ್ಚು ಪ್ರಚಾರದಲ್ಲಿರುವ

ಅದ್ದೂರಿಯಾದ ಉತ್ಸವ. ಈ ಸುಪ್ರಸಿದ್ಧ ಕರಗದ ಚಾರಿತ್ರಿಕ ಮತ್ತು ಸಾಮಾಜಿಕ ಹಿನ್ನೆಲೆ ಕುರಿತು ಮೂರು ನಿಟ್ಟಿನಿಂದ ಮಾಹಿತಿಗಳನ್ನು ಸಂಗ್ರಹಿಸಬಹುದು. ಮೊದಲನೆಯದಾಗಿ ಬೆಂಗಳೂರು ನಗರಕ್ಕೂ ಧರ್ಮರಾಯಸ್ವಾಮಿ ದೇವಸ್ಥಾನಕ್ಕೂ ಇರುವ ಐತಿಹಾಸಿಕ ಸಂಬಂಧ, ಎರಡನೆಯದಾಗಿ ಕರ್ನಾಟಕದಲ್ಲಿ 'ಕರಗ' ದ ಉತ್ಸವ ನಡೆಸುವ ತಮಿಳು ಮೂಲದ ಜನಾಂಗಕ್ಕೂ ಕರ್ನಾಟಕಕ್ಕೂ ಇರುವ ಸಂಬಂಧ, ಮತ್ತು ಕೊನೆಯದಾಗಿ ತಿಗಳರು ಅಥವಾ ವಹ್ನಿ ಕುಲ ಕ್ಷತ್ರಿಯರಿಗೂ ಮಹಾಭಾರತದ ಪೌರಾಣಿಕ ವ್ಯಕ್ತಿಗಳಿಗೂ ಇರುವ ಸಂಬಂಧ. ಹೀಗೆ ಮೂರು ನೆಲೆಯಿಂದ ವಿವರಗಳನ್ನು ಕಲೆಹಾಕುವುದಕ್ಕೆ ಇರುವ ಬಹುದೊಡ್ಡ ಆತಂಕವೆಂದರೆ ಐತಿಹಾಸಿಕವೆನ್ನಬಹುದಾದ ಸಾಕ್ಷ್ಯಾಧಾರಗಳ ಕೊರತೆ. ಈಗಾಗಲೇ ಇದನ್ನು ಕುರಿತು ಬರೆದಿರುವವರೂ ಕೇವಲ ವಾಕ್ ಪರಂಪರೆಯಲ್ಲಿ ಪ್ರಚಾರದಲ್ಲಿರುವ ಸಾಕ್ಷ್ಯಾಧಾರಗಳನ್ನೇ ವಿಶೇಷವಾಗಿ ಅವಲಂಬಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಇವೆಲ್ಲವನ್ನೂ ಒಂದೆಡೆ ಸಂಗ್ರಹಿಸಿ ಸಿಕ್ಕುವ ಹೊಸ ಆಧಾರಗಳೊಡನೆ ಸ್ಥೂಲ ಚಿತ್ರವೊಂದನ್ನು ಬಿಡಿಸಬಹುದಾಗಿದೆ.

ಧರ್ಮರಾಯಸ್ವಾಮಿ ದೇವಾಲಯದ ಸುತ್ತಣ ಪ್ರದೇಶವನ್ನು 'ಅಲಸೂರು ಪೇಟೆ', 'ತಿಗಳರ ಪೇಟೆ' ಎಂದು ಎರಡು ರೀತಿ ಕರೆಯುತ್ತಾರೆ. ತಮಿಳುನಾಡಿನಿಂದ ವಲಸೆ ಬಂದ ಈ ಜನರು ಕನ್ನಡಿಗರ ಬಾಯಲ್ಲಿ 'ತಿಗಳ' ರೆಂದಾಗಿದ್ದಾರೆ. ಅವರು ತಮ್ಮನ್ನು ವಹ್ನಿ ಕುಲ ಕ್ಷತ್ರಿಯರೆಂದು ಗುರುತಿಸಿಕೊಳ್ಳುತ್ತಾರೆ. ತಾವು ಪಾಂಡವ ವಂಶಕ್ಕೆ ಸೇರಿದ ವಹ್ನಿ ನೃಪನ ಬಣದವರೆಂದು ಹೇಳಿಕೊಳ್ಳುತ್ತಾರೆ. ಇಂದಿಗೂ ಅವರ ಮನೆ ಮಾತು ತಮಿಳು. ಈಗ ಅವರು ಕನ್ನಡನಾಡಿನ ಜನಜೀವನದಲ್ಲಿ ಸಂಪೂರ್ಣ ಐಕ್ಯಗೊಂಡಿದ್ದಾರೆ. ಹಣ್ಣು, ಹೂ, ತರಕಾರಿಯ ತೋಟಗಾರಿಕೆ ಮತ್ತು ಕೃಷಿಯೇ ಇವರ ಕುಲ ಕಸುಬು. ಕೆಲವರು ಹಣ್ಣು, ಹೂ, ತರಕಾರಿ ವ್ಯಾಪಾರವನ್ನೂ ಮಾಡುತ್ತಾರೆ. ಬಹು ಹಿಂದೆ ಇವರು ಸೈನ್ಯಗಳಲ್ಲಿ ಯೋಧರಾಗಿದ್ದರೆಂದು ಹೇಳಲಾಗುತ್ತದೆ. ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಈ ಜನ ತಮಿಳುನಾಡಿನಿಂದ ವಲಸೆ ಬಂದುದಕ್ಕೆ ಸ್ಪಷ್ಟವಾದ ಸಾಕ್ಷ್ಯಾಧಾರಗಳಿವೆ. ಹೈದರಾಲಿಯು ತಮಿಳುನಾಡಿನಲ್ಲಿ ನಡೆಸಿದ ದಂಡಯಾತ್ರೆಯ ಕಾಲದಲ್ಲಿ ಅಲ್ಲಿನ ವಹ್ನಿ ಕುಲದವರ ತೋಟಗಾರಿಕೆಯ ನೈಪುಣ್ಯದಿಂದ ಪ್ರಭಾವಿತನಾಗಿ ಅವರನ್ನು ಇಲ್ಲಿಗೆ ಕರೆತಂದನೆಂದೂ ಹೈದರ್ ಮತ್ತು ಟಿಪ್ಪುಸುಲ್ತಾನರ ಆಶ್ರಯದಲ್ಲಿ ಲಾಲ್‌ಬಾಗ್ ಮುಂತಾದ ಉದ್ಯಾನವನಗಳು ತಲೆ ಎತ್ತಿದವೆಂದೂ, ಧರ್ಮಾಂಬುಧಿ ಕೆರೆಯನ್ನು ಕಟ್ಟಿದವರೂ ಇದೇ ಜನರೆಂದೂ, ಕಬ್ಬನ್‌ಪಾರ್ಕ್ ಇರುವ ಪ್ರದೇಶದಲ್ಲಿ ಹಿಂದೆ ಅವರ ತರಕಾರಿ ತೋಟಗಳಿದ್ದುವೆಂದೂ ಹೇಳುತ್ತಾರೆ.

ಹೈದರಾಲಿಗಿಂತ ಇನ್ನೂ ಹಿಂದಿನ ಕಾಲದಲ್ಲಿಯೇ ತಿಗಳರು ಕನ್ನಡನಾಡಿಗೆ ಬಂದಿರುವ ಸಾಧ್ಯತೆಯೂ ಇದೆ. ತಮಿಳರ ಕನ್ನಡನಾಡಿಗೆ ವಲಸೆ ಬಂದುದನ್ನು ಮೂರು ಪ್ರಮುಖ ಘಟ್ಟಗಳಲ್ಲಿ ಗುರುತಿಸಬಹುದು. ಹನ್ನೊಂದನೇ ಶತಮಾನದಲ್ಲಿ ಚೋಳರು ಮೈಸೂರಿನ ಸ್ವಲ್ಪ ಭಾಗವನ್ನು ಆಕ್ರಮಿಸಿ 'ವಿಕ್ರಮ ಚೋಳಮಂಡಲ' ವನ್ನು ಸ್ಥಾಪಿಸಿದಾಗಲೇ ತಮಿಳುರು ಇಲ್ಲಿಗೆ ಬಂದಿದ್ದಾರೆ. ಹದಿಮೂರನೇ ಶತಮಾನದ 'ಶಬ್ದಮಣಿ ದರ್ಪಣ' ದಲ್ಲಿ 'ತಿಗುಳ' ಶಬ್ದದ ಉಲ್ಲೇಖವಿದೆ. ಕುಮಾರವ್ಯಾಸ ಭಾರತದಲ್ಲಿ 'ತಿಗುಳರಾವುತರ' ಪ್ರಸ್ತಾಪವಿದೆ.

ಬೆಂಗಳೂರು ನಗರವನ್ನು ಕಟ್ಟಿದ ಕೆಂಪೇಗೌಡನ ಮೂಲ ಪುರುಷರು ಹದಿಮೂರನೇ ಶತಮಾನದ ಕೊನೆಯ ಭಾಗದಲ್ಲಿ ತಮಿಳುನಾಡಿನ ಕಾಂಚಿಪುರದ ಕಡೆಯಿಂದಲೇ ಬಂದವರು. ದೇವನಹಳ್ಳಿ, ಯಲಹಂಕ, ಬೆಂಗಳೂರು, ಮಾಗಡಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಆನೇಕಲ್ಲು, ಶಿಡ್ಲಘಟ್ಟ, ಕೊರಟಗೆರೆ ಮುಂತಾಗಿ ಇಂದಿನ ಕೋಲಾರ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ವ್ಯಾಪಿಸುವ ವಿಶಾಲ ಪ್ರದೇಶವನ್ನು ಗೌಡ ದೊರೆಗಳ ಮೂಲ ಪುರುಷ ರಣ ಭೈರೇಗೌಡನ ವಂಶಸ್ಥರು ಸುಮಾರು ನಾಲ್ಕು ಶತಮಾನಗಳ ಕಾಲ ಆಳಿದ್ದಾರೆ. ಕರಗದ ಆರಾಧಕರಾದ ವಹ್ನಿ ಕುಲ ಕ್ಷತ್ರಿಯರೂ ತಮಿಳುನಾಡಿನ ಕಂಚಿಯ ಪ್ರದೇಶದಿಂದಲೇ ಬಂದವರು. ಕನ್ನಡನಾಡಿನ ಈ ಮೂರು ಜಿಲ್ಲೆಗಳಲ್ಲಿಯೇ ಅವರು ನೆಲೆಸಿರುವುದು. ಆದುದರಿಂದ ಗೌಡ ದೊರೆಗಳ ಕಾಲದಿಂದಲೇ ತಿಗಳರು ಈ ಪ್ರದೇಶದಲ್ಲಿ ನೆಲೆಸಿರಬೇಕೆಂದೂ ಧರ್ಮರಾಯಸ್ವಾಮಿ ದೇವಸ್ಥಾನಗಳು ಆಗಿನಿಂದಲೂ ಇದ್ದಿರಬೇಕೆಂದು ತರ್ಕಿಸಬಹುದಾದರೂ, ಅದಕ್ಕೆ ಸ್ಪಷ್ಟ ಆಧಾರಗಳೇನೂ ಇಲ್ಲ. ಧರ್ಮರಾಯಸ್ವಾಮಿ ದೇವಸ್ಥಾನಗಳಿರಲಿ ಅಥವಾ ಇಲ್ಲದಿರಲಿ, 'ಕರಗ' ದ ಸಂಪ್ರದಾಯ ಗೌಡ ದೊರೆಗಳ ಕಾಲದಿಂದಲೂ ಇತ್ತು ಮತ್ತು ಸ್ವತಃ ಗೌಡ ದೊರೆಗಳೇ ಕರಗದಮ್ಮನ ಒಕ್ಕಲಾಗಿದ್ದರೆಂಬುದಕ್ಕೆ ಶಾಸನಧಾರವಿದೆ. ಕ್ರಿ.ಶ. 1428ರ ಕಾಲಕ್ಕೆ ಸೇರಿದ್ದೆಂದು ನಿರ್ಧರಿಸಲಾಗಿರುವ ಈ ಶಾಸನವು ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗ್ರಾಮದ

ಕುಡುವತಿಗೆಯಲ್ಲಿ ದೊರೆತಿದೆ. ಅವತಿ ವಂಶದ ಕಾರೆಪುರದ ಪಾಳೆಯಗಾರ ಭೈರ ಗೋಪಾಲನು ಶಿವರಾತ್ರೆಯಲ್ಲಿ ಪಂಚನಂದೀಶ್ವರ ದರ್ಶನ ಮಾಡಿ, ದೇವರಿಗೆ ಆಗಮಾರ್ಚನೆಯ ಸಲುವಾಗಿ ದತ್ತಿ ಬಿಟ್ಟ ವಿಚಾರವನ್ನು ಈ ಶಾಸನದಲ್ಲಿ ಹೇಳಲಾಗಿದೆ. ಅಲ್ಲಿ ಭೈರ ಭೂಪಾಲನ ಮನೆದೇವರು 'ಕರಗದಮ್ಮನ ಪತಿ' ಎಂದಿದೆ. ಆತನು ಶ್ರೀಮದ್ದೇವೀ ವರಪ್ರಸಾದನೆಂದೂ ಬಣ್ಣಿಸಲಾಗಿದೆ. ಕುಲದೇವರು ಭೈರವನೆಂದಿದೆ. ಅವತಿ ನಾಡ ಪ್ರಭುಗಳ ಕುಲದೈವ ಭೈರವನೆಂಬುದು ಅವರ ಹೆಸರುಗಳಲ್ಲೇ ಸ್ಪಷ್ಟವಾಗಿದೆ. ಮೂಲಪುರುಷ ರಣಭೈರೇಗೌಡ ಮೊದಲುಗೊಂಡು ಆತನ ಬೇರೆ ಬೇರೆ ಶಾಖೆಗಳ ವಂಶಸ್ಥರ ಹೆಸರುಗಳಲ್ಲಿ ಮೂರನೇ ಒಂದು ಪಾಲು ಗೌಡ ದೊರೆಗಳ ಹೆಸರುಗಳು ಭೈರೇಗೌಡ ಎಂದೇ ಇವೆ. ಮುಳಬಾಗಿಲು ತಾಲ್ಲೋಕಿನ ಮತ್ತೊಂದು ಶಾಸನದಲ್ಲಿ ಯಿಟ್ಟಯ್ಯನೆಂಬುವನು ಕಣ್ಣಯ್ಯನಿಗೆ ಬಿಟ್ಟ 'ಕರಗ' ಮಾನ್ಯ ಹೊಲದ ಪ್ರಸ್ತಾಪವಿದೆ. ಈ ಶಾಸನದ ಕಾಲ ಸ್ಪಷ್ಟವಾಗಿ ಗೊತ್ತಿಲ್ಲ. ಈ ಆಧಾರಗಳಿಂದ ಹದಿನೈದನೇ ಶತಮಾನದಿಂದಲೂ 'ಕರಗ' ದ ಸಂಪ್ರದಾಯ ಕನ್ನಡನಾಡಿನಲ್ಲಿ ಪ್ರಚಲಿತವಿರುವುದು ಗೊತ್ತಾಗುತ್ತದೆ. ಆದರೆ ಮಾತೃದೇವತಾ ಸಂಪ್ರದಾಯದ 'ಕರಗ' ದ ಪೂಜೆ ಅತ್ಯಂತ ಪ್ರಾಚೀನ ಕಾಲದಿಂದಲೂ ಕನ್ನಡನಾಡಿನಲ್ಲಿತ್ತೆಂದು ಹೇಳುವುದಕ್ಕೆ ಶಾಸನಾಧಾರವೇನೂ ಬೇಕಿಲ್ಲ. ನಮ್ಮ ಗ್ರಾಮ ದೇವತೆಗಳೆಲ್ಲವನ್ನೂ ಇಂದಿಗೂ ಆರಾಧಿಸುವುದು ಕುಂಭದ ರೂಪದಲ್ಲಿಯೇ ಎಂಬುದನ್ನು ನಾವು ಮರೆಯಬಾರದು. ಆದರೆ ದ್ರೌಪದಿ ದೇವಿಯ ಕರಗದ ಸಂಪ್ರದಾಯ ಕನ್ನಡನಾಡಿನಲ್ಲಿ ಎಷ್ಟು ಹಳೆಯದು? ಎಂಬುದೇ ಇಲ್ಲಿ ಮುಖ್ಯವಾದ ವಿಚಾರ. ಈ ಹಿಂದೆಯೇ ಗಮನಿಸಿರುವಂತೆ ಹೈದರಾಲಿ ಜೊತೆ ಬಂದ ವಹ್ನಿಕುಲ ಕ್ಷತ್ರಿಯರು ಈ ಸಂಪ್ರದಾಯವನ್ನು ರೂಢಿಗೆ ತಂದರೆಂದು ನಂಬಲಾಗಿದೆ. ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಬೆಂಗಳೂರಿನಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನವಿತ್ತೆಂದು ನಂಬಲು ಅವಕಾಶವಿದೆ. ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿತ್ತೆನ್ನಲು ಸ್ಪಷ್ಟ ದಾಖಲೆಯೇ ಇದೆ. ಕ್ರಿ.ಶ. 1811 ರಲ್ಲಿ ಅಲಸೂರು ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ಇನಾಂ ಜಮೀನು ಮತ್ತು ಸನ್ನದ್ದನ್ನು ಕೊಟ್ಟಿರುವುದಕ್ಕೆ ದಾಖಲೆ ಇದೆ. ದೇವಸ್ಥಾನಕ್ಕೆ ಸಂಬಂಧಿಸಿದಂತೆ ಸಿಗುವ ಚಾರಿತ್ರಿಕವೆನ್ನಬಹುದಾದ ದಾಖಲೆ ಇದೊಂದೇ ಆಗಿದೆ. ಸುಮಾರು ನೂರಾ ಎಪ್ಪತ್ತೈದು ವರ್ಷಗಳ ಹಿಂದೆಯೆ ಈ ಕರಗದ ಉತ್ಸವ ರಾಜಮರ್ಯಾದೆ ಗಳಿಸಿರಬೇಕಾದರೆ, ಅದಕ್ಕೂ ಹಿಂದೆ ಹಲವಾರು ವರ್ಷಗಳಿಂದಲೂ ಈ ಸಂಪ್ರದಾಯ ನಡೆದುಕೊಂಡು ಬಂದಿರುವ ಸಾಧ್ಯತೆ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಧರ್ಮರಾಯಸ್ವಾಮಿ ದೇವಸ್ಥಾನವನ್ನು ಯಾವಾಗ ಕಟ್ಟಲಾಯಿತೆಂಬುದರ ವಿವರವೂ ಖಚಿತವಾಗಿ ದೊರೆಯುತ್ತಿಲ್ಲ. ಕೆಲವರು ಹದಿನೈದನೇ ಶತಮಾನದಲ್ಲಿ ಎಂದೂ ಮತ್ತೆ ಕೆಲವು ಹದಿನೇಳನೇ ಶತಮಾನದಲ್ಲಿ ಎಂದೂ ಹೇಳುತ್ತಾರೆ. ಎರಡು ವಾದಗಳೂ ಹೈದರಾಲಿ ಕಾಲದಲ್ಲಿ ಬಂದ ತಮಿಳರಿಗಿಂತ ಹಿಂದಿನವರೇ ದೇವಸ್ಥಾನ ಕಟ್ಟಿದ್ದರೆಂಬುದನ್ನು ಸೂಚಿಸುತ್ತಿವೆ. ವಾಕ್ ಪರಂಪರೆಯಲ್ಲಿರುವ ಹೇಳಿಕೆಗಳನ್ನು ಬಿಟ್ಟರೆ ದಾಖಲೆಗಳಾವುವೂ ಇಲ್ಲ. ದೇವಾಲಯದ ವಾಸ್ತುಶಿಲ್ಪವನ್ನು ಗಮನಿಸಿದರೆ ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಕಟ್ಟಿರಬಹುದೆಂದು ಊಹಿಸುವ ಅವಕಾಶವಿದೆಯೆಂದು ವಿದ್ವಾಂಸರೊಬ್ಬರು ಅಭಿಪ್ರಾಯಪಡುತ್ತಿದ್ದಾರೆ. ಈಗಿರುವ ದೇವಸ್ಥಾನವನ್ನು ಕಟ್ಟುವುದಕ್ಕಿಂತ ಮುಂಚೆ ಅಲ್ಲಿ ಮತ್ತೊಂದು ಗುಡಿ ಇದ್ದಿರಬಹುದಾದ ಸಾಧ್ಯತೆಯನ್ನು ಇಲ್ಲಿ ಮರೆಯಬಾರದು. ಆ ಮೂಲ ದೇವಸ್ಥಾನವನ್ನು ಯಾವಾಗ ಕಟ್ಟಲಾಯಿತೆಂದು ನಿಖರವಾಗಿ ಹೇಳಲು ಸಾಧ್ಯವೇ ಇಲ್ಲ.

'ಕರಗ' ಸಂಪ್ರದಾಯ, ಧರ್ಮರಾಯಸ್ವಾಮಿ ಮತ್ತು ವಹ್ನಿಕುಲ ಕ್ಷತ್ರಿಯರನ್ನು ಕುರಿತು ಇಷ್ಟು ಚಾರಿತ್ರಿಕ ವಿವರಗಳನ್ನು ಬಿಟ್ಟರೆ, ಪೌರಾಣಿಕ ಮೂಲಗಳಿಂದ ಕೆಲವು ಮಾಹಿತಿಗಳನ್ನು ಕಲೆಹಾಕಬಹುದಾಗಿದೆ. 'ವಹ್ನಿಕುಲ ಪುರಾಣ' ವನ್ನು ಆಶ್ರಯಿಸಿ ವಾಕ್ ಪರಂಪರೆಯಲ್ಲಿ ಪ್ರಚಾರದಲ್ಲಿರುವ ಕತೆಗಳ ಆಧಾರದಿಂದ ಈ ವಿಷಯವನ್ನು ನಿರೂಪಿಸಬಹುದು.

ಬ್ರಹ್ಮನು ಮಾಡಿದ ಯಾಗದ ಅಗ್ನಿಕುಂಡದಿಂದ ಅಗ್ನಿಯ ಸಂತಾನವಾಗಿ ಹುಟ್ಟಿದ ಅಂಗೀರಸನ ಗೋತ್ರಕ್ಕೆ ಸೇರಿದವರು ವಹ್ನಿಕುಲದವರು. ಈ ಬಣಕ್ಕೆ ಸೇರಿದ ಅನೇಕ ಅರಸು ಸಂತತಿಯವರು ತಮಿಳುನಾಡನ್ನು ಆಳಿದ್ದಾರೆ. ಪಲ್ಲವ, ಪಾಂಡ್ಯ, ಚೇರ, ಚೋಳರಾಜ ಮಹಾರಾಜರೆಲ್ಲ ವಹ್ನಿಕುಲದವರೆಂದು ಹೇಳಲಾಗುತ್ತದೆ.

ದ್ರುಪದ ಮಹಾರಾಜನು ಪುತ್ರ ಕಾಮೇಷ್ಟಿ ಯಾಗ ಮಾಡಿದಾಗ ಅಗ್ನಿದೇವನ ಅನುಗ್ರಹದಿಂದ ಹುಟ್ಟಿದ ಅಗ್ನಿಪುತ್ರಿ ದ್ರೌಪದಿಯನ್ನು ವಹ್ನಿಕುಲದವರು ಆರಾಧಿಸುತ್ತಾರೆ. ಆಕೆಯನ್ನು ಶಕ್ತಿಯ ಅವತಾರವೆಂದು ಭಾವಿಸಿ ಪೂಜಿಸುತ್ತಾರೆ. ಇವರು ದ್ರೌಪದಿಯನ್ನು ಆರಾಧಿಸುತ್ತಿರುವುದಕ್ಕೂ ಒಂದು ಪುರಾಣ ಕಥೆಯಿದೆ.

ಮಹಾಭಾರತ ಯುದ್ಧವೆಲ್ಲಾ ಮುಗಿದು ಸಾಕಷ್ಟು ದೀರ್ಘಕಾಲದ ಪಾಂಡವರ ಆಳ್ವಿಕೆಯ ಬಳಿಕ ಕಲಿಯುಗದ ಆರಂಭ ಚಿನ್ಹೆಗಳು ಕಾಣಿಸಿಕೊಳ್ಳುತ್ತವೆ. ಇನ್ನು ತಾವು ಭೂಮಿಯನ್ನು ತ್ಯಜಿಸಿ ಸ್ವರ್ಗಾರೋಹಣ ಮಾಡಬೇಕೆಂದು ಧರ್ಮರಾಯನು ನಿರ್ಧರಿಸಿದಾಗ ಆತನ ಸೋದರರು ಮತ್ತು ಪತ್ನಿ ದ್ರೌಪದಿಯೂ ಅವನನ್ನು ಹಿಂಬಾಲಿಸುತ್ತಾರೆ. ಸ್ವರ್ಗಾರೋಹಣ ಕಾಲದಲ್ಲಿ ಒಬ್ಬೊಬ್ಬರಾಗಿ ಸಾಯತೊಡಗುತ್ತಾರೆ. ಸತ್ತವರನ್ನು ಬಿಟ್ಟು ಉಳಿದವರು ಮುಂದೆ ಸಾಗುತ್ತಾರೆ. ಕೊನೆಗೆ ದೇಹ ಸಹಿತ ಸ್ವರ್ಗಕ್ಕೆ ಹೋದವನು ಧರ್ಮರಾಯ. ವಹ್ನಿ ಪುರಾಣದ ಪ್ರಕಾರ ಸ್ವರ್ಗಾರೋಹಣದಲ್ಲಿ ಮೊದಲು ನಿಶ್ಚೇತನಳಾಗಿ ಬಿದ್ದವಳು ದ್ರೌಪದಿ. ಪಾಂಡವರು ಅವಳು ಸತ್ತಳೆಂದೇ ಭಾವಿಸಿ ಮುಂದೆ ನಡೆಯುತ್ತಾರೆ. ಆದರೆ ಆಯಾಸದಿಂದ ಬಳಲಿ ಮೂರ್ಛೆ ಹೋಗಿದ್ದ ದ್ರೌಪದಿಗೆ ಎಚ್ಚರವಾದಾಗ ಪಾಂಡವರು ಕಾಣಸಿಗುವುದಿಲ್ಲ. ದಿಕ್ಕೆಟ್ಟ ದ್ರೌಪದಿ ಗೋಳಾಡುತ್ತಿರುವಾಗ ಒಬ್ಬ ರಾಕ್ಷಸ ಕಾಣಿಸಿಕೊಳ್ಳುತ್ತಾನೆ. ಅವಳ ರೂಪಿಗೆ ಮನಸೋತು ಹಿಂಬಾಲಿಸುತ್ತಾನೆ. ಅವನ ದುಷ್ಟತನದಿಂದ ಕೆರಳಿದ ದ್ರೌಪದಿ ಆದಿಶಕ್ತಿಯ ಆಕಾರ ಧರಿಸಿ ಅವನನ್ನು ಸಂಹರಿಸಿದಳು. ದ್ರೌಪದಿ ಆದಿ ಪರಾಶಕ್ತಿಯಾಗಿ ಕಾಣಿಸಿಕೊಂಡಾಗ ಹುಟ್ಟಿದವರೇ ವಹ್ನಿಕುಲದ 'ವೀರಕುಮಾರ' ರು; ಅವಳ ಸಂಗಡಿಗರಾಗಿ ರಾಕ್ಷಸ ಸಂಹಾರ ಕಾರ್ಯದಲ್ಲಿ ನೆರವಾದವರು. ಇಂದಿಗೂ 'ಕರಗ' ದ ಉತ್ಸವದಲ್ಲಿ ನೂರಾರು 'ವೀರಕುಮಾರ' ರು ಭಾಗವಹಿಸಿ ಶಕ್ತಿದೇವತೆಯ ಕರಗವನ್ನು ಹೊತ್ತು ಮುಂದೆ ಸಾಗುತ್ತ ದ್ರೌಪದಿ ದೇವಿಗೆ 'ಅಲಗು ಸೇವೆ' ಸಲ್ಲಿಸುತ್ತಾರೆ.

ದ್ರೌಪದಿಯು ಶಕ್ತಿಯ ಅವತಾರವೆಂದು ಹೇಳುವ ಹಲವು ಕಥೆಗಳು ವಾಕ್ ಪರಂಪರೆಯಲ್ಲಿ ಪ್ರಚಾರದಲ್ಲಿದೆ. ಇಂತಹ ಒಂದು ಕಥೆಯ ಪ್ರಕಾರ ಆಕೆ ವನವಾಸ ಕಾಲದಲ್ಲಿ ತಿಮಿರಾಸುರನೆಂಬೊಬ್ಬ ರಾಕ್ಷಸನನ್ನು ಸಂಹರಿಸಿ ದೇವತೆಗಳನ್ನು ಋಷಿಮುನಿಗಳನ್ನು ಕಾಪಾಡಿದಳೆಂದು ಹೇಳುತ್ತಾರೆ. ಋಷಿಮುನಿಗಳಿಗೆ ಕಿರುಕುಳ ಕೊಡುತ್ತಿದ್ದ ಈ ರಾಕ್ಷಸನನ್ನು ಸಂಹರಿಸಲು ದೇವತೆಗಳೇ ಪ್ರಾರ್ಥಿಸಿದಾಗ ಧರ್ಮಜನ ಅಪ್ಪಣೆಯಂತೆ ದ್ರೌಪದಿ ಆದಿಶಕ್ತಿಯ ಆಕಾರ ಧರಿಸಿ ರಾಕ್ಷಸ ಸಂಹಾರ ಕಾರ್ಯಮಾಡಿದಳಂತೆ. ಮಹಾಭಾರತದ ಯುದ್ಧ ಕಾಲದಲ್ಲಿ ಒಮ್ಮೆ ದ್ರೌಪದಿ ಸಿಟ್ಟಿಗೆದ್ದು ಆದಿಪರಾಶಕ್ತಿಯ ಅವತಾರ ತಾಳಿ ಹೆಣಗಳ ಮೇಲೆ ಕುಣಿಯುತ್ತಾ ಭಯಂಕರವಾಗಿ ಕಾಣಿಸಿಕೊಂಡಾಗ ಕೃಷ್ಣಾರ್ಜುನರು ಅವಳನ್ನು ಪೂಜಿಸಿ ಸಂತೈಸಿದರೆಂಬ ಒಂದು ಕಥೆಯೂ ಪ್ರಚಾರದಲ್ಲಿದೆ.

ವ್ಯಾಸ ಪರಂಪರೆಯ ಮಹಾಭಾರತಗಳಲ್ಲಿಯೂ ದ್ರೌಪದಿಯ ಉಗ್ರ ವ್ಯಕ್ತಿತ್ವವನ್ನು ವರ್ಣಿಸಲಾಗಿದೆ. ಪಾಂಡವರೈವರ ಮೇಲೆ ತನ್ನ ಸಂಪೂರ್ಣ ಹಿಡಿತವಿರಿಸಿಕೊಂಡಿದ್ದ ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಅಪಮಾನಿಸಿದ ಕೌರವರ ಹೀನಕೃತ್ಯವೇ ಅವರ ವಿನಾಶಕ್ಕೆ ಮುಖ್ಯಕಾರಣ. ದ್ರೌಪದಿಯ ಮುಡಿಗೆ ಕೈಹಾಕಿದ ಭಯಂಕರ ಸಾಹಸವೇ ಮಹಾಭಾರತ ಯುದ್ಧಕ್ಕೆ ನಾಂದಿಯಾಯಿತೆಂಬುದನ್ನು ಪಂಪ, ಕುಮಾರವ್ಯಾಸರಿಬ್ಬರೂ ಘೋಷಿಸಿದ್ದಾರೆ. ದ್ರೌಪದಿಯು, 'ದೇವಾಸುರ ಯುದ್ಧಕ್ಕೆ ಕರಗವನ್ನು ಹೊತ್ತ ಡಾವರ ಡಾಕಿನಿ' ಯಂತೆ ರನ್ನನಿಗೆ ಗೋಚರಿಸಿದ್ದಾಳೆ. ಹೀಗೆ ವ್ಯಾಸ ಪರಂಪರೆಯ ಭಾರತಗಳಲ್ಲಿ ದ್ರೌಪದಿಯ ವಿನಾಶಕಾರೀ ವ್ಯಕ್ತಿತ್ವವನ್ನು ಸೂಚ್ಯವಾಗಿ ಒಪ್ಪಿಕೊಳ್ಳಲಾಗಿದೆ. ಜನಪದ ಪರಂಪರೆಯ ಮಹಾಭಾರತಗಳಲ್ಲಿ ಇದು ವಾಚ್ಯವಾಗಿ, ದ್ರೌಪದಿಯ ಉಗ್ರ ವ್ಯಕ್ತಿತ್ವವನ್ನು ಇನ್ನೂ ಉಜ್ವಲಗೊಳಿಸಲಾಗಿದೆ. ಆಕೆಯನ್ನು ಶಕ್ತಿಯ ಅವತಾರವೆಂದು ಈ ಮೂಲಗಳು ಸ್ಪಷ್ಟವಾಗಿ ಹೇಳುತ್ತವೆ. ಕನ್ನಡ ಜನಪದ ಗೀತೆಯೊಂದರಲ್ಲಿ ಆಕೆ ಭೂತ, ಪಿಶಾಚಿಗಳೊಡನೆ ಸ್ನೇಹವಿರಿಸಿಕೊಂಡಿದ್ದವಳೆಂದು ಹೇಳಲಾಗಿದೆ. ಮಹಾಭಾರತ ಯುದ್ಧ ನಡೆಯುತ್ತಿರುವಾಗ ನಟ್ಟ ನಡುವಿರುಳು ಆಕೆ ಯಾರಿಗೂ ಗೊತ್ತಾಗದಂತೆ ಯುದ್ಧಭೂಮಿಗೆ ಬಂದು ಪಿಶಾಚಿಗಳೊಡನೆ ಸತ್ತ ಹೆಣಗಳನ್ನು ತಿನ್ನುತ್ತಿದ್ದಳಂತೆ.

ಬೆಂಗಳೂರಿನ ಧರ್ಮರಾಯಸ್ವಾಮಿ ಕರಗದ ಆಚರಣೆಗಳ ಕೇಂದ್ರ ವ್ಯಕ್ತಿ ದ್ರೌಪದಿ ದೇವಿ. ಆಕೆಯ ಸ್ವಯಂವರ, ಅರ್ಜುನನೊಂದಿಗೆ ಕಲ್ಯಾಣ ಮುಂತಾದ ವಿವರಗಳನ್ನೆಲ್ಲಾ ಆಚರಣೆಗಳಲ್ಲಿ ನಾಟಕೀಯವಾಗಿ ನಿರೂಪಿಸಲಾಗುತ್ತದೆ. ಮಹಾಭಾರತ ಯುದ್ಧಪ್ರಸಂಗ ಮತ್ತು ಕೌರವ ವಿನಾಶದಲ್ಲಿ ಆಕೆಯ ಪಾತ್ರವನ್ನು ನಿರೂಪಿಸುವಲ್ಲಿ ಆಕೆ ಆದಿಶಕ್ತಿಯ

ಅವತಾರವೆಂಬುದನ್ನು ಸೂಚಿಸುವಂತಿದೆ. ಉಪ–ಪಾಂಡವರ ಕಗ್ಗೊಲೆಯಿಂದ ರೊಚ್ಚಿಗೆದ್ದ ದ್ರೌಪದಿ ಆದಿಶಕ್ತಿಯಂತೆ ಪ್ರತೀಕಾರಕ್ಕೆ ತವಕಿಸಿದಳೆಂದೂ ಅಶ್ವತ್ಥಾಮನನ್ನು ಭಂಗಿಸಿದ ಬಳಿಕ ಅವಳ ಸಿಟ್ಟು ಶಾಂತವಾಯಿತೆಂದೂ – ಈ ಎಲ್ಲ ಘಟನಾವಳಿಗಳನ್ನೂ ಸೂಚ್ಯವಾಗಿ ಕರಗದ ಉತ್ಸವಾಚರಣೆಗಳು ಒಳಗೊಳ್ಳುತ್ತವೆಯೆಂದೂ ಹೇಳುತ್ತಾರೆ. ಒಟ್ಟಾರೆ ಈ ಉತ್ಸವವು ಮಹಾಭಾರತ ಯುದ್ಧದ ಪ್ರತಿಧ್ವನಿಯೆಂಬಂತಿದೆಯೆಂಬುದೇ ಬಹುಪಾಲು ಮಂದಿಯ ಸ್ಪಷ್ಟ ನಂಬಿಕೆ.

ಧರ್ಮರಾಯಸ್ವಾಮಿ ದೇವಸ್ಥಾನವೆಂದೇ ಹೆಸರಿರುವುದಾದರೂ 'ಕರಗ' ದ ಉತ್ಸವ ಮೂಲತಃ ಶಕ್ತಿಯ ಆರಾಧನೆ. ಇದನ್ನು ಈ ಸಂಪ್ರದಾಯದವರೂ ಸಂಪೂರ್ಣವಾಗಿ ಒಪ್ಪುತ್ತಾರೆ. ಇಲ್ಲಿನ ಆಚರಣೆಗಳಲ್ಲಿ ಶಾಕ್ತ ಸಂಪ್ರದಾಯದ ದಟ್ಟವಾದ ಪ್ರಭಾವವನ್ನು ಗುರುತಿಸಬಹುದು. ಒಟ್ಟು ಆರಾಧನೆಯನ್ನು ಕುರಿತು ಸಂಬಂಧಿಸಿದವರೆಲ್ಲಾ ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಬಂದಿರುವ ರಹಸ್ಯಗಳು ಮತ್ತು ಆಚರಣೆಗಳ ಸಂದರ್ಭದಲ್ಲಿ ಹೇಳುವ ಕೆಲವು ತಮಿಳು ಮಂತ್ರಗಳೂ ಇದನ್ನೇ ಸೂಚಿಸುತ್ತಿವೆ. ಈ ಶಾಕ್ತೇಯ ಸಂಪ್ರದಾಯದ ಆರಾಧನೆಗೆ ಪಾಂಡವರ ಐತಿಹ್ಯ ಹೇಗೆ, ಯಾವಾಗ ಬಂದು ಸೇರಿತು? ಹೇಳುವುದು ಕಷ್ಟ. ಈಗ ಇರುವಂತೆ ನೋಡಿದರೆ ಇದು ಮಹಾಭಾರತ ಯುದ್ಧಕ್ಕೆ ಸಂಬಂಧಿಸಿದ ಘಟನಾವಳಿಗಳನ್ನು ಆಚರಣೆಗಳ ಮೂಲಕ ನಾಟಕೀಯವಾಗಿ ಪುನರಭಿನಯಿಸುತ್ತಿದೆ. ವಹ್ನಿ ಕುಲ ಕ್ಷತ್ರಿಯರು ತಮ್ಮ ಪೂರ್ವಜರೆಂದು ಹೇಳಿಕೊಳ್ಳುವ ಪಾಂಡ್ಯರು ಮತ್ತು ಪಲ್ಲವರು ಪಾಂಡವರ ಆರಾಧಕರು. ಮಹಾಬಲಿ ಪುರದಲ್ಲಿ ಪಾಂಡವರಿಗೆ ಪಂಚರಥಗಳಿವೆ. ಪ್ರಮುಖ ರಥದಲ್ಲಿ ದ್ರೌಪದಿಯ ಅಂಕಿತವಿದೆ. ಮಂಟಪವೊಂದರಲ್ಲಿ ಕೃಷ್ಣನ ಫಲಕವಿದೆ, ಮುಂತಾದ ವಿವರಗಳನ್ನು ವಿದ್ವಾಂಸರು ಎತ್ತಿ ತೋರಿಸುತ್ತಾರೆ. ಆದರೆ ಪಾಂಡವರನ್ನು ಕುರಿತ ಐತಿಹ್ಯಗಳು ಇಂಡಿಯಾ ದೇಶದ ಹಳ್ಳಿಹಳ್ಳಿಗಳಲ್ಲಿಯೂ ಸಿಗುತ್ತವೆ. ನಮ್ಮ ಊರುಗಳ ಗುಡ್ಡಗುಡ್ಡಗಳಲ್ಲಿಯೂ ಪಾಂಡವರು ವಾಸಿಸಿದ ಸ್ಥಳಗಳೆಂದು ತೋರಿಸುತ್ತಾರೆ. ಪಾಂಡವರ ಗುತ್ತಿಗಳಿವೆ. ಈ ಐತಿಹ್ಯಗಳನ್ನೇ ನಂಬುವುದಾದರೆ ಇಂಡಿಯಾದಲ್ಲಿರುವ ಎಲ್ಲರೂ ಪಾಂಡವರ ಆರಾಧಕರಾಗುತ್ತಾರೆ. ವಹ್ನಿ ಕುಲದವರ 'ಕರಗ' ದ ಸಂದರ್ಭದಲ್ಲಿ ಮುಖ್ಯವಾಗುವುದು ದ್ರೌಪದಿ ದೇವಿಯ ಆರಾಧನೆ ಮತ್ತು ಗರ್ಭಗುಡಿಯಲ್ಲಿರುವ ಶಕ್ತಿ ಪೀಠ. ಈ ಹಿನ್ನೆಲೆಯಲ್ಲಿ ಆಲೋಚಿಸಿದರೆ ಇದು ಕೇವಲ ಪೂರ್ವಿಕರ ಆರಾಧನೆ (Ancesstral worship) ಯಲ್ಲವೆಂಬುದು ಸ್ಪಷ್ಟವಾಗುತ್ತದೆ. ಶಾಕ್ತೇಯ ಆರಾಧನೆಯ ಪಂಥಕ್ಕೆ ಪ್ರಾಚೀನ ಸಮಾಜದಲ್ಲಿ ಉಗ್ರ ವಿರೋಧ ಏರ್ಪಟ್ಟು ಅದು ನಶಿಸಿಹೋಗುವಂತಾದಾಗ ತನ್ನನ್ನು ತಾನು ರಕ್ಷಿಸಿಕೊಳ್ಳಲು ಈ ಪಂಥ ಹಲವು ಹೊಸ ರೂಪಗಳನ್ನು ಧರಿಸಿ ಮರುಹುಟ್ಟು ಪಡೆದಿರಬಹುದಾದ ಸಾಧ್ಯತೆಯನ್ನೂ ಇಲ್ಲಿ ಊಹಿಸಬಹುದಾಗಿದೆ.

ದ್ರೌಪದಿ ದೇವಿಯ ಕರಗದ ಆರಾಧಕರಾದ ತಿಗಳರು ಮಾತೃದೇವತಾ ಸಂಪ್ರದಾಯದವರು. ಅವರ ದೇವಸ್ಥಾನಗಳಿಗೆ ಧರ್ಮರಾಯನ ಗುಡಿ ಎಂಬ ಹೆಸರಿದೆಯಾದರೂ ಇಲ್ಲಿ ಅಗ್ರಪೂಜೆ ಸಲ್ಲುವುದು ಶಕ್ತಿಪೀಠಕ್ಕೆ ಮತ್ತು ಶಕ್ತಿಯ ಅವತಾರವಾದ ದ್ರೌಪದಿಗೆ. ಇವರು ಪೂಜಿಸುವ ಇನ್ನಿತರ ದೇವರುಗಳಲ್ಲಿ ಹೆಚ್ಚಿನ ಪಾಲು ಮಾತೃದೇವತೆಗಳು. ಎಲ್ಲಮ್ಮ, ಗಂಗಮ್ಮ, ಮುತ್ಯಾಲಮ್ಮ, ಮಾರಮ್ಮ, ಮುರಿಗಮ್ಮ ಮುಂತಾದವು. ಕರಗದ ಆರಾಧನೆಯ ಹಿರಿಯನನ್ನು 'ದುರ್ಗಾ ಪೂಜಾರಿ' ಎಂದೇ ಕರೆಯುತ್ತಾರೆ. ವಹ್ನಿ ಕುಲದವರ ಸಾಮಾಜಿಕ ವಿವರಗಳಲ್ಲಿಯೂ ಮಾತೃಪ್ರಧಾನ ಕುಟುಂಬ ಪದ್ಧತಿಯ ಅವಶೇಷಗಳೆನ್ನಬಹುದಾದ ಹಲವು ಸಂಗತಿಗಳು ಗಮನಾರ್ಹವಾಗಿವೆ. ಸ್ತ್ರೀಯರಿಗೆ ಪುರುಷರಷ್ಟೇ ಮನ್ನಣೆಯಿದೆ. ಬಾಲ್ಯವಿವಾಹ ಎಂದೂ ಆ ಸಮಾಜದಲ್ಲಿ ರೂಢಿಯಲ್ಲಿರಲಿಲ್ಲ. ಪ್ರೌಢವಿವಾಹ, ಸ್ವಯಂವರದ ಮೂಲಕ ಬೇಕಾದ ಗಂಡನನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಹಿಂದಿನ ಕಾಲದಲ್ಲಿತ್ತೆಂದು ಹೇಳುತ್ತಾರೆ. ಗಂಡ ಸತ್ತ ಮೇಲೆ ಹೆಣ್ಣಿಗೆ ಪುನರ್ ವಿವಾಹಕ್ಕೆ ಅವಕಾಶವಿತ್ತು. ಈಗೀಗ ಅವರೂ ಪುರುಷ ಪ್ರಧಾನ ಸಾಮಾಜಿಕ ರೀತಿ ನೀತಿಗಳನ್ನು ಅಳವಡಿಸಿಕೊಂಡಿದ್ದಾರೆ. ಹಿಂದೆ ಹೆಣ್ಣಿಗೆ ಆ ಸಮಾಜದಲ್ಲಿದ್ದ ಸ್ಥಾನಮಾನಗಳು ಅವರ ಪ್ರಾಚೀನ ಕುಟುಂಬ ಪದ್ಧತಿಯತ್ತ ತೋರುಗೈಯ್ಯಾಗಿವೆ. ವಹ್ನಿ ಕುಲದವರ ದ್ರೌಪದಿಯ ಆರಾಧನೆಯನ್ನೂ ಇದೇ ಹಿನ್ನೆಲೆಯಿಂದ ಪರಿಶೀಲಿಸಲು ಸಾಧ್ಯವಿದೆ. ಪುರುಷ ಪೂಜಾರಿಯು ಸ್ತ್ರೀ ವೇಷ ತೊಟ್ಟು ಕರಗ ಹೊರುವುದರ ಸಾಂಕೇತಿಕ ಅರ್ಥವೂ ಧ್ವನಿಪೂರ್ಣವಾಗಿರುವಂತಿದೆ. ಪುರುಷ ಪ್ರಧಾನವಾಗಿ ಪರಿವರ್ತಿತವಾಗಿರುವ ಸಮಾಜವೊಂದು ತನ್ನ ಹಿಂದಿನ ಸ್ತ್ರೀ ಪ್ರಧಾನ ಸಂಸ್ಕೃತಿಯ ನೆನಪುಗಳನ್ನು ಹೀಗೆ ಆಚರಣೆಗಳ ಮೂಲಕ ಮೆಲುಕು ಹಾಕುತ್ತಿರಬಹುದೇ? ವಿಚಾರಿಸಬೇಕು.

## ಅಡಿಟಿಪ್ಪಣಿಗಳು

1. 'ಆರಾಧನೆ' ಎಂಬ ಪದವನ್ನು Festival ಎಂಬ ಅರ್ಥದಲ್ಲಿಯೂ 'ಆಚರಣೆ' ಎಂಬುದನ್ನು Ritual ಎಂಬ ಅರ್ಥದಲ್ಲಿಯೂ ಬಳಸಲಾಗಿದೆ.
2. ಧರ್ಮರಾಯಸ್ವಾಮಿ ದೇವಸ್ಥಾನದ ದುರ್ಗಾ ಪೂಜಾರಿ ಹೇಳುವ ವಿಚಾರಗಳನ್ನು ನಂಬುವುದಾದರೆ ವಹ್ನಿ ಕುಲ ಕ್ಷತ್ರಿಯರು ಬಹು ಹಿಂದಿನ ಕಾಲದಲ್ಲಿ ಉತ್ತರ ಭಾರತದಿಂದ ಬಂದವರು. ವೀರಕುಮಾರ ಸಂಪ್ರದಾಯ, ಅಗಲು ಸೇವೆ ಇಲ್ಲೆಲ್ಲಾ ಧರ್ಮನಿರತ ಯೋಧರ ಒಂದು ಗುಂಪನ್ನೇ ಇದು ಸ್ಪಷ್ಟಪಡಿಸುತ್ತದೆ. ಸಿಖ್ ಜನಾಂಗಕ್ಕೂ ಇವರಿಗೂ ಇರುವುದು ಕೇವಲ ಹೋಲಿಕೆಯಲ್ಲ; ದುರ್ಗಾ ಪೂಜಾರಿಯವರ ಪ್ರಕಾರ ಅವರ ಮೂಲ ಪಂಜಾಬ್ ಪ್ರಾಂತ್ಯ; ಗುರು ಗೋವಿಂದ ಸಿಂಗನೇ ಇವರ ಮೂಲ ಗುರು. ಅವರ ಈ ವಾದಕ್ಕೆ ನಾವು ಆಕ್ಷೇಪಿಸಿ ತಿಗಳರ ಮಾತೃಭಾಷೆ ತಮಿಳಾಗಿರುವುದನ್ನು ಎತ್ತಿ ತೋರಿಸಿದೆವು. ಅವರ ಆಡುಮಾತಿನಲ್ಲಿ ಸ್ವಲ್ಪವೂ ಪಂಜಾಬಿ ಭಾಷೆಯ ಅವಶೇಷಗಳಿಲ್ಲದಿರುವುದನ್ನು ಗಮನಕ್ಕೆ ತಂದಾಗ ಅವರು ನಿರುತ್ಸಾಹದಿಂದ ಸುಮ್ಮನಾದನು. ದುರ್ಗಾ ಪೂಜಾರಿಯವರ ಈ ಹೇಳಿಕೆ ಬಗೆಗೆ ತಿಗಳ ಸಮಾಜದ ಮುಖಂಡರೊಬ್ಬರ ಗಮನ ಸೆಳೆದಾಗ 'ಇದೆಲ್ಲಾ ಅಸಂಬದ್ಧ ತರ್ಕ' ವೆಂದು ಬಿಟ್ಟರು. ಆದರೆ ದುರ್ಗಾ ಪೂಜಾರಿ ಈ ಜನಾಂಗದ ಪುರಾಣ ಪ್ರವಚನಕಾರರೆಂಬುದನ್ನು ಗಮನಿಸಿದರೆ ಅವರ ಮಾತನ್ನು ಸಂಪೂರ್ಣ ತಳ್ಳಿಹಾಕುವುದೂ ಕಷ್ಟಸಾಧ್ಯ ವಿಚಾರ.
3. Henry white head : The village gods of South India.
4. ಬೆಂಗಳೂರಿನ ಅಲಸೂರು ಕರಗದ ಮೆರವಣಿಗೆಯೂ ಹಳೇ ಬೆಂಗಳೂರಿನ ಗಡಿರೇಖೆಗಳನ್ನೆಲ್ಲಾ ಮೆರವಣಿಗೆಯಲ್ಲಿ ಒಳಗೊಳ್ಳುತ್ತದೆಯೆಂಬುದು ಗಮನಾರ್ಹ.
5. Henry white head : The village gods of South India.
6. ಎ.ಕ. 40 (ಸಿ.ಬಿ) – ಚಿಕ್ಕಬಳ್ಳಾಪುರ ತಾಲ್ಲೂಕು.
7. ಎ.ಕ. 199 – ಮುಳಬಾಗಿಲು ತಾಲ್ಲೂಕು.
8. Fazhul Hasan : 'Karaga' : Deccan Herald : April 22, 1956.
9. ನೋಡಿ : ಡೊಳ್ಳಿನ ಪದಗಳು : ಸಂ. ಕೆ.ವಿರೂಪಾಕ್ಷ ಗೌಡ.
10. ಬೆಂಗಳೂರಿನ ಕರಗ – ಎಸ್.ಕೆ. ರಾಮಚಂದ್ರ ರಾವ್.

**ಆಕರ :** ಒಡನಾಟ

* * * * *

# 4. ಹಬ್ಬ ಮತ್ತು ಬಲಿ (ಓದು ಪಠ್ಯ)

– ಬಿ.ಟಿ. ಲಲಿತಾ ನಾಯಕ್

ಊರ ಮುಂದಿನ ಅಮ್ಮನ ಗುಡಿಯಿಂದ ಎಡಬಿಡದೆ ತಮಟೆಯ ಸದ್ದು ಕೇಳಿಬರುತ್ತಿತ್ತು. ಇಡೀ ಹಳ್ಳಿಯೇ ಆ ಸದ್ದಿನಿಂದ ಸ್ಫೂರ್ತಿ ಪಡೆದು ಹಬ್ಬವು ಸಿದ್ಧತೆಯಲ್ಲಿ ತೊಡಗಿದಂತಿತ್ತು. ಬಡವ–ಬಲ್ಲಿದರೆಂಬ ಭೇದ ಭಾವ ಅದೊಂದು ದಿನದ ಮಟ್ಟಿಗೆ ಸಂಪೂರ್ಣವಾಗಿ ತೊಲಗಿ 'ಗರೀಬಿ ಹಠಾವ್' ಎಂಬ ಘೋಷಣೆ ನಿಜದರ್ಥವನ್ನು ಪಡೆದುಕೊಂಡು 'ಗರೀಬರೇ ಇಲ್ಲದ 'ಭಾಗ್ಯವಂತರ ಹಳ್ಳಿ' ಅದಾಗಿತ್ತು!

ಪ್ರತಿಯೊಂದು ಮನೆಯ ಮುಂದೊ ಚೌಕಾಕಾರವಾಗಿ ಸಗಣಿಯಿಂದ ಮಾರಗಲ ಅಂಗಳ ಸಾರಿಸಿ, ರಂಗೋಲಿ ಹಾಕಿ, ಮಣೆ ಇಟ್ಟು ಅದರ ಮೇಲೆ ಹಿಡಿಯಷ್ಟು ಅಕ್ಕಿಕಾಳು ಸುರಿದು ಮಾರಮ್ಮನ ಕಳಶವನ್ನು ಪ್ರತಿಷ್ಠಾಪಿಸಲಾಗಿತ್ತು. ಬೇವಿನಸೊಪ್ಪು, ಕೆಂಪುಕಣಗಿಲೆ, ಕೆಂದಾಸವಾಳ, ಚಂಡುಮಲ್ಲಿಗೆ ಇತ್ಯಾದಿ ಹೂವುಗಳನ್ನು ಮುಡಿದು, ಅರಿಶಿನ – ಕುಂಕುಮ, ಧೂಪ ದೀಪಗಳಿಂದ ಅಲಂಕೃತಳಾದ 'ಅಮ್ಮ'ನ ಮುಂದೆ ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಆಡು, ಮೇಕೆ ಕುರಿ–ಕೋಳಿಗಳನ್ನು ಬಲಿಗೊಟ್ಟು, ಅಮ್ಮನ ಹರಕೆ ಮುಟ್ಟಿಸಿದ ತೃಪ್ತಿಯಿಂದ ಕೃತಕೃತ್ಯರಾಗುತ್ತಿದ್ದರು – ಅಲ್ಲಿಯ ಜನ.

ಸರಿಕರಂತೆ ಸಣ್ಣುವಿನ ಕುಟುಂಬವೂ ಈ ವರ್ಷ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳಲು ಶಕ್ತವಾಗಿತ್ತು. ಅವನಿತ್ತ ಆಮಂತ್ರಣವನ್ನು ಮನ್ನಿಸಿ ಬಂದಿದ್ದ ನೆಂಟರಿಷ್ಟರಿಂದ ಅವನ ಸಣ್ಣ ಸೋಗೆಮನೆ ಒಡಲು ಹರಿಯುವಂತೆ ತುಂಬಿಕೊಂಡು ಗಿಜಿಗುಡುತ್ತಿತ್ತು.

ಮನೆಯೊಡತಿ ಕೆಂಚಿ ಜರಿಕಡ್ಡಿಯೆಂಚಿರುವ ಹೊಸ ಸೀರೆಯುಟ್ಟು ಸರಭರ ಸದ್ದು ಮಾಡುತ್ತ ಮನೆ ತುಂಬ ಓಡಾಡುತ್ತಿದ್ದಳು. ಸಣ್ಣುವೂ ಕೋಳಿ ಕತ್ತಿಯಂತೆ ಬೆಳ್ಳಗೆ ಹೊಳೆಯುತ್ತಿದ್ದ ಪಂಚೆಯುಟ್ಟು ಅದೇ ದಿನ ದರ್ಜಿ ನರಸೋಜಿಯ ಬಳಿ ಹೆಚ್ಚಿನ ಕೂಲಿ ಕೊಟ್ಟು ಅರ್ಜೆಂಟಾಗಿ ಹೊಲಿಸಿ ತಂದ್ದ ಮುಂಗೈ ಮುಚ್ಚುವ ಉದ್ದ ತೋಳಿನ ಅಂಗಿ ತೊಟ್ಟು, ಹೆಗಲ ಮೇಲೆ ಹೊಸ ವಲ್ಲಿ ಹಾಕಿಕೊಂಡು ಸೋಗೆಗರಿಯ ಸಂದಿಯಲ್ಲಿ ಕಳೆದ ವರ್ಷ ಸಿಕ್ಕಿಸಿದ್ದ ಚೂರಿಯನ್ನು ಹುಡುಕಾಡತೊಡಗಿದ್ದ.

ಅವನ ಆರು ಮಂದಿ ಮಕ್ಕಳ ಪೈಕಿ ಮೂವರು ಗಂಡು ಹುಡುಗರಿಗೂ ಕಡೂರು ಸಂತೆಯಿಂದ ಒಂದೇ ಅಳತೆಯ ಕೆಪ್ಪು–ಕಪ್ಪು ಗೀರಿನ ಅಂಗಿಚಡ್ಡಿಗಳನ್ನು ಕೊಂಡು ತಂದಿದ್ದು, ಹುಡುಗರು ಹಿಗ್ಗನಿಂದ ಅವುಗಳನ್ನು ತೊಟ್ಟುಕೊಂಡಿದ್ದರು. ಮೊದಲ ಹುಡುಗನ ಅಂಗಿ ತುಸು ಮಂಡಿ ಕಾಣುವಂತಿದ್ದು ಕುಳಿತಾಗ – ಬಗ್ಗಿದಾಗ ಆಕಸ್ಮಾತ್ತಾಗಿ ಒಮ್ಮೊಮ್ಮೆ ಅವನ ಚಡ್ಡಿಯ ದರ್ಶನವಾಗುತ್ತಿತ್ತು. ಆದರೆ ಅವನಿಗಿಂತ ಸಣ್ಣವನದ್ದು ಮಂಡಿಯಿಂದ ಗೇಣುದ್ದ ಕೆಳಗಾಗಿ ಚಡ್ಡಿ ಹಾಕಿದ್ದರೂ ನಡೆದೀತು ಎನ್ನುವಂತಾಗಿತ್ತು.

ಓರಗೆಯ ಹುಡುಗರೆಲ್ಲಾ ಅಯ್ಯಯ್ಯ! ಇವ್ನಂಗಿ ನೋಡ್ರಲೇ ಏಟುದ್ದ ಐತಿ! ಒಳಗ್ ಚಡ್ಡಿನೇ ಹಾಕ್ಕೊಂಡಿಲ್ಲ ಕಣ್ರಲೇ!" ಎಂದು ನಗೆಯಾಡಿದಾಗ "ಏಯ್, ಇಲ್ನೋಡ್ರಲೆ–ಹೊಸ ಚಡ್ಡಿ ಹಾಕ್ಕೊಂಡಿರೋದು..." ಎಂದು ಹುಡುಗ ತನ್ನ ಅಂಗಿಯನ್ನು ಪೂರಾ ಮೇಲೆತ್ತಿ ತೋರಿಸಿ ಖಾತ್ರಿಪಡಿಸಬೇಕಿತ್ತು.

ಮೂರನೆಯವನದ್ದಂತೂ ಹಿಮ್ಮಡಿಯನ್ನೇ ಮುಟ್ಟುತ್ತಿತ್ತು. ಪಾಪ ಹುಡುಗನಿಗೆ ಅದರಿಂದ ಓಡಾಡುವುದಕ್ಕೂ ತೊಂದರೆಯಾಗುತ್ತಿತ್ತಾದರೂ 'ಹೊಸ ಅಂಗಿ' ಎಂಬ ಮಮಕಾರದಿಂದ ಹಿಂಸೆ ಸಹಿಸಿಕೊಂಡಿತ್ತು.

ಹೆಣ್ಣು ಹುಡುಗಿಯರದ್ದಾದರೂ ಅದೇ ಗತಿ. ಹಿರಿಯ ಹುಡುಗಿ ಪುಟ್ಟಿ ಓಡಾಡುವಾಗ ಗಂಜಿಮಯವಾದ ಆ ಚೀಟಿನ ಲಂಗದ ಅಂಚು ನೆಲ ಗುಡಿಸುವುದನ್ನು ಕಂಡು "ಈಟೊಂದುದ್ದ ಯಾಕಮ್ಮಿ ಹೊಲಸ್ಕ್ಯಂಡೆ" ಎಂದ

ಕಂಡವರೆಲ್ಲ ಕೇಳುತ್ತಿದ್ದರು. "ನೀರಿಗ್ಹಾಕಿದ ಮ್ಯಾಲೆ ಗಿಡ್ಡಾಗ್ತೀ ತಂತ ದರ್ಜಿ ಹೇಳವನಂತೆ ನಮ್ಮಪ್ಪಗೆ" ಎಂದು ಪುಟ್ಟಿ ಹೇಳಿದಾಗ "ಮ್ಯಾಲೆತ್ತಿ ಸಿಗಸ್ಕ, ಅಂಚೆಲ ಕರ್ರಗಾಗತ್ತೈತಿ" ಎಂದು ಸಲಹೆ ಮಾಡುತ್ತಿದ್ದರು. ಆದರೆ ಹೊಸ ಲಂಗವನ್ನು ಹಬ್ಬ ಮುಗಿಯುವವರೆಗಾದರೂ ಸ್ವೇಚ್ಛೆಯಾಗಿ ಹಾರಾಡಲು ಬಿಡಬೇಕೆಂದು ಬಯಸಿದ್ದ ಪುಟ್ಟಿ ಅದನ್ನು ಮೇಲೆತ್ತಿ ಬಿಗಿಯಲು ಇಷ್ಟಪಡಲಿಲ್ಲ.

ಲಂಗದಲ್ಲಿ ಮುಳುಗಿ ಹೋಗಿದ್ದ ಇನ್ನೊಂದು ಹುಡುಗಿ ಕಾಲು ತೊಡಕಾಗಿ, ಹೆಜ್ಜೆಗೊಮ್ಮೆ ಎಡವಿಬಿದ್ದು ಯಾರಾದರೂ ನೋಡಿದರೆ ಬೋರಾಡಿ ಅತ್ತು. ಯಾರೂ ನೋಡಲಿಲ್ಲವೆಂದು ನಂಬಿಕೆಯಾದರೆ ಮೇಲೆದ್ದು ಲಂಗ ಕೊಡವಿಕೊಂಡು, ಗಳಿಗೆ ಗಳಿಗೆಗೂ ಅದರ ಬಣ್ಣ ಬದಲಾಗುತ್ತಿರುವುದನ್ನು ಕಂಡು ಸೋಜಿಗಪಡುತ್ತಿದ್ದಳು.

ತಾಯಿಯ ಸೊಂಟದಲ್ಲೊ ಅಥವಾ ನೆಂಟರಿಷ್ಟರ ಪೈಕಿ ಯಾರದೇ ಸೊಂಟದಲ್ಲೋ ಅಂಟಿಕೊಂಡಿರುತ್ತಿದ್ದ ಕೊನೆಯ ಹುಡುಗಿಯಂತೂ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಲಂಗಮಯವಾಗಿ ಹೋಗಿತ್ತು.

ತಿಂಗಳಾದರೂ ಎಣ್ಣೆ–ನೀರು ಕಾಣದ ಅವುಗಳ ತಲೆ ಈ ದಿನ ಬಡ್ಡಿ ಸಮೇತವಾಗಿ ಕೊರತೆ ತೀರಿಸಿಕೊಂಡಿದ್ದು, ಅಧಿಕವಾದ ಹೆರಳೆಣ್ಣೆ ಪಚ ಗರಿಯುತ್ತ ಅವುಗಳ ಹಣೆ, ಕೆನ್ನೆ, ಕಿವಿಗುಂಟ ಧಾರವಾಹಿಯಾಗಿ ಇಳಿಯತೊಡಗಿತ್ತು.

ಪ್ರತಿದಿನವೂ ತುಣುಕು ರೊಟ್ಟಿಗಾಗಿ ಬಾಯಿ ಬಾಯಿ ಬಿಡಬೇಕಾಗಿದ್ದ ಅವುಗಳಿಗೆ ಇಂದು ಅಜೀರ್ಣವಾಗುವಷ್ಟು ತಿನಿಸು, ಹಬ್ಬಕ್ಕೆ ಬಂದಿದ್ದ ನೆಂಟರಿಷ್ಟರು ತಂದಿದ್ದ ಕಳ್ಳೇಪುರಿ, ಚಕ್ಕುಲಿ, ಪಕೋಡ, ಬತ್ತಾಸು ಮುಂತಾದುವೆಲ್ಲ ಜೇಬನ್ನು ತುಂಬಿದ್ದು ಅಲ್ಲದೆ ಮಸಾಲೆ ಅರೆಯುತ್ತಿದ್ದ ಚೆಗವ್ವನಿಂದ ಅಂಗೈ ಅಗಲದ ತೆಂಗಿನಕಾಯಿ ಚೂರು ದಕ್ಕಿತ್ತು.

'ಅಮ್ಮಿಗ್ ಮರೆ ಹೊಯ್ದಾರ್ ನೋಡ್ಹೋಗ್ರ ನೀವೂ ಕೈ : ಮುಕ್ಕೋ ನಡೀರಿ" ಎಂದು ಸಣ್ಣುವಿನ ಅಕ್ಕ–ಮಾದೇವಕ್ಕ ಮಕ್ಕಳ ಹಿಂಡನ್ನು ಹೊರಗಟ್ಟಿದಾಗ ಅವು ಕುತೂಹಲದಿಂದ ಹಟ್ಟಿಗೆ ಓಡಿ ಬಂದವು. ಕಳಶದಲ್ಲಿ ಪೂಜಿಸಿದ್ದ ಅಮ್ಮನ ಎದುರಿಗೆ ಸಣ್ಣುವಿನ ಸಂಬಂಧಿ–ಕರ್ರಂಗ ಟಗರಿನ ಹಿಂಗಾಲುಗಳನ್ನು ಹಿಡಿದುಕೊಂಡು ನಿಲ್ಲಿಸಿಕೊಂಡಿದ್ದ. ಕೆಂಚಿಯ ತಮ್ಮ–ಗೋಯಿಂದ ಮಚ್ಚು ಹಿಡಿದು ಅದರ ವಧೆಗಾಗಿ ಸಿದ್ಧನಾಗಿದ್ದ. ಕೆಂಪ, ಬಸಜ್ಜಿ, ಜುಟ್ಟಿಮ್ಮ ಮುಂತಾದವರೆಲ್ಲ ಪ್ರೇಕ್ಷಕರಾಗಿದ್ದರು.

ಸಣ್ಣು ಅಮ್ಮನಿಗೆ ಮಂಗಳಾರತಿ ಮಾಡಿ ತೀರ್ಥವನ್ನು ಟಗರಿನ ಮೈಮೇಲೆ ಪ್ರೋಕ್ಷಿಸಿ ಹೂವು–ಕುಂಕುಮ ಏರಿಸಿದ. ಮೈಮೆಲೆ ತಣ್ಣನೆಯ ನೀರು ಬಿದ್ದೊಡನೆ ಟಗರು ಒಮ್ಮೆ ಬಲವಾಗಿ ಮೈಕೊಡವಿತು. ಅದನ್ನೇ ಕಾಯುತ್ತಿದ್ದ ಬಸಜ್ಜ "ಹೂಂ, ಅಮ್ಮ ಅಪ್ಣೆ ಕೊಟ್ಲು: ಹಾಕೋ ಗೋಯಿಂದ" ಎಂದು ಸಲಹೆ ಮಾಡಿದಾಗ, ಅವನು ದೇಹದ ಶಕ್ತಿಯನ್ನೆಲ್ಲ ಕೈಗಳಲ್ಲಿ ಕೇಂದ್ರೀಕರಿಸಿ ಬಲವಾಗಿ ಮಚ್ಚು ಬೀಸಿದ. ಬಲಿಪಶುವಿನ ರುಂಡ ಕಚಕ್ಕನೆ ಕತ್ತರಿಸಿ ನೆಲಕ್ಕೆದ್ದೊಡನೆ ಚಲ್ಲನೆ ಚಿಮ್ಮಿದ ರಕ್ತವನ್ನು ಶಾಂಬಾಣದಲ್ಲಿ ಶೇಖರಿಸಲಾಯಿತು. ಕೆಲವು ನಿಮಿಷಗಳ ಕಾಲ ವಿಲಿ ವಿಲಿ ಒದ್ದಾಡಿದ ಮುಂಡ ಕೊನೆಗೊಮ್ಮೆ ಸ್ತಬ್ಧವಾಯಿತು.

ಅಮ್ಮನ ಮುಂದಿರಿಸಿದ್ದ ರುಂಡದಿಂದ ನಿಧಾನವಾಗಿ ಹನಿಯುತ್ತಿದ್ದ ರಕ್ತ ನೆಲದ ಮೇಲೆ ಮಡುಗಟ್ಟಿತ್ತು. ಅದರೊಟ್ಟಿಗೆ ಚಲ್ಲಾಡಿದ ಕುಂಕುಮ ಕೆಂಪು ಹೂಗಳ ನಡುವೆ ಭೀಕರವಾಗಿ ವಿರಾಜಿಸುತ್ತಿದ್ದ 'ಅಮ್ಮ' ನನ್ನು ಮಕ್ಕಳೆಲ್ಲ ಭೀತಿ ತುಂಬಿದ ಕಂಗಳಿಂದ ನೋಡುತ್ತ ಹಿರಿಯರ ಆಣತಿಯಂತೆ ಕೈಜೋಡಿಸಿದವು.

"ನಮ್ಮವ್ವೇ....ತಾಯಿ.....ವರ್ಸಾ ವರ್ಸಾ ಹಿಂಗೇ ಹಬ್ಬ ಮಾಡಿ ನಿನ್ನ ಪರ್ಸೆ ಮುಟ್ಸೊ ಅಂಥ ಯೋಕ್ತೆ ಕೊಡವ್ವ! ನಮ್ಮ ಬಡತಾನ ಬಯಲು ಮಾಡವ್ವ!" ಎಂದು ಬೇಡಿಕೊಳ್ಳುತ್ತ ಸಣ್ಣು–ಕೆಂಚಿ ಅಮ್ಮನ ಮುಂದೆ ಅಡ್ಡ ಉದ್ದ ಬಿದ್ದರು.

ಮುಂದಿನ ಕೆಲಸ ಮಿಂಚಿನ ವೇಗದಲ್ಲಿ ಜರುಗಿತು. ಗಂಡಸರ ಪಳಗಿದ ಕೈಗಳು ಚೂರಿ ಹಿಡಿದು ಚಕಚಕನೆ ಮಾಂಸವನ್ನು ಕೊಯ್ದು ರಾಶಿ ಹಾಕಿದವು. ಒಳಗಡೆ ಹೆಂಗಸರೂ ಅಷ್ಟೇ ಚುರುಕಿನಿಂದ ಮೆಣಸಿನಕಾಯಿ ಹುರಿಯುವುದು–ಕುಟ್ಟುವುದು, ಮಸಾಲೆ ಅರೆಯುವುದು ಇತ್ಯಾದಿ ಅಡುಗೆ ತಯಾರಿ ನಡೆಸಿದ್ದರು.

ಅಡುಗೆ ಮುಗಿದೊಡನೆ 'ಗುಡಿಯ ಅಮ್ಮ' ನಿಗೂ ನೈವೇದ್ಯ ತೋರಿಸಿಕೊಂಡು ಬಂದದ್ದಾಯಿತು. ಪದ್ಧತಿಯಂತೆ ಗಂಡಸರು ಮೊದಲ ಪಂಕ್ತಿಗೆ ಊಟಕ್ಕೆ ಕುಳಿತಾಗ ಅವರೊಡನೆ ಮಕ್ಕಳೂ ಸೇರಿಕೊಂಡವು. ಒಂದೊಂದು ಗಂಗಳದಲ್ಲಿ ಇಬ್ಬರು – ಮೂವರಂತೆ ಒಟ್ಟೊಟ್ಟಿಗೆ ಊಟ ಸಾಗಿತು.

ಆಗಲೆ ಸಾಕಷ್ಟು ಸರಾಯಿ ಕುಡಿದು ಮತ್ತನಾಗಿದ್ದ ಸಣ್ಣ–ತಾನು ಉಣ್ಣುವುದಕ್ಕಿಂತಲೂ ಹೆಚ್ಚಾಗಿ ಜೊತೆಯಲ್ಲಿ ಊಟಕ್ಕೆ ಕುಳಿತವರನ್ನು ತೊದಲು ನುಡಿಯಿಂದ ಉಪಚರಿಸತೊಡಗಿದ್ದ – ಉಣ್ರೆ, ನೀಡಿಸ್ಕಂಡು ಹೊಟ್ಟೆ ತುಂಬ ಉಣ್ರೆ, ನೀವೇನು ನನ್ನಮನಿಗೆ ಹಗಲೆಲ್ಲಾ ಬರೋದಿಲ್ಲ. ವರ್ಷಕ್ಕೊಂದಪ ಕರದ್ರೆ ಬರೋರು.....ಇಲ್ದಿದ್ರೆ ಯಾವಳು ಇಲ್ಲ...... ಏನೋ ಈ ವರ್ಷ ಅಮ್ಮನದಯ ನನ್ನ ಮ್ಯಾಲಿತ್ತು.... ಸಾವ್ಕಾರ್ರು ದೊಡ್ಡ ಮನಸ್ ಮಾಡಿದ್ರು ಅದಕ್ಕೇ ನಾನು ನಾಲ್ವರಂಗೆ ಆ ಮಾತಾಯಿ ಹರ್ಕೆ ತೀರ್ಸಿ ಪಾವ್ನ ಆಗಿವ್ನಿ!....."

"ನಿಜಕಣಪ್ಪ. ಆ ನಮ್ಮವ್ವನ ದಯ ನಿನಮ್ಯಾಲ್ ನಿಲ್ದೆಹೋಗಿದ್ರೆ ಈಟೆಲ್ಲಾ ಸಂಭರ್ಮ ಮಾಡಾಕ್ ನಿನ್ನ ಕೈಯಿಂದಾಗೋದಾ?" ಎಂದು ಬಸಜ್ಜ ದನಿಗೂಡಿಸಿದಾಗ "ಹಾಂ, ಹಂಗ್ಹೇಳು ನಮ್ಮಪ್ನೆ, ತಾಯಿ ದಯ ಇಲ್ದಿದ್ರೆ ನನ್ನಂಥ ನರಮನ್ಸನ್ ಕೈಯಾಗ್ ಏನಾದಾತು!" ಎಂದು ಸಣ್ಣು ಶೀಶೆಯಿಂದ ಉದ್ದನೆಯ ಅಲ್ಯೂಮಿನಿಯಂ ಲೋಟಕ್ಕೆ ಮದ್ಯವನ್ನು ಬಗ್ಗಿಸಿ 'ಯಜ್ಜ, ಕ್ವಾ ಇದ್ನ ಕುಡಿ' ಎಂದು ಬಸಜ್ಜನ ಮುಂದೆ ಹಿಡಿದ.

"ನೀನು ಮೊದ್ಲುತಗ" ಎಂದು ಬಸಜ್ಜ ಔಪಚಾರಿಕವಾಗಿ ನುಡಿದಾಗ "ಅಯ್ಯೋ ಅಯ್ಯೋ! ಎಂತ ಮಾತಾಡಿದ್ಯೋ ನಮ್ಮಪ್ನೇ! ಬೆಟ್ಟದಂತ ಹಿರೇಮನ್ಸ–ನೀನೆದ್ರಿಗ್ ಕುಂತ್ಕಂಡಿರ್ವಾಗ ನಾನ್ ಮೊದ್ಲು ತಗಳದಾ? ಇಗಾ ಯಜ್ಜ, ನಾವೆಲ್ಲರೂ ನಿನ ಮಕ್ಳು. ನೀನೆಂಜಲ್ಮಾಡಿ ಬಿಟ್ಟಿದ್ನ ನಾವ್ ತಗಾಳೋರು!" ಎನ್ನುತ್ತ ಸಣ್ಣು ಲೋಟ ನೀಡಿದ. ಬಸಜ್ಜ ಕಣ್ಣು ಮುಚ್ಚಿ ಗಳಗಳನೆ ಅರ್ಧದಷ್ಟು ಕುಡಿದು, ಲೋಟವನ್ನು ಹಿಂದಿರುಗಿಸಿ, ಮುಖ ಕಿವುಚುತ್ತ ಗಂಗಳದಿಂದ ಮಾಂಸದ ಚೂರನ್ನೆತ್ತಿ ನೆಂಜಿಕೊಂಡ.

ಬಸಜ್ಜನ 'ಎಂಜಲು" ಸೇವಿಸಿದ ನಂತರ ಸಣ್ಣು ಎಲ್ಲರಿಗೂ ಮತ್ತೊಂದು ಸುತ್ತ ಕುಡಿಯಲು ಹಾಕಿ "ಏ ಕೆಂಚಿ, ಇನ್ನೊಂದೆಲ್ಡೆಲ್ಡ್ ಸೌಟು ಬಾಡ್ ತಂದ್ಹಾಕಮ್ಮಿ ಇಲ್ಲಿ" ಎಂದು ಹೆಂಡತಿಗೆ ಆಜ್ಞಾಪಿಸಿದ. ಕೆಂಚಿ ಬೆಳಗಿನಿಂದ ಒಂದೇ ಸಮನೆ ಒಲೆಯ ಮುಂದೆ ಕುದಿದು, ಬೆವರಿನಿಂದ ತೋಯ್ದು ತೊಪ್ಪಡಿಯಾಗಿದ್ದರೂ ಬೇಸರಿಸದೆ ಅತ್ಯುತ್ಸಾಹದಿಂದ ಕೈಬಟ್ಟಲ ತುಂಬ ಬಾಡನ್ನು ತಂದು ಎಲ್ಲರ ಗಂಗಳಕ್ಕೆ ಬಡಿಸತೊಡಗಿದಳು. ಆಗಲೇ ಹೊಟ್ಟೆ ಬಿರಿ ಉಂಡಿದ್ದ ಕೆಲವರು "ಯಕ್ಕ ಯಕ್ಕ, ಬ್ಯಾಡ್ಕಣಕ್ಕ" ನಿನ್ಕಾಲಿಗ್ ಬಿದ್ದೇನು ನೀಡಬ್ಯಾಡ ಕಣಕ್ಕ" ಎಂದು ಗಂಗಳಕ್ಕೆ ಅಡ್ಡಗೈ ಇಕ್ಕಿದಾಗ "ಪಂಕ್ತಿಯಾಗ್ ಪರಪಂಚ ಮಾಡಿದಂಗಾಗತೈತೆ. ನೀಡಿಸ್ಕಳ್ರಪ್ಪ ಸುಮ್ನೆ.....ನೀವೇನು ಉಣಬಾರದಷ್ಟು ಎಂದು ಸಣ್ಣು ಒತ್ತಾಯ ಮಾಡೇ ಮಾಡಿದ. ಹೆಂಗಸರು ಊಟಕ್ಕೆ ಕುಳಿತಾಗಲೂ ಅವನು ಅವರ ಹತ್ತಿರವೇ ಕುಳಿತು ಉಪಚರಿಸಿದ.

ಮರುದಿನ ಊರಮ್ಮನ ಉತ್ಸವ. ಸಿಂಗರಿಸಿದ ರಥದಲ್ಲಿ ಅಮ್ಮನ ಮೂರ್ತಿಯನ್ನಿರಿಸಿದ ಮೆರವಣಿಗೆ ಹೊರಡಿಸಲಾಗಿತ್ತು. ತಮಟೆ, ಒಲಗ, ಡೋಲು ಮುಂತಾದ ವಾದ್ಯಗಳ ಹಿನ್ನೆಲೆಯಲ್ಲಿ ಕೀಲುಕುದುರೆ ನರ್ತನ ನಡೆದಿತ್ತು. ಜೊತೆಗೆ ಮುಖವಾಡಧಾರಿ ಚೋಮದೇವರ ಕುಣಿತ, ಹಿರಿಕಿರಿಯರೆಲ್ಲ ರೆಪ್ಪೆಗೆ ರೆಪ್ಪೆ ಹಚ್ಚದಂತೆ ರಾತ್ರಿಯೆಲ್ಲಾ 'ಉಚ್ಚಯ್ಯ' ದ ವೈಭವವನ್ನು ನೋಡಿ ತಣಿದರು. ಓಣಿಗೆರಡರಂತೆ ತೆರೆದಿದ್ದ ಅಂಗಡಿಗಳಿಂದ ಹಿರಿಯರು ಎಲಡಿಕೆ, ತಂಬಾಕು ಬೀಡಿ, ಸಿಗರೇಟಗಳನ್ನು ಕೊಂಡು ತಲಬು ತೀರಿಸಿಕೊಂಡರೆ, ಸಿಹಿತಿಂಡಿ ಖಾದ್ಯಗಳನ್ನು ಮಕ್ಕಳು ಮನಸಾರೆ ಮೆದ್ದವು. ಹಳ್ಳಿಯ ಉತ್ಸಾಹಿ ತರುಣರು ಅಭಿನಯಿಸಿದ 'ಶ್ರೀಕೃಷ್ಣಪಾರಿಜಾತ' ನಾಟಕ ಹಬ್ಬಕ್ಕೆ ವಿಶೇಷ ಮೆರುಗನ್ನು ತಂದುಕೊಟ್ಟಿತು.

ಹಬ್ಬದ ಮರುದಿನ ಉಳಿದಿದ್ದ ತಂಗಳು–ಪಂಗಳು ತಿನಿಸನ್ನು ಮುಗಿಸಿ ಸಣ್ಣುವಿನ ನೆಂಟರಿಷ್ಟರು ತಂತಮ್ಮ ಊರುಗಳಿಗೆ ಹಿಂದಿರುಗಿದರು. ಮಾದೇವಕ್ಕೆ ಹೋಗುವಾಗ ಸಣ್ಣುವಿನ ಮಕ್ಕಳ ಕೈಗೆಲ್ಲಾ ತಲಾ ಐದೈದು ಪೈಸೆ ಇಕ್ಕಿ "ಮುಂದ್ಲ ಹುಣ್ಣಿವಿಗೆ ನಮ್ಮೂರಾಗ್ ಮಾದೆಪ್ಪನ ಜಾತ್ರೆ ನಡೀತೈತೆ. ಮನೆಗೊಂದೊಂದ್ ಮರೆ ಹೊಯ್ತೀವಿ, ಆಗ ಓಸು ಜನ ಬರ್ರಿ" ಎಂದು ತಾಕೀತು ಮಾಡಿ ಹೋದಳು.

• • • •

ಸಣ್ಣ ತಂಗಳುಂಡು ಚಾಪೆಯ ಮೇಲೆ ಅಡ್ಡಾಗಿದ್ದ. ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದರಿಂದ ಕಣ್ಣೆಳೆದುಕೊಂಡು ಬರುತ್ತಿದ್ದವು. ಒಲೆ ಮುಂದ್ ಒಂದ್ಚೆಕ್ಕೆ ಕಟ್ಗೆ ಕಂಡೇನಂದ್ರೆ ಇಲ್ಲ ಮನಿಕ್ಕಂಬಿಟ್ಯಲ್ಲ..... ನಾಳೆ ಗಂಜಿ ಕಾಸಾಕೇನ್ಮಾಡ್ಲೀ? ಎದ್ದೇಳು. ನಾನೊಬ್ಬೇ ಹೋಗಾನೇನು ಗುಡ್ಡಕ್ಕೆ" ಕೆಂಚಿ ಬಾಯಿ ಮಾಡಿದಾಗ ಸಣ್ಣು ಫಕ್ಕನೆ ಕಣ್ಣರಳಿಸಿ ಅಚ್ಚರಿಯಿಂದ ಕೇಳಿದ. "ಏನಂದೆ? ಹತ್ತಿಪ್ಪತ್ ಹೊರೆ ಕೂಡ್ಹಾಕಿದ್ದ ಕಟ್ಗೆ ಆಗ್ಲೆ ಓಸು ಉರ್ದೋದ್ವಾ?"

"ಬಂದಿದ್ದ ದಂಡಿಗೆಲ್ಲಾ ಬೇಸ್ಹಾಕ್ಲಿಲ್ವಾ – ನಾಕಾನ್ಸಾಗ್ಗಿನ? ಇನ್ನೆಲ್ಲಿಂದುಳ್ವಾವು? ಬರೇ ಕಟ್ಗೆ ಅಷ್ಟೇ ಅಲ್ಲ. ಗೆಡ್ಗೆ ತಳ್ದಾಗ್ ಒಂದ್ಕಾಳಕ್ಕಿ, ಒಂದ್ಕಾಳ್ರಾಗಿ ನೋಡೇನಂದ್ರೆ ಉಳ್ದಿಲ್ಲ.....ಎಲ್ಲಾ ತೊಳದ ಮುತ್ತು....." ಕೆಂಚಿ ತುಸು ಖಾರವಾಗಿಯೆ ನುಡಿದಾಗ "ಹೋಗ್ಲಿ ಬಿಡು. ಅಮ್ಮನ ಸೇವೆ ಮಾಡಿ ಉಣ್ಣಾಕಿಕ್ಕಿ ಹಿಂಗೆಲ್ಲ ಜರದಾಡಬಾರ್ದು. ಮಾಡಿದ ಪುಣ್ಯ ಮೈ ಹತ್ತದಿಲ್ಲ ಬಗಿನಾಗ್ ಇಬ್ರು ಹೋಗಿ ಎಲ್ದೊರೆ ಕಟ್ಕೊಂಬರಾನಂತೆ. ಈಗೆ ತುಸು ಅಡ್ಡಾಗಿ ದಣುವಾರಿಸ್ಕೊ ಬಾ" ಎಂದು ಅವನು ಸಮಾಧಾನ ಹೇಳುತ್ತಿದಂತೆಯೇ, ಸಾಹುಕಾರರ ಮನೆಯಾಳು ಹಿರ್‍ಯಾಗ "ಸಾವ್ಕಾರ್ರು ಕರೀತಾವ್ರೆ ಬಾರೋ ಸಣ್ಣು" ಎಂದು ಕೂಗಿದ.

'ಸಾವ್ಕಾರ್ರು' ಎಂಬ ಶಬ್ದ ಕಿವಿಗೆ ಬಿದ್ದೊಡನೆ ಸಣ್ಣು ಚಾಪೆಯಿಂದ ಚಟ್ಟನೆ ಎದ್ದು ಕುಳಿತ. ಕೆಂಚಿಯೂ ಭೀತಿಯಿಂದ ಗಂಡನ ಮುಖ ನೋಡಿದಳು. ಹಬ್ಬದ ಗುಂಗಿನಲ್ಲಿ ಮೈಮರೆತಿದ್ದ ಅವರಿಗೆ, ಆದರೆ ಹಿನ್ನೆಲೆಯಲ್ಲಿ ನಡೆಸಿದ್ದ ವ್ಯವಹಾರ ಫಕ್ಕನೆ ನೆನಪಾಯಿತು.....

• • • •

ಊರವರೆಲ್ಲ ಹಬ್ಬವ ತಯಾರಿ ನಡೆಸಿಕೊಳ್ಳತೊಡಗಿದರೂ ಸಣ್ಣು ಯಾವ ಸಿದ್ಧತೆಯೂ ಇಲ್ಲದೆ ಕೈಚೆಲ್ಲಿ ಕುಳಿತುಬಿಟ್ಟಿದ್ದ. ಕಳೆದ ವರ್ಷವೂ ಅವನಿಗೆ ಹೀಗೆ ಆಗಿತ್ತು. ಊಳ್ಳವರೆಲ್ಲ ದೊಡ್ಡ ದೊಡ್ಡ ಬಲಿಯನ್ನು ಅರ್ಪಿಸಿ ಅಮ್ಮನ 'ಕೃಪಾಕಟಾಕ್ಷ'ಕ್ಕೆ ಪಾತ್ರರಾಗಿದ್ದರು. ಸಣ್ಣು ಹಾಗೂ ಅವನಂತಹ ಒಡಕುಟುಂಬಗಳು ಮಾತ್ರ ಕೇವಲ ಒಂದೊಂದು ಕೋಳಿಯಿಂದಲೇ ಅಮ್ಮನನ್ನು ತೃಪ್ತಿಪಡಿಸಿ, ತಾವು ಮಾತ್ರ ಅಸಂತೃಪ್ತರಾಗಿ ಉಳಿದಿದ್ದರು.

ಆದರೆ ಈ ವರ್ಷ ಅಂಥ ಜುಜುಬಿ ಕೆಲ್ಸ ಮಾಡಬಾರ್ದು. ಮನೆಮಂದಿಗೆಲ್ಲ ಹೊಸಬಟ್ಟೆ ಹೊಲ್ಸಿ, ಅಕ್ಕಿ, ರಾಗಿ, ಉಪ್ಪು, ಮೆಣ್ಸು ಎಲ್ಲಾನ್ನೂ ಧಾರಾಳವಾಗಿ ತಂದು ಹಾಕಿ, ಒಳ್ಳೆ ಮಂಜು ಬೂತಾಳ ಮರಿ ತಂದು ಅಮ್ಮನಿಗೆ ಒಪ್ಸಿ ಬಳಗವನ್ನೆಲ್ಲ ಕರೆದು ಉಣ್ಣಿಸಿ ತಾವೂ ತಿಂದ್ದುಂಡು ಹಬ್ಬ ಆಚರಿಸಬೇಕು ಎಂದು ನಿರ್ಧರಿಸಿದ ಸಣ್ಣು.

ಅಂದುಕೊಂಡಷ್ಟು ಸುಲಭವಾಗಲಿಲ್ಲ ಕೆಲಸ. ಗಂಡ ಹೆಂಡತಿ ಎಷ್ಟೇ ರಟ್ಟೆ ಮುರಿದು ಮುರಿದು ದುಡಿದರೂ ಹೊತ್ತು ಹೊತ್ತಿಗೆ ಎಂಟು ಜನಗಳ ತುತ್ತಿನ ಚೀಲ ತುಂಬಿಸಿಕೊಳ್ಳುವುದೇ ಕಠಿಣವಾಗಿತ್ತು. ಇನ್ನು ಹಬ್ಬ ಮಾಡುವ ಬಗೆ ಹೇಗೆ? ಸಣ್ಣು ಯೋಚಿಸಿ ಯೋಚಿಸಿ ಹಣ್ಣಾದ, ಕೊನೆಗೆ ಕಂಡುಕೊಂಡಿದ್ದು ಒಂದೇ ಬಾರಿ ಊರ ಸಾಹುಕಾರರಾದ ಮಲ್ಲೇಶಪ್ಪನವರಲ್ಲಿ ಕೈಗಡ ಕೇಳುವುದು.

ಮೊದಲ ದಿನ ಅವನು ಸಾಹುಕಾರರನ್ನು ಕಾಣಲು ಹೋದಾಗ 'ಅವರು ಊರ್‍ನಾಗಿಲ್ಲ. ನಾಳೆ ಬರ್ತಾರೆ' ಎಂಬ ಉತ್ತರ ಬಂದಿತ್ತು. ಅವರ ಕಿರಿಯ ಹೆಂಡತಿಯಿಂದ, ಮರುದಿನ ಹೋದಾಗ ಈಗ ಮನಿಕ್ಯಂಡವ್ರೆ ಚಂಜಿ ಕಡೆ ಬಾ' ಎನ್ನಿಸಿಕೊಂಡು ಮರಳಿ ಬಂದುದಾಗಿತ್ತು. ಸಂಜೆ ಹೋದಾಗ' ಕಾಪಿ ಕುಡಿತಾವ್ರೆ. ಬರೋಮಟ ಹಟ್ಟಿಯಾಗ್ ಕುಂತ್ಗ' ಎಂದಾಗ ಒಂದೆರಡು ತಾಸು ಆಕಾಶವನ್ನು ದಿಟ್ಟಿಸುತ್ತ ಹಟ್ಟಿಯಲ್ಲಿ ಕುಳಿತುಕೊಂಡ.

ಸಾಹುಕಾರರು ಹೊರ ಜಗಲಿಗೆ ಬಂದು ದರ್ಶನ ನೀಡಿದಾಗ "ಅಡ್ಡಬಿದ್ದೆ ಧಣಿ" ಎಂದು ದೀರ್ಘದಂಡ ಹಾಕಿದೆ. ಅವರು ಒರಗು ದಿಂಬಿಗೆ ಆತು ಕುಳಿತುಕೊಳ್ಳುತ್ತ "ಏನ್ಲಾ ಬಂದೆ?" ಎಂದು ಮಾಮೂಲು ಪ್ರಶ್ನೆ ಹಾಕಿ ಕೈಗಡ ಕೇಳಾನಂತ ಬಂದೆ...." ಆರಡಿ ದೇಹವನ್ನು ಮೂರಡಿಗೆ ಕುಗ್ಗಿಸಿ ತಲೆ ಕೆರೆದುಕೊಳ್ಳುತ್ತ ನಿವೇದಿಸಿಕೊಂಡ ಸಣ್ಣು.

ಸಾಹುಕಾರರು "ಹೂಂ! ಹೂಂ!" ಎಂದು ಹುಬ್ಬು ಕುಣಿಸಿ "ಇನ್ನೂರು ರೂಪಾಯಿ ಕೈಗಡ ! ಹಿಂದಕ್ಕೆ ಯಾವಾಗ ಕೊಡೋನು?" ಎಂದು ಕೇಳಿದರು.

"ಮುಂದ್ಲೆ ಸುಗ್ಗಿ ಹೊತ್ತಿಗೆ ಕೊಟ್ಟಿಡ್ತೀನ್ ಧಣಿ" ಸಣ್ಣು ದೃಢವಾಗಿ ಹೇಳಿದ.

"ಎಲ್ಲಿಂದ್ ತೀರಸ್ತಿಯೋ? ಅಷ್ಟು ಹೊತ್ತಿಗೆ ಬರೆ ಬಡ್ಡಿನಾರ ತೀರ್ಸಾಕಾಗತ್ತೋ ಇಲ್ವೋ ನಿನ್ನಿಂದ. ಅಡವ್ಯಾಗ್ ಹೊಲ ಇಲ್ಲ. ಊರ್ನಾಗ್ ಮನೆ ಇಲ್ಲ. ಇನ್ನೂರ್ರುಪ್ಪಾ ಸಾಲಕೊಟ್ಟು ಮೂರ್ನಾಮ ಹಾಕ್ಕೋ ಅಂತಿಯಾ?" ಸಾಹುಕಾರರು ತಮ್ಮ ಅಭಿಪ್ರಾಯವನ್ನು ಯಾವ ಮುಲಾಜೂ ಇಲ್ಲದೆ ತಮ್ಮದೇ ಧಾಟಿಯಲ್ಲಿ ಅವನ ಮುಂದಿಟ್ಟಾಗ ಸಣ್ಣು ಆಲೋಚನಾಮಗ್ನನಾದ......

ದಿಟ, ತನಗಿರೊ ಆಸ್ತಿ ಅಂದ್ರೆ–ಹೆಂಡ್ತಿ–ಆರು ಮಕ್ಳು.....ಅವೂ ಎಲ್ಲಾ ಸಣ್ಣ ಪುಟ್ಟವು. ಒಂದಾರಾ ಕೈಕೆಳಗ ಬಂದಿಲ್ಲ.....ಹುಲಿ ತಿಂದಾತೆಂದ್ರೆ ಒಂದ್ ಹೈನಿಲ್ಲ. ಇಲಿ ತಿಂದಾತಂದ್ರೆ ಹಿಡಿ ಕಾಳ್ಕಡ್ಡಿ ಇಲ್ಲ ತನ್ನ ಗುಡ್ಲಾಗೆ.... "ನೀ ವಂಬೋದ್ ದಿಟ ಧಣಿ. ಆದ್ರುವೆ ನನ್ನ ಕೈಕಾಲು ಗಟ್ಟಿ ಮುಟ್ಟಾಗವೆ–ನಿಮ್ಮ ಪುಣ್ಯದಿಂದ....ಕೂಲಿ ನಾಲಿ ಮಾಡಿ ಗಳಿಸಿ ನಿಮ್ಮ ಸಾಲ ತೀರಿಸಿಬಿಡ್ತೀನಿ. ಬಡತನ ಮ್ಯಾಲ್‌ರವಷ್ಟು ದಯ ತೋರ್ಸಿ ಧಣಿ ! ಹ್ವಾದ ಸರ್ತಿನ, ಹಿಂಗೇ ದುಡ್ಡಿನ ಮುಗ್ಗಟ್ಟಾಗಿ ಹಬ್ಬಾನೇ ಮಾಡ್ಲಿಲ್ಲ. ಈ ಸರ್ತಿನೊ, ಹಂಗೇ ಅಂದ್ರೆ ಅಮ್ಮ ಕ್ವಾಪ ಮಾಡ್ಕೊಂತಾಳೆ....." ಸಣ್ಣು ದೀನನಾಗಿ ಬೇಡಿಕೊಂಡ.

"ಸಾಧ್ಯ ಇಲ್ವೋ, ಹೆಂಗಾರ ಮಾಡ್ಕೊಹೋಗು....ನೀನು ಕೂಲಿ ನಾಲಿ ಮಾಡಿ ಗಳಿಸೋದು ನಿನ್ನ ಹೆಂಡ್ತಿ–ಮಕ್ಳಿಗ್ ತಿನ್ನಾಕ್ ಸಾಲ್ದು, ಇನ್ನು ನನ್ನ ಸಾಲ ಎತ್ಲಾಗಿಂದ ತೀರಸ್ತೀಯ?" ಸಾಹುಕಾರ್ರು ಕಡ್ಡಿ ತುಂಡಾಗುವಂತೆ ಹೇಳಿ ಬೇರೆ ವ್ಯವಹಾರದ ಕಡೆ ಗಮನ ಕೊಡಲುದ್ಯುಕ್ತರಾದಾಗ ಸಣ್ಣು ಹತಾಶನಾದ. "ಒಬ್ಬರ ಗಂಟು ಮುಣುಗಿಸೊ ಅಂಥ ಬಡ್ಡಿ ಮಗನಲ್ಲ ಧಣಿ ನಾನು! ನನ ಮಾತಿನಮ್ಯಾಲ್ ನಿಮಗಷ್ಟು ನಂಬಿಕೆ ಇಲ್ದ ಮ್ಯಾಲೆ ಮತ್ತೇನ್ಮಾಡಾಕಾಗ್ತದೆ ಬಿಡಿ ಹೋಗ್ತೀನಿ" ಎನ್ನುತ್ತ ಹೊರಟು ನಿಂತ ಸಾಹುಕಾರರು ಮನದಲ್ಲೇ ಏನನ್ನೋ ನಿರ್ಧರಿಸಿದವರಂತೆ – "ಅಲ್ದಿದ್ರೆ ಹಿಂಗ್ ಮಾಡೋ ಸಣ್ಣು" ಎಂದಾಗ, ಮುಳುಗುತ್ತಿರುವವನ ಕೈಗೆ ಮರದ ತುಂಡು ಸಿಕ್ಕಿದಂತಾಗಿ "ಏನ್ ಧಣಿ" ಎಂದು ಗೆಲುವಿನಿಂದ ಕೇಳಿದ.

"ನೋಡು ಇನ್ನೂರು ರೂಪ್ಯಾ ಅಲ್ಲದಿದ್ರೆ ಇನ್ನು ಐವತ್ತು ಹೆಚ್ಚಿಗೆ, ತಗಂಡ್ಹೋಗಿ ಹಬ್ಬ ಮಾಡು ಯಾಕೆಂದ್ರೆ ಈಗಿನ ಕಾಲ್ದಾಗ್ ನೂರ್ ನೂರ್ ರೂಪ್ಯಾ ಅಂದ್ರೆ ಹತ್ತು ರೂಪ್ಯಾಗ್‌ಸಮ ಆಗ್ತೈತೆ ಸುಮಾರಾದೊಂದು ಮರಿ ತಗೋಬೇಕೆಂದ್ರೂ ನೂರು ರೂಪ್ಯಾ ಮ್ಯಾಲೇ ಬೇಕಾಗತೈತೆ. ಇನ್ನು ಅರಿವೆ–ಅಚ್ಚಡಿಕಾಳು–ಕಡ್ಡಿಗೆಲ್ಲ ಮತ್ತ್ಯಾರ್ ತಾವ ಕೇಳಾಕ್ಹೋಗ್ತೀಯಾ?"

ಸಾಹುಕಾರ್ರೆ : ಈ ಮಾತುಗಳನ್ನಾಡುತ್ತಿದ್ದಾರೋ ಅಥವಾ ಊರಮ್ಮವೇನಾದರೂ ಇವರ ಮೈಮೇಲೆ ಬಂದು ಈ ರೀತಿ ನುಡಿಸುತ್ತಿದ್ದಾಳೋ ಎಂಬ ಅನುಮಾನ ಉಂಟಾಗಿ ಸಣ್ಣು ಮೂಕನಾಗಿ ಅವರನ್ನೇ ನೋಡತೊಡಗಿದ.

"ಯಾಕೋ ಬಾಯಿ ಬಿಗ್ಗೊಂಬಿಟ್ಯಲ್ಲ......ನಾನ್ಹೇಳೋದ್ ದಿಟವೋ ಸುಳ್ಳೋ ?" ಅವರು ಎಚ್ಚರಿಸಿದಾಗ ಸಣ್ಣು ಕೃತಜ್ಞತಾ ಭಾವದಿಂದ 'ದಿಟ ಧಣಿ' ಎಂದಷ್ಟೇ ಉಸುರಿದ.

"ನೋಡೋ ಸಣ್ಣು, ನೀನು ಕೂಲಿನಾಲಿ ಮಾಡಿ ತೀರಿಸ್ತೀನಿ ಅನ್ನೊ ಮಾತೆಲ್ಲ ಸುಳ್ಳು. ಅದು ನಿನ್ನ ಕೈಯಿಂದಾಗೋದಿಲ್ಲ. ಈಗ ಇನ್ನುರೈವತ್ತು ರೂಪಾಯಿ ಕೊಡ್ತೀನಿ ತಗೊಂಡ್ಹೋಗು. ಒಂದ್ವರ್ಸ ನನ್ಮನೆಯಾಗಿದ್ದು ಬ್ಯಾಸಾಯ ಗೇದು ತೀರಿಸ್ಬಿಡು.....ದಿನಕ್ಕೆಲ್ಡು ದಪ ಉಣ್ಣಾಕ್ ಇಕ್ಕಿಸ್ತೀನಿ....ಉಟ್ಕೊಳಾಕೆ ಪಳೆ ಪಳೆ ಬಟ್ಟೆ ಕೊಡಿಸ್ತೀನಿ.....ಏನಂತೀಯಾ?"

ಅವರು ಧಾರಾಳತನ ತೋರಿದ್ದರ ಅರ್ಥ ಈಗಾಯಿತು ಸಣ್ಣುವಿಗೆ ಅವನ ಹಣೆಯ ಮೇಲೆ ಚಿಂತೆಯ ಗೆರೆಗಳು ಮೂಡಿದವು. ಇದುವರೆಗೂ ಯಾರ ಹಂಗಿಗೂ ಒಳಗಾಗದೆ ಸ್ವತಂತ್ರವಾಗಿ ದುಡಿದುಂಡು ಹೆಂಡತಿ ಮಕ್ಕಳೊಡನೆ ಬದುಕು ಸಾಗಿಸಿದ್ದವನಿಗೆ ಈಗ ಪರರ ಮನೆಯಲ್ಲಿ ಜೀತದಾಳಾಗಿ ಉಳಿಯಲು ಮನಸ್ಸು ಹಿಂಜರಿಯಿತು. ಆದರೂ ಇದಕ್ಕೊಪ್ಪದಿದ್ದರೆ ಸಾಲ ಸಿಗುವಂತಿಲ್ಲ; ಸಾಲ ದೊರಕದೆ ಹಬ್ಬ ಮಾಡುವಂತಿಲ್ಲ....ಸಣ್ಣು ಇದಕ್ಕೂ ಹೆಚ್ಚಿನ ವಿಚಾರ ಮಾಡುವ ಗೋಜಿಗೆ ಹೋಗದೆ" ವರ್ಸಾ ಕಾಲ ದುಡಿದ್ರೆ ಬರೆ ಎರಡು ನೂರೈವತ್ತು ರೂಪ್ಯಾನೇ ಏನ್ ಧಣಿ! ಇನ್ನೊಂದ್ ಐವತ್ತು ಮಾಡ್ಕೊಳಿ!" ಎಂದು ವಿನಂತಿಸಿಕೊಂಡ.

ಮನುಷ್ಯ ಪರಿಸ್ಥಿತಿಯ ಕೈಗೊಂಬೆಯಾದಾಗ ಹೇಗೆ ವಿವೇಚನಾಶಕ್ತಿ ಕಳೆದುಕೊಳ್ಳುತ್ತಾನೆ ಎಂಬುದನ್ನು ಸಾಹುಕಾರರು ಅನುಭವದಿಂದ ಅರಿತವರಾಗಿದ್ದರು. ಆದರೂ ಬೇಟೆ ಇಷ್ಟು ಸುಲಭದಲ್ಲಿ ದಕ್ಕೀತೆಂದು ಅವರು ನಿರೀಕ್ಷಿಸಿರಲಿಲ್ಲ. ದಿನಕ್ಕೆ ಒಂದೇ ರೂಪಾಯಿ ಲೆಕ್ಕದಲ್ಲಿ ಕೂಲಿ ಕೊಟ್ಟರೂ ತಿಂಗಳಿಗೆ ಮೂವತ್ತು; ವರ್ಷಕ್ಕೆ ಮುನ್ನೂರು ಅರವತ್ತೈದು.....ಅಂತಹುದರಲ್ಲಿ ಮೇಲಿನ ಅರವತ್ತೈದು ಲಾಭವಾಗಿ ಉಳಿದು, ಜೊತೆಗೆ ಇಂತಹ ಗಟ್ಟಿ ಮುಟ್ಟಾದ ಆಳು ಸಿಗುತ್ತಿರುವಾಗ ಬೇಡವನ್ನುವುದುಂಟೇ.....

ಬಹಳ ಹೊತ್ತು ಆಲೋಚಿಸುವಂತೆ ನಟಿಸಿ "ಹೂಂ, ನೀನಿಷ್ಟು ಜುಲ್ಮೆ ಮಾಡಿ ಕೇಳ್ತಿರ್‍ವಾಗ ನಾನು ಆಗೋದೇ ಇಲ್ಲ ಅನ್ನೋದ್ಯಾವ ಧರ್ಮ? ನಂದೇ ಐವತ್ತು ರೂಪಾಯಿ ಲುಕ್ಸಾನಾದ್ರೂ ಚಿಂತಿಲ್ಲ. ಬಡವ–ನೀನೇ ಬದುಕ್ಕೊ ಹೋಗ್ ! ಮುನ್ನೂರ್‍ರುಪ್ಪಾ ಕೊಟ್ಬಿಡ್ತೀನಿ; ಮತ್ತೆನಪ್ಪಾ....." ಎಂದು ಕೇಳಿದರು.

ಸಣ್ಣು ಮತ್ತೇನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ತನ್ನ ವ್ಯಕ್ತಿತ್ವವನ್ನು ಕೇವಲ ಮೂರುನೂರು ರೂಪಾಯಿಗಳಿಗೆ ಆಗಲೆ ಮಾರಿಕೊಂಡಾಗಿತ್ತು. ನಿಧಾನಿಸಿದರೆ ಸಣ್ಣು ಮತ್ತೆ ಮನಸ್ಸು ಬದಲಾಯಿಸಬಹುದೆಂದು ಸಂದೇಹಿಸಿದ ಸಾಹುಕಾರರು ಆ ಕ್ಷಣವೇ ಅವನ ಕೈಗೆ ಹಣವನ್ನಿತ್ತು ಒಪ್ಪಂದದ ಪತ್ರ ಬರೆಯಿಸಿ ಎಡಗೈ ಹೆಬ್ಬೆಟ್ಟಿನ ರುಜು ಒತ್ತಿಸಿಕೊಂಡರು.

ಕೈಗಡ ತರುತ್ತೇನೆಂದು ಹೇಳಿಹೋದ ಗಂಡ ಜೀತದಾಳಿನ ಪಟ್ಟ.

ಕಟ್ಟಿಸಿಕೊಂಡು ಬಂದುದನ್ನು ಕೇಳಿ ಕೆಂಚಿ ಹೌಹಾರಿದಳು. ಅಂಬಲಿನೋ ಗಂಜಿನೋ ಕುಡ್ಕಂಡು ನಮ್ಮನಿಯಾಗ್ ನಾವ್ ತಣ್ಣಗಿದ್ವಲ್ಲ.....ಒಡಲೆ ಹೋಗಿ ವರ್ಸದ ವನವಾಸ ಹೊತ್ಕೊಂಬಂದುಬಿಟ್ಯಲ್ಲ ......" ಎಂದು ಕಣ್ಣೀರಿಟ್ಟಳು.

ಸಣ್ಣುವಿಗೂ ತಾನು ದುಡುಕಿ ಬಲೆಗೆ ಬಿದ್ದನೇನೋ ಎನ್ನಿಸಿತಾದರೂ ಹೆಂಡತಿಯ ಮುಂದೆ ಒಪ್ಪಿಕೊಳ್ಳಲು ಅವನು ಸಿದ್ಧನಿರಲಿಲ್ಲ. "ಬ್ಯಾರೆ ದಾರಿನೇ ಇಲ್ಲ ಕೆಂಚಿ. ಸರಿಕರೆಲ್ಲ ಕ್ವಾಣನಂಥ ಮರಿ ತಂದು ಅಮ್ಮನಿಗ್ ಒಪ್ಪಿಸ್ತಿರೋವಾಗ ನಾವ್ ಸುಮ್ನೆ ಕುಂತ್ರೆ ಆಕಿಗ್ ಸಿಟ್ ಬರೋದಿಲ್ವಾ?" ಎಂದು ಭೀತಿ ವ್ಯಕ್ತಪಡಿಸಿ ತನ್ನ ಕಾರ್ಯವನ್ನು ಸಮರ್ಥಿಸಿಕೊಂಡಾಗ "ಸೈ ಬಿಡು...." ಎಂದು ಕೆಂಚಿ ಮನದ ಚಿಂತೆಯನ್ನು ದೂರ ತಳ್ಳಿ ಹಬ್ಬದ ಗಡಿಬಡಿಯಲ್ಲಿ ಮೈಮರೆತಳು......

• • • •

"ಬಾರಪ್ಪ, ಹೆಂಗಿರೋನ್ನಂಗೇ ಕರ್ಕಂಬಾ ಅಂತ ಆಲ್ಡ್ರ ಮಾಡದ್ರೆ ಸ್ವಾಮೋರು" ಎಂದು ಹಿರ್‍ನಾಗ ಮತ್ತೊಮ್ಮೆ ಕರೆದಾಗ ಸಣ್ಣು ದೈನ್ಯದಿಂದ ಹೆಂಡತಿ ಮಕ್ಕಳತ್ತ ನೋಡಿದ. "ಕರೀತಾವ್ರಂತೆ ಹೋಗು, ಒಲ್ಲೇ ನಂದ್ರೆ ನಡೆದೀತಾ? ನಮ್ಮ ಬೆನ್ನಿಗ್ ಸಿವ ಅವ್ನೆ!" ಒತ್ತರಿಸಿ ಬಂದ ದುಃಖವನ್ನು ತಡೆದುಕೊಳ್ಳಲೆತ್ನಿಸುತ್ತ ಹೇಳಿದಳು ಕೆಂಚಿ.

ಸಣ್ಣು ಹೆಂಡತಿ ಏನನ್ನೋ ಹೇಳಬೇಕೆಂದವನು ಗಂಟಲು ಬಿಗಿದಂತಾಗಿ ಮಾತಾಡಲಾಗದೆ ಮೌನವಾಗಿ ಹೊರಬಂದು ಹಿರ್‍ನಾಗನನ್ನು ಹಿಂಬಾಲಿಸಿದ.

**ಆಕರ :** ಹಬ್ಬ ಮತ್ತು ಬಲಿ – ಬಿ.ಟಿ. ಲಲಿತಾ ನಾಯಕ್

* * * * *

# III. ಅಭಿವೃದ್ಧಿ
## ಆಶಯ

ವರಮಾನ ವರ್ಧನೆಯೊಂದೇ ಮಾನವ ಅಭಿವೃದ್ಧಿಯಾಗಲಾರದು ಎಂಬುದನ್ನು ಪ್ರತಿಪಾದಿಸುತ್ತ ಡಾ. ಟಿ.ಆರ್. ಚಂದ್ರಶೇಖರ ಈ ರೀತಿ ಅಭಿಪ್ರಾಯಪಡುತ್ತಾರೆ. "ವಿಶ್ವದ ಎರಡೂ ಗೋಳಗಳಲ್ಲಿನ ದೇಶಗಳ ಅಭಿವೃದ್ಧಿಗೆ ಸಂಬಂಧಿಸಿದ ಅನುಭವವೆಂದರೆ ವರಮಾನ ವರ್ಧನೆಯು ಅಗತ್ಯ. ಆದರೆ ಅದೇ ಅಭಿವೃದ್ಧಿಯ ಗುರಿಯಲ್ಲವೆಂಬುದಾಗಿದೆ. ಈ ಅಭಿವೃದ್ಧಿ ಮೀಮಾಂಸೆಯಲ್ಲಿ "ಜನರು" ಕಾಣೆಯಾಗಿಬಿಟ್ಟಿದ್ದಾರೆ. ಅತ್ಯಂತ ಕೆಳಮಟ್ಟದಲ್ಲಿ ವರಮಾನವಿದ್ದರೂ ಉನ್ನತವಾದ ಮಾನವ ಅಭಿವೃದ್ಧಿ ಸಾಧಿಸಿಕೊಂಡ ಅನೇಕ ದೇಶಗಳಿವೆ. ಭಾರತದಲ್ಲಿ ಅನೇಕ ರಾಜ್ಯಗಳು ಹಾಗೂ ಜಿಲ್ಲೆಗಳು ಇಂತಹ ಸಾಧನೆಯನ್ನು ಮಾಡಿವೆ. ಇದಕ್ಕೆ ಪ್ರತಿಯಾಗಿ ವರಮಾನದಲ್ಲಿ ಉನ್ನತ ಸ್ಥಾನವನ್ನು ಮಾನವ ಅಭಿವೃದ್ಧಿಯಲ್ಲಿ ಕೆಳಮಟ್ಟವನ್ನು ಸಾಧಿಸಿಕೊಂಡಿರುವ ಉದಾಹರಣೆಗಳೂ ಇವೆ. ಸಾಮಾಜಿಕ ಅಸಾಮಾನತೆಗಳು ತೀವ್ರವಾಗಿರುವ ಹಿನ್ನಲೆಯಲ್ಲಿ ವರ್ಧನೆಯಾದ ವರಮಾನವು ತನ್ನಷ್ಟಕ್ಕೆ ತಾನೆ ಜನರ ಜ್ಞಾನವಾಗಿ, ಜನರ ಆರೋಗ್ಯವಾಗಿ ಮತ್ತು ಸಮೃದ್ಧವಾದ ಬದುಕಾಗಿ ಪರಿವರ್ತನೆಯಾಗುವದು ಸಾಧ್ಯವಿಲ್ಲ. ಅದಕ್ಕಾಗಿ ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆಯಬೇಕಾಗುತ್ತದೆ."

# 1. ವೃಕ್ಷ ಸಂಹಾರ

– ಅಶೋಕ ನರೋಡ

ರಾಷ್ಟ್ರೀಯ ಹೆದ್ದಾರಿ ರೂಪಿಸಲು
ರಸ್ತೆಯೆರಡು ಬದಿಗೆ ಸುವಿಶಾಲ
ಕೊಡೆ ಹಿಡಿದು ನಿಂತಿರುವ
ಸಾವಿರಾರು ಮರಗಳ ಕಟಾವು
ಥೇಟ್ ಕಸಾಯಿಖಾನೆ

ಐನೂರು ವರುಷಗಳ ಪುರಾತನ ಹುಣಶಿ ಮರ
ಮುನ್ನೂರು ವರುಷದ ಮುಂಚಿನ ಬೇವು
ಆರುನೂರು ವರುಷದ ಆಲ–ಅರಳಿ–ಹತ್ತಿ
ಮರಗಳು ಧರೆಗುರುಳಿದವು.
ನೆಲದಾಯಿಯ ಕಣ್ಣೀರು ಪಶುಪಕ್ಷಿಗಳ ಆಕ್ರಂದನ
ಕಂಟ್ರಾಕ್ಟರ್ ನಗೆಯಲ್ಲಿ ಮುಳುಗಿದವು
ಮರ–ಮರ ಮರುಗಿದ ಮರಗಳ ಮೊರೆ ಕೇಳಿಲಿಲ್ಲ.

ಹೆದ್ದಾರಿಗಾಗಿ ವೃಕ್ಷ ಸಂಹಾರವಾಗಿ
ವರುಷವೈದು ಕಳೆದರೂ ಹೆದ್ದಾರಿ ಸುದ್ದಿಯಿಲ್ಲ
ನಿತ್ಯ ಅಪಾಯ ತಪ್ಪಿಲ್ಲ.

ಆಳರಸರು ಬದಲಾದರು ಪಕ್ಷ ಪಲ್ಲಟಗೊಂಡವು
ಪ್ರವಾಹ–ಜಲಪ್ರಳಯ–ಬರಗಾಲ
ಬಂದು ಹೋದವು ಹೋಗಿ ಬಂದವು
ಆರು ಸರಕಾರ ಎಂಟು ಮಂತ್ರಿವರ್ಯರು
ಒಂದಿದ್ದ ಸಕ್ಕರೆ ಕಾರ್ಖಾನೆ ಹತ್ತಾದವು

ರಸ್ತೆ ಮಾತ್ರ ಹಾಗೇ ಶಬರಿಯಂತೆ ಕಾಯುತ್ತಿದೆ.
ತಗ್ಗು ದಿನ್ನೆ ಹೊಂಡಗಳಲ್ಲಿ ಪ್ರಜೆಗಳು ಎಡವಿ ಬೀಳುವಾಗ
ಪ್ರಭುಗಳು ಮೇಜವಾನಿಗಳಲ್ಲಿ
ಮಜಾ ಉಡಾಯಿಸುತ್ತಿದಾರೆ.

**ಆಕರ :** ಸಂಕ್ರಮಣ – ಮೇ, ಜೂನ್ 2013

* * * * *

# 2. ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿ ಪ್ರಗಾಥೆ

– ಡಾ.ಟಿ.ಆರ್. ಚಂದ್ರಶೇಖರ್

ಒಂದು ಮಾತನ್ನು ಮೊದಲೇ ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಇಂದು ನಮ್ಮ ಆರ್ಥಿಕತೆಯು ಸಮೃದ್ಧತೆಯತ್ತ ನಡೆದಿದ್ದರೆ, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉನ್ನತವಾದುದನ್ನು ಸಾಧಿಸಿದ್ದರೆ, ಹಸಿರು ಕ್ರಾಂತಿ, ಕ್ಷೀರಕ್ರಾಂತಿ, ಮಾಹಿತಿ ತಂತ್ರಜ್ಞಾನ ಕ್ರಾಂತಿ ನಡೆದಿದ್ದರೆ ಅದರ ಕೀರ್ತಿಯು 1950–60 ರ ದಶಕಗಳಲ್ಲಿ ನೆಹರೂ ನೇತೃತ್ವದಲ್ಲಿ ಕಟ್ಟಿದ ಬೃಹತ್ ಮೂಲಭೂತ ಸೌಲಭ್ಯಗಳ ಭದ್ರವಾದ ಅಡಿಪಾಯಕ್ಕೆ ಸಲ್ಲಬೇಕು. ಅವು ಉದ್ದಿಮೆಗಳಿರಬಹುದು. ಶೈಕ್ಷಣಿಕ ಸಂಸ್ಥೆಗಳಿರಬಹುದು, ಶಸ್ತ್ರಾಸ್ತ್ರ ಕಾರ್ಖಾನೆಗಳಿರಬಹುದು, ನೀರಾವರಿ ಯೋಜನೆಗಳಿರಬಹುದು, ರಸ್ತೆ–ರೈಲು ಸಾರಿಗೆ ಜಾಲವಿರಬಹುದು – ಹೀಗೆ ನೂರಾರು ರೀತಿಯಲ್ಲಿ ಆರ್ಥಿಕತೆಗೆ ಭದ್ರವಾದ ಅಡಿಪಾಯವನ್ನು ನೆಹರು ಯುಗದಲ್ಲಿ ಸರ್ಕಾರಗಳು ನಿರ್ಮಿಸಿದವು. ಆ ಅಡಿಪಾಯದ ಲಾಭವನ್ನು ಇಂದು ಭಾರತ ಅನುಭವಿಸುತ್ತಿದೆ. ಭಾರತದ 2013 ಕ್ಕೆ ಪೂರ್ವದಲ್ಲಿನ ಅಭಿವೃದ್ಧಿಯ ಅಡಿಪಾಯವು ನೆಹರೂ ಮತ್ತು ಅವರ ಸಮಕಾಲೀನರು ರೂಪಿಸಿದ್ದ ವೈಜ್ಞಾನಿಕ–ವೈಚಾರಿಕ ನೆಲೆಗಟ್ಟಿನ ಮೇಲೆ ನಿಂತಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ಯುಗವು ಜನತೆಯಲ್ಲಿ 'ವೈಜ್ಞಾನಿಕ ಮನೋಭಾವ' ವನ್ನು ತುಂಬಿತ್ತು. ಈ ದಿಶೆಯಲ್ಲಿ ಭಾರತವು ವೈಜ್ಞಾನಿಕ ಕ್ಷೇತ್ರದಲ್ಲಿ ಯಾವುದೇ ರಾಷ್ಟ್ರಕ್ಕೆ ಕಡಿಮೆಯಿಲ್ಲದಂತೆ ಸಾಧನೆ ಮಾಡಿ ಇಂದು ಜಗತ್ತಿನ ರಾಷ್ಟ್ರಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿ ನಿಂತಿದೆ. ಆದರೆ '2013ರ ನಂತರ ಅಭಿವೃದ್ಧಿ ಆರಂಭವಾಗಿದೆ: ಎನ್ನುವವರು ಇಂದು ವಿಜ್ಞಾನದ ಬಗ್ಗೆ ಮೂರ್ಖತನದ ಮಾತುಗಳನ್ನಾಡುತ್ತಿದ್ದಾರೆ. ಸಂಪ್ರದಾಯವನ್ನು ವೈಭವೀಕರಿಸುವ ಈ ಮಂದಿ ಮೌಢ್ಯವನ್ನು ಸಮಾಜದಲ್ಲಿ ಹರಡುತ್ತಿದ್ದಾರೆ.

## 'ನೆಹರೂ ಮಾದರಿ – ನೆಹರೂ ಯುಗ'

ಈ ನುಡಿಗಳನ್ನು ಇಲ್ಲಿ ಜವಹರಲಾಲ್ ನೆಹರೂ ಅವರಿಗೆ ಮಾತ್ರ ಸಂಬಂಧಿಸಿದಂತೆ ಬಳಸುತ್ತಿಲ್ಲ. ಹಾಗೆ ಬಳಸುವುದು ತಪ್ಪು. ಇದನ್ನು ನೆಹರೂ ಅವರಲ್ಲದೆ ಅವರ ಸಮಕಾಲೀನರಾದ ಇತರೇ ಅನೇಕ ರಾಜಕೀಯ ಮುತ್ಸದ್ಧಿಗಳ, ಚಿಂತಕರ, ವಿಜ್ಞಾನಿಗಳ ಒಟ್ಟು ವಿಚಾರ ಪ್ರಣಾಳಿಕೆಗೆ ಸಂಬಂಧಿಸಿದಂತೆ ಬಳಸುವುದು ಅಪೇಕ್ಷಣೀಯ, ಮಹಾತ್ಮ ಗಾಂಧಿ, ರಾಮಮನೋಹರ ಲೋಹಿಯಾ, ಚಕ್ರವರ್ತಿ ರಾಜಗೋಪಾಲಾಚಾರಿ, ಕಾಮರಾಜ್, ಇ.ಎಂ.ಎಸ್. ನಂಬೂದರಿಪಾಡ್, ಪಿ.ಸಿ. ಜೋಷಿ, ಅಜಯ್ ಘೋಷ್, ಮಹಾಲನೋಬಿಸ್, ಸಾರಾಭಾಯ್, ಕಮಲಾದೇವಿ ಚಟ್ಟೋಪಾಧ್ಯಾಯ, ಬಿಜು ಪಟ್ನಾಯಕ್ ಡಾ॥ ಎಸ್. ರಾಧಾಕೃಷ್ಣನ್, ಎಸ್. ನಿಜಲಿಂಗಪ್ಪ, ಮಹಮದ್ ಹಿದಾಯಿತುಲ್ಲಾ, ಎಂ.ಸಿ. ಚಾಗಲ, ಜಯಪ್ರಕಾಶ್ ನಾರಾಯಣ್, ಡಾ॥ ಬಿ.ಆರ್. ಅಂಬೇಡ್ಕರ್, ಇಂದಿರಾಗಾಂಧಿ, ಜಗಜೀವನ್‌ರಾಮ್ ಮುಂತಾದವರ ಒಟ್ಟು ವಿಚಾರ ಪ್ರಣಾಳಿಕೆಯನ್ನು ಇಲ್ಲಿ 'ನೆಹರೂ ಮಾದರಿ' – 'ನೆಹರೂ ಯುಗ' ಎಂದು ಕರೆಯಲಾಗಿದೆ. ಇವರೆಲ್ಲರೂ ನೆಹರೂವಿನಂತೆ 'ಆಧುನಿಕತೆ' ಯ ಹರಿಕಾರರು. ನೆಹರೂ ಯುಗ ಎನ್ನುವುದು ಅವರ ಸಾವಿನಲ್ಲಿ ಕೊನೆಗೊಳ್ಳುವುದಿಲ್ಲ. ಅದು 1950 ರಿಂದ 2013 ರವರೆಗೆ ಹರಡಿಕೊಂಡಿದೆ.

ಯಾರು ಏನೇ ಟೀಕಿಸಲಿ–ಕುಹಕದ ಮಾತಾಡಲಿ–ಅಣಕವಾಡಲಿ ಆಧುನಿಕ ಭಾರತದ ರೂವಾರಿ ನೆಹರು. ಉದ್ದಿಮೆಗಳನ್ನು, ನೀರಾವರಿ ಯೋಜನೆಗಳನ್ನು 'ಆಧುನಿಕ ದೇವಾಲಯಗಳು' ಎಂದು ಅವರು ಬಣ್ಣಿಸಿದ್ದರು. ಇಂದು 2013 ರ ನಂತರ ಆಳುವ ವರ್ಗಕ್ಕೆ ದೇವಾಲಯಗಳ ನಿರ್ಮಾಣ–ಅವುಗಳಿಗೆ ಭೇಟಿ ನೀಡುವುದು, ಗಂಗೆಗೆ ಆರತಿ ಬೆಳಗುವುದು ಅವೇ ಅಭಿವೃದ್ಧಿಯಾಗಿರುವಂತೆ ಕಾಣುತ್ತದೆ. ನೆಹರೂ ಪರ್ವದಲ್ಲಿ ಅಭಿವೃದ್ಧಿಯ ಆರಾಧನೆ ನಡೆದಿದ್ದರೆ ಇಂದು 2013 ರ ನಂತರ ಗುಡಿ ಸಂಸ್ಕೃತಿಯ ವಿಜೃಂಭಣೆಯು ನಡೆದಿದೆ. ಹಾಗಾದರೆ ಭಾರತದಲ್ಲಿ ಅಭಿವೃದ್ಧಿಯು 1950 ರಿಂದ ಆರಂಭವಾಯಿತೋ ಅಥವಾ 2013 ರಿಂದ ಆರಂಭವಾಯಿತೋ? ವಾಸ್ತವವಾಗಿ ಇಂದು ಅಭಿವೃದ್ಧಿಯು

ಮೂಲೆಗುಂಪಾಗಿ ಭಜನೆ, ಯಜ್ಞ–ಯಾಗ, ಕೈ–ಮೈ ಕಸರತ್ತು, ಭೀಷಣ ಭಾಷಣಗಳು, ಕಡಿ–ಬಡಿ, ಕೊಲ್ಲು ಎಂಬ ಘೋಷಣೆಗಳು ತಡೆಬಿಡೆಯಿಲ್ಲದೆ ನಡೆಯುತ್ತಿವೆ. ನೆಹರೂ ಯುಗದಲ್ಲಿ ಸಮಾನತೆ ಆಧಾರದಲ್ಲಿ ಆರ್ಥಿಕತೆಯನ್ನು ಕಟ್ಟುವ ಕೆಲಸ ನಡೆಯಿತು. ಇಂದು ಅಸಮಾನತೆಯು ಬ್ರಹ್ಮರಾಕ್ಷಸನ ರೂಪದಲ್ಲಿ ಬೆಳೆಯುತ್ತಿದೆ.

## ಭಾರತದಲ್ಲಿ ಬ್ರಹ್ಮರಾಕ್ಷಸ ಸ್ವರೂಪಿ ಆರ್ಥಿಕ ಅಸಮಾನತೆ

ಇಂಗ್ಲೆಂಡ್ ಮೂಲದ ಆಕ್ಸ್‌ಫಾಮ್ ಸಂಸ್ಥೆಯ 2018 ರ ಭಾರತದಲ್ಲಿ ಸಂಪತ್ತಿನ ಬೆಳವಣಿಗೆ ವರದಿಯಲ್ಲಿ ಆರ್ಥಿಕ ಅಸಮಾನತೆಯು ಯಾವ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂಬುದನ್ನು ಅನಾವರಣಗೊಳಿಸಲಾಗಿದೆ.

- ಭಾರತದಲ್ಲಿ 2013 ರಲ್ಲಿ ಬಿಲಿಯನ್ನರುಗಳ ಸಂಪತ್ತು: 325.5 ಬಿಲಿಯನ್ ಡಾಲರುಗಳು.
- ಇದು 2018 ರಲ್ಲಿ 440.1 ಬಿಲಿಯನ್ ಡಾಲರುಗಳಿಗೆ ಏರಿಕೆಯಾಗಿದೆ.
- ಬಿಲಿಯನ್ನರುಗಳ ಸಂಪತ್ತಿನ ಬೆಳವಣಿಗೆ 2017–18 ರಲ್ಲಿ ಶೇ.35.21 ಆದರೆ ಭಾರತದ 2017–18 ರ ಆರ್ಥಿಕ ಬೆಳವಣಿಗೆ ಪ್ರಮಾಣ ಶೇ.6.6 (2011–12 ರ ಸ್ಥಿರ ಬೆಲೆಗಳಲ್ಲಿ, ಭಾರತದ ಆರ್ಥಿಕ ಸಮೀಕ್ಷೆ 2017–18). ಭಾರತದ ವರಮಾನಕ್ಕಿಂತ ವೇಗವಾಗಿ ಬಿಲಿಯನ್ನರುಗಳ ವರಮಾನ ಬೆಳೆಯುತ್ತಿದೆ. ಇಂದು ಭಾರತದಲ್ಲಿನ ಬಿಲಿಯನ್ನರುಗಳ ಸಂಖ್ಯೆ 119. ಈ ಸಂಸ್ಥೆಯ ಅಂದಾಜಿನ ಪ್ರಕಾರ:
- ಸಮಾಜದ ಉನ್ನತ ವರಮಾನ ಗುಂಪಿನಲ್ಲಿರುವ ಶೇ.1 ರಷ್ಟು ಜನರು ಸಮಾಜದ ಒಟ್ಟು ಸಂಪತ್ತಿನಲ್ಲಿ ಪಡೆದಿರುವ ಪಾಲು ಶೇ.51.53.
- ವರಮಾನದ ಔನ್ನತ್ಯದಲ್ಲಿರುವ ಶೇ.10 ರಷ್ಟು ಘನ ಶ್ರೀಮಂತರು ಒಟ್ಟು ಸಂಪತ್ತಿನಲ್ಲಿ ಪಡೆದಿರುವ ಪಾಲು ಶೇ.77.4.
- ಸಮಾಜದ ಕೆಳಸ್ತರದಲ್ಲಿನ ಶೇ.60 ರಷ್ಟು ಜನರು ಒಟ್ಟು ಸಂಪತ್ತಿನಲ್ಲಿ ಪಡೆದಿರುವ ಪಾಲು ಶೇ.4.8. ಈ ಬಗೆಯ ಅಸಮಾನತೆ ಕುರಿತಂತೆ ಈ.ಎಫ್. ಶುಮಾಂಕರ್ ಅವರ 'ಅಗರ್ಭ ಶ್ರೀಮಂತರನ್ನು, ಮಿಲಿಯನ್ನರನ್ನು ಸಾಂಸ್ಕೃತಿಕ ನಾಯಕರೆಂದು ಆರಾಧಿಸುವುದರಿಂದ ಸಮಾಜಕ್ಕೆ ಯಾವುದೇ ಲಾಭವಿಲ್ಲ' ಎಂಬ ವಿವೇಕದ ಮಾತು ಇಲ್ಲಿ ಉಲ್ಲೇಖನೀಯ. (ಸ್ಮಾಲ್ ಈಸ್ ಬ್ಯೂಟಿಫುಲ್, ಪು: 237). ಆದರೆ ಇಂದು ಅಳರಸರು 'ಅಂಬಾನಿ–ಅದಾನಿಗಳ ಬಳಿ ಸಂಪತ್ತು ಮಡುಗಟ್ಟಿಕೊಂಡಿದ್ದರೆ ಏನಾಯಿತು' ಎಂಬ ಅಸಮಾನತೆ ಬಗ್ಗೆ ಉಡಾಫೆಯ ಮಾತುಗಳನ್ನಾಡುತ್ತಿದ್ದಾರೆ. **ಮೂಲ :** ಕ್ವಾರ್ಟಜ್ ಇಂಡಿಯ ವೆಬ್, ಅನನ್ಯ ಭಟ್ಟಾಚಾರ್ಯ, ಜನವರಿ 20, 2019.

ಇಂದು ಅಸಮಾನತೆಯನ್ನು ತಡೆಯುವ ಬಗ್ಗೆ ಸರ್ಕಾರಗಳು ಗಮನ ನೀಡುವುದಕ್ಕೆ ಪ್ರತಿಯಾಗಿ ಘನ ಶ್ರೀಮಂತರನ್ನು ವೈಭವೀಕರಿಸಲಾಗುತ್ತಿದೆ. ಇದು ಇಂದಿನ ಅಭಿವೃದ್ಧಿ ಪರ್ವ. ನೆಹರೂ ಯುಗದಲ್ಲಿ ಅಸಮಾನತೆಯು ಅಸಹ್ಯಕರ ಸಂಗತಿಯಾಗಿತ್ತು. ಅದೊಂದು ಪ್ರತಿಗಾಮಿ ಕೇಡು ಎಂದು ಗುರುತಿಸಲಾಗುತ್ತಿತ್ತು. ಆದರೆ ಇಂದು ಅದೇನು ಅಸಹ್ಯಪಡಬೇಕಾದ ಅಥವಾ ಪೀಡೆ ಎಂಬುದಾಗಿ ಭಾವಿಸುವ ಕ್ರಮವಿಲ್ಲ. ಒಟ್ಟಾರೆ ನೆಹರೂ ಯುಗದ ಅಭಿವೃದ್ಧಿ ಸಾಧನೆಯನ್ನು ಯಾವ ಕಾರಣಕ್ಕೂ ಹೀಗಳೆಯುವುದು ಸಾಧ್ಯವಿಲ್ಲ. ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿ ಸಾಧನೆಯು ನಿಜಕ್ಕೂ ಅನುಕರಣೀಯವಾದುದೆಂದು ಜಗತ್ತು ಹಾಡಿ ಹೊಗಳುತ್ತಿದೆ. ಇದನ್ನು ಸಹಿಸಲಾರದ ಮನುವಾದಿ ಪ್ರಣೀತ ಚಿಂತನೆಯನ್ನು ಅಪ್ಪಿಕೊಂಡಿರುವ ಜನರು ಅಂದಿನ ಸಣ್ಣ–ಪುಟ್ಟ ಇತಿ–ಮಿತಿಗಳನ್ನು ಮತ್ತು ಸೋಲುಗಳನ್ನು–ವೈಫಲ್ಯಗಳನ್ನು ಇನ್ನಿಲ್ಲದಂತೆ ಉತ್ಪ್ರೇಕ್ಷಿಸಿ ಅದರ ಸಾಧನೆಯನ್ನು ಹೀಗಳೆಯುತ್ತಿದ್ದಾರೆ.

## ಸ್ವತಂತ್ರ ಭಾರತದ ಅಭಿವೃದ್ಧಿ ಬಗ್ಗೆ ದೀಪಕ್ ನಯ್ಯಾರ್ ಅವರ ಪ್ರಮೇಯ

ಭಾರತದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ದೀಪಕ್ ನಯ್ಯಾರ್ ಅವರು 2006 ರ ತಮ್ಮ 'ಎಕನಾಮಿಕ್ ಗ್ರೋಥ್ ಇನ್ ಇಂಡಿಪೆಂಡೆಂಟ್ ಇಂಡಿಯಾ : ಲಂಬರಿಂಗ್ ಎಲಿಫೆಂಟ್ ಆರ್ ರನ್ನಿಂಗ್ ಟೈಗರ್ ?' ಎಂಬ ಪ್ರಬಂಧದಲ್ಲಿ (ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಏಪ್ರಿಲ್ 15, 2006) 1950–51 ರಿಂದ 2004–05 ರ ಕಾಲಾವಧಿಯಲ್ಲಿ ಭಾರತವು

ಸಾಧಿಸಿಕೊಂಡಿರುವ ಆರ್ಥಿಕ ಬೆಳವಣಿಗೆಯ ಮಾಪನ ಮಾಡಿ ಅನೇಕ ತೀರ್ಮಾನಗಳನ್ನು ರೂಪಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ (1950–51 ರಿಂದ 2004–05) ಜಿಡಿಪಿ (ಒಟ್ಟು ಆಂತರಿಕ ಉತ್ಪನ್ನ) ಬೆಳವಣಿಗೆಯ ಸಾಧನೆಯನ್ನು ಅವರು 1900–01 ರಿಂದ 1946–47 ರಲ್ಲಿನ ಜಿಡಿಪಿ ವಿವರಗಳ ಎದುರಿಗಿಟ್ಟು ತುಲನೆ ಮಾಡಿದ್ದಾರೆ. ಒಂದು ಅಧ್ಯಯನದ ಪ್ರಕಾರ ಭಾರತದ ಜಿಡಿಪಿ ಮತ್ತು ತಲಾ ಜಿಡಿಪಿಯು 1900–01 ರಿಂದ 1946–47 ರ ಅವಧಿಯಲ್ಲಿ (1935–36 ರ ಸ್ಥಿರ ಬೆಲೆಗಳಲ್ಲಿ) ವಾರ್ಷಿಕ ಕ್ರಮವಾಗಿ ಶೇ.1 ಮತ್ತು ಶೇ.0.2 ರ ಪ್ರಮಾಣದಲ್ಲಿ ಬೆಳೆದಿದ್ದರೆ 1950–51 ರಿಂದ ಸ್ಥಿರ ಬೆಲೆಗಳಲ್ಲಿ) ಕ್ರಮವಾಗಿ ಶೇ.4.2 ಮತ್ತು ಶೇ.2 ರ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಿಕೊಂಡಿರುವುದನ್ನು ದಾಖಲಿಸಿದ್ದಾರೆ. ಇದಕ್ಕಿಂತ ಮುಖ್ಯವಾಗಿ ಸ್ವತಂತ್ರ ಭಾರತದ ಆರ್ಥಿಕ ಬೆಳವಣಿಗೆಯು ಪಡೆದುಕೊಂಡ ಆಯಕಟ್ಟಿನ ತಿರುವು ಅನೇಕರು ನಂಬಿಕೊಂಡಿರುವಂತೆ 1991 ಕ್ಕೆ ಪ್ರತಿಯಾಗಿ ಅಂತಹ ತಿರುವು 1980–81 ರಲ್ಲಿ ಸಂಭವಿಸಿದ್ದನ್ನು ಅಂಕಿಅಂಶಗಳ ಆಧಾರದಲ್ಲಿ ನಯ್ಯಾರ್ ಸಿದ್ಧಮಾಡಿದ್ದಾರೆ. ಉದಾಹರಣೆಗೆ 1950–51 ರಿಂದ 1979–80 ರ ಅವಧಿಯಲ್ಲಿ ಜಿಡಿಪಿ ಮತ್ತು ತಲಾ ಜಿಡಿಪಿ ಬೆಳವಣಿಗೆ ಪ್ರಮಾಣ ಕ್ರಮವಾಗಿ ಶೇ.3.5 ಮತ್ತು ಶೇ.1.4ರಷ್ಟಿದ್ದರೆ 1980–81 ರಿಂದ 2004–05 ರ ಅವಧಿಯಲ್ಲಿ ಅವುಗಳ ಬೆಳವಣಿಗೆ ಪ್ರಮಾಣ ಕ್ರಮವಾಗಿ ಶೇ.5.6 ಮತ್ತು ಶೇ.3.6 ಎಂಬ ವಿಶೇಷ ಸಂಗತಿಯನ್ನು ಕಂಡುಹಿಡಿದಿದ್ದಾರೆ. ಅಂದರೆ 1980–81 ರಿಂದ 2004–05 ರ ಅವಧಿಯಲ್ಲಿನ ಜಿಡಿಪಿ ಬೆಳವಣಿಗೆಯು 2013 ರ ನಂತರದ ಅವುಗಳ ಬೆಳವಣಿಗೆ ಪ್ರಮಾಣಕ್ಕೆ ಬಹಳ ಕೆಳಮಟ್ಟದಲ್ಲೇನಿಲ್ಲ. ಭಾರತದ ಜಿಡಿಪಿ ಬೆಳವಣಿಗೆ ಪ್ರಮಾಣ 2014–15 ರಿಂದ 2018–19 ರ ಅವಧಿಯಲ್ಲಿ ಸರಾಸರಿ ವಾರ್ಷಿಕ ಶೇ. 7.5 ಎಂದು ಕೇಂದ್ರ ಸರ್ಕಾರವು ಸಾರುತ್ತಿದೆ (ಕೇಂದ್ರ ಹಣಕಾಸು ಸಚಿವಾಲಯದ ಹಿಂದಿನ ಆರ್ಥಿಕ ಸಲಹೆಗಾರರಾಗಿದ್ದ ಅರವಿಂದ ಸುಬ್ರಮಣಿಯನ್ ಅವರು ಸರ್ಕಾರ ಘೋಷಿಸುತ್ತಿರುವ ಜಿಡಿಪಿ ಪ್ರಮಾಣವು ಉತ್ಪ್ರೇಕ್ಷೆಯಿಂದ ಕೂಡಿದೆಯೆಂದು ಹೇಳಿ ವಾಸ್ತವವಾಗಿ ಭಾರತದ ಜಿಡಿಪಿಯು 2011 ರ ನಂತರ ಶೇ.4.5 ರ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂದಿದ್ದಾರೆ). ಆದ್ದರಿಂದ ಭಾರತದ ಅಭಿವೃದ್ಧಿಯು ನೆಹರೂ ಯುಗದಲ್ಲಿ ಆರಂಭವಾಯಿತೋ ಎನ್ನುವುದಕ್ಕೆ ಉತ್ತರವು ಅನುಮಾನಕ್ಕೆ ಎಡೆಯಿಲ್ಲದಂತೆ ಖಚಿತವಿದೆ.

## ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ನಡುವಿನ ಭಿನ್ನತೆ

ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ವು ಆರ್ಥಿಕತೆಯಲ್ಲಿನ ವರಮಾನದ (ಒಟ್ಟು ಮತ್ತು ತಲಾ) ಬೆಳವಣಿಗೆಯನ್ನು ಮಾಪನ ಮಾಡುವ ಸೂಜಿಯಾಗಿದೆ ಇದನ್ನು ಆರ್ಥಿಕ ಬೆಳವಣಿಗೆ ಎಂದು ಕರೆಯುತ್ತೇವೆ. ಆರ್ಥಿಕ ಅಭಿವೃದ್ಧಿಯು ಇದಕ್ಕಿಂತ ಭಿನ್ನವಾದ ಮತ್ತು ವಿಸ್ತೃತವಾದ ಸೂಚಿಯಾಗಿದೆ. ಇದು ವರಮಾನದ ಬೆಳವಣಿಗೆಯ ಜೊತೆಯಲ್ಲಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ, ಬಡತನದ ಸ್ಥಿತಿ, ಮಹಿಳಾ ಸ್ವಾತಂತ್ರ್ಯ, ನೀರು, ಆಹಾರ, ಪರಿಸರ ಮುಂತಾದವುಗಳಲ್ಲಿನ ಬದಲಾವಣೆಗಳನ್ನು ಒಳಗೊಂಡ ಮಾಪನವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಬೆಳವಣಿಗೆಯನ್ನು ವರಮಾನದ ಏರಿಕೆ (ಜಿಡಿಪಿ) ಮತ್ತು ಅಭಿವೃದ್ಧಿಯನ್ನು ವರಮಾನ ಹಾಗೂ ಇತರೆ ಸಾಮಾಜಿಕ ಬದಲಾವಣೆ ಎಂಬ ವಿಸ್ತೃತ ಅರ್ಥದಲ್ಲಿ ಬಳಸಲಾಗಿದೆ.

ನೆಹರೂ ಯುಗದಲ್ಲಿ ಆರ್ಥಿಕತೆಯು ಯಾವ ವೈಫಲ್ಯವನ್ನೂ ಕಂಡಿಲ್ಲ ಅಥವಾ ಅಲ್ಲಿ ವರಮಾನದ ಅಸಮಾನತೆಯಿರಲಿಲ್ಲ ಅಥವಾ ಸಕಲವೂ ವೈಜ್ಞಾನಿಕವಾಗಿಯೇ ಅಲ್ಲಿ ನಡೆದಿತ್ತು ಎಂದು ಹೇಳುವ ಹುಂಬ ಪ್ರಯತ್ನವನ್ನು ಇಲ್ಲಿ ಮಾಡುತ್ತಿಲ್ಲ. ದೀಪಕ್ ನಯ್ಯಾರ್ ತಮ್ಮ ಪ್ರಬಂಧದಲ್ಲಿ ಚರ್ಚಿಸಿರುವಂತೆ ತಾನು ಸಾಧಿಸಿಕೊಂಡ ಆರ್ಥಿಕ ಬೆಳವಣಿಗೆಯನ್ನು ಅಭಿವೃದ್ಧಿಯನ್ನಾಗಿ, ಅಂದರೆ ಜನರ ಶಿಕ್ಷಣವನ್ನಾಗಿ, ಜನರ ಆರೋಗ್ಯವನ್ನಾಗಿ, ಜನರ ಆಹಾರ ಭದ್ರತೆಯನ್ನಾಗಿ, ವಿತರಣಾ ನ್ಯಾಯವಾಗಿ ಪರಿವರ್ತಿಸಿಕೊಳ್ಳುವಲ್ಲಿ ಸೋತಿದ್ದನ್ನು ಸ್ವಾತಂತ್ರ್ಯೋತ್ತರ ಭಾರತದ ದೊಡ್ಡ ವೈಫಲ್ಯ ಎಂದು ಅವರು ಗುರುತಿಸಿದ್ದಾರೆ. ಅವರು ಸ್ವಾತಂತ್ರ್ಯೋತ್ತರ ಭಾರತವು ನೆಹರೂ ಯುಗದಲ್ಲಿ ಸಾಧಿಸಿಕೊಂಡಿರುವ ಮಹತ್ವದ ಸಾಧನೆಯನ್ನು ದಾಖಲಿಸುವ ಜೊತೆಗೆ ಅಲ್ಲಿನ ಮುಖ್ಯ ವೈಫಲ್ಯವನ್ನು ಗುರುತಿಸಿದ್ದಾರೆ. ಇದೇ ರೀತಿಯಲ್ಲಿ ಪ್ರಸಿದ್ಧ ಇತಿಹಾಸಜ್ಞ ಬಿಪಿನ್ ಚಂದ್ರ ಮತ್ತು ಇತರರು ರಚಿಸಿರುವ 'ಇಂಡಿಯಾ ಆಫ್ಟರ್ ಇಂಡಿಪೆಂಡೆನ್ಸ್; 1947–2000' (ಪೆಂಗ್ವಿನ್ ಬುಕ್ಸ್, 2002) ಕೃತಿಯಲ್ಲಿ ನೆಹರೂ ಯುಗದ ಸಾಧನೆಯನ್ನು ಪಟ್ಟಿಮಾಡುವುದರ ಜೊತೆಜೊತೆಯಲ್ಲಿ ಅಲ್ಲಿನ ಇತಿಮಿತಿಗಳನ್ನು ಪಟ್ಟಿಮಾಡಿದ್ದಾರೆ. ಇಂದು ಹೇಗೆ ನೆಹರೂ ಯುಗವನ್ನು ಆಕರಾಳವಿಕರಾಳ ರೀತಿಯಲ್ಲಿ

ಟೀಕಿಸಲಾಗುತ್ತಿದೆಯೋ ಅದೇ ರೀತಿಯಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಏಕತೆ-ಸಮಗ್ರತೆ ಸ್ವಾತಂತ್ರ್ಯ-ಸೌಹಾರ್ದತೆಗಳನ್ನು ಕಾಯ್ದುಕೊಳ್ಳುವ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿ ಅನೇಕ ವಿದೇಶಿ ವಿದ್ವಾಂಸರು, ಪತ್ರಕರ್ತರು, ರಾಜಕೀಯ ವಿಶ್ಲೇಷಕರು 1950 ರ ಸಂದರ್ಭದಲ್ಲಿ ಟೀಕೆ ಮಾಡಿದ್ದರು. ಭಾರತವು ಪ್ರಜಾಪ್ರಭುತ್ವವಾಗಿ ಉಳಿಯುವುದು ಅನುಮಾನ ಎಂದೂ, ಅದು ತನ್ನ ಏಕತೆ-ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಸಾಧ್ಯವಿಲ್ಲವೆಂದೂ ಅನೇಕರು ಭಾರತದ ಬಗ್ಗೆ ಭವಿಷ್ಯ ನುಡಿದಿದ್ದರು. ಅವೆಲ್ಲವನ್ನೂ ಸುಳ್ಳಾಗಿಸಿ ಭಾರತವು ನೆಹರೂ ಯುಗದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ, ಜಾತ್ಯತೀತತೆ ಮೌಲ್ಯವನ್ನು ಗಟ್ಟಿಗೊಳಿಸುವಲ್ಲಿ, ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

## ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿ ಬಗ್ಗೆ ದೀಪಕ್ ನಯ್ಯಾರ್ ಒಳನೋಟಗಳು

ದೀಪಕ್ ನಯ್ಯಾರ್ ಪ್ರಕಾರ 20ನೆಯ ಶತಮಾನದ ನೂರು ವರ್ಷಗಳನ್ನು ಪರಿಗಣಿಸಿದರೆ (1900–2000) ಭಾರತದ ಜಿಡಿಪಿ ಬೆಳವಣಿಗೆಯ ಅಥವಾ ರಾಚನಿಕ ಬದಲಾವಣೆಯ ದೃಷ್ಟಿಯಿಂದ ಆಯಕಟ್ಟಿನ ತಿರುವು 1950–51 ರಲ್ಲಿ ಉಂಟಾಯಿತು. ಸ್ವಾತಂತ್ರ್ಯೋತ್ತರ ಭಾರತವನ್ನು ಪರಿಗಣಿಸಿದರೆ (1950–2005) ಆಯಕಟ್ಟಿನ ತಿರುವು 1980–81 ರಲ್ಲಿ ಸಂಭವಿಸಿತು (ಅನೇಕರು ನಂಬಿರುವಂತೆ ಇದು 1990–91 ರಲ್ಲಿ ಅಲ್ಲ). ಇವೆರಡು ತಿರುವುಗಳ ನಡುವಿನ ಭಿನ್ನತೆಗಳು ಅತ್ಯಂತ ಮಹತ್ವದ ಸಂಗತಿಗಳಾಗಿವೆ.

1. ಮೊದಲನೆಯ ತಿರುವಿನ ಸಂದರ್ಭದಲ್ಲಿ ಬದಲಾವಣೆಗಳು ಆರ್ಥಿಕ ಮತ್ತು ರಾಜಕೀಯ ಎರಡೂ ಕ್ಷೇತ್ರಗಳನ್ನು ಒಳಗೊಂಡಿದ್ದವು. ಆದರೆ ಎರಡನೆಯ ತಿರುವಿನಲ್ಲಿನ ಬದಲಾವಣೆಯು ಕೇವಲ ಆರ್ಥಿಕವಾದುದಾಗಿತ್ತು. ಮೊದಲನೆಯ ತಿರುವಿನ ಕಾಲಾವಧಿಯಲ್ಲಿ ಒತ್ತು ಸಂಪತ್ತಿನ ಕೇಂದ್ರೀಕರಣವನ್ನು ತಡೆಗಟ್ಟುವುದು ಮತ್ತು ಸಂಪತ್ತಿನ ಮರುವಿತರಣೆಗಳ ಮೇಲಿತ್ತು. ಎರಡನೆಯ ತಿರುವಿನ ಸಂದರ್ಭದಲ್ಲಿ ಇವುಗಳನ್ನು ಪೂರ್ಣವಾಗಿ ಕೈಬಿಡದಿದ್ದರೂ ಅವುಗಳ ಬಗ್ಗೆ ಕೇವಲ ಮೇಲು ಮೇಲಿನ ಔಪಚಾರಿಕ ಒಲವು-ಒತ್ತು ಕಂಡುಬರುತ್ತಿದೆ.
2. ಎರಡನೆಯ ತಿರುವಿನ ಸಂದರ್ಭದಲ್ಲಿ ಬಡತನದ ನಿವಾರಣೆ ಮತ್ತು ಅಸಮಾನತೆಯನ್ನು ತೊಡೆದುಹಾಕುವ ಗುರಿಗಳು ಕಡೆಗಣನೆಗೆ ಒಳಗಾಗದಿದ್ದರೂ ಅವುಗಳನ್ನು ಆರ್ಥಿಕ ಬೆಳವಣಿಗೆಯ ಉಪಉತ್ಪನ್ನವಾಗಿ ಅದರ ಅಂತರ್ಗತ ಸಂಗತಿಯನ್ನಾಗಿ ಪರಿಗಣಿಸಲಾಯಿತು. ಜನರ ಬದುಕನ್ನು ಉತ್ತಮಪಡಿಸಲು ಆರ್ಥಿಕ ಬೆಳವಣಿಗೆಯ ಗತಿಯನ್ನು ತೀವ್ರಗೊಳಿಸುವುದು ಏಕೈಕ ಸಾಧನ ಎಂಬ ನಂಬಿಕೆ ಇಲ್ಲಿದೆ.
3. 'ಸರ್ಕಾರ' ದ ಪಾತ್ರವನ್ನು ಪ್ರಜ್ಞಾಪೂರ್ವಕವಾಗಿ ಸಂಕುಚಿತಗೊಳಿಸುವ ಕ್ರಮಗಳು ಜಾರಿಗೆ ಬಂದವು. ಸರ್ಕಾರಕ್ಕೆ ಪ್ರತಿಯಾಗಿ ಮಾರುಕಟ್ಟೆ ಶಕ್ತಿಗಳ ಮೇಲಿನ ಅವಲಂಬನೆಯು ನಿರ್ಣಾಯಕವಾಗಿಬಿಟ್ಟಿತು.
4. ಕೊನೆಯದಾಗಿ ಆರ್ಥಿಕತೆಯನ್ನು ಮುಕ್ತಗೊಳಿಸುವ ಕ್ರಮಗಳಿಗೆ ಎಲ್ಲಿಲ್ಲದ ಆದ್ಯತೆ ದೊರೆಯಿತು. ದೇಶದ ಆರ್ಥಿಕತೆಯನ್ನು ಜಗತ್ತಿನ ಮಾರುಕಟ್ಟೆಯಲ್ಲಿ ವಿಲೀನಗೊಳಿಸುವ ದಿಶೆಯಲ್ಲಿ ಅನೇಕ ಕ್ರಮಗಳು ಜಾರಿಗೆ ಬಂದವು. ಈ ವಿಲೀನ ಪ್ರಕ್ರಿಯೆಯಲ್ಲಿ ವಿದೇಶಿ ಬಂಡವಾಳ ಮತ್ತು ವಿದೇಶಿ ತಂತ್ರಜ್ಞಾನ ಸಕ್ರಿಯ ಪಾತ್ರ ವಹಿಸುತ್ತವೆ ಎಂಬುದು ಇಲ್ಲಿನ ನೀತಿಯಾಯಿತು.

## ಭಾಗ-2 : ನಮ್ಮ ಸಂವಿಧಾನ ನಮ್ಮ ಸಾಧನೆ

ಸ್ವಾತಂತ್ರ್ಯೋತ್ತರ ಭಾರತದ ಅತಿದೊಡ್ಡ ಸಾಧನೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನದ ರಚನೆ. 'ಭಾರತದಲ್ಲಿ ಅಭಿವೃದ್ಧಿ ಪರ್ವವು 2013 ರಿಂದ ಆರಂಭವಾಯಿತು' ಎಂದು ಮತ್ತು ಕಳೆದ 70 ವರ್ಷಗಳಿಂದ ಭಾರತದಲ್ಲಿ ಅಭಿವೃದ್ಧಿಯು ಏನೇನೂ ನಡೆದಿಲ್ಲ ಎನ್ನುವ ಮಬ್ಬು ಮಂದಿ ಇಂದು ನಮ್ಮ ಸಂವಿಧಾನದ ವಿರುದ್ಧ ಬೆಂಕಿ ಕಾರುತ್ತಿದ್ದಾರೆ. ಅದರಲ್ಲಿ ಪ್ರಜೆಗಳಿಗೆ (ಸಂವಿಧಾನದ ಮೂರನೆಯ ಭಾಗದ ಪರಿಚ್ಛೇದಗಳು) 'ಹಕ್ಕು' ಗಳನ್ನು (ಸಮಾನತೆ-ಪರಿಚ್ಛೇದ 14, ತಾರತಮ್ಯ ವಿರೋಧಿ ಕ್ರಮಗಳು-ಪರಿಚ್ಛೇದ 15, ಅಸ್ಪೃಶ್ಯತೆ ರದ್ದತಿ-ಪರಿಚ್ಛೇದ 17 ಮತ್ತು ಸಾರ್ವಜನಿಕ ವಲಯದ ಉದ್ಯೋಗದಲ್ಲಿ ಸಮಾನ ಅವಕಾಶಗಳು-ಪರಿಚ್ಛೇದ 16 ಮುಂತಾದವುಗಳು) ನೀಡಿದ್ದು ಭಾರತೀಯ ಪರಂಪರೆಗೆ ವಿರುದ್ಧವಾದುದು ಎಂದು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರೊಬ್ಬರು ಅಬ್ಬರಿಸಿದ್ದಾರೆ (ಜಸ್ಟೀಸ್ ಎಂ.ರಾಮ ಜೋಯಿಸ್, ಹತ್ತನೆಯ ದುರ್ಗಾ ದಾಸ್ ಬಸು ಸ್ಮಾರಕ ಉಪನ್ಯಾಸ, ಕೊಲ್ಕತ್ತಾ, ಫೆಬ್ರವರಿ 11,

2017, ಪು. 33). ಅವರ ಮಾತುಗಳು ಹೀಗಿವೆ: ಹಕ್ಕುಗಳನ್ನು ಸಾಮಾಜಿಕ ಜೀವನದ ಅಡಿಪಾಯವನ್ನಾಗಿ ಮಾಡಿ ಹಕ್ಕು ಪ್ರಣೀತ ಸಮಾಜವನ್ನು ಸ್ಥಾಪಿಸುವುದಕ್ಕೆ ಪ್ರತಿಯಾಗಿ ಈ ನೆಲದ ಪ್ರಾಚೀನ ತತ್ವಶಾಸ್ತ್ರಜ್ಞರು ಕರ್ತವ್ಯ ಪ್ರಣೀತ ಸಮಾಜವನ್ನು, ಎಲ್ಲಿ ಕರ್ತವ್ಯವನ್ನು ನಿರ್ವಹಿಸುವುದೇ ಹಕ್ಕಾಗಿರುತ್ತದೋ ಅಂತಹ ಸಮಾಜವನ್ನು ಕಟ್ಟುವ ಒಲವನ್ನು ಹೊಂದಿದ್ದರು'.

ನೆಹರೂ ಯುಗದಲ್ಲಿ ಸಂವಿಧಾನಕ್ಕೆ ಅಪಚಾರ ಮಾಡುವಂತಹ ಕೆಲಸ ನಡೆದಿರಲಿಲ್ಲ. ನಮ್ಮ ಸಂವಿಧಾನವು ಸಮಾಜದಲ್ಲಿನ ದುರ್ಬಲರನ್ನು, ಮಹಿಳೆಯರನ್ನು, ಮಕ್ಕಳನ್ನು, ಅಲ್ಪಸಂಖ್ಯಾತರನ್ನು ಕಾಪಾಡುವ ಒಂದು ಪ್ರಣಾಳಿಕೆಯಾಗಿದೆ. ಅದು ನಮ್ಮ ಪರಂಪರೆಯ ಸಂಗತಿಗಳನ್ನು ಒಳಗೊಂಡಿಲ್ಲವೆಂದು ಅದನ್ನು ಕಿತ್ತುಹಾಕುವ ಬಗ್ಗೆ ಪರಿವಾರದಲ್ಲಿ ಮಾತುಗಳು ಕೇಳಿಬರುತ್ತಿದೆ. ಸಂವಿಧಾನವನ್ನು ಟೀಕಿಸುವುದು ಬೇರೆ, ಅದನ್ನು ತಿದ್ದುಪಡಿ ಮಾಡುವುದು ಬೇರೆ. ಅದನ್ನು ಸುಟ್ಟು ಹಾಕುವುದು, ಅದರ ಸ್ಥಳದಲ್ಲಿ ಅಮಾನವೀಯವೂ, ಮಹಿಳಾ ವಿರೋಧಿಯೂ, ಚಾತುರ್ವರ್ಣ್ಯ ಪ್ರಣೀತ ಅಸಮಾನತೆಯ ಪ್ರಣಾಳಿಕೆಯೂ ಆದ ಮನುಧರ್ಮ ಶಾಸ್ತ್ರವನ್ನು ಸಂವಿಧಾನವನ್ನಾಗಿ ಮಾಡಬೇಕೆಂಬ ಮಾತುಗಳು 2013 ರ ನಂತರ ಉಗ್ರ ರೀತಿಯಲ್ಲಿ ಕೇಳಿಬರುತ್ತಿವೆ. ಮಹಾತ್ಮಗಾಂಧಿ, ನೆಹರು, ಪಟೇಲ್, ರಾಜಾಜಿ, ಅಂಬೇಡ್ಕರ್ ಮುಂತಾದವರು ಕಟ್ಟಿದ 'ಭಾರತ ಎಂಬ ಭಾವಿಸಿದ ಆಶಯ' ಕ್ಕೆ (ದಿ ಐಡಿಯಾ ಆಫ್ ಇಂಡಿಯಾ) ಇದು ಸಂಪೂರ್ಣವಾಗಿ ವಿರೋಧಿಯಾಗಿದೆ. ನೆಹರೂ ಯುಗದ (1980–2013) ಭಾರತಕ್ಕಿಂತ 2013 ರ ನಂತರದ ಭಾರತ ಭಿನ್ನವಾಗಿದ್ದರೆ ಅದು ಸಹಜ ಮತ್ತು ಸಾಮಾನ್ಯ. ಆದರೆ ಅದಕ್ಕೆ ವಿರುದ್ಧವಾದ ಭಾರತವನ್ನು ಕಟ್ಟುತ್ತೇವೆನ್ನುವ ಕೆಲಸವೇನಿದೆ ಇದು ಜನವಿರೋಧಿ ಕ್ರಮವಾಗುತ್ತದೆ.

ಸ್ವಾತಂತ್ರ್ಯಾ ನಂತರ ನೆಹರೂ ಯುಗದ ಆಳ್ವಿಕೆಯು ಇಲ್ಲದೆ ಹೋಗಿದ್ದರೆ ಹಕ್ಕುಗಳಿಂದ ನಮ್ಮನ್ನು ವಂಚಿಸಲಾಗುತ್ತಿತ್ತು ಎಂಬುದರ ಬಗ್ಗೆ ಅನುಮಾನವಿರಲು ಸಾಧ್ಯವಿಲ್ಲ. ವಾಸ್ತವವಾಗಿ ನೆಹರೂ ಯುಗದಲ್ಲಿ ಹಕ್ಕುಗಳ ಪರಿಭಾಷೆಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಕ್ರಮವು ಆರಂಭವಾಯಿತು. ಇಂದು ಭಾರತೀಯರು ಆಹಾರದ ಹಕ್ಕನ್ನು (ಫುಡ್ ಸೆಕ್ಯುರಿಟಿ ಆಕ್ಟ್), ಶಿಕ್ಷಣದ ಹಕ್ಕನ್ನು (ಆರ್‌ಟಿಇ ಆಕ್ಟ್), ಉದ್ಯೋಗದ ಹಕ್ಕನ್ನು (ಎಂಜಿಎನ್‌ಆರ್‌ಇಜಿ ಆಕ್ಟ್) ಅನುಭವಿಸುತ್ತಿದ್ದರೆ ಇದು ಸ್ವಾತಂತ್ರ್ಯೋತ್ತರ ಭಾರತದ ಸಾಧನೆಯಾಗಿದೆ. ಭಾರತದಲ್ಲಿ 'ಅಭಿವೃದ್ಧಿ ಪರ್ವ 2013 ರಿಂದ ಆರಂಭವಾಯಿತು' ಎನ್ನುವವರಿಗೆ ನಾವು ಗರ್ವದಿಂದ ಸ್ವತಂತ್ರ ಭಾರತದ ಆಚಾರ್ಯ ಸದೃಶ ಸಾಧನೆಯೆಂದರೆ 'ಡಾ॥ ಬಿ.ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನ' ಎಂದು ಹೇಳಬೇಕಾಗಿದೆ. ಸ್ವಾತಂತ್ರ್ಯೋತ್ತರ ಭಾರತದ ನೆಹರೂ ಯುಗದ ಸಾಧನೆಯೇನು ಎಂದು ಯಾರಾದರೂ ಕೇಳಿದರೆ 'ಸಂವಿಧಾನಾತ್ಮಕ ಅಸ್ಪೃಶ್ಯತೆಯ ನಿಷೇಧ' ಎಂದು ಎದೆತಟ್ಟಿಕೊಂಡು ಹೇಳಬಹುದು. ನಮ್ಮ ಚಾತುರ್ವರ್ಣ್ಯ ಪ್ರಣೀತ ಸಮಾಜವು ಅನೂಚಾನವಾಗಿ ಶತಶತಮಾನಗಳಿಂದ ಪೋಷಿಸಿಕೊಂಡು ಬಂದ ಒಂದು ಸಾಮಾಜಿಕ ಕೇಡು ಎಂದರೆ ಅಸ್ಪೃಶ್ಯತೆ. ಆದರೆ 'ಭಾರತದಲ್ಲಿ ಅಭಿವೃದ್ಧಿ ಆರಂಭವಾದುದೇ 2013 ರಿಂದ' ಎಂದು ಎದೆತಟ್ಟಿಕೊಂಡು ಹೇಳುತ್ತಿರುವವರು ಇಂದಿಗೂ ಪ್ರಚ್ಛನ್ನವಾಗಿ ಅಸ್ಪೃಶ್ಯತೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ (ಉದಾಹರಣೆ: ದೇವಾಲಯದೊಳಗೆ ಮಹಿಳೆಯರ ಪ್ರವೇಶದ ಮೇಲೆ ನಿಷೇಧ ಹೇರುವುದು ಅಸ್ಪೃಶ್ಯತೆಯ ಆಚರಣೆಗೆ ಸಮ ಎಂಬ ಸರ್ವೋಚ್ಚ ನ್ಯಾಯಾಲಯದ 28.09.2018 ರ ತೀರ್ಪಿನ ವಿರುದ್ಧ ನಡೆಯುತ್ತಿರುವ ಶಬರಿಮಲೆ ಪ್ರತಿಭಟನೆ).

ನಮ್ಮ ಪರಂಪರೆಯಲ್ಲಿ ನಾಡಿನ ಪ.ಜಾ. ಮತ್ತು ಪ.ಪಂ. ಜನಸಮುದಾಯಗಳನ್ನು ಪ್ರಧಾನಧಾರೆ ಸಾಮಾಜಿಕ ಚೌಕಟ್ಟಿನಿಂದ ಹೊರಗಿಡಲಾಗಿತ್ತು. ನಮ್ಮ ದೇಶದಲ್ಲಿ 2011 ರ ಜನಗಣತಿ ಪ್ರಕಾರ ಪ.ಜಾ. ಜನಸಂಖ್ಯೆ 20.13 ಕೋಟಿಯಿದ್ದರೆ (ಶೇ.16.63) ಪ.ಪಂ. ಜನಸಂಖ್ಯೆ 10.42 ಕೋಟಿಯಿದೆ (ಶೇ. 8.61). ಒಟ್ಟಾರೆ 30 ಕೋಟಿಗೂ ಮಿಕ್ಕು ಜನರು ಸಾಮಾಜಿಕ ಹೊರಗಣತನವನ್ನು ಅನುಭವಿಸುತ್ತಿದ್ದರು. ಬೃಹತ್ ಜನಸ್ತೋಮವನ್ನು ಸಾಮಾಜಿಕ ಚೌಕಟ್ಟಿನಿಂದ ಹೊರಗಿಟ್ಟು ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಾದರೂ ಹೇಗೆ ? ಎಂದೇ ನಮ್ಮ ಸಂವಿಧಾನದಲ್ಲಿ ಈ ಜನವರ್ಗದ ಅಭಿವೃದ್ಧಿಗಾಗಿ 'ಸಕಾರಾತ್ಮ ತಾರತಮ್ಯ' (ಅಫರ್‌ಮೇಟಿವ್ ಆಕ್ಷನ್) ಕ್ರಮಗಳನ್ನು ಶಿಕ್ಷಣ, ಉದ್ಯೋಗ ಮತ್ತು ಶಾಸನಾತ್ಮಕ ಸಂಸ್ಥೆಗಳಲ್ಲಿ (ಸಂಸತ್ತನ್ನು ಬಿಟ್ಟು) ಇವರಿಗೆ ಪ್ರಾತಿನಿಧ್ಯ ನೀಡುವುದಕ್ಕಾಗಿ ಮೀಸಲಾತಿ ನೀತಿಗಳನ್ನು ಅಳವಡಿಸಿಕೊಳ್ಳಲಾಯಿತು. ಇದು ಕೂಡ ಸ್ವಾತಂತ್ರ್ಯೋತ್ತರ ಭಾರತದ ದೊಡ್ಡ ಸಾಧನೆಯಾಗಿದೆ. ಈ ಕ್ರಮಗಳಿಗೆ ಇಂದು ಕಂಟಕ ಉಂಟಾಗಿದೆ.

ಜಾತಿ, ಅಸ್ಪೃಶ್ಯತೆ, ಸಾಮಾಜಿಕ ಹೊರಗಣತನಗಳ ಆಧಾರದಲ್ಲಿ ಸಂವಿಧಾನದಲ್ಲಿ ಮೀಸಲಾತಿ ನೀಡುವ ಕ್ರಮವಿದೆ. ಆದರೆ ಇದನ್ನು ಭ್ರಷ್ಟಗೊಳಿಸಿ 2013 ರ ನಂತರ ವರಮಾನ ಕೊರತೆಯನ್ನು ಆಧಾರ ಮಾಡಿಕೊಂಡು ಮುಂದುವರಿದ ಜಾತಿಗಳಲ್ಲಿನ ಹಿಂದುಳಿದ ವರ್ಗಕ್ಕೆ ಮೀಸಲಾತಿಯನ್ನು (ಶೇ. 10) ವಿಸ್ತರಿಸುವಂತಹ ನಮ್ಮ ಸಂವಿಧಾನ ವಿರೋಧಿ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಅಭಿವೃದ್ಧಿಯಿಂದ ವಂಚಿತರಾಗಿದ್ದ ಪ.ಜಾ. ಮತ್ತು ಪ.ಪಂ. ಜನಸಮುದಾಯಗಳ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಗಳನ್ನು 1970 ರ ದಶಕದಲ್ಲಿ ಹಮ್ಮಿಕೊಳ್ಳಲಾಯಿತು. ಆದರೆ 2013 ರ ನಂತರ ಈ ಯೋಜನೆಗಳನ್ನು ಹಕ್ಕಿನ ಪರಿಭಾಷೆಯಲ್ಲಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ 'ಕ್ಷೇಮಾಭ್ಯುದಯ–ಹಂಗಿನ' ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವನ್ನು ಜಾರಿಗೆ ತರಲಾಗಿದೆ. ಹಕ್ಕಿನ ಪರಿಭಾಷೆಯ ಬಗ್ಗೆ 2013 ರ ನಂತರ ಒಂದು ರೀತಿಯಲ್ಲಿ ತಿರಸ್ಕಾರವನ್ನು ಬೆಳೆಸಲಾಗುತ್ತಿದೆ. ಹಂಗಿನ ಪರಿಭಾಷೆಯ ಅಭಿವೃದ್ಧಿ ಕ್ರಮವನ್ನು ಅಮರ್ತ್ಯ ಸೇನ್ 'ಪೇಷೆಂಟ್ಸ್ ಅಪ್ರೋಚ್' ಎಂದೂ ಹಕ್ಕಿನ ಪರಿಭಾಷೆಯ ಅಭಿವೃದ್ಧಿ ಕಾರ್ಯತಂತ್ರವನ್ನು 'ಏಜೆನ್ಸಿ ಅಪ್ರೋಚ್' ಎಂದು ಕರೆಯುತ್ತಾನೆ. ಮೊದಲನೆಯ ಅಪ್ರೋಚ್‌ನಲ್ಲಿ ಜನರು ಕೇವಲ ಫಲಾನುಭವಿಗಳಾಗಿದ್ದರೆ ಎರಡನೆಯ ಕ್ರಮದಲ್ಲಿ ಜನರನ್ನು ಅಭಿವೃದ್ಧಿಯ ಕರ್ತೃಗಳಾಗಿ ನೋಡಲಾಗುತ್ತದೆ. ಅಭಿವೃದ್ಧಿಯಲ್ಲಿ ಜನರು ಫಲಾನುಭವಿಗಳು ಮಾತ್ರವಲ್ಲ ಅವರು ಅಭಿವೃದ್ಧಿಯ ಕರ್ತೃಗಳು. ಹಾಗಾದರೆ ಜನಮುಖಿ ಅಭಿವೃದ್ಧಿಯು ನೆಹರೂ ಯುಗದಲ್ಲಿ ಆರಂಭವಾಯಿತೋ ಅಥವಾ ಅದು 2013 ರಿಂದ ಆರಂಭವಾಯಿತೋ ಎನ್ನುವ ಪ್ರಶ್ನೆಯೇ ಅಸಂಬದ್ಧ. ಈ ಪ್ರಶ್ನೆಗೆ ಯಾವುದೇ ಅರ್ಥವಿಲ್ಲ. ಏಕೆಂದರೆ ಒಂದು ದೇಶದ ಚರಿತ್ರೆಯಲ್ಲಿ 70 ವರ್ಷವೇನೂ ಕಡಿಮೆ ಕಾಲಾವಧಿಯಲ್ಲ. ಈ ಅವಧಿಯಲ್ಲಿ ಏನೇನೂ ನಡೆದಿಲ್ಲ ಎನ್ನುವುದು ಮೂರ್ಖತನ. ಅಲ್ಲಿ ಅನೇಕ ದೌರ್ಬಲ್ಯಗಳಿದ್ದಿರಬಹುದು. ಅನೇಕ ದೋಷಗಳಿದ್ದಿರಬಹುದು. ಆದರೆ ಅಲ್ಲಿ ಜನರಿಗೆ ಅನುಕೂಲ ಒದಗಿಸುವಂತಹದ್ದು ಕೆಲಸ ಏನೂ ನಡೆದಿಲ್ಲ ಎಂದರೆ ಅದು ಹುಚ್ಚುತನದ ಹೇಳಿಕೆ ಎನ್ನಬೇಕಾಗುತ್ತದೆ.

## ಭಾಗ–3 : ಲಿಂಗ ಸಮಾನತೆ – ಸ್ವತಂತ್ರ ಭಾರತದ ಮಹತ್ವದ ಸಾಧನೆ

ಮೂಲತಃ ನಮ್ಮದು ಪುರುಷ ಪ್ರಧಾನ ಸಮಾಜ. ನಮ್ಮದು ಲಿಂಗ ಅಸಮಾನತೆಯ ಪರಂಪರೆಯಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕವಾಗಿ ಮಹಿಳೆಯರ ಸ್ಥಾನಮಾನ ನಿಕೃಷ್ಟವಾದುದಾಗಿತ್ತು. ಆಕೆಯನ್ನು ಧಾರ್ಮಿಕ ಚೌಕಟ್ಟಿನಿಂದ ಹೊರಗಿಡಲಾಗಿತ್ತು. ಅಕ್ಷರ ಭಾಗ್ಯದಿಂದ, ಆಸ್ತಿ ಮಾಲೀಕತ್ವದಿಂದ ಅವಳನ್ನು ವಂಚಿತಳನ್ನಾಗಿ ಮಾಡಲಾಗಿತ್ತು. ನಮ್ಮ ಸಮಾಜದಲ್ಲಿ 'ಸ್ವಾತಂತ್ರ್ಯಕ್ಕೆ ಮಹಿಳೆಯರು ಅರ್ಹರಲ್ಲ' ಎಂಬ ಧಾರ್ಮಿಕ ನಿಯಮ ಅಸ್ತಿತ್ವದಲ್ಲಿತ್ತು. ಈ ಬಗೆಯಲ್ಲಿ ಮಹಿಳೆಯರನ್ನು ಕುರಿತ ಸೂತ್ರಗಳು ಇಂದಿಗೂ ಆಚರಣೆಯಲ್ಲಿವೆ. ಇದಕ್ಕೆ ಅಪ್ಪಟ ನಿದರ್ಶನವೆಂದರೆ ಶಬರಿಮಲೆಯಲ್ಲಿನ ಅಯ್ಯಪ್ಪ ದೇವಾಲಯದೊಳಗೆ ಮಹಿಳೆಯರ ಪ್ರವೇಶದ ಮೇಲಿದ್ದ ನಿಷೇಧವನ್ನು ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಸೆಪ್ಟೆಂಬರ್ 28, 2018 ರಂದು ನೀಡಿದ 4.1 ಬಹುಮತ ತೀರ್ಪಿನಲ್ಲಿ ರದ್ದುಪಡಿಸಿತ್ತು. ಅದರ ವಿರುದ್ಧ 'ಭಾರತದಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಿರುವುದೇ 2013 ರಿಂದ' ಎಂದು ಬೊಬ್ಬೆ ಹೊಡೆಯುತ್ತಿರುವ ರಾಷ್ಟ್ರೀಯ ರಾಜಕೀಯ ಪಕ್ಷವೊಂದು ಅದರ ವಿರುದ್ಧ ಪ್ರತಿಭಟನೆ ನಡೆಸುತ್ತಿದೆ).

ಅನೂಚಾನವಾಗಿ ನಮ್ಮ ದೇಶದಲ್ಲಿ ಹರಿದುಕೊಂಡು ಬರುತ್ತಿದ್ದ ಪ್ರಬಲ ಮಹಿಳಾ ವಿರೋಧಿ ಪರಂಪರೆಯನ್ನು ನೆಹರೂ ಯುಗದಲ್ಲಿ ಬದಲಾಯಿಸಲು ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಲಾಯಿತು. ಅಮೆರಿಕ, ಯುರೋಪ್ ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವುದಕ್ಕೆ 20ನೆಯ ಶತಮಾನದಲ್ಲಿಯೂ ಮೀನಮೇಷ ಎಣಿಸುತ್ತಿದ್ದ ಕಾಲದಲ್ಲಿ ಭಾರತವು ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿತು. ನಮ್ಮ ದೇಶದಲ್ಲಿ 2013 ರ ನಂತರದಲ್ಲಿ ಕಂಡುಬರುತ್ತಿರುವ ಕಡುಸಾಂಪ್ರದಾಯಿಕತೆಯು 1950 ರ ನಂತರದ ಸ್ವತಂತ್ರ ಭಾರತದಲ್ಲಿದ್ದಿದ್ದರೆ ಮಹಿಳೆಯರಿಗೆ ಮತದಾನದ ಹಕ್ಕು ದೊರೆಯುತ್ತಿತ್ತು ಎಂಬುದರ ಬಗ್ಗೆ ನನಗೆ ಅನುಮಾನವಿದೆ. ಅದರ ವಿರುದ್ಧವೂ ಸಂಪ್ರದಾಯವಾದಿಗಳು ಪ್ರತಿಭಟನೆ ನಡೆಸುತ್ತಿದ್ದರೇನೋ!

ಕೌಟುಂಬಿಕ ದೌರ್ಜನ್ಯದ ವಿರುದ್ಧ, ವರದಕ್ಷಿಣೆ ವಿರುದ್ಧ ಮತ್ತು ಬಾಲ್ಯವಿವಾಹದ ವಿರುದ್ಧ ಅನೇಕ ರೀತಿಯ ಶಾಸನಗಳನ್ನು ಜಾರಿಗೆ ತರಲಾಗಿದೆ. ನಮ್ಮ ಸಮಾಜದಲ್ಲಿ ಅಕ್ಷರ ಸಂಪತ್ತಿನಿಂದ ವಂಚಿತರಾಗಿದ್ದ ಮಹಿಳೆಯರಿಗೆ

ನೆಹರೂ ಅಭಿವೃದ್ಧಿ ಮಾದರಿಯಲ್ಲಿ ಶಿಕ್ಷಣದ ಅವಕಾಶ ನೀಡಲಾಯಿತು. ಉದ್ಯೋಗದಲ್ಲಿ ಮೀಸಲಾತಿ ನೀಡಲಾಯಿತು. ಮನೆಯೊಳಗೆ ಕುಟುಂಬ ನಿರ್ವಹಣೆ ಸಾಂಪ್ರದಾಯಿಕ ಮೌಢ್ಯದ ವಿರುದ್ಧ ನೆಹರೂ ಯುಗದಲ್ಲಿ ಮನೆಯ ಹೊರಗಿನ ಉದ್ಯೋಗಗಳನ್ನು ಮಹಿಳೆಯರಿಗೆ ನೀಡುವ ಕ್ರಮ ತೆಗೆದುಕೊಳ್ಳಲಾಯಿತು. ಮಹಿಳೆಯರಿಗೆ ಪಾಲಕರ ಆಸ್ತಿಯಲ್ಲಿ ಸಮಾನ ಪಾಲನ್ನು ನೀಡುವ ಕ್ರಮವನ್ನು 1950 ರ ದಶಕದಲ್ಲಿಯೇ ತೆಗೆದುಕೊಳ್ಳಲಾಯಿತು. ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೂಲಕ 1975 ರಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಮೂಲಕ ಮಹಿಳೆಯರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಗಂಡು–ಹೆಣ್ಣಿಗೆ ಸಮಾನ ವೇತನವಿರುವ ಎಂಜಿಎನ್‌ಆರ್‌ಇಜಿಎ ಉದ್ಯೋಗ ಕಾರ್ಯಕ್ರಮವನ್ನು 2006 ರಲ್ಲಿ ಆರಂಭಿಸಲಾಯಿತು.

ನಿಜ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆಯರ ಶಾರೀರಿಕ ಭದ್ರತೆ, ಸಮಗ್ರತೆ, ಸ್ವಾಯತ್ತತೆಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಆದರೆ ಲಿಂಗ ಸಮಾನತೆ ಮೌಲ್ಯಕ್ಕೆ 2013 ಕ್ಕೆ ಪೂರ್ವದಲ್ಲಿ ಗೌರವವಿತ್ತು. ಆದರೆ 2013 ರ ನಂತರ ಅನೇಕ ರೀತಿಯಲ್ಲಿ ಮಹಿಳೆಯರನ್ನು ಸಾಂಪ್ರದಾಯಿಕ ಕೂಪಕ್ಕೆ ತಳ್ಳುವ ಕಾರ್ಯ ನಡೆದಿದೆ. ರಾಷ್ಟ್ರೀಯ ರಾಜಕೀಯ ಪಕ್ಷವೊಂದರ ತಾಯಿಸಂಸ್ಥೆಯ ಮುಖ್ಯಸ್ಥರು ಮೇಲಿಂದ ಮೇಲೆ ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಮನೆ, ಕುಟುಂಬ, ಮಕ್ಕಳು, ಗಂಡ ಎಂಬ ಸಂಗತಿಯನ್ನು ಒತ್ತಿ ಒತ್ತಿ ಹೇಳುತ್ತಿರುತ್ತಾರೆ. ಆದರೆ ಇಂತಹ ಸಂಗತಿಗಳಿಗೆ 2013 ಕ್ಕೆ ಪೂರ್ವದಲ್ಲಿ ಮನ್ನಣೆ ಇರಲಿಲ್ಲ. ಒಟ್ಟಾರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಸಕಾರಾತ್ಮಕ ಧೋರಣೆ ವ್ಯಕ್ತವಾಗುತ್ತಿತ್ತು. ಆದರೆ ಇಂದು ಅದಕ್ಕೆ ಕುತ್ತು ಬಂದಿದೆ. ಮಹಿಳೆಯನ್ನು ಒಬ್ಬ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಪರಿಗಣಿಸುವುದಕ್ಕೆ ಪ್ರತಿಯಾಗಿ 'ಕುಟುಂಬ'ವೊಂದರ ಸದಸ್ಯೆಯನ್ನಾಗಿ ಬಿಂಬಿಸಲಾಗುತ್ತಿದೆ. ಮಹಿಳೆಯನ್ನು ವ್ಯಕ್ತಿಯನ್ನಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಅವಳನ್ನು ತಾಯಿಯನ್ನಾಗಿ, ಹೆಂಡತಿಯಗಿ ಪರಿಭಾವಿಸಿಕೊಳ್ಳುವ ಕ್ರಮವು 2013 ರ ನಂತರ ಬಲಿಷ್ಠವಾಗುತ್ತಿದೆ.

## ಭಾಗ–4 : ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿಯ ವಿಶಾಲ ವ್ಯಾಪ್ತಿ

ಚೌಕಟ್ಟು 1 ರಲ್ಲಿ ನಿರ್ವಹಿಸಿರುವಂತೆ ಅಭಿವೃದ್ಧಿ ಎನ್ನುವುದು ಬೆಳವಣಿಗೆಗಿಂತ ವಿಸ್ತೃತವಾದ ಸೂಚಿಯಾಗಿದೆ. ಸ್ವಾತಂತ್ರ್ಯೋತ್ತರ ಭಾರತದ ಸಾಧನೆಯನ್ನು ಕೇವಲ ಜಿಡಿಪಿ ಬೆಳವಣಿಗೆಗೆ ಸೀಮಿತಗೊಳಿಸಿದರೆ ಅದು ಅದ್ಭುತವಾಗಿ ಕಾಣುವುದಿಲ್ಲ. ಸಾಕ್ಷರತೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸ್ಥಿತಿಗತಿ, ಪ.ಜಾ. ಮತ್ತು ಪ.ಪಂ. ಸಮುದಾಯಗಳ ಜೀವನದ ಮಟ್ಟ, ಆಹಾರ ಭದ್ರತೆ ಮುಂತಾದ ಕ್ಷೇತ್ರದಲ್ಲಿನ ಸಿದ್ಧಿ–ಸಾಧನೆಗಳ ಮೂಲಕ ಅಭಿವೃದ್ಧಿಯ ಮೌಲ್ಯಮಾಪನ ಮಾಡಿದರೆ ಸ್ವಾತಂತ್ರ್ಯೋತ್ತರ ಭಾರತದ ಸಾಧನೆಯು ಅಸಾಧಾರಣವಾದುದು ಎಂದು ಹೇಳಲಾಗದಿದ್ದರೂ ಅದು ಸಾಧಾರಣಕ್ಕಿಂತ ಉತ್ತಮವಾಗಿತ್ತು ಎಂದು ಹೇಳಲು ಯಾವುದೇ ಅಳುಕು ಬೇಕಾಗಿಲ್ಲ.

ನೆಹರೂ ಯುಗದ ವೈಜ್ಞಾನಿಕ ಧೋರಣೆಯಿಂದಾಗಿ ಕುಟುಂಬ ಯೋಜನೆಯಂತಹ ಸೀಮಿತ ಕಾರ್ಯಕ್ರಮದ ಜೊತೆಯಲ್ಲಿ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವುದರ ಮೂಲಕ, ಮಹಿಳಾ ಸಬಲೀಕರಣದ ಮೂಲಕ ಸ್ವಾತಂತ್ರ್ಯೋತ್ತರ ಭಾರತವು ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯುವುದರಲ್ಲಿ ಯಶಸ್ವಿಯಾಗಿದೆ. ಕೇರಳ, ತಮಿಳುನಾಡು, ಗೋವಾ, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. 2 ಕ್ಕಿಂತ ಕಡಿಮೆಯಾಗಿದೆ. ಜನಸಂಖ್ಯೆಯ ಗುಣಮಟ್ಟವು ಉತ್ತಮವಾಗುತ್ತಿದೆ. ಜನರ ಆರೋಗ್ಯ ಸ್ಥಿತಿಗತಿಯು ಸುಧಾರಿಸುತ್ತಿದೆ. ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ, ಮಹಿಳೆಯರಲ್ಲಿ ಮತ್ತು ಮಕ್ಕಳಲ್ಲಿ ಅನೀಮಿಯ ಪ್ರಮಾಣ ಕಡಿಮೆಯಾಗುತ್ತಿದೆ (ಎನ್‌ಎಫ್‌ಎಚ್‌ಎಸ್ 4 : 2015–16).

ಅಮರ್ತ್ಯ ಸೇನ್ ತನ್ನ ಅಧ್ಯಯನಗಳ ಮೂಲಕ (ಪಾವರ್ಟಿ ಅಂಡ್ ಫ್ಯಾಮೈನ್ಸ್; ಆನ್ ಎಸ್ಸೆ ಆನ್ ಎನ್‌ಟೈಟಲ್‌ಮೆಂಟ್ ಅಂಡ್ ಡಿಪ್ರೈವೇಶನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ (ಈಎನ್‌ಬಿಎಸ್), ಆಕ್ಸ್‌ಫರ್ಡ್, 1981) ಕಂಡುಕೊಂಡಿರುವಂತೆ ಪ್ರಜಾಪ್ರಭುತ್ವ ವ್ಯವಸ್ಥೆಯು ಎಲ್ಲಿ ಬಲವಾಗಿರುತ್ತದೋ ಅಲ್ಲಿ ಬರಗಾಲ ಸಂಬಂಧಿ ಸಾವು–ನೋವುಗಳು ಸಂಭವಿಸುವುದು ಸಾಧ್ಯವಿಲ್ಲ. ಸ್ವಾತಂತ್ರ್ಯೋತ್ತರ ಭಾರತವು ಒಂದು ಅದ್ಭುತ ಉದಾಹರಣೆಯಾಗಿದೆ.

ಆರ್ಥಿಕ ಬೆಳವಣಿಗೆಯ ಮಾಪನವಾದ ಜಿಡಿಪಿಗೆ ಪ್ರತಿಯಾಗಿ ಅಭಿವೃದ್ಧಿಯ ಮಾಪನಕ್ಕೆ ರೂಪುಗೊಂಡಿರುವ ಪರಿಭಾವನೆ ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್‌ಡಿಐ), ಯುಎನ್‌ಡಿಪಿ ಸಂಸ್ಥೆಯ ನೇತೃತ್ವದಲ್ಲಿ ಅಮರ್ತ್ಯ ಸೇನ್ ರೂಪಿಸಿದ ಧಾರಣ ಸಾಮರ್ಥ್ಯ ಸಿದ್ಧಾಂತದ ನೆಲೆಯಲ್ಲಿ ಮೆಹಬೂಬ್ ಉಲ್ ಹಕ್ ಅವರು ಆರೋಗ್ಯ, ಶಿಕ್ಷಣ ಮತ್ತು ವರಮಾನ ಮೂರು ಸೂಚಿಗಳನ್ನು ಒಳಗೊಂಡ ಸಂಯುಕ್ತ ಸೂಚಿ ಮಾನವ ಅಭಿವೃದ್ಧಿ ಸೂಚ್ಯಂಕವೊಂದನ್ನು 1990 ರಲ್ಲಿ ರಚಿಸಿದರು. ಜಿಡಿಪಿಯು ಏಕಮಾನ ಸೂಚಿಯಾಗಿದ್ದರೆ ಎಚ್‌ಡಿಐ ಸಂಯುಕ್ತ ಸೂಚಿಯಾಗಿದೆ. ಇದರಲ್ಲಿ ಭಾರತದ ಸಾಧನೆ ನಿರ್ಲಕ್ಷಿಸುವಂತಹದ್ದೇನಲ್ಲ. ಯುಎನ್‌ಡಿಐ ಮೌಲ್ಯವು ಏರುತ್ತಲೇ ನಡೆದಿದೆ (ಎಚ್‌ಡಿಐ ಮೌಲ್ಯ 1990 ರಲ್ಲಿ : 0.427 ಒಟ್ಟು 108 ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ : 71 ಎಚ್‌ಡಿಐ ಮೌಲ್ಯ 2000 ದಲ್ಲಿ 0.483, ಒಟ್ಟು 174 ದೇಶಗಳಲ್ಲಿ ಪಟ್ಟಿಯಲ್ಲಿ ಭಾರತದ ಸ್ಥಾನ : 1.28, ಎಚ್‌ಡಿಐ ಮೌಲ್ಯ 2017 ರಲ್ಲಿ 0.640. ಒಟ್ಟು 189 ದೇಶಗಳಲ್ಲಿ ಭಾರತದ ಸ್ಥಾನ : 130). ಎಚ್‌ಡಿಐನಲ್ಲಿ 1990 ರಿಂದ 2017 ರ ಅವಧಿಯಲ್ಲಿ ಶೇ. 49.88 ರಷ್ಟು ಏರಿಕೆಯಾಗಿದೆ. ಭಾರತದ ಸ್ಥಾನವನ್ನು ಬೇರೆ ಅವಧಿಗೆ ಸಂಬಂಧಿಸಿದಂತೆ ತುಲನೆ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಒಟ್ಟು ದೇಶಗಳ ಸಂಖ್ಯೆಯು ವರ್ಷ ವರ್ಷವೂ ಬದಲಾಗುತ್ತಿರುತ್ತದೆ. ಆದರೆ ಎಚ್‌ಡಿಐ ಮೌಲ್ಯವು ಏರುತ್ತಾ ನಡೆದಿರುವುದನ್ನು ಗುರುತಿಸಬಹುದು (ಯುಎನ್‌ಡಿಪಿ ಸಂಸ್ಥೆಯ ಸಂಬಂಧಿಸಿದ ವರ್ಷಗಳ ಮಾನವ ಅಭಿವೃದ್ಧಿ ವರದಿಗಳು).

## ಸ್ವಾತಂತ್ರ್ಯೋತ್ತರ ಭಾರತ–ಬಹುತ್ವ ಭಾರತ

ಸ್ವಾತಂತ್ರ್ಯೋತ್ತರ ಭಾರತದ ಮತ್ತೊಂದು ಅತಿದೊಡ್ಡ ಸಾಧನೆಯೆಂದರೆ ಅದು ತನ್ನ 'ಬಹುತ್ವ' ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿರುವುದು. ಭಾರತೀಯ ಬಹುತ್ವಕ್ಕೆ ಅನೇಕ ಮುಖಗಳಿವೆ. ಅದು ಭಾಷಾ ಬಹುತ್ವ (ಭಾಷಾವಾರು ಪ್ರಾಂತಗಳ ರಚನೆ), ರಾಜಕೀಯ ಬಹುತ್ವ (ಒಕ್ಕೂಟ ವ್ಯವಸ್ಥೆ–ಕೇಂದ್ರ, ರಾಜ್ಯ, ಸ್ಥಳೀಯ ಸರ್ಕಾರಗಳು, ಬಹುಪಕ್ಷೀಯ ಪ್ರಜಾಪ್ರಭುತ್ವ), ಸಾಮಾಜಿಕ ಬಹುತ್ವ (ವಿವಿಧ ಸಮುದಾಯಗಳು, ಅಲ್ಪಸಂಖ್ಯಾತರು, ವಿವಿಧ ಸಂಸ್ಕೃತಿ ಇತ್ಯಾದಿ) ಮತ್ತು ಸಾಂಸ್ಕೃತಿಕ ಬಹುತ್ವ (ಸಂಗೀತ–ಹಿಂದೂಸ್ತಾನಿ, ಕರ್ನಾಟಕಿ, ನಾಟಕ–ವೃತ್ತಿ, ಹವ್ಯಾಸಿ, ಕಲೆ, ಜಾನಪದ ಇತ್ಯಾದಿ) ಮುಂತಾದವು. ಸ್ವಾತಂತ್ರ್ಯೋತ್ತರ ಭಾರತವು ಅತ್ಯಂತ ಜವಾಬ್ದಾರಿಯುತವಾಗಿ ಸಂರಕ್ಷಿಸಿಕೊಂಡು ಬಂದಿರುವ ಬಹುತ್ವ ಮೌಲ್ಯಕ್ಕೆ 2013 ರ ನಂತರ ದೊಡ್ಡ ಅಪಾಯ ತಟ್ಟಿದೆ. ಭಾಷಾ ಬಹುತ್ವವನ್ನು ಇಂದು ಆಳುವ ಪಕ್ಷವು ಪ್ರಶ್ನೆ ಮಾಡುತ್ತಿದೆ. ಅದು 'ಒಂದು ರಾಷ್ಟ್ರ ಭಾಷೆ' ಎಂಬ ಮಾತನ್ನಾಡುತ್ತಿದೆ. ಶಾಲಾ–ಕಾಲೇಜುಗಳಲ್ಲಿನ ಪ್ರವೇಶಕ್ಕೆ ಇಡೀ ದೇಶಕ್ಕೆಲ್ಲ ಒಂದೇ ಪರೀಕ್ಷೆ ಎಂದು ಅದು ಹೇಳುತ್ತಿದೆ (ನೀಟ್ ಇದಕ್ಕೆ ಅಪ್ಪಟ ನಿದರ್ಶನ), ದೇಶಕ್ಕೆಲ್ಲ ಒಂದೇ ಬ್ಯಾಂಕು ಎಂಬುದು ಅದು ಅನುಸರಿಸುತ್ತಿರುವ ಮತ್ತೊಂದು ಕೇಂದ್ರೀಕರಣ ಕ್ರಮ. ಹೀಗೆ ರಾಜ್ಯಗಳ ಅನನ್ಯತೆ–ಅಸ್ಮಿತೆಯನ್ನು ನಾಶಮಾಡುವ ಕ್ರಮಗಳನ್ನು ಅದು ವ್ಯವಸ್ಥಿತವಾಗಿ ತೆಗೆದುಕೊಳ್ಳುತ್ತಿದೆ. ಒಕ್ಕೂಟ ವ್ಯವಸ್ಥೆಗೆ ವಿವಿಧ ರೀತಿಯಲ್ಲಿ ಧಕ್ಕೆ ಉಂಟಮಾಡಲಾಗುತ್ತಿದೆ. 'ಅಲ್ಪಸಂಖ್ಯಾತರು' ಎಂಬ ಪದಬಳಕೆಯ ಬಗ್ಗೆ ಅದಕ್ಕೆ ವಿರೋಧವಿದೆ. ವಿಕೇಂದ್ರೀಕರಣ ತತ್ವಕ್ಕೆ 2013 ರ ನಂತರ ಒಂದು ರೀತಿಯಲ್ಲಿ ತಿಲಾಂಜಲಿ ನೀಡಲಾಗಿದೆ. ಕನ್ನಡದ ಮಹತ್ವದ ಕೃತಿ ಕವಿರಾಜ ಮಾರ್ಗವು ಪ್ರತಿಪಾದಿಸಿರುವ ಬಹುತ್ವ ಮತ್ತು ಒಕ್ಕೂಟ ತತ್ವವನ್ನು ಒಳಗೊಂಡ 'ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ' ಎಂಬ ಸೂತ್ರಕ್ಕೆ ಇಂದು ಅಪಾಯ ಉಂಟಾಗಿದೆ. ವಸುಧೆಯೊಳಗೆ ವಿಲೀನವಾಗಿದ್ದರೂ ರಾಜ್ಯವು ತನ್ನ ವಿಶಿಷ್ಟತೆಯನ್ನು ಕಾಯ್ದುಕೊಳ್ಳುತ್ತದೆ' ಎಂಬ ಅರ್ಥ ಬರುವ ಈ ಕಂದ ಪದ್ಯವು ಪ್ರತಿಪಾದಿಸುತ್ತಿರುವ ಆಶಯವು ಒಕ್ಕೂಟ ತತ್ವವೇ ಆಗಿದೆ. ರಾಜ್ಯಗಳ ವಿಶಿಷ್ಟತೆಯನ್ನು ನಿರ್ಲಕ್ಷಿಸಿ ಎಲ್ಲವನ್ನೂ ಕೇಂದ್ರೀಕೃತಗೊಳಿಸುವ ಕ್ರಮಗಳನ್ನು 2013 ರ ನಂತರ ಪ್ರಜ್ಞಾಪೂರ್ವಕವಾಗಿ ಕೇಂದ್ರ ಸರ್ಕಾರವು ತೆಗೆದುಕೊಳ್ಳುತ್ತಿದೆ. ಈ ಕೇಂದ್ರೀಕರಣದ ಕ್ರಮ ಎಲ್ಲಿಯವರೆಗೆ ಹೋಗಿದೆ ಎಂಬುದನ್ನು 'ಒಂದು ದೇಶ, ಒಂದು ಚುನಾವಣೆ' ಎನ್ನುವ ಒಕ್ಕೂಟ–ಪ್ರಜಾತಂತ್ರ ವಿರೋಧಿ ಘೋಷಣೆಯಲ್ಲಿ ಕಾಣಬಹುದು (ಇದು ಮುಂದೆ 'ಒಂದು ದೇಶ, ಒಂದೇ ಚುನಾವಣೆ, ಒಂದೇ ಪಕ್ಷ' ಎನ್ನುವವರೆವಿಗೂ ಹೋದರೆ ಆಶ್ಚರ್ಯವಿಲ್ಲ!).

**ಆಕರ :** ಹೊಸತು – ಆಗಸ್ಟ್ 2019

* * * * *

# ೩. ಪ್ರತಿನಿತ್ಯವೂ ವಿಜ್ಞಾನ ದಿನವಾಗಲಿ !

– ಸುಧೀಂದ್ರ ಹಾಲ್ದೊಡ್ಡೇರಿ

ವಿಶ್ವಮಾನ್ಯ ಸಾಧನೆ ಗೈದಿರುವ ನಮ್ಮ ವಿಜ್ಞಾನಿಗಳನ್ನು ನಾವು ಸಾರಾಸಗಟಾಗಿ ಮರೆತೇ ಬಿಟ್ಟಿದ್ದೇವೆ.

ಫೆಬ್ರವರಿ 28 ರಂದು ಎಂದಿನಂತೆ ದೇಶದ ಎಲ್ಲ ವಿಜ್ಞಾನ ಪ್ರಯೋಗಶಾಲೆಗಳಲ್ಲಿ, ತಂತ್ರಜ್ಞಾನ ಕೇಂದ್ರಗಳಲ್ಲಿ, ವಿದ್ಯಾಮಂದಿರಗಳಲ್ಲಿ ಅತ್ಯಂತ ಸಂಭ್ರಮದಿಂದ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ದೇಶದ ವಿಜ್ಞಾನ–ತಂತ್ರಜ್ಞಾನ ರಾಜಧಾನಿಯೆಂಬ ಹೆಗ್ಗಳಿಕೆಯ ನಮ್ಮ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ 1928 14ರ ಇದೇ ದಿನದಂದು ಭೌತ ವಿಜ್ಞಾನಿ ಸಿ.ವಿ. ರಾಮನ್ ಬೆಳಕಿನ ವಕ್ರೀಭವನದ ಬಗ್ಗೆ ಹೊಸತೊಂದು ಪ್ರತಿಪಾದನೆಯನ್ನು ಮಂಡಿಸಿದ್ದರು. Inelastic Scattering of Photons in Liquids ಎಂಬ ಈ ಹೊಸ ಹೊಳಹಿನಲ್ಲಿ ತನ್ನ ಮೇಲೆ ಬಿದ್ದ ದ್ರವಗಳು ಬದಲಿಸುವುದು ಹೇಗೆಂದು ತಿಳಿಸಿಕೊಟ್ಟಿದ್ದರು. ಮುಂದಿನ ಎರಡೇ ವರ್ಷಗಳಲ್ಲಿ (1930) 'ರಾಮನ್ ಪರಿಣಾಮ'ವೆಂದು ಹೆಸರಾದ ಆ ಹೊಸ ಚಿಂತನೆಗೆ ನೊಬಲ್ ಪಾರಿತೋಷಕವೂ ಸಿಕ್ಕಿತು. ಅಂದಿನಿಂದ ಇಂದಿನವರೆಗೆ–ಭಾರತದಲ್ಲೇ ಹುಟ್ಟಿ, ಬೆಳೆದು, ತಮ್ಮ ಕಾರ್ಯಕ್ಷೇತ್ರವನ್ನು ವಿದೇಶಕ್ಕೆ ಬದಲಿಸದ ಏಕೈಕ ನೊಬೆಲ್ ಪುರಸ್ಕೃತ ವಿಜ್ಞಾನಿ – ಸಿ.ವಿ. ರಾಮನ್. ರಾಜೀವ್ ಗಾಂಧಿಯವರು ಪ್ರಧಾನಿಯಾಗಿದ್ದ ಕಾಲದಲ್ಲಿ ಫೆಬ್ರವರಿ 28 ರ ಈ ದಿನವನ್ನು 'ರಾಷ್ಟ್ರೀಯ ವಿಜ್ಞಾನ ದಿನ'ವೆಂದು ಮೊದಲ ಬಾರಿಗೆ ಗುರುತಿಸಲಾಯಿತು.

ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟು ಹದಿನೈದು ವರ್ಷಗಳು ಉರುಳಿವೆ. ಈ ವರ್ಷವನ್ನು ಜಗತ್ತಿನೆಲ್ಲೆಡೆ "ಅಂತಾರಾಷ್ಟ್ರೀಯ ಬೆಳಕು ಹಾಗೂ ಬೆಳಕು–ಆಧರಿತ ತಂತ್ರಜ್ಞಾನ' ವರ್ಷವಾಗಿ ಸಂಯುಕ್ತ ರಾಷ್ಟ್ರಗಳ ಒಕ್ಕೂಟ ಘೋಷಿಸಿದೆ. ಕಳೆದೊಂದು ಶತಮಾನದತ್ತ ಅವಲೋಕಿಸಿದಾಗ ನಿಚ್ಚಳವಾಗಿ ಕಂಡುಬರುವುದು ವಿಜ್ಞಾನದೊಂದಿಗೆ ನಡೆದ ಅನುಸಂಧಾನದ ಚರಿತ್ರೆಯೇ. ವಿಜ್ಞಾನದ ಜತೆಗಿನ ಈ ಅನುಸಂಧಾನ ಮಾನವ ಚಿಂತನೆಯ ದಿಕ್ಕನ್ನೇ ಬದಲಿಸಿದೆ. ವಿಜ್ಞಾನ ಸಂಶೋಧನೆಗಳು, ಚಿಂತನೆಗಳು, ಅವುಗಳಿಂದ ಮೂಡಿದ ತಂತ್ರಜ್ಞಾನ ಹೊಸ ಸಂಸ್ಕೃತಿಯ ಹುಟ್ಟಿಗೆ ನಾಂದಿ ಹಾಡಿವೆ. ಮನುಕುಲದ ಇತಿಹಾಸದಲ್ಲಿ ಕಳೆದ ಒಂದು ಶತಮಾನದಲ್ಲಿ ನಡೆದಷ್ಟು ವೈಜ್ಞಾನಿಕ ಪ್ರಗತಿ ಇನ್ಯಾವ ಕಾಲದಲ್ಲಿಯೂ ನಡೆದಿಲ್ಲ. ಈ ಪ್ರಗತಿಯ ಬಗ್ಗೆ ಮಾತನಾಡುವಾಗ ಕೂಡಲೇ ನಮ್ಮ ನೆನಪಿಗೆ ಬರುವುದು ಅದು ಕೊಟ್ಟಿರುವ ಐಹಿಕ ಸುಖಸಾಧನಗಳು. ಅದು ಮಿಂಚಿನ ವೇಗದ ವಿಮಾನ–ಅಂತರಿಕ್ಷ ಶಟಲ್ ಪಯಣವಾಗಿರಬಹುದು. ಇಲ್ಲವೆ ಜಗತ್ತನ್ನೇ ಒಂದು ಪುಟ್ಟ ಹಳ್ಳಿಯಾಗಿಸಿಬಿಟ್ಟಿರುವ ಟೆಲಿಫೋನ್–ಇಂಟರ್‌ನೆಟ್ ಸಂಪರ್ಕವಿರಬಹುದು ಅಥವಾ ಕಣ್ಣು ಮಿಟುಕಿಸುವಷ್ಟರಲ್ಲಿ ಮೇಲೇರುತ್ತಾ ಕೃತಕ ಉಪಗ್ರಹವೊಂದನ್ನು ಉಡ್ಡಯಿಸಿರುವ ರಾಕೆಟ್ ಆಗಿರಬಹುದು. ಹೀಗೆ ಕಳೆದೊಂದು ಶತಮಾನದಿಂದ ಮೂಲ ವಿಜ್ಞಾನ ಮತ್ತದಕ್ಕೆ ಪೂರಕವಾಗಿರುವ ತಂತ್ರಜ್ಞಾನ ನಮ್ಮೆಲ್ಲರ ಕಲ್ಪನೆಯನ್ನೂ ಮೀರಿ ಬೆಳೆಯುತ್ತಿದೆ. ಮಾನವನ ಬೌದ್ಧಿಕ ಚಿಂತನೆಯ ವಿಧಾನವನ್ನೇ ಬದಲಾಯಿಸಿದೆ.

ಈ ಅಗಾಧ ವಿಶ್ವದಲ್ಲಿ ಸದ್ಯಕ್ಕೆ ಗುರುತಿಸಿರುವಂತೆ ಜೀವಿಗಳಿರುವ ಏಕೈಕ ಗ್ರಹ ನಮ್ಮ ಭೂಮಿ. ಈ ಭೂಮಿ ತನ್ನದೇ ಅಕ್ಷದಲ್ಲಿ ಸುತ್ತುವ ವೇಗವನ್ನು ಭೂಮಧ್ಯ ರೇಖೆಯ ಹತ್ತಿರ ಅಳೆದರೆ ಅದು ಗಂಟೆಗೆ ಒಂದು ಸಾವಿರ ಮೈಲಿಗಳು. ಆಕಸ್ಮಾತ್ ಈ ವೇಗ ಗಂಟೆಗೆ ನೂರು ಮೈಲುಗಳಿಗೆ ಇಳಿದರೆ ಏನಾಗುತ್ತದೆ? ನಮ್ಮ ದಿನ ಮತ್ತು ರಾತ್ರಿಗಳ ಅವಧಿ ಹತ್ತು ಪಟ್ಟು ಹೆಚ್ಚಾಗುತ್ತದೆ. ಸೂರ್ಯ ಹೆಚ್ಚು ಕಾಲ ಪ್ರಜ್ವಲಿಸಿದಂತೆ ಹಸಿರೆಲ್ಲ ನಾಶವಾಗಬಹುದು. ಸೂರ್ಯನ ತಾಪಮಾನ ಹತ್ತು ಸಹಸ್ರ ಡಿಗ್ರಿ ಫ್ಯಾರನ್‌ಹೀಟ್ ಎಂದು ಅಂದಾಜು ಮಾಡಲಾಗಿದೆಯಲ್ಲವೇ? ನಮ್ಮ ಭೂಮಿ ಕಾಪಾಡಿಕೊಂಡಿರುವ ದೂರದಿಂದ ನಾವಿನ್ನೂ ಸುರಕ್ಷವಾಗಿದ್ದೇವೆ. ಈ ದೂರ ಹೆಚ್ಚಾದರೆ ಸಾಕಷ್ಟು ಬಿಸಿಯಿಲ್ಲದೆ ನಮ್ಮ ರಕ್ತ ಹೆಪ್ಪುಗಟ್ಟಬಹುದು. ದೂರ ಕಮ್ಮಿಯಾದರೆ ಆ ಸುಡು ತಾಪಮಾನಕ್ಕೆ ನಾವೆಲ್ಲಾ ಸುಟ್ಟು ಕರಲಾಗಬಹುದು. ನಮ್ಮ

ಭೂಮಿ ಸೂರ್ಯನನ್ನು ಸುತ್ತುವುದು ಇಪ್ಪತ್ಮೂರು ಡಿಗ್ರಿ ಕೋನದಲ್ಲಿ. ಈ ಕಾರಣದಿಂದ ನಮ್ಮಲ್ಲಿ ಋತು ಬದಲಾವಣೆ. ಈ ವಾಲುವ ಕೋನದ ಬದಲು ಭೂಮಿ ನೆಟ್ಟಗೆ ಸೂರ್ಯನನ್ನು ಸುತ್ತಿದ್ದರೆ? ಸಾಗರದ ನೀರೆಲ್ಲಾ ಆವಿಯಾಗಿ, ಆ ಆವಿ ತಂಪಾಗಿ ಇಡೀ ಭೂಮಂಡಲದ ತುಂಬ ಮಂಜುಗಡ್ಡೆಯ ರಾಶಿಯೆ ತುಂಬಿರುತ್ತಿತ್ತು. ಇನ್ನು ಚಂದ್ರ ಮತ್ತು ಭೂಮಿಗಿರುವ ಅಂತರ ಹೆಚ್ಚಾಗದ್ದಿದ್ದರೆ? ಗುರುತ್ವಾಕರ್ಷಣೆಯಲ್ಲಿ ಏರುಪೇರಾಗಿ ಸಮುದ್ರಗಳೆಲ್ಲ ಉಕ್ಕಿ ಹರಿದು ನಾವೆಲ್ಲ ಕೊಚ್ಚಿ ಹೋಗುತ್ತಿದ್ದವೇನೋ? ಇದೇ ರೀತಿ ಭೂಮಿಯೊಳಗಿನ ಕೇಂದ್ರದ ಸ್ಥಾನ ಹೆಚ್ಚೂ-ಕಮ್ಮಿಯಾಗಿದ್ದರೆ? ಸಾಗರ ಮತ್ತಷ್ಟು ಆಳವಾಗಿದ್ದರೆ? ಆಮ್ಲಜನಕ ಮತ್ತು ಇಂಗಾಲದ ಡೈ ಆಕ್ಸೈಡ್ ಪ್ರಮಾಣದಲ್ಲಿ ಏರುಪೇರಾಗುತ್ತಿತ್ತು.

ನಿಮ್ಮಲ್ಲಿ ಅನೇಕರು ಗಣಿತ ವಿಜ್ಞಾನದ ರೋಚಕ ಭಾಗವಾದ 'ಸಂಭವನೀಯತೆ' ಯನ್ನು ಶಾಸ್ತ್ರೋಕ್ತವಾಗಿ ಕಲಿತಿಲ್ಲದಿರಬಹುದು. ಇದರಲ್ಲಿ ಸಾಮಾನ್ಯವಾಗಿ ಚರ್ಚಿಸುವ ವಿಷಯವೆಂದರೆ ಒಂದು ನಿರ್ದಿಷ್ಟ ಕ್ರಮದಲ್ಲೇ ಸಂಖ್ಯೆಗಳು ಬರುವ ಸಾಧ್ಯತೆ ಎಷ್ಟು? ಉದಾಹರಣೆಗೆ ಒಂದರಿಂದ ಹತ್ತರ ತನಕ ಕ್ರಮಸಂಖ್ಯೆಯಿರುವ ಹತ್ತು ನಾಣ್ಯಗಳಿವೆ ಎಂದು ಭಾವಿಸಿ. ಚೆನ್ನಾಗಿ ಕುಲುಕಿರುವ ಈ ನಾಣ್ಯಗಳನ್ನು ಪಾತ್ರೆಯಿಂದ ಹೊರ ತೆಗೆಯಲು ನಿಮಗೆ ಹೇಳುತ್ತಾರೆ. ನೀವು ಒಂದನೇ ಕ್ರಮ ಸಂಖ್ಯೆಯ ನಾಣ್ಯವನ್ನು ಮೊದಲ ಪ್ರಯತ್ನದಲ್ಲೇ ತೆಗೆಯುವ ಸಾಧ್ಯತೆ ಎಷ್ಟು? ಹತ್ತರಲ್ಲಿ ಒಂದು. ಒಂದು ಮತ್ತು ಎರಡನೇ ಸಂಖ್ಯೆಯ ನಾಣ್ಯಗಳನ್ನು ಒಂದಾದ ನಂತರ ಮತ್ತೊಂದರಂತೆ ಕ್ರಮವಾಗಿ ತೆಗೆಯುವ ಸಾಧ್ಯತೆ ನೂರರಲ್ಲಿ ಒಂದು. ಇದೇ ರೀತಿ ನಾಣ್ಯಗಳನ್ನು ಪಾತ್ರೆಗೆ ಹಾಕಿ, ಕುಲುಕಿ ಕ್ರಮವಾಗಿ ಒಂದು, ಎರಡು ಮತ್ತು ಮೂರನೆಯ ನಾಣ್ಯಗಳನ್ನು ತೆಗೆಯಬಲ್ಲ ಸಾಧ್ಯತೆ ಸಾವಿರದಲ್ಲಿ ಒಂದು ಮಾತ್ರ ಇದೇ ರೀತಿ ಒಂದರಿಂದ ಹತ್ತರವರೆಗೆ ಕ್ರಮವಗಿ ನಾಣ್ಯಗಳನ್ನು ತೆಗೆಯುವ ಸಾಧ್ಯತೆ ಒಂದು ಸಹಸ್ರ ಕೋಟಿಯಲ್ಲೊಂದು. ಇದೇ ರೀತಿ ಗ್ರಹವೊಂದರ ಮೇಲೆ ಜೀವ ವಿಕಾಸವಾಗಲು ಅಗತ್ಯವಾದ ಪೂರಕ ಅಂಶಗಳೆಲ್ಲಾ ಏಕಕಾಲಕ್ಕೆ ಮೇಳೈಸಲು ಅದೆಷ್ಟು ಲಕ್ಷ ಕೋಟಿಗಳಲ್ಲಿ ಒಂದು ಸಾಧ್ಯತೆಯೊ? ಎಣಿಸಲಾಗದು.

ರಾಮನ್ ಮತ್ತು ಅವರು ಹುಟ್ಟುಹಾಕಿದ ಅಪ್ಪಟ ಸ್ವಾಲಂಬನೆಯ ವಿಜ್ಞಾನ ಚಿಂತನೆಯ ಬಗ್ಗೆ ಚರ್ಚೆ ಮಾಡಲೇಬೇಕಾದ ಸಂದರ್ಭವಿದು. ಜಗತ್ತಿನ ಭವಿಷ್ಯವನ್ನು ರೂಪಿಸುವಲ್ಲಿ ಭಾರತೀಯರು ಮಹತ್ವದ ಪಾತ್ರವಹಿಸಲಿದ್ದಾರೆಂದು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಈಗಾಗಲೇ ಮನವರಿಕೆಯಾಗಿದೆ. ದೇಶವೊಂದರ ಆರ್ಥಿಕ ಪ್ರಗತಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆ ಅಪಾರ. ಇಂದಿನ 'ವಿಶ್ವ ವ್ಯಾಪಾರ ಸಂಸ್ಥೆ' ಯಿಂದ ಪ್ರೇರಿತವಾದ ಜಾಗತೀಕರಣದ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಉತ್ತೇಜನ ನೀಡದಿರುವ ದೇಶಗಳಿಗೆ ಉಳಿಗಾಲವಿಲ್ಲ. ಜಗತ್ತಿನೆಲ್ಲೆಡೆ ನೋಬಲ್ ಪುರಸ್ಕೃತರನ್ನು ಪೋಷಿಸುವ ಸಂಸ್ಥೆ ವಿಶ್ವವಿದ್ಯಾಲಯ. ಈ ನಿಟ್ಟಿನಲ್ಲಿ ನಮ್ಮ ದೇಶದ ವಿಶ್ವವಿದ್ಯಾಲಯಗಳು ಕಳೆದ ಎಂಬತ್ತೈದು ವರ್ಷಗಳಲ್ಲಿ ಮತ್ತೊಬ್ಬ ಸಿ.ವಿ. ರಾಮನ್ ಅನ್ನು ಕೊಟ್ಟಿಲ್ಲ. ಇದರ ಬಗ್ಗೆ ಕಾರಣ ಹುಡುಕ ಹೊರಟರೆ ನಮ್ಮೆಲ್ಲ ಪ್ರತಿಭಾವಂತ ವಿದ್ಯಾರ್ಥಿಗಳು ಮೂಲ ವಿಜ್ಞಾನ ಅಧ್ಯಯನದಿಂದ ವಿಮುಖರಾಗಿರುವ ಕಠೋರ ಸತ್ಯ ಗೋಚರಿಸುತ್ತದೆ. ಒಂದೆಡೆ ಸಂಪನ್ಮೂಲಗಳ ಕೊರತೆ, ಮತ್ತೊಂದೆಡೆ ಅನ್ವೇಷಕ ಪ್ರವೃತ್ತಿಯ ವಿದ್ಯಾರ್ಥಿಗಳ ಅಭಾವ. ಈ ನೆಪಗಳಿಗೂ ಮಿಗಿಲಾದ ಒಂದು ಪ್ರಮುಖ ಕಾರಣವೊಂದಿದೆ. ಅದುವೇ ಬದಲಾಗುತ್ತಿರುವ ಆದ್ಯತೆ. ಜಗತ್ತಿನ ಮೂರನೆಯ ಅತಿದೊಡ್ಡ ಸಂಖ್ಯೆಯ ವಿಜ್ಞಾನ (ತಂತ್ರಜ್ಞಾನ) ಪದವೀಧರರನ್ನು ಉತ್ಪಾದಿಸುತ್ತಿರುವ ದೇಶ ನಮ್ಮದು. ಇಂಥದೊಂದು ಕ್ಲೀಶೆಯ ವಾಕ್ಯ ಆಗಿಂದಾಗ್ಗೆ ನಮ್ಮ ಕಿವಿಗೆ ತಪ್ಪದೇ ಬೀಳುತ್ತಿರುತ್ತದೆ. ಈ ಮಾತುಗಳು ನಿಜವೇ ಆಗಿದ್ದರೆ ಮತ್ತೊಬ್ಬ ರಾಮನ್ ನಮ್ಮ ದೇಶದಲ್ಲೇಕೆ ಹುಟ್ಟಲಿಲ್ಲ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸದ್ಯಕ್ಕೆ ಫ್ಯಾಕ್ಟರಿಯಲ್ಲಿ ಹೊರಬರುವ ಉತ್ಪನ್ನಗಳಂತೆ ಎಂಜಿನಿಯರಿಂಗ್ ಪದವೀಧರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಆದರೆ ಮೂಲ ವಿಜ್ಞಾನ ವಿಷಯಗಳನ್ನು ಗಂಭೀರವಾಗಿ ಅಭ್ಯಸಿಸುವವರ ಸಂಖ್ಯೆ ಕ್ಷೀಣಿಸುತ್ತಿದೆ. ನಮ್ಮ ಹೆಮ್ಮೆಯ 'ಭಾರತೀಯ ವಿಜ್ಞಾನ ಮಂದಿರ' ಕ್ಕೆ ಮೊದಲ ಭಾರತೀಯ ನಿರ್ದೇಶಕರಾಗಿ ಬಂದ ಸಿ.ವಿ. ರಾಮನ್ ಅವರು ಬ್ರಿಟನ್ನಿನಲ್ಲಿ ಉನ್ನತ ವ್ಯಾಸಂತ ನಡೆಸುತ್ತಿದ್ದ ಹೋಮಿ ಜಹಾಂಗೀರ್ ಭಾಭಾ ಮತ್ತು ವಿಕ್ರಮ್ ಸಾರಾಭಾಯ್ ಅವರನ್ನು ಬೆಂಗಳೂರಿನಲ್ಲಿಯೇ ಉಳಿಯುವಂತೆ ಮಾಡಿದರು. ಆ ಕಾಲದ ಮುಂಚೂಣಿ ಅಧ್ಯಯನ ವಿಷಯವಾಗಿದ್ದ 'ಕಾಸ್ಮಿಕ್ ಕಿರಣ' ಗಳ ಅಧ್ಯಯನಕ್ಕೆಂದು ಪ್ರತ್ಯೇಕ ಪ್ರಯೋಗಶಾಲೆಗಳನ್ನು ನಿರ್ಮಿಸಿಕೊಟ್ಟರು. ನಂತರದ ದಿನಗಳಲ್ಲಿ ಭಾಭಾ ಅವರು ಅದೇ ಆವರಣದಲ್ಲಿ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್' ಆರಂಭಿಸಿದರು. ಅದು ದೇಶದ 'ಪರಮಾಣು ವಿಜ್ಞಾನ' ಅಧ್ಯಯನದ ತವರುಮನೆಯಾಗಿ ಪರಿವರ್ತನೆಗೊಂಡಿತು.

ಬೆಂಗಳೂರಿನಿಂದ ತಮ್ಮ ತವರುಮನೆ ಅಹ್ಮದಾಬಾದಿನ ತನಕ 'ಕಾಸ್ಮಿಕ್ ಕಿರಣ' ಗಳ ಸಂಶೋಧನೆಯನ್ನು ವಿಸ್ತರಿಸಿದ ಸಾರಾಭಾಯ್ ತಮ್ಮ ಮನೆಯಲ್ಲಿಯೇ 'ಫಿಸಿಕಲ್ ರೀಸರ್ಚ್ ಲ್ಯಾಬೊರೇಟರಿ' ಸ್ಥಾಪಿಸಿದರು. ಅದು 'ಬಾಹ್ಯಾಕಾಶ ವಿಜ್ಞಾನ' ಅಧ್ಯಯನದ ತೊಟ್ಟಿಲಾಯಿತು. ಇಂದು ಜಗತ್ತಿನ ಪ್ರಮುಖ ಐದು ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವೂ ಸೇರಿದೆಯೆಂದರೆ ಅದಕ್ಕೆ ಕಾರಣ ಇವೆರಡೂ ಮುಂಚೂಣಿ ವಿಜ್ಞಾನ ಕ್ಷೇತ್ರಗಳಲ್ಲಿ ಭಾರತ ಪ್ರದರ್ಶಿಸಿರುವ ಅಪ್ರತಿಮ ಸಾಧನೆಗಳು.

ರಾಮನ್, ಭಾಭಾ, ಸಾರಾಭಾಯ್ ಮಾತ್ರವಲ್ಲ, ವಿಶ್ವೇಶ್ವರಯ್ಯನವರನ್ನೂ ಮರೆತಿರುವ ಕಾಲವಿದು. ಕಾರು ಕಾರ್ಖಾನೆ ಕೊಡದೇ ಸತಾಯಿಸಿದ ಬ್ರಿಟೀಷರನ್ನು ಸಾಕಷ್ಟು ಒತ್ತಾಯಿಸಿ ಕಡೆಗೆ ವಿಮಾನ ಕಾರ್ಖಾನೆಯೊಂದನ್ನು ಬೆಂಗಳೂರಿಗೆ ಕೊಡುವಂತೆ ಮಾಡಿದ ಮೇರು ತಂತ್ರಜ್ಞ ವಿಶ್ವೇಶ್ವರಯ್ಯ. ಅಂದಿನ ಅವರ ಪರಿಶ್ರಮದಿಂದಾಗಿಯೇ ಬೆಂಗಳೂರಿಗೆ ದೇಶದ ವೈಮಾಂತರಿಕ್ಷ ರಾಜಧಾನಿಯೆಂಬ ಬಿರುದು. ಎಲ್ಲ ವಿದೇಶಿ ಅಸಹಕಾರಗಳನ್ನು ಎದುರಿಸಿ ದೇಶೀಯವಾಗಿ ವಿಮಾನಗಳನ್ನು ವಿನ್ಯಾಸ ಮಾಡಿ, ಅಗ್ಗದ ದರದಲ್ಲಿ ತಯಾರಿಸಿ ಗಡಿ ಕಾಯುವ ವಾಯುಪಡೆಗೆ ಸತತವಾಗಿ ವಿಮಾನಗಳನ್ನು ಪೂರೈಸುತ್ತಿರುವ ಕಾರ್ಖಾನೆ ಬೆಂಗಳೂರಿನಲ್ಲಿಯೇ ಇದೆ. 'ಸಶಕ್ತನಾಗಿದ್ದರೆ ಮಾತ್ರ ಮತ್ತೊಬ್ಬ ಶಕ್ತ ನಮ್ಮನ್ನು ಗೌರವಿಸಬಲ್ಲ' ಎಂಬ ಭಾಭಾ ಅವರ ಮಾತುಗಳನ್ನು ಕಾರ್ಯಗತಗೊಳಿಸಲು ದೇಶದ ಪರಮಾಣು ಶಕ್ತಿ ಮತ್ತು ರಕ್ಷಣಾ ಸಂಶೋಧನಾ ಇಲಾಖೆಗಳನ್ನು ಸ್ವಾವಲಂಬನೆಯ ದಾರಿಗೆ ಎಳೆದ ರಾಜಾರಾಮಣ್ಣ ನಮ್ಮ ನೆನಪಿಗೆ ಬರುತ್ತಿಲ್ಲ. ಸೂಪರ್ ವಾಹಕದಿಂದ ಆರಂಭಿಸಿ ಇದೀಗ ನ್ಯಾನೊ ತಂತ್ರಜ್ಞಾನಕ್ಕೆ ಸಂಬಂಧಿಸಿದ ರಸಾಯನ ವಿಜ್ಞಾನ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ ಚಿಂತಾಮಣಿ ನಾಗೇಶ ರಾಮಚಂದ್ರ ರಾವ್, ವಾಯುಚಲನ ವಿಜ್ಞಾನದ ಜಗದ್ಗುರು ರೊದ್ದ ನರಸಿಂಹ, ಜೀವ ವಿಜ್ಞಾನದ ಕ್ಲಿಷ್ಟ ಲೆಕ್ಕಾಚಾರಗಳನ್ನು ಗಣಿತದೊಂದಿಗೆ ತಾಳೆನೋಡುತ್ತಾ ಪರಿಸರ ವಿಜ್ಞಾನದಲ್ಲಿ ವಿಶ್ವಮಾನ್ಯ ಸಾಧನೆಗೈದಿರುವ ಮಾಧವ ಗಾಡ್ಗೀಳ್, ಪರಮಾಣು ವಿಜ್ಞಾನವನ್ನು ಕಲಿತೂ ಗಾಂಧಿವಾದಿಯಾಗಿ ರೂಪುಗೊಂಡು ಸಾಮಾನ್ಯರಿಗೆ ವಿಜ್ಞಾನ ಮುಟ್ಟಿಸಿದ ಹೆಚ್.ನರಸಿಂಹಯ್ಯ, ರಾಕೆಟ್ ತಂತ್ರಜ್ಞಾನ ಅಭ್ಯಸಿಸಿ ದೇಶದ ಮುಂಚೂಣಿ ಯೋಜನೆಗಳ ಸೂತ್ರಧಾರಿಯಾದ ಅಬ್ದುಲ್ ಕಲಾಮ್, ಉಪಗ್ರಹಗಳನ್ನು ಸ್ವದೇಶಿಯಾಗಿ ನಿರ್ಮಿಸುವ ಮೂಲಕ ದೇಶವನ್ನು ಸ್ವಾವಲಂಬನೆಯ ಹಾದಿಯಲ್ಲಿ ಮುನ್ನಡೆಸಿದ ಉಡುಪಿ ರಾಮಚಂದ್ರ ರಾವ್ ಇವರೆಲ್ಲರನ್ನೂ ಸಾರಾಸಗಟಾಗಿ ಮರೆತುಬಿಟ್ಟಿದ್ದೇವೆ. ನಮ್ಮ ವಿಜ್ಞಾನ ವಿದ್ಯಾರ್ಥಿಗಳಿಗೆ ಇಂಥ ವಿಜ್ಞಾನಿಳು 'ರೋಲ್ ಮಾಡಲ್'ಗಳಾದಾಗಲಷ್ಟೇ ದೇಶದ ಹಿರಿಮೆಗೆ ಮತ್ತಷ್ಟು ಗರಿ ಸೇರಬಹುದು. ಹಾಗಾದಲ್ಲಿ ಮಾತ್ರ ನಮ್ಮ ದೇಶವೂ ಮುಂಚೂಣಿ ರಾಷ್ಟ್ರಗಳ ಸಾಲಿನಲ್ಲೇ ಮೊದಲಿಗನಾಗಿ ತಲೆಯತ್ತಿ ನಿಲ್ಲಬಹುದು.

**ಆಕರ :** ಕಸ್ತೂರಿ – ಫೆಬ್ರವರಿ 2015

* * * * *

# 4. ಅನನ್ಯತೆ ಅಭಿವೃದ್ಧಿಗಳ ಜೊತೆ ಸಮಾನತೆ (ಓದು ಪಠ್ಯ)

– ಎಸ್.ಆರ್. ವಿಜಯಶಂಕರ

ಬದಲಾವಣೆ ಈ ಲೋಕದ ಶಾಶ್ವತ ಸತ್ಯ. ಅಭಿವೃದ್ಧಿ ಅದರ ಒಂದು ಮುಖ. ಅಭಿವೃದ್ಧಿ ಸಂದರ್ಭದಲ್ಲಿ ಆ ತನಕ ಇದ್ದ ಅನನ್ಯತೆ ಹೋಗಿಬಿಡುತ್ತದೆ. ಹಾಗಿದ್ದರೆ ಅನನ್ಯತೆಯನ್ನು ಉಳಿಸಿಕೊಂಡೂ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವೇ? ಇಂತಹ ಜಿಜ್ಞಾಸೆಯೊಂದು ಇತ್ತೀಚೆಗೆ (17–01–2011) ಉತ್ತರಕನ್ನಡ ಜಿಲ್ಲೆಯ ಅನನ್ಯತೆ ಮತ್ತು ಅಭಿವೃದ್ಧಿ ಕುರಿತು ಯಲ್ಲಾಪುರ ತಾಲ್ಲೂಕಿನ ಪುಟ್ಟ ಊರು ಮಂಚಿಕೇರಿಯಲ್ಲಿ ನಡೆಯಿತು. ಪ್ರಸಿದ್ಧ ಕತೆಗಾರ ಶ್ರೀಧರ ಬಳಗಾರರು ನಡೆಸಿಕೊಟ್ಟ ಈ ವಿಚಾರ ಸಂಕಿರಣದಲ್ಲಿ ಉತ್ತರಕನ್ನಡ ಜಿಲ್ಲೆಯ ಚಿಂತಕರು, ವಿವಿಧ ಪಕ್ಷಗಳ ರಾಜಕೀಯ ನಾಯಕರು, ಅಲ್ಲಿನ ಲೋಕ ಸಭಾಸದಸ್ಯ ಅನಂತಕುಮಾರ ಹೆಗಡೆ ಸಹಕಾರಿ ಧುರೀಣರು, ಪತ್ರಕರ್ತರು, ಪ್ರಸಿದ್ಧ ಪರಿಸರವಾದಿ ನಾಗೇಶ ಹೆಗಡೆ ಮೊದಲಾದವರು ಮಾತನಾಡಿದರು. ಪ್ರೇಕ್ಷಕನಾಗಿ ಬೆಳಗಿನಿಂದ ಸಂಜೆವರೆಗೆ ಆ ಸಭೆಯಲ್ಲಿ ಕುಳಿತಿದ್ದ ನನ್ನಲ್ಲಿ ಬೆಳೆದ ಅನನ್ಯತೆ ಹಾಗೂ ಅಭಿವೃದ್ಧಿಯನ್ನು ಕುರಿತ ಕೆಲವು ವಿಚಾರಗಳನ್ನು ಈ ಅಂಕಣದ ಓದುಗರ ಜೊತೆಗೂ ಹಂಚಿಕೊಳ್ಳಬಹುದು ಅನಿಸಿತು.

### ಆಂತರಿಕ ವಿರೋಧಾಭಾಸಗಳಿಂದ ಬದಲಾವಣೆ

ಡಯಾಲೆಕ್ಟಿಕಲ್ ಮೆಟಿರಿಯಲಿಸಮ್ (Dialectical Materialism) ಮೂಲಕ ಸಾಮ್ಯವಾದವನ್ನು ಮಂಡಿಸಿದ ಕಾರ್ಲ್‌ಮಾರ್ಕ್ಸ್; ಈ ಲೋಕವು ಅಮಿತವೂ ತ್ರಿಕಾಲ ಬಾಧಿತವೂ ಆದ ಚಲನಶೀಲ ಭೌತ ದ್ರವ್ಯದಿಂದ ಕೂಡಿದ್ದು ಅದರ ಆಂತರಿಕ ವಿರೋಧಾಭಾಸಗಳಿಂದ ಅದು ಸದಾ ಬದಲಾವಣೆ ಹೊಂದುತ್ತಿರುತ್ತದೆ ಎಂದು ಹೇಳಿದ. ಆರ್ಥಿಕ ಲೋಕಕ್ಕೂ ಅದು ಸತ್ಯ. ಪಾಳೇಗಾರಿ ವ್ಯವಸ್ಥೆಗೆ ಎದುರಾಗಿ ಬಂಡವಾಳ ಶಾಹಿ ವ್ಯವಸ್ಥೆ ಬೆಳೆಯುತ್ತವೆ. ಬಂಡವಾಳ ಶಾಹಿ ವ್ಯವಸ್ಥೆಗೆ ಎದುರಾಗಿ ಬರುವ ವ್ಯವಸ್ಥೆ ಸಾಮ್ಯವಾದ ಆಧರಿತ.

ಫ್ಯೂಡಲಿಸಂ ಅಥವಾ ಪಾಳೇಗಾರಿ ವ್ಯವಸ್ಥೆ ಬದಲಾದಾಗಲೂ ಅದರ ಎಷ್ಟೋ ಅನನ್ಯತೆಗಳು ನಾಶವಾಗಿವೆ. ಅಂತಹ ಜೀವನ ಕ್ರಮದ ನಾಶವೂ ಅನಿವಾರ್ಯ ಎಂಬುದನ್ನೇ ಚೆಕಾಫ್‌ನ ಚೆರಿತೋಟ ನಾಟಕ ತೋರಿಸಿಕೊಡುವುದು. ಆದುದರಿಂದ ಯಾವುದೇ ಅಭಿವೃದ್ಧಿಯಾದಾಗಲೂ ಆ ಹಿಂದೆ ಇದ್ದ ಒಂದಷ್ಟು ಅನನ್ಯತೆ ನಾಶವಾಗುತ್ತದೆ. ಅಂತಹ ಅಭಿವೃದ್ಧಿ ಕೈಗಾರಿಕೆ ಮುಂತಾದ ಬಂಡವಾಳ ತೊಡಗಿಸುವ ಉದ್ಯಮಗಳಿಂದ ನಡೆದಾಗ ಒಂದಷ್ಟು ಪರಿಸರವೂ ಬದಲಾವಣೆಗೆ ಒಳಗಾಗುತ್ತದೆ. ಅದರಲ್ಲೇನು ಮಹಾ ಎಂಬುದೂ ಒಂದು ವಾದ.

### ಕಪ್ಪು–ಬಿಳಿ ಅಲ್ಲ

ಆದರೆ ವಾಲ್ಟರ್ ಬೆಂಜಮಿನ್ ಎಂಬ ಎಡಪಂಥೀಯ ಚಿಂತಕ ಸೂಚಿಸುವಂತೆ ಯಾವುದೇ ಕಾಲಘಟ್ಟವೂ ಹಾಗೆ ಕಪ್ಪು–ಬಿಳಿ ಎಂಬಂತೆ ಪ್ರತ್ಯೇಕವಾಗಿರುವುದಿಲ್ಲ. ಅವು ಎರಡೂ ಸೇರುವ ಬೂದು (Grey) ಬಣ್ಣದ ಒಂದು ಮಿಶ್ರಣ ಇಂತಹ ಬದಲಾವಣೆಗಳ ನಿರಂತರ ಪ್ರವಾಹದಲ್ಲಿ ಅಡಗಿರುತ್ತದೆ. ಬದುಕಿನ ಇಂತಹ ಪರಸ್ಪರ ಅವಲಂಬನೆಯ ಕೊಂಡಿಗಳನ್ನು ಶ್ರೇಷ್ಠ ಸಾಹಿತ್ಯ ಮರೆಯಬಾರದು ಎಂದು ಅವನು ಹೇಳಿದ. ಸಾಹಿತ್ಯದ ಸಂದರ್ಭದಲ್ಲಿ ಸತ್ಯವಾಗುವ ಮಾತು ಅಭಿವೃದ್ಧಿಯ ಸಂದರ್ಭದಲ್ಲಿ ಅಸತ್ಯವಲ್ಲ. ಆದಕಾರಣ, ಅನನ್ಯತೆ ಮತ್ತು ಅಭಿವೃದ್ಧಿ ಎರಡನ್ನೂ ಜೊತೆಯಲ್ಲಿ ಸಾಧಿಸಬಹುದೆ ? ಎಂಬ ವಿಚಾರಕ್ಕೆ ಈಗ ಹೆಚ್ಚಿನ ಮಹತ್ವವಿದೆ.

### ಯುಟಿಲಿಟೇರಿಯನಿಸಂ ಹಿನ್ನೆಲೆ

ಅಭಿವೃದ್ಧಿಯ ನಮ್ಮ ಕಲ್ಪನೆ ಸದ್ಯೋಜಾತ ಬೆಳವಣಿಗೆ ಏನಲ್ಲ. ಬಹುಶಃ ಇದರ ತಾತ್ವಿಕ ಹಿನ್ನೆಲೆ ಕಳೆದ ಶತಮಾನದ ಆದಿಯಲ್ಲಿ ಹೆಚ್ಚು ಚರ್ಚಿತವಾದ 'ಯುಟಿಲಿಟೇರಿಯನಿಸಂ' (ಪ್ರಯೋಜನ ಮುಖ್ಯವೆಂಬ ವಾದ) ತತ್ವದ

ಮೂಲದಲ್ಲೇ ಇದೆ. ಯಾವುದರಿಂದ ಹೆಚ್ಚಿನ ಜನರಿಗೆ ಹೆಚ್ಚಿನ ಸುಖ ಉಂಟಾಗುತ್ತದೋ ಅದೇ ಎಲ್ಲಾ ನೀತಿಗಳ ಮೂಲವಾಗಬೇಕು ಎಂಬುದು ಸ್ಥೂಲವಾಗಿ ಈ ಪಂಥದ ಮುಖ್ಯ ಚಿಂತಕನಾದ ಬೆಂಥಮ್‌ನ ವಾದ. ಬಂಡವಾಳ ಶಾಹಿಯೂ ಈ ತತ್ವವನ್ನು ಮತ್ತಷ್ಟು ಬೆಳೆಸಿ, ಪ್ರಜಾಪ್ರಭುತ್ವದ ಬಹುಮತದ ಬಣ್ಣವನ್ನೂ ಹಚ್ಚಿಕೊಂಡು ಇಂದು ಅಭಿವೃದ್ಧಿಯ ಕಲ್ಪನೆ ನಾನಾ ಆಟಗಳಲ್ಲಿ ತೊಡಗಿದೆ.

'ಯುಟಿಲಿಟೇರಿಯನಿಸಂ' ನೂರು ವರ್ಷಗಳ ಹಿಂದೆ ಪಡೆದ ಮಹತ್ವವನ್ನು ಇಂದು ಹೊಂದಿಲ್ಲ. ಅದು ಪ್ರತಿಪಾದಿಸಿದ ಸುಖದ ಕಲ್ಪನೆಯೇ ಮುಂದೆ ಮಹತ್ವವಾದ ಚರ್ಚೆಗೆ ಒಳಗಾಯಿತು ಆದರೆ ಸುಖದ ಪರಿಭಾಷೆ ಬದಲಾದರೂ ಅಭಿವೃದ್ಧಿಯ ನೆಪದಲ್ಲಿ ಅದರ ಭೌತಿಕ ಆಸೆ ಬದಲಾಗುವುದಿಲ್ಲ. ಅಭಿವೃದ್ಧಿಯ ಕೊಡುಗೆಗಳಲ್ಲಿ ಉದ್ಯೋಗ ಸೃಷ್ಟಿಯೂ ಈಗ ದೊಡ್ಡ ಕಾಣಿಕೆಯಾಗಿ ಕಾಣತೊಡಗಿದೆ.

### ತಂತ್ರಜ್ಞಾನದ ಗೆಲುವು

ತಂತ್ರಜ್ಞಾನವು ಯಾವಾಗಲೂ ಗೆಲ್ಲುತ್ತದೆ (Technology always wins) ಎಂಬ ಒಂದು ಮಾತಿದೆ. ಶಿಲಾಯುಧದ ಕಾಲದಿಂದ ಪ್ರತಿಹಂತದಲ್ಲೂ ಬೆಳೆಯುತ್ತಾ ಹೋದ ತಂತ್ರಜ್ಞಾನ ಮಾನವನ ಒಳಿತು ಹಾಗೂ ಯುದ್ಧದಲ್ಲಿ ನಾಶ ಎರಡೂ ಹಂತಗಳಲ್ಲಿ ತನ್ನ ಯಶಸ್ಸನ್ನು ಸಾಬೀತುಪಡಿಸಿದೆ. ತಂತ್ರಜ್ಞಾನದೊಡನೆ ನಾಗರಿಕತೆ ಬೆಳೆಯುತ್ತಾ ಹೋಗಿ ಅಭಿವೃದ್ಧಿಯ ಹೆಸರಿನಲ್ಲಿ ನಾವು ಪ್ರಕೃತಿಯಿಂದಲೂ ಅಷ್ಟಷ್ಟು ದೂರ ಹೋಗಿದ್ದೇವೆ.

ಇದನ್ನೊಂದು ಉದಾಹರಣೆಯಿಂದ ವಿವರಿಸಬಹುದು. ಹಿಂದೆ ನಮ್ಮ ಊರಿನ ಅನೇಕ ಹಿರಿಯರು ಹೊರಗೆ ಬೆಳಕು, ಬಿಸಿಲು ನೋಡಿ ಈಗ ದಿವಸದ ಇಷ್ಟು ಸಮಯವಾಯಿತು ಎಂದು ಸರಾಗ ಹೇಳಬಲ್ಲರಾಗಿದ್ದರು. ನಮ್ಮ ತಲೆಮಾರಿನ ಕಾಲಕ್ಕೆ ಕೈಗಡಿಯಾರವಿಲ್ಲದೆ ಸಮಯ ಎಷ್ಟೆಂದು ಹೇಳುವುದು ಸಾಧ್ಯವೆ ಇಲ್ಲದೆ ಹೋಯಿತು. ಇದೀಗ ಅನೇಕ ಹೊಸ ಹುಡುಗರು. ಇಂದಿನ ತಾರೀಖು ಎಷ್ಟೆಂದು ಹೇಳಲು ಮೊಬೈಲ್ ಫೋನು ಅಥವಾ ಕೆಲಸಮಾಡುವ ಮೇಜಿನ ಮೇಲಿನ ಕಂಪ್ಯೂಟರ್ ನೋಡುವುದು ಸಾಮಾನ್ಯವಾಗಿದೆ.

ತಂತ್ರಜ್ಞಾನ ಹೀಗೆ ನಿಮ್ಮ ನಿತ್ಯದ ಅಗತ್ಯವನ್ನು ಪ್ರವೇಶಿಸಿದಂತೆ ನಮ್ಮ ಎಲ್ಲಾ ಆಗು ಹೋಗುಗಳಿಗೂ ಅದನ್ನೇ ಅವಲಂಬಿಸುವಂತೆ ಮಾಡುತ್ತದೆ. ನಮ್ಮಲ್ಲಿ ಅನೇಕರಿಗೆ ವಿದ್ಯುಚ್ಛಕ್ತಿ ಇಲ್ಲದೆ ನಮ್ಮ ಬದುಕನ್ನು ಇಂದು ಊಹಿಸಲೂ ಸಾಧ್ಯವಿಲ್ಲ. ಸತ್ಯಜಿತ್ ರೇ ಅವರ ಅನೇಕ ಸಿನಿಮಾಗಳಲ್ಲಿ ರೈಲುಗಾಡಿಗಳು ಹಳೆ ಮತ್ತು ಹೊಸ ಲೋಕಗಳ ಅನಿವಾರ್ಯ ಸಂಪರ್ಕದಂತೆ ಇರುತ್ತವೆ. ಹಾಗೆಯೇ ಅದು ಆಧುನಿಕತೆಯ ಪ್ರದೇಶದ ಸೂಚನೆಯೂ ಆಗಿರುತ್ತದೆ.

### ಕಾದಂಬರಿಗಳಲ್ಲಿ ಆಧುನಿಕತೆ/ಅಭಿವೃದ್ಧಿ

ಅಭಿವೃದ್ಧಿಯನ್ನು ಆಧುನಿಕತೆಗೆ ಥಳಕು ಹಾಕುವುದು ಇಂದಿನ ಒಂದು ಹವ್ಯಾಸವೂ ಆಗಿದೆ. ಆಧುನಿಕತೆ ಹಾಗೂ ಅಭಿವೃದ್ಧಿಗೆ ಸಮೃದ್ಧಿಯ ಏಕಮುಖ ಮಾತ್ರವಲ್ಲ. ಶಿವರಾಮ ಕಾರಂತರ ಕಾದಂಬರಿ 'ಮರಳಿಮಣ್ಣಿಗೆ' ಯಲ್ಲಿ ಆಧುನಿಕ ವಿದ್ಯಾಭ್ಯಾಸಕ್ಕಾಗಿ ಪಟ್ಟಣಕ್ಕೆ ಹೋಗುವ ಲಚ್ಚ ಕೆಡುತ್ತಾನೆ. ಆಧುನಿಕತೆ ಅಲ್ಲಿ ತನ್ನ ವಿಕಾರಗಳ ಮೂಲಕ ಪ್ರವೇಶಿಸುತ್ತದೆ. ಕುವೆಂಪು ಅವರ ಕಾನೂರ ಹೆಗ್ಗಡತಿಯ ಹೂವಯ್ಯನ ಮೂಲಕ ಆಧುನಿಕತೆ ಆದರ್ಶಗಳೊಂದಿಗೆ ಒಳಬರುತ್ತದೆ. ಯು.ಆರ್. ಅನಂತಮೂರ್ತಿ ಅವರ ಭಾರತೀಪುರ ಕಾದಂಬರಿಯ ನಾಯಕ ಜಗನ್ನಾಥ ದೇವಸ್ಥಾನದ ಸಾಲಿಗ್ರಾಮವನ್ನು ಕೈಯಲ್ಲಿ ಹಿಡಿದು ಅಸ್ಪೃಶ್ಯರಿಂದ ಸ್ಪರ್ಶಿಸಲು ಮುಂದಾಗುತ್ತಾನೆ. ಆದರೆ ಮೂಲ ದೇವರನ್ನು ಮೊದಲೇ ಕಿತ್ತೊಗೆಯಲಾದ ಸಾಂದರ್ಭಿಕ ವ್ಯಂಗ್ಯದಿಂದ ಪಶ್ಚಿಮದಿಂದ ಹಿಂತಿರುಗಿದವನ ಆಧುನಿಕ ವಿಚಾರ ನಮ್ಮ ಶ್ರದ್ಧಾಕೇಂದ್ರದ ಅನನ್ಯತೆಯನ್ನು ಏಕಕಾಲಕ್ಕೆ ಪವಿತ್ರ ಹಾಗೂ ಅಪವಿತ್ರಗೊಳಿಸುತ್ತಾ ಇರುತ್ತದೆ.

### ಬಿಡುಗಡೆಯ ಹಾದಿ

ಇತ್ತೀಚೆಗೆ ದೇವನೂರು ಮಹಾದೇವ ಮೊದಲಾದವರು ಇಂಗ್ಲಿಷ್ ವಿದ್ಯಾಭ್ಯಾಸ, ಆಧುನಿಕ ಅಭಿವೃದ್ಧಿ ಮೊದಲಾದವುಗಳ ಬಗ್ಗೆ ಮಂಡಿಸುತ್ತಿರುವ ವಿಚಾರಗಳನ್ನು ಗಮನಿಸುತ್ತಿರುವವರಿಗೆ ಆಧುನಿಕತೆ ದಲಿತರಿಗೆ ಹೇಗೆ ಬಿಡುಗಡೆಯ ಹಾದಿಯಾಗುತ್ತಿದೆ

ಎಂಬುದೂ ತಿಳಿಯುತ್ತದೆ. ಇತ್ತೀಚೆಗೆ ಹಳ್ಳಿಯ ನನ್ನ ಒಬ್ಬ ಸ್ನೇಹಿತ ಹೇಳಿದ ಸಂಗತಿ : ಕೆಳಜಾತಿಯವನೊಬ್ಬ ತೋಟಕ್ಕೆ ಕೂಲಿ ಕೆಲಸಕ್ಕೆ ಬರುತ್ತಿದ್ದಾಗ ಅವನನ್ನು ಅಂಗಳದಲ್ಲಿ ನಿಲ್ಲಿಸಿ ನನ್ನ ಸ್ನೇಹಿತನ ದೊಡ್ಡಪ್ಪ ಏಕವಚನದಲ್ಲಿ ಮಾತಾಡಿಸುತ್ತಿದ್ದ. ಅದೇ ಹುಡುಗ ಹೈಸ್ಕೂಲಿನಲ್ಲಿ ಫೈಲಾಗಿ ಮುಂದೆ ಬ್ಯಾಂಕ್ ಲೋನಿನಿಂದ ಒಂದು ರಿಕ್ಷಾ ತೆಗೆದು ಅವನ ಊರಲ್ಲಿ ಬಾಡಿಗೆಗೆ ವಾಹನ ಓಡಿಸತೊಡಗಿದ. ರಿಕ್ಷಾ ಡ್ರೈವರ್‌ನಾಗಿ ಬಂದ ಅದೇ ಮನುಷ್ಯನನ್ನು ಅದೇ ದೊಡ್ಡಪ್ಪ ಬಹುವಚನದಲ್ಲಿ ಮಾತನಾಡಿಸಿ ಅವನ ದೊಡ್ಡಮ್ಮ ಅದೇ ರಿಕ್ಷಾದಲ್ಲಿ ಪ್ರಯಾಣಿಸಲು ಹೊರಟು ಬರುವಲ್ಲಿವರೆಗೆ ಮನೆ ಚಾವಡಿ ಜಗಲಿಯಲ್ಲಿರುವ ಬೆಂಚಿನಲ್ಲಿ ಕುಳ್ಳಿರಿಸಿದರಂತೆ.

ಬಿಡುಗಡೆ ಹಾಗೂ ಸಮಾನತೆಯನ್ನೂ ತರುವ ಆಧುನಿಕ ಅಭಿವೃದ್ಧಿಗೆ ಇದೊಂದು ಪುಟ್ಟ ಉದಾಹರಣೆ. ವಾಸ್ತವ ಎಂದರೆ, ತಂತ್ರಜ್ಞಾನ ವಿಸ್ತರಿಸುತ್ತಾ ಇದೆ ಎಂಬ ಸತ್ಯ. ಅದು ಅನೇಕ ಆರ್ಥಿಕ ಏರುಪೇರುಗಳನ್ನೂ ಕಾರ್ಮಿಕರ ಶೋಷಣೆಯನ್ನೂ ನಡೆಸುವುದು ನಿಜವಾದರೂ ನಮ್ಮ ಶ್ರೇಣೀಕೃತ ಸಮಾಜದಲ್ಲಿ ಸಮಾನತೆಯನ್ನೂ ಬಿಡುಗಡೆಯ ಹಾದಿಯನ್ನೂ ತೋರಿಸಲು ಕಾರಣವಾಗಿದೆ ಎಂಬುದೂ ಅಷ್ಟೇ ಸತ್ಯ.

**ಸರಿಯಾದ್ದು ಯಾವುದು?**

ಮಂಚಿಕೇರಿಯ ಸಭೆಯಲ್ಲಿ ನನ್ನ ಪಕ್ಕ ಕುಳಿತಿದ್ದ ಒಬ್ಬಾತ ನನ್ನಲ್ಲಿ ಪಿಸುಗುಟ್ಟಿದ : ಕಾಡು ಹಾಳಾಗುತ್ತದೆ ಎಂಬುದರಿಂದ ರೈಲುಮಾರ್ಗ ಬೇಡ ಎನ್ನುತ್ತಿದ್ದಾರೆ. ಈ ಜಿಲ್ಲೆಯಲ್ಲಿ ಎಷ್ಟು ಕಾಡು ಕಡಿದು ತೋಟಗಳಾಗಿದ್ದಾವೆ. ಇದಕ್ಕೇನು ಹೇಳೋಣ?

ಕೃಷಿ ಹಾಗೂ ಕೈಗಾರಿಕೆ ಎರಡರ ಪ್ರಗತಿಯಲ್ಲೂ ಪರಿಸರ ನಾಶವಾಗುತ್ತದೆ ಮತ್ತು ಕೆಲವು ಅನನ್ಯತೆಗಳೂ ಹೊರಟುಹೋಗುತ್ತವೆ. ಹೊಸದಾಗಿ ಪ್ರವೇಶಿಸುವ ಕೆಲವು ಕೈಗಾರಿಕೆಗಳು ಇನ್ನು ಕೆಲವು ಅನನ್ಯತೆಗಳನ್ನೂ ಸೃಷ್ಟಿಸುತ್ತವೆ. ಆದರೆ ಈಗ ಅಗತ್ಯ ಇರುವ ಚಿಂತನೆ; ಇಂದು ಎಷ್ಟು ಕನಿಷ್ಟ ಪರಿಸರ, ಪ್ರಕೃತಿನಾಶದಿಂದ ನಾವು ಅಭಿವೃದ್ಧಿ, ಪ್ರಗತಿ ಸಾಧಿಸಬಹುದು? ನಮ್ಮ ಪ್ರಗತಿ ಹಾಗೂ ಅಭಿವೃದ್ಧಿ ಎಂದು ನಾವು ಯಾವುದನ್ನು ವ್ಯಾಖ್ಯಾನಿಸಬೇಕು? ಎಷ್ಟನ್ನು ಅಥವಾ ಯಾವುದನ್ನು ಕಳಕೊಂಡು ಏನನ್ನು ಪಡೆಯುವುದು ಸರಿ? ಇದರ ಹಿನ್ನೆಲೆಯಲ್ಲಿ ನಮ್ಮ ಅನನ್ಯತೆ ಮತ್ತು ಅಭಿವೃದ್ಧಿಯನ್ನು ಹೇಗೆ ಸಾಧಿಸಿಕೊಳ್ಳಬೇಕು? ಉತ್ತರಕನ್ನಡ ಜಿಲ್ಲೆಯ ಚಿಂತಕರ ಈ ಒಂದು ಪ್ರಯತ್ನ ಅನನ್ಯತೆ ಹಾಗೂ ಅಭಿವೃದ್ಧಿ ಎರಡರ ನಡುವೆ ಸಾಮರಸ್ಯ ಸಾಧಿಸುವ ಬಗೆ ಹೇಗೆಂದು ಚಿಂತಿಸುವುದಾಗಿತ್ತು.

**ಸರಿಯಾದ್ದಕ್ಕೆ ಕಾಯುವ ಶಕ್ತಿ**

ಈ ಸಂಕಿರಣದ ಸಂದರ್ಭದಲ್ಲಿ ಕವಿ ಗೋಪಾಲಕೃಷ್ಣ ಅಡಿಗರ 'ಸ್ವಾತಂತ್ರ್ಯ: 1958 ರ ಮೊದಲ ಪಾಠ' ಎಂಬ ಕವನ ನನಗೆ ಆಗಾಗ ನೆನಪಿಗೆ ಬರುತ್ತಿತ್ತು. 1958 ರಲ್ಲಿ ನಮ್ಮಲ್ಲಿ ಮೊದಲ ಸಹಯೋಗ (Collaboration) ಕಾರ್ಖಾನೆಗಳ ಹುಟ್ಟು ಒಂದರ್ಥದಲ್ಲಿ ಅದು ಜಾಗತೀಕರಣದ ಮೂಲ ಬೀಜ. 'ಸಾಕು ಮಕ್ಕಳೆ ಸಾಕು ಎಂದೆ ನಾಲ್ಕು ಮಕ್ಕಳ ತಂದೆ/ ದತ್ತು. ತಂದೆ?' ಎಂದು ಪ್ರಾರಂಭವಾಗುವ ಈ ಕವನ ಕೊನೆಯಾಗುವುದು.

**ಇಲ್ಲದಿದ್ದರು ಸರಿಯೆ ಮನೆಗೆ ತೊದಲಿನ ರಕ್ಷೆ;**
**ತರಬೇಡ ದತ್ತುಗಳ ಜಿಗಣೆಯೊಲುಮೆ.**
**ನಿನ್ನ ಬೀಜದ ಫಲಕೆ ಕಾದು ಕುಳಿತಿರು ಬರುವ**
**ವರೆಗೆ ಹಣ್ಣನ್ನುಣದ ಅಮರ ಪಕ್ಷಿ.**

ಅಭಿವೃದ್ಧಿಯ ಒತ್ತಡದಲ್ಲಿ ಅಷ್ಟು ಕಾಲ ಕಾಯುವುದು ಸಾಧ್ಯವಾಗದೇ ಹೋದರೂ ಸರಿಯಾದುದಕ್ಕೆ ಕಾಯಲು ಸಾಧ್ಯ ಎಂಬ ಕಲ್ಪನೆಯನ್ನು ನಾವು ಮರೆಯಬಾರದು ಎಂಬುದನ್ನೇ ಈ ಕವನ ಸೂಚಿಸುತ್ತಿರಬಹುದು.

**ಆಕರ :** ನಿಧಾನ ಶ್ರುತಿ ಮತ್ತು ಇತರ ಲೇಖನಗಳು

* * * * *

# IV. ವ್ಯಷ್ಟಿ

## ಆಶಯ

ವ್ಯಷ್ಟಿ ವಸ್ತು ಫಲಂ ಸಮಷ್ಟಿ ಪ್ರಯೋಜನದಿ
ಪುಷ್ಟಿ ವ್ಯಷ್ಟಿಗೆ ಬಹುದು ಸಮಷ್ಟಿ ಬಲದಿಂದ
ವ್ಯಷ್ಟಿ ಸಾಮಷ್ಟ್ಯ ಮಿಂತನ್ಯೋನ್ಯಯೋಜಿತಂ
ತುಷ್ಟಿಯು ಭಯಕುಮಿರ್ಕೆ ಮರುಳ ಮುನಿಯ ॥೪೪೬॥

ವ್ಯಷ್ಟಿ = ವ್ಯಕ್ತಿ. ಬಿಡಿಯಾದ ವಸ್ತು.
ಸಮಷ್ಟಿ = ಸಮಾಜ. ವ್ಯಕ್ತಿಗಳ ಗುಂಪು.
ಸಾಮಷ್ಟ್ಯಂ = ಸಮಷ್ಟಿತನ. ಸಮಾಜದ ಚಿತ್ರಣ.

ಮನುಷ್ಯ ಸಂಘಜೀವಿ ಏಕೆಂದರೆ ಅವನು ಸಮಾಜದ ಒಳಗೆ ಬದುಕಬೇಕು. ವ್ಯಕ್ತಿಯ ಆಶೋತ್ತರಗಳು ಸಮಾಜದ ಉನ್ನತಿಗೆ ಕಾರಣವಾಗಬೇಕು. ಆದ್ದರಿಂದ ಸಮಾಜವು ಮತ್ತು ವ್ಯಕ್ತಿಯು ಪರಸ್ಪರ ಅವಲಂಬಿಸಿರುತ್ತಾರೆ. ಅಂದರೆ ವ್ಯಕ್ತಿಯ ಹಕ್ಕು ಮತ್ತು ಕರ್ತವ್ಯಗಳ ಬಹಳ ಮುಖ್ಯವಾಗುತ್ತದೆ. ಅದು ಅವನ ಸ್ವಾತಂತ್ರ್ಯಕ್ಕಿಂತಲೂ ಮಿಗಿಲಾಗಿರುತ್ತದೆ.

ಒಬ್ಬ ವ್ಯಕ್ತಿ ಅಥವಾ ಒಂದು ವಸ್ತು ಸಮಾಜಕ್ಕೆ ಅನುಕೂಲ ಮಾಡಿಕೊಟ್ಟಾಗ ಮಾತ್ರ ವ್ಯಕ್ತಿ ಅಥವಾ ವಸ್ತು ತನ್ನ ಜನ್ಮವನ್ನು ಸಾರ್ಥಕಗೊಳಿಸಿದಂತಾಗುತ್ತದೆ. ಸಮಾಜಕ್ಕೆ ಪ್ರಯೋಜನವಾಗದ ವಸ್ತು ವ್ಯಕ್ತಿ ಎರಡೂ ಕೂಡ ನಿಷ್ಫಲವಾಗುತ್ತದೆ. ಸಮಾಜದ ನೆರವನ್ನು ಪಡೆದ ವ್ಯಕ್ತಿಯು ಹೆಚ್ಚಿನ ಶಕ್ತಿಯನ್ನು ಹೊಂದುತ್ತಾನೆ. ಅಂದರೆ ವ್ಯಷ್ಟಿ ಮತ್ತು ಸಮಷ್ಟಿಗಳು ಪರಸ್ಪರ ಹೊಂದಿಕೊಂಡು ಬದುಕಬೇಕಾಗುತ್ತದೆ. ಆದ್ದರಿಂದ ವ್ಯಕ್ತಿಗಾಗಲೀ ಸಮಾಜಕ್ಕಾಗಲಿ ಸದಾ ಶಾಂತಿ ಸಂತಸ ಮತ್ತು ನೆಮ್ಮದಿಗಳು ಇರಬೇಕಾಗುತ್ತದೆ.

ಮನುಷ್ಯ ಹಕ್ಕನ್ನು ಚಲಾಯಿಸುವಂತೆ ಕರ್ತವ್ಯವನ್ನು ಮಾಡುವುದಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಗೂ ಕರ್ತವ್ಯವನ್ನು ಮಾಡಿಯೇ ತೀರಬೇಕು, ಏಕೆಂದರೆ ಕರ್ತವ್ಯ ಅಮೂಲ್ಯವಾದುದು. ಇಲ್ಲವಾದರೆ ಹಕ್ಕಿ ಪಕ್ಷಿಗಳು, ಕ್ರಿಮಿಕೀಟಗಳು, ಜನಸಾಮಾನ್ಯರು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುವಂತೆ ಮಾನವನು ತನ್ನ ಪಾಡಿಗೆ ಮನೆಕಟ್ಟಿಕೊಂಡು ಸಂಸಾರಿಯಾಗಿ ಲೋಕದ ಚಿಂತೆಯನ್ನು ಬಿಟ್ಟು ಇದ್ದರೆ, ಪಕ್ಷಿ ಮತ್ತು ಮೃಗಗಳಿಗೆ ಮೀರಿದ ಯಾವ ವಿಶೇಷವೂ ಅವನಲ್ಲಿ ಉಳಿಯುವುದಿಲ್ಲ. ಆದಕಾರಣ ಪ್ರತಿಯೊಬ್ಬ ವ್ಯಕ್ತಿಯ ಜೀವನವು ಸಮಾಜದ ಹಿತ ಮತ್ತು ಸುಖಕ್ಕೆ, ಬಲವರ್ಧನೆಗೆ ಸಹಾಯ ಮಾಡುವಂತಿರಬೇಕು.

ಇನ್ನೊಂದು ದೃಷ್ಟಿಯಲ್ಲಿ ಹೇಳುವುದಾದರೆ ಸಮಾಜವೂ ಕೂಡ ವ್ಯಕ್ತಿಗೆ ಅವನ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ನೆಲೆಗಟ್ಟನ್ನು ಒದಗಿಸಬೇಕು.

ಹೇಗೆ ಒಂದು ಕೆರೆಯು ಸುತ್ತಲೂ ನೆಲವನ್ನು ಹಸಿರಾಗಿಸಬಲ್ಲುದೋ ಹಾಗೆ ಒಬ್ಬ ಸಜ್ಜನ ಮಾತ್ರ ಸಮಾಜದ ಸಂತಸಕ್ಕೆ ಕಾರಣವಾಗಬಲ್ಲ ಆದ್ದರಿಂದ ನಾವು ಕೂಡ ಸಜ್ಜನರ ಬದುಕನ್ನು ಬಾಳೋಣ.

# 1. ಚಿಂತಾಮಣಿಯಲ್ಲಿ ಕಂಡ ಮುಖ

– ಎಂ. ಗೋಪಾಲಕೃಷ್ಣ ಅಡಿಗ

ಚಿಂತಾಮಣಿಯ ಸಭಾಂಗಣದಲ್ಲಿ ಭಾಷಣ ಮಗ್ನ
ಮನಸ್ಸು, ಮನಸ್ಸಿನ ಶೇಕಡಾ ತೊಂಬತ್ತು ಪಾಲು : ಕಣ್ಣು
ಹಾಯುತ್ತಿತ್ತು ಮುಖದಿಂದ ಮುಖಕ್ಕೆ ಹುಡುಕುತ್ತಿತ್ತು
ರೇವುಳ್ಳ ನಡುಗಡ್ಡೆಯೊಂದ, ತಂಗಲು ನಿಮಿಷ; ತಂಗಿ
ಅಂತರಂಗದ ಅನಂಗ ಭಂಗಿಗೆ ತಕ್ಕ ಭಂಗಿ, ದೃಷ್ಟಿಗೆ ದೃಷ್ಟಿ,
ಬಡಿತಕ್ಕೆ ತಕ್ಕ ಪ್ರತಿ ಬಡಿತ ಕೊಡುವಿನ್ನೊಂದು
ಸಮ ಹೃದಯದ ನಿಗೂಢ ಸಹಕಂಪನದ ರೋಮಾಂಚ
ಪ್ರತಿಫಲಿಸಬಲ್ಲೊಂದು ಮುಖವ, ಹಠಾತ್ತಾಗಿ
ಮೂಡಿತ್ತಲ್ಲಿ ಆಗೋ, ಆಗೋ ಸಭಾಮಧ್ಯದಲ್ಲಿ ಪರಮಾಪ್ತ ಮುಖ,
ಮಾತಿನಾಚೆಯ ಸಹಸ್ಪಂದಿ; ಮಾತಿಲ್ಲದೆಯೆ
ಇಂಗಿತವನರಿದ ಸಹಭಾಗಿನಿಯ ಸಹಜ ಮುದ್ರೆ.
ಯಾವ ಮುಖ ಅದು ? ಎಲ್ಲಿ ಯಾವಾಗ ಯಾವ ಭವ
ದಲ್ಲಿ, ಲೋಕದಲ್ಲಿ ಸಂಭಾವ್ಯತೆಯ ಯಾವ ಆಕಸ್ಮಿಕದ
ಆತ್ಮೀಯತೆಯ ಅಪ್ಯಾಯಮಾನ ಕ್ಷಣದಲ್ಲಿ
ಕಂಡದ್ದು ಅದು ?
ಒಳತಳದ ಬೀಗ ಹೇಗೋ ಕಳಚಿ ಬಾಗಿಲು ತೆರೆದು
ಮೇಲಕ್ಕೆ ಚಿಮ್ಮಿ ಮುಖದಲ್ಲಿ ಮೂಡುವ ಕೆಂಪು
ಮಿಂಚಂತೆ ಬಂದೊಂದು ಬೆರಗು, ನಿಷ್ಕಾಮವಾದೊಂದು ಚೆಲುವಿನ ಕೆಂಪು;
ಕಣ್ಣಂಚಲ್ಲಿ ಚಕಮಕಿಸುತ್ತಿರುವ ಬೆಳಕಿನ ಗುಳ್ಳೆ,
ಕೆನ್ನೆಯಲ್ಲವತರಿಸುವ ಅನಾದಿ ರಾಗದ ಪ್ರತಿಮೆ.
ಅಹಹಾ, ಅಲೌಕಿಕ ಸಖಿಯೆ,
ಮುಂಗೈ ಮೇಲೆಯೇ ಅಮೂರ್ತ ಕುಳಿತ ಓ ಅರಗಿಣಿಯೇ,
ಅಸಂಭಾವ್ಯ, ಸಂಭಾವ್ಯವಾದೊಂದು ನಿಮಿಷ, ಅನಿಮೇಷ,
ವೇಷವೆಲ್ಲವ ಕಿತ್ತು ಬಿಸುಟ ಅಂತರ್ಮೂಲದ ಅಮೂಲ್ಯ ಹಾಸ.

ಚಿಂತಾಮಣಿಯನ್ನು ಹಿಡಿದು ಬಯಸುತ್ತಿದ್ದ ಅರಸುತ್ತಿದ್ದ
ನನ್ನ ಆ ಇನ್ನೊಂದು ಮುಖಃ ಸ್ತ್ರೀಮುಖ ಮುಖಮಲ್ಲು
ಮಡಿಕೆ ಬಿಚ್ಚಿದರೆ ಕಾಣುವ ಸೂಕ್ಷ್ಮ ಸೂಕ್ಷ್ಮ ರೇಖೆಗಳಲ್ಲಿ
ರೂಪಗೊಂಡಂತೆ ಕಾಣುವ ಚಹರೆ; ಕನ್ನಡಿಯಲ್ಲಿ ನಾ ಕಂಡ
ನನ್ನದೇ ಆದ ಹೊಸ ಮುಖ.
ಯಾರು? ಹೆಸರೇನು? ಕುಲ, ಗೋತ್ರ ಯಾವುದು ಎಲ್ಲಿ?
ಗೊತ್ತಿರಲಿಲ್ಲ, ಗೊತ್ತಾಗಲಿಲ್ಲ, ಅರ್ಧಗಂಟೆಯ ಕಾಲ
ಒಳಗು ಒಳಗು ಒಳಗುಗಳ ಸಂವಾದ, ವಿಷಾದಭರಿತ ಸಂತೋಷದ ಹಂಸ
ಪಾದ, ಮಾನಸ ಸರೋವರದಲ್ಲಿ ಅರಸಂಚೆ
ಕಂಡಿತ್ತು ತನ್ನದೇ ಆದ ಆ ಇನ್ನೊಂದು ಮುಖವ.
ಮತ್ತೆ ವಿರಹದ ಸುದೀರ್ಘ ಅಂತ್ಯವಿಲ್ಲದ ರಾತ್ರಿ;
ದೀಪವಿಲ್ಲದ ದೀವಿಯಲ್ಲಿ ಸೆರೆಮನೆಯೊಳಗೆ
ಕಂಭ ಸುತ್ತುವ ಪುರೋಗಮನಸ್ಥಿತಿ;
ಅಲ್ಲಲ್ಲಿ ಏನನ್ನೊ ಹುಡುಕುತ್ತ ಕಂಡಂತಾಗಿ ಕಾಣದೇ ಬೇಯುವ ಫಜೀತಿ.

3

ಪ್ರತಿ ಮುಖದ ಹಿಂದೆ ಒಂದೊಂದು ಅಪ್ರತಿಮ ಲೋಕ,
ಸ್ವಸಂಪೂರ್ಣ ಎಂದುಕೊಳ್ಳುತ್ತಲೇ ಒಂದನ್ನೊಂದು ಬಯಸಿ
ಬೇಯುತ್ತಿರುವ ನಡುಗಡ್ಡೆಗಳ ಪ್ರತಿಯೊಂದು
ಬದುಕಿಗೂ ಈ ಕರೀ ನೀರಲ್ಲಿ
ಜನ್ಮ ಟಾಪು; ಜೈಲರನ ಮೇಲ್ವಿಚಾರಣೆಯಲ್ಲಿ ಆಗಾಗ
ಅತ್ತಿತ್ತ ದೋಣಿ ಸಂಚಾರ, ಒಂದು ನಡುಗಡ್ಡೆಯಿಂದಿನ್ನೊಂದಕ್ಕೆ
ಜಿಗಿದು ಹಾರಿ, ಈಜಾಡಿ ಪಾರಾಗಿ, ಬದುಕಿ ಉಳಿಯುವ ಬಂಟ
ರಿದ್ದರೂ ಸಿಕ್ಕುವುದೆಲ್ಲ ಪರಕೀಯ. ಅಕಸ್ಮಾತ್ತಾಗಿ
ತಮ್ಮ ಇನ್ನೊಂದರ್ಧ ಎಲ್ಲಾದರೂ ಕ್ಷಣಾರ್ಧ
ಸಿಕ್ಕಿದವನೆ ಕೃತಾರ್ಥ, ಭಾಗ್ಯವಂತ.
ಮತ್ತೆ ಯಾವಾಗ ಮರು ಭೇಟಿ? ಕಣ್ಣು ಕಣ್ಣುಗಳ ಸಮ್ಮಿಲನ,
ಮೌನದ ನಿಗೂಢ ಗಂಭೀರ ಸಂವಾದದ ಚಟಾಕಿ?
ಆತ್ಮೀಯ ದೀವಿಗೆ ಮತ್ತೆ ಬರಬಲ್ಲೆನೇ, ಏಳು ಕಡಲುಗಳ ದಾಟಿ?
ಬಂದರೂ ಕೂಡ ದೊರೆವುದೆ ಹೇಳು, ಈ ಇಂಥ ಸರಿಸಾಟಿ?

**ಆಕರ :** ಸಮಗ್ರ ಕಾವ್ಯ – ಎಂ. ಗೋಪಾಲಕೃಷ್ಣ ಅಡಿಗ

* * * * *

# ೨. ಬೇನ್ಯಾ

## (ಇನ್ನೊಬ್ಬರ ಕನಸಿನಲ್ಲಿ ಸಿಕ್ಕಿಬಿದ್ದ ಬಾಲಕನ ಕತೆ)

**– ಯಶವಂತ ಚಿತ್ತಾಲ**

"The first man who, having enclosed a piece of ground, bethough himself of saying This is mine, and found people simple enough to believe him, was the real founder of civil society."

***- Rousseau***

ಬೇನ್ಯಾ, ಇದು ಹನ್ನೆರಡು ವರುಷದ ಬಿಕ್ಕೆ ಬೇಡುವ ಹುಡುಗನೊಬ್ಬನ ಹೆಸರು. ಆ ಹೆಸರಿನ ಅರ್ಥ ಅದನ್ನು ಇಟ್ಟವರಿಗೂ ಗೊತ್ತಿರಲಿಕ್ಕಿಲ್ಲ. ಬಹುಶಃ ಯಾವ ಅರ್ಥವೂ ಇಲ್ಲದ ಹೆಸರೇನೋ ಅದು. ಹುಟ್ಟಿದ ಮಗುವಿಗೆ ಹೆಸರೊಂದು ಇರಲೇಬೇಕು ಎನ್ನುವ ಕಾರಣದಿಂದಲೇ ಇಟ್ಟಿದ್ದಿರಬಹುದು. ಕತೆ ನಡೆದ ಕಾಲಕ್ಕೆ ನಮ್ಮ ಈ ಎಳೆಯ ನಾಯಕನ ಮುಕ್ಕಾಮು ಬಾಂದ್ರಾದಲ್ಲಿಯ ಘೋಡ್‌ಬಂದರ್ ರೋಡ್ ಹಾಗೂ ಹೊಸತಾಗಿ ಆರಂಭವಾದ ವೆಸ್ಟರ್ನ್ ಎಕ್ಸ್‌ಪ್ರೆಸ್ ಹಾಯ್‌ವೇಗಳ ಕೂಟಸ್ಥಾನದ ಒಂದು ಮೂಲೆಯಲ್ಲಿ, ಕತೆಯ ಕೇಂದ್ರ ಘಟನೆ ಸರಿಯಾಗಿ ಅರ್ಥವಾಗಬೇಕಾದರೆ ಈ ಕೂಟಸ್ಥಾನ ಹಾಗೂ ಅದರ ಸುತ್ತಮುತ್ತಲಿನ ಭೂಪಟದ ಸ್ಪಷ್ಟ ಕಲ್ಪನೆ ಓದುಗರಿಗೆ ಇರುವುದು ಅತ್ಯವಶ್ಯ.

ಮಹೀಮಿನ ಸುಪ್ರಸಿದ್ಧ ಚರ್ಚಿನಿಂದ ಆರಂಭವಾಗುವ ಮಾಹೀಮ್ ಕಾಜ್‌ವೇ ಕೊನೆಗೊಂಡು ಘೋಡಬಂದರ್ ರೋಡ್ ತೊಡಗುವಲ್ಲೇ ಈ ಕೂಟಸ್ಥಾನವಿದೆ. ಅಲ್ಲಿಂದ ಬಲಕ್ಕೆ ಹೋಗುವ ರಸ್ತೆಯೇ ವೆಸ್ಟರ್ನ್ ಎಕ್ಸ್‌ಪ್ರೆಸ್ ಹಾಯ್‌ವೇ. ಎಡಕ್ಕೆ ಪಶ್ಚಿಮದ ಕಡೆಗೆ ಹರಿಯುವ ರಸ್ತೆ ಬಾಂದ್ರಾದ ಕ್ರಿಶ್ಚನ್, ಪಾರ್ಸೀ ವಸತಿಗಳಾದ ಸೇಂಟ್ ಸೆಬೆಸ್ಟಿಯನ್ ಕಾಲನೀ, ಹಿಲ್‌ರೋಡ್, ಮೌಂಟಮೇರೀ ಇವೆಲ್ಲವುಗಳನ್ನೂ ಹಾದು ಬ್ಯಾಂಡ್‌ಸ್ಟ್ಯಾಂಡ್‌ವರೆಗೂ ಹೋಗುವ ಹೊಚ್ಚ ಹೊಸ ಹೆದ್ದಾರಿಯಾಗಿದೆ. ರಸ್ತೆಗಳ ಕೂಟಸ್ಥಾನವೆಂದ ಮೇಲೆ ಎರಡು ಹೆದ್ದಾರಿಗಳು ಒಂದನ್ನೊಂದು ಹಾಯುವಲ್ಲಿ, ಇಲ್ಲವೇ ನಾಲ್ಕು ರಸ್ತೆಗಳು ಒಂದೆಡೆ ಕೂಡುವ ಸ್ಥಾನವಾಗಿರಬೇಕು. ಇದೂ ಹಾಗೆಯೇ. ಆದರೆ ಇಲ್ಲಿ ಕೂಡುವ ನಾಲ್ಕು ರಸ್ತೆಗಳ ಹೆಸರುಗಳು ಎಲ್ಲ ಕಾಲಕ್ಕೂ ಒಂದೇ ಆಗಿಲ್ಲ. ಈ ಕತೆ ನಡೆದ ಕಾಲಕ್ಕೂ ಅದನ್ನು ಬರೆಯುವ ಕಾಲಕ್ಕೂ ನಡುವಿನ ಅವಕಾಶದಲ್ಲೇ ಎಷ್ಟೋ ಬಾರಿ ಬದಲಿಸಿವೆ. ಇಷ್ಟೇ ಅಲ್ಲ, ಒಂದೇ ರಸ್ತೆಯ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಹೆಸರುಗಳಿವೆ. ಮುಂಬಯಿಯ ಬಹುತೇಕ ಎಲ್ಲ ರಸ್ತೆಗಳ ಗತಿಯೂ ಇದೇ. ನಮ್ಮ ದೇಶದ ಮಹಾಪುರುಷರ ಹೆಸರುಗಳನ್ನು ಹೊರಬೇಕಾಗಿ ಬಂದ ಈ ರಸ್ತೆಗಳ ಸಂಖ್ಯೆಗಿಂತ ಮಹಾಪುರುಷರ ಸಂಖ್ಯೆ ಎಷ್ಟೋ ಪಟ್ಟು ಹೆಚ್ಚಾಗಿದ್ದರಿಂದಲೇ ಈ ವ್ಯವಸ್ಥೆಯೆಂದು ನಗರಪಾಲಿಕೆಯ ಆಫೀಸರರೊಬ್ಬರು ಅನೌಪಚಾರಿಕ ಸಂದರ್ಭವೊಂದರಲ್ಲಿ ಬಹಿರಂಗಪಡಿಸಿದ್ದರು. ಇದೇ ಕಾರಣಕ್ಕಾಗಿ, ಈಗಿದ್ದ ಹೆಸರುಗಳು ಕೂಡ ಪ್ರತಿ ಐದು ವರ್ಷಕ್ಕೆ, ಅವಶ್ಯಬಿದ್ದರೆ ಪ್ರತಿ ಮೂರು ವರ್ಷಕ್ಕೆ ಬದಲಿಸುವ ಶಕ್ಯತೆ ಇದೆಯೆಂದು ಅವರೇ ತಿಳಿಸಿದ್ದರು. ತುಸು ವಿನೋದ ಬುದ್ಧಿಯವರಾದ ಅವರು ಈ ವ್ಯವಸ್ಥೆ ಇನ್ನೊಂದು ದೃಷ್ಟಿಯಿಂದಲೂ ಆರೋಗ್ಯಕರವಾದದ್ದೆಂದು ಹೇಳುತ್ತ ರಸ್ತೆಗಳಿಗೆ ಇಟ್ಟ ಹೆಸರುಗಳ ಹಾಗೆಯೇ ನಮ್ಮ ಕೀರ್ತಿಯೂ ಶಾಶ್ವತವಾದದ್ದಲ್ಲ ಎನ್ನುವ ಎಚ್ಚರವನ್ನು ಅದು ಸಾರ್ವಜನಿಕರಿಗೆ ತಂದುಕೊಡಬಲ್ಲುದಾಗಿದೆ ಎಂದು ತಮ್ಮ 'ಇನ್ನೊಂದು' ದೃಷ್ಟಿಯ ಅರ್ಥವನ್ನು ಸ್ಪಷ್ಟಪಡಿಸಿದ್ದರು.

ಅಂತೂ ಒಂದು ದಿನ ಈ ಕೂಟಸ್ಥಾನದ ವಾಯುವ್ಯ ಮೂಲೆಯಲ್ಲಿ ನಮ್ಮ ಕಥಾನಾಯಕ ಪ್ರಕಟಗೊಂಡ. ಅವನಿಗಿಂತ ಎಷ್ಟೋ ದಿನಗಳ ಮೊದಲೇ ಬಂದು ಅಲ್ಲಿ ತಳವೂರಿದ ತುಂಬ ವಯಸ್ಸಾದ ಮುದುಕ–ಮುದುಕಿಯರ ಜೋಡಿಯನ್ನು ಕೂಡಿಕೊಂಡ. ಅಲ್ಲಿಂದ ಹಾದುಹೋಗುವವರ ಕಣ್ಣಿನಲ್ಲಿ ಈ ಮೂವರು ಒಬ್ಬರಿಗೊಬ್ಬರು ಸಂಬಂಧ ಇದ್ದವರೆಂದು ಕಾಣಿಸಿಕೊಂಡರೂ ಅನೇಕರಿಗಿನ್ನೂ ಆ ಬಗ್ಗೆ ಸಂಶಯ, ಹೊಸ ಎರಡು ರಸ್ತೆಗಳು ಹುಟ್ಟಿಕೊಂಡು

ಮಾಹೀಮ್ ಕಾಜ್‌ವೇಗೆ ಕೂಡಿಕೊಂಡ ಕೂಡಲೇ ಉದ್ಭವಿಸಿದ ಕೂಟಸ್ಥಾನದ ಹಾಗೇ ಇವರೂ ಒಂದೆಡೆ ಬಂದಿರಬಹುದು ಎನ್ನುವುದು ಇವರ ಅನ್ನಿಸಿಕೆ. ಹೊಟ್ಟೆಪಾಡಿಗಾಗಿ, ಕೇವಲ ಜೀವ ಹಿಡಿದು ಬದುಕಿರುವ ಅವಶ್ಯಕತೆಯಿಂದಾಗಿ ಎಲ್ಲೆಲ್ಲಿಂದಲೋ ಬಂದವರು ಒಂದೆಡೆ ಕೂಡಿದ ಕ್ಷಣದಲ್ಲೇ ಇವರೊಳಗೆ ಒಂದು ಸಂಬಂಧ ಹುಟ್ಟಿಕೊಂಡಿರಬಹುದು. ಹೀಗೆ ಅನೂಹ್ಯವಾಗಿ ಹುಟ್ಟಿಕೊಂಡ ಸಂಬಂಧ ದಿನಗಳು ಸರಿದ ಹಾಗೆ ಉದ್ದೇಶ ಸಾಧನೆಯಿಂದಾಗಿಯೇ ಗಟ್ಟಿಯಾಗಿರಬಹುದು.

ಇವರು ಮೂವರು ಈ ಮೂಲೆಯಲ್ಲಿ ಬಂದು ತಳವೂರಿದ ಕಾಲದಲ್ಲಿ ಅಲ್ಲಿ ಕೂಡುವ ರಸ್ತೆಗಳ ಹೆಸರುಗಳು : ಕ್ರಿಶನ್‌ಚಂದರ್ ರಸ್ತೆ ಹಾಗೂ ಮಾಹೀಮ್ ಕಾಜ್‌ವೇ, ಅಲಿಯಾವರ್ ಜಂಗ್ ರಸ್ತೆ ಬಾಂದ್ರಾ ಪೂರ್ವಕ್ಕಿರುವ ಕಲಾನಗರಕ್ಕೆ ಬಂದದ್ದೇ ಎಡಕ್ಕೆ ಹೊರಳಿ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಎಂಬ ಹೆಸರಿನಿಂದ ಘೋಡ್ ಬಂದರ್ ರೋಡಿಗೆ ಸಮಾಂತರವಾಗಿ ಹರಿಯುತ್ತದೆ. ಈ ಹಾಯ್‌ವೇ ಇನ್ನೂ ಪೂರ್ತಿಗೊಂಡಿಲ್ಲ. ಹಾಗೆ ಆದ ಮೇಲೆ ಅದು ಅಹಮ್ಮದಾಬಾದಿನವರೆಗೂ ಹೋಗುವುದಂತೆ. ಸದ್ಯ ಅದು ಪ್ರಸಿದ್ಧವಾದದ್ದು ಇಲ್ಲಿಯ ಪ್ರಖ್ಯಾತ ಸಾಂತಾಕ್ರೂಜ್ ವಿಮಾನ ನಿಲ್ದಾಣಕ್ಕೂ ನಗರಕ್ಕೂ ನಡುವಿನ ಶೀಘ್ರ ಸಂಪರ್ಕದ ದಾರಿಯಾಗಿ, ಪರದೇಶಗಳಿಂದ ಬರುವ ಯಾತ್ರಿಕರ ಮೇಲೆ ಅವರು ನಗರವನ್ನು ಸೇರುವ ಮೊದಲೇ ಇಂಡಿಯಾ ದೇಶ ಕೊನೆಗೂ ಅವರು ತಿಳಿದಷ್ಟು, ಬಡದೇಶವಲ್ಲ, ಹಿಂದುಳಿದದ್ದಲ್ಲ ಎನ್ನುವುದನ್ನು ಡಂಗುರ ಸಾರಿ ಜಾಹೀರುಗೊಳಿಸಲೆಂದೇ ಕಟ್ಟಿದಂತಿದ್ದ ಈ ರಸ್ತೆ ಅಂಥ ಅನೇಕ ಆಕರ್ಷಣೆಗಳಿಂದ ಕೂಡಿದೆ; ವಿಮಾನನಿಲ್ದಾಣದಿಂದ ಮೊದಲು ಮಾಡಿ ಕಲಾನಗರದವರೆಗೂ ರಸ್ತೆಯ ಎರಡೂ ಅಂಚುಗಳಲ್ಲಿ ಗುಲ್‌ಮೋಹರ್, ದೇವದಾರ್, ಬೋಗನ್‌ವಿಲಾ ಗಿಡಗಳು. ಇನ್ನೂ ಹೂವು ಬಿಡುವ ಪ್ರಾಯವಲ್ಲವಾದರೂ ಲಕಲಕಿಸುವ ತಾಜಾ ಹಸಿರನ್ನು ಮೆರೆಯಿಸುತ್ತ ಕಣ್ಣುಗಳಿಗೆ ತಂಪು ಒದಗಿಸುವ ಹಾಗೆ ಆಳೆತ್ತರ ಬೆಳೆದು ನಿಂತಿವೆ. ಅವುಗಳ ನಡುವೆ ಅವುಗಳಿಗಿಂತಲೂ ಎತ್ತರವಾದ, ಸಿಮೆಂಟಿನಿಂದ ರಚಿಸಿದ ಬೃಹದಾಕಾರದ ಲಾಲೀ ಪಾಪ್ಸ್ : ಆ ಆಕಾರದ ಜಾಹಿರಾತು ಕಂಬಗಳು. ರಾಜ್ಯ ಸರ್ಕಾರವೇ ಕಟ್ಟಿಸಿದ ಈ ಕಂಬಗಳ ಹಲಗೆಗಳ ಒಂದು ಬದಿಗೆ ಭಾರತ ರಾಷ್ಟ್ರದ ಸುಂದರ ಹಕ್ಕಿಗಳ ಚಿತ್ರಗಳನ್ನೂ ಇನ್ನೊಂದು ಬದಿಗೆ ಹೂಗಳ ಚಿತ್ರಗಳನ್ನೂ ವಿಶೇಷ ತೈಲ ಬಣ್ಣಗಳಿಂದ ಬರೆಯಿಸಿದ್ದಾರೆ. ನಗರದ ದೊಡ್ಡ ದೊಡ್ಡ ಉದ್ದಿಮೆಯ ಕಂಪನಿಗಳು ಸಾವಿರಾರು ರೂಪಾಯಿಗಳ ಬಾಡಿಗೆ ಕೊಟ್ಟು ಈ ಹಲಗೆಗಳ ಮೇಲೆ ತಮ್ಮ ಕಂಪನಿಗಳ ಹೆಸರುಗಳನ್ನು ಕಣ್ಣು ಕುಕ್ಕಿಸುವ ರೀತಿ ಪ್ರದರ್ಶಿಸಿದ್ದಾರೆ. ಭಾರತದ ಹೂವು ಹಕ್ಕಿಗಳ ಜತೆಗೆ ಊರ್ಜಿತಾವಸ್ಥೆಯಲ್ಲಿದ್ದ ನಮ್ಮ ಉದ್ಯಮಗಳ ಪರಿಚಯವನ್ನೂ ಕೂಡ ದೇಶ–ಪರದೇಶಗಳಿಂದ ಬರುವ ಮಹಾರಾಷ್ಟ್ರದ ಅತಿಥಿಗಳಿಗೆ ಮಾಡಿಕೊಡುವ ಈ ಭವ್ಯ ಯೋಜನೆ ನೋಡಿದ ಯಾರ ಮನಸ್ಸನ್ನೂ ಸೆರೆಹಿಡಿದು ನಿಲ್ಲಿಸುವಂತದ್ದು. ಚಳಿಗಾಲದಲ್ಲಿ (ಮುಂಬಯಿಯಲ್ಲಿ ಚಳಿಗಾಲ ಎನ್ನುವುದು ಇದ್ದರೆ) ಮೋಡಗಳಿಲ್ಲದ ಸ್ವಚ್ಛ, ನೀಲಿ ಆಕಾಶದ ಕೆಳಗೆ ಸಂಜೆ–ಮುಂಜಾವುಗಳ ಎಳೆಬಿಸಿಲಲ್ಲಿ ಬೆಳಗಿ ನಿಂತಾಗ ಈ ಹೊಚ್ಚ ಹೊಸ ಭೂಪ್ರದೇಶವನ್ನು ನೋಡುವವರಿಗೆ ಥಟ್ಟನೆ ಹೊಳೆಯುವುದು ಇಲ್ಲಿಯ ಎಲ್ಲದರ ಸ್ವಚ್ಛತೆ! ಪ್ರತಿಯೊಂದನ್ನೂ ಆ ಜಾಗದಲ್ಲಿ ಇರಿಸಿದಂತಹ ಅಚ್ಚುಕಟ್ಟುತನ! ನಗರಕ್ಕೆ ಹೊಸತಾಗಿ ಬಂದವರ ಕಣ್ಣುಗಳ ಮೇಲಂತೂ ರೋಮಾಂಚಕ್ಕೆ ಕಾರಣವಾಗುವಂಥ ಕನಸಿನ ಲೋಕದ ನೆಳಲು–ಬೆಳಕುಗಳ ವಿಚಿತ್ರ ಪರಿಣಾಮ!

ಪರದೇಶಗಳ ನಗರ ಯೋಜನೆಗಳನ್ನು ಅಭ್ಯಾಸ ಮಾಡಲೆಂದೇ ನಗರಪಾಲಿಕೆಯವರು ಕಳಿಸಿದ ತಜ್ಞರ ತಂಡ ತಯಾರಿಸಿದ ಯೋಜನೆ ಕೊನೆಗೂ ವ್ಯರ್ಥವಾಗಲಿಲ್ಲ : ಲೋಸೆಂಜೆಲೀಸ್, ಪ್ಯಾರೀಸ್‌ಗಳಲ್ಲಿಯ ಸಾಲು ಗಿಡಗಳ ಹಸಿರು ನೆರಳಿನಲ್ಲಿ ಸಾಗುವ ಹೆದ್ದಾರಿಗಳ ಪ್ರಭಾವ ಬಿದ್ದ ಈ ಹೊಸ ಹಾಯ್‌ವೇ, ಅದರ ಸುತ್ತಲಿನ ಭೂಪ್ರದೇಶ ಇಂಡಿಯಾಕ್ಕೆ ಮೊದಲ ಬಾರಿಗೆ ಬಂದ ಪರದೇಶದ ಪ್ರವಾಸಿಗಳ ಹೊಗಳಿಕೆಗೆ ಪಾತ್ರವಾಗಿದ್ದವು. ಯೋಜನೆಯನ್ನು ಜಾರಿಯಲ್ಲಿ ತರುವ ಮೊದಲು ನಗರದ ಸೌಂದರ್ಯದ ಬಗ್ಗೆ ಎಂಥ ಅಭಿಮಾನವೂ ಇಲ್ಲದ ಕೆಲವು ರಾಜಕಾರಣಿಗಳಿಂದ, ಹೊಣೆ ಅರಿಯದ ಪತ್ರಿಕಾಕರ್ತರಿಂದ ಕಹಿಯಾದ ಟೀಕೆಗೆ ಗುರಿಯಾದರೂ ಯೋಜನೆ ಮೂರ್ತರೂಪ ತಳೆಯುತ್ತಾ ಬಂದ ಹಾಗೆ ಮಾತ್ರ ಎಲ್ಲರ ಪ್ರಶಂಸೆಯನ್ನು ಗಳಿಸಹತ್ತಿತು. ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಈ ಪ್ರದೇಶದಲ್ಲಿ ಅನೇಕ ವರ್ಷಗಳಿಂದ ಕಂಬ ನೆಟ್ಟ ಜೋಪಡಪಟ್ಟಿಗಳ ಜನರಿಂದ ಆಗ ವಿರೋಧ, ಅಲ್ಲಿಂದ ತಳಕೀಳುವಾಗ ಅವರು ಅನುಭವಿಸಬೇಕಾಗಿ ಬಂದ ಕಷ್ಟ ನೋವುಗಳು ಇಂತಹ ಎಲ್ಲ ಆಂದೋಲನಗಳ ಇತಿಹಾಸದ ಭಾಗವಾಗಿದ್ದವು.

ಕೊನೆಗೂ ಈ ಯೋಜನೆ ಅಂತರರಾಷ್ಟ್ರೀಯ ಖ್ಯಾತಿಯ ಮುಂಬಯಿಯನ್ನು ಎಲ್ಲರ ಕಣ್ಣುಗಳಲ್ಲಿ ಎತ್ತಿರಿಸುವ ಉದ್ದೇಶವುಳ್ಳದ್ದು ತಾನೇ ! ಆಧುನಿಕ ನಗರ ಯೋಜನೆಯ ಸ್ವಲ್ಪವಾದರೂ ಕಲ್ಪನೆ ಇದ್ದ ಯಾರೂ ಇದಕ್ಕೆ ಅಡ್ಡಿ ಬರಲಾರರು. ಬರಲಿಲ್ಲ. ಬೆಳೆಯುವ ಈ ನಗರದಲ್ಲಿ ಯಾರ ದಕಕಾರೂ ಇಲ್ಲದ ಹಾಗೆ ಇಷ್ಟೊಂದು ದೊಡ್ಡ ಪ್ರಮಾಣದ ಮೇಲೆ ಜೋಪಡಪಟ್ಟಿಗಳು ಎದ್ದು ಬರಲು ಕಾರಣವಾದದ್ದು ಮ್ಯುನಿಸಿಪಾಲಿಟಿಯವರ ನಿರ್ಲಕ್ಷ್ಯವೇ ಹೊರತು ಇನ್ನೇನೂ ಅಲ್ಲ ! ಈ ಯೋಜನೆಯಿಂದಾದ ಇನ್ನೊಂದು ಒಳ್ಳೆಯ ಕೆಲಸವೆಂದರೆ ರಸ್ತೆಗಳ ಕೂಟಸ್ಥಾನದ ಈಶಾನ್ಯಕ್ಕಿದ್ದ 'ಜುನಾಪುರಾಣಾ' ಕಸಾಯಿ ಖಾನೆಯನ್ನು ದೂರದ ದೇವನಾರಕ್ಕೆ ಸಾಗಿಸಿದ್ದು, ಸುತ್ತಲಿನ ಜೋಪಡಿಗಳಿಗಿಂತಲೂ ಕೀಳುಸ್ಥಿತಿಯಲ್ಲಿದ್ದ ಈ ಹರಕು ಮುರಕು ಚಪ್ಪರ, ಕಸಾಯಿಖಾನೆಯೆಂದು ಕರೆಯಿಸಿಕೊಂಡದ್ದು ಅದರ ಕೆಳಗೆ ನಡೆಯುತ್ತಿದ್ದ ಚಟುವಟಿಕೆಗಳಿಂದ ಮಾತ್ರ. ಆಧುನಿಕತೆಯ ಎಳ್ಳಷ್ಟೂ ಹೋಲಿಕೆ ಇಲ್ಲದ ಈ ಕುರೂಪ ಸಂಸ್ಥೆ ಮುಂಬಯಿ ನಗರದ ಕೀರ್ತಿಗೆ ಕಲಂಕ ಹೆಚ್ಚುವಂತಹದಾಗಿತ್ತಷ್ಟೇ ಅಲ್ಲದೆ ಜನರ ಆರೋಗ್ಯದ ದೃಷ್ಟಿಯಿಂದಲೂ ಅಪಾಯಕಾರಿಯಾಗಿತ್ತು. ಈಗ ಎಲ್ಲವೂ ಸಾಫು, ಸಪಾಟು, ಆರೋಗ್ಯಕರ–ಕಣ್ಣುಗಳಿಗೆ, ಮೂಗಿಗೆ, ಎಲ್ಲಕ್ಕೂ ಮೇಲಾಗಿ ರಕ್ತವನ್ನು ಸ್ವಚ್ಛವಾಗಿರಿಸುವ ಪುಪ್ಪಸಗಳಿಗೆ ! ನಿರ್ಮಲಗೊಂಡಿದ್ದು ಕೆಳಗಿನ ನೆಲ ಮಾತ್ರವಲ್ಲ ; ಮೇಲಿನ ಆಕಾಶ ಕೂಡಾ. ಇಷ್ಟು ದಿನ ಮೋಡಗಳ ಹಾಗೆ ಕವಿದು ನೆಲದ ಮೇಲೂ ನೆರಳು ಚೆಲ್ಲುವ ; ಚಪ್ಪರದ ತುತ್ತತುದಿಯಲ್ಲಿ ಕೂತು ಕೆಳಗಿನದೆಲ್ಲವೂ ಈಗಾಗಲೇ ಸತ್ತದ್ದು, ಇಲ್ಲವೇ ಸಾಯಲು ಹೊರಟಿದ್ದು ಎನ್ನುವಂತೆ ವಿಚಿತ್ರವಾಗಿ ನೋಡುತ್ತಾ, ಕಿರಿಚುತ್ತ ಭಯ ಹುಟ್ಟಿಸುವ ಹದ್ದು, ರಣಹದ್ದುಗಳ ಹಾವಳಿಯೇ ಈಗ ಇಲ್ಲ.

ಚೌಕದ ಮೇಲೆ, ನೀರಿನಿಂದ ತೊಳೆದಷ್ಟು ಸ್ವಚ್ಛವಾದ ಆಕಾಶದಿಂದ ತೋರಿಬರುವ ಅದ್ಭುತ ಬೆಳಕೇ ನಮ್ಮ ಚಿಕ್ಕ ಬೇನ್ಯಾನ ಬೆರಗಿಗೆ ಕಾರಣವಾಗಿದೆ.

ಬಡಕಲು ಮೈಯಲ್ಲಿ ತೋಳು ಹರಿದ ಬನಿಯನ್, ದಡಿ ಒಡೆದ ಹರುಕಲು ಚಡ್ಡಿ, ಕಾಲಲ್ಲಿ ಅವನ ಪಾದಗಳಿಗೆ ಸರಿಹೊಂದದ ಸವೆದ ಚಪ್ಪಲಿಗಳು. ನೆನೆದಾಗ ಕಣ್ಣಮುಂದೆ ನಿಲ್ಲುತ್ತಿದ್ದದ್ದು : ಹೊಟ್ಟೆಯೊಳಗಿಂದ ಉಕ್ಕಿಬಂದು ಅವನ ಇಡೀ ರೂಪವನ್ನು ಬೆಳಗಿಸುತ್ತಿದ್ದ ಮುಗುಳು ನಗೆ. ಕಣ್ಣುಗಳಲ್ಲಿಯ ವಿಲಕ್ಷಣ ಹೊಳಪು. ಗುಂಗುರು ಕೂದಲು, ಬೇಕೆಂದಾಗ ದೈನ್ಯ ನಟಿಸುವ ಅದ್ಭುತ ನಟನ ಶಕ್ತಿ. ಗಿರ್ಗಾಂವದ ಖೇತವಾಡಿಯ ಗಲ್ಲಿಗಳಲ್ಲಿ ಭಿಕ್ಷೆ ಬೇಡಿ ಜೀವಿಸುತ್ತಿದ್ದ ಹುಡುಗ ಏಕಾಏಕೀ ಈ ಹೊಸ ಜಾಗಕ್ಕೆ ಬರಲು ಏನು ಕಾರಣವಾಯಿತು ಎನ್ನುವುದನ್ನು ಯಾರೂ ಅರಿಯರು.

ರಸ್ತೆಗಳ 'ಫೂಟ್‌ಪಾಥ್'ಗಳ ಮೇಲೆ ನಡೆದಾಡುವುದನ್ನೇ ಅಸಾಧ್ಯ ಮಾಡಿದ ಭಿಕ್ಷುಕರನ್ನು, ಮಹಾರೋಗಿಗಳನ್ನು ದೊಡ್ಡ ಪ್ರಮಾಣದ ಮೇಲೆ ನಗರದಿಂದ ಉಚ್ಚಾಟನೆ ಮಾಡಲು ಎಂದೋ ಸಿದ್ಧಪಡಿಸಿಟ್ಟ ತಮ್ಮ ಯೋಜನೆಯನ್ನು ಮಹಾರಾಷ್ಟ್ರ ಸರಕಾರ ಕೊನೆಗೂ ಮುಂಬಯಿ ಪೊಲೀಸ್ ಖಾತೆಗೆ ಒಪ್ಪಿಸಿ ದಾರಿಯಲ್ಲಿ ತರುವ ಧೈರ್ಯ ಮಾಡಿದೆ ಎಂಬ ವದಂತಿ ನಗರದ ತುಂಬ ಹರಡಿತ್ತು. ನಾವಾಡಿ ಬೀದಿ ನಾಯಿಗಳ ನಿರ್ಮೂಲನಕ್ಕಾಗಿ; ರಸ್ತೆಗಳ ಅಂಚಿನಲ್ಲಿ ಅನಧಿಕೃತವಾಗಿ ಅಂಗಡಿ ಹೂಡುವ ಚಿಲ್ಲರೆ ವ್ಯಾಪಾರಿಗಳ ಉಚ್ಚಾಟನೆಗಾಗಿ ಎಂದೋ ಜಾರಿಯಲ್ಲಿ ತಂದ ನಗರಪಾಲಿಕೆಯವರ ಯೋಜನೆಗಳಿಂದಲೇ ಸ್ಫೂರ್ತಿ ಪಡೆದ ಈ ಹೊಸ ಯೋಜನೆಗೆ ಅನೇಕ ಸಾಮಾಜಿಕ ಸಂಸ್ಥೆಗಳಿಂದ ವಿರೋಧ ವ್ಯಕ್ತವಾಗಿತ್ತು ; ಕೊನೆಗೂ ಮ್ಯುನಿಸಿಪಾಲಿಟಿಯವರು ಮಾಡುವ ಹಾಗೆ ಟ್ರಕ್ಕುಗಳಲ್ಲಿ ಹೇರಿ ನಗರದ ಹೊರಗೆ ಸಾಗಿಸಲು ಭಿಕ್ಷುಕರೇನು ನಾಯಿಗಳಲ್ಲ ತಾನೆ, ಅನಧಿಕೃತ ವ್ಯಾಪಾರಿಗಳ ಚಿಲ್ಲರೆ ಸರಕೂ ಅಲ್ಲ..... ಈ ಯೋಜನೆಯನ್ನು ಜಾರಿಗೆ ತರುವ ವಿಚಾರ ಈತ ಮತ್ತೆ ಯಾಕೆ ಬಂದಿತೋ. ಅಂತೂ ಈ ವದಂತಿಯೇ ಬೇನ್ಯಾ ಖೇತವಾಡಿ ಬಿಡಲು ಕಾರಣವಾಗಿರಬೇಕೆನ್ನುವುದು ಕೆಲವರ ಊಹೆ. ತಾನು ಮೊದಲಿದ್ದ ಜಾಗಕ್ಕೂ ಈಗಿನದಕ್ಕೂ ಇರುವ ಅಳೆಯಲಾಗದ ಅಂತರವನ್ನು ಅರಿತವನ ಹಾಗೆ ಬೇನ್ಯಾ ಸುತ್ತಲಿನ ಪರಿಸರವನ್ನು ಬೆಕ್ಕಸ ಬೆರಗಾದವನಂತೆ ಕಣ್ಣರಳಿಸಿ ನೋಡುತ್ತಾನೆ. ಮಾತಿನಲ್ಲಿ ಹೇಳಲು ಆಗದ್ದು ಕಣ್ಣಿನಲ್ಲಿ ಪ್ರತಿಬಿಂಬವಾಗಿ ಮೂಡಿ ಮೋರೆಯ ಮೇಲಿನ ಹೊಳಪಿನಲ್ಲಿ ಪ್ರಕಟವಾಗುತ್ತದೆ. ಅಬ್ಬಾ! ಎಲ್ಲಿಂದ ತೂರಿಬರುತ್ತದಪ್ಪಾ ಈ ರೀತಿಯ ಸ್ವಚ್ಛ, ಪಾರದರ್ಶಕ ಬೆಳಕು ಎನ್ನುವಂತಿದೆ ಅವನ ನೋಟ ಹಾಗೂ ಆ ನೋಟವೇ ಅಲ್ಲಿಂದ ಹಾದುಹೋಗುವವರ ಮೇಲೆ ವಿಚಿತ್ರ ಪರಿಣಾಮ ಮಾಡುತ್ತದೆ.

ಈಗ ಅವರು ತಮ್ಮ ದಂಧೆ ಹೂಡಿ ಕೂತ ಜಾಗ ಮೊದಲು ನೆಲವಾಗಿರಲಿಲ್ಲ; ಮಾಹೀಮ್ ಖಾಡಿಯ ಜವುಳು ಭೂಮಿಯಾಗಿತ್ತು. ಅದೆಲ್ಲವನ್ನೂ ಈಗ ಎಲ್ಲೆಲ್ಲಿಂದಲೋ ಟ್ರಕ್ಕು ತುಂಬಿ ಹೊತ್ತು ತಂದ ಕಸಕಡ್ಡಿ ಮಣ್ಣುಗಳಿಂದ ಮುಚ್ಚಿ ಸಿದ್ಧಗೊಳಿಸಿದ ಎಷ್ಟೋ ಎಕರೆಗಳ ಹೊಸ ನೆಲದ ಮೇಲೆ ಹೊಸ ವಸತಿ, ಹೊಸ ಮೈದಾನಗಳು, ಹೊಚ್ಚಹೊಸ ಹೆದ್ದಾರಿ. ಹೆದ್ದಾರಿಯಿಂದ ತುಸು ದೂರದಲ್ಲಿ ಕಲ್ಲುಬಂಡೆಗಳಿಂದ ಕಟ್ಟಿದ ದಂಡೆಗೆ ಅಪ್ಪಳಿಸುವ ಸಮುದ್ರದ ಹಿನ್ನೀರಿನ ಮೊರೆತ, ಖಾಡಿಯ ಇನ್ನೊಂದು ದಂಡೆಯಲ್ಲಿ ಕಟ್ಟಡಗಳ ಕೆಲಸಕ್ಕೆ ಬೇಕಾಗುವ ಉಸುಕನ್ನು ತರುವ ಮಚವೆಗಳು; ಮೀನುಗಾರರ ಜೋಪಡಿಗಳು; ಅಲ್ಲಲ್ಲಿ ಇನ್ನೂ ಜೀವ ಹಿಡಿದು ನಿಂತಿರುವ ಗರಿಬೀಸುವ ತೆಂಗುಗಳು, ಖಾಡಿಯ ಎಡದ ದಂಡೆಯೇ ಮಾಹೀಮ್ ಕಾಜ್‌ವೇ; ಸಿಮೆಂಟಿನಿಂದ ಕಟ್ಟಿದ ಅಣೆಕಟ್ಟಿನಂಥ ಹೊಸ ಮಾರ್ಗ. ಮಾರ್ಗದ ಎರಡೂ ಅಂಚುಗಳಲ್ಲಿ ಜಾಹೀರಾತು ಪಟಗಳು. ದೀಪದ ಕಂಬಗಳು, ಆ ಕಡೆಗೆ ರಸ್ತೆಗೆ ಸಮಾಂತರವಾಗಿ ಹರಿದ ನೀರಿನ ಧಾಂಡಿಗ ಪ್ಯಾಪುಗಳು. ಅವುಗಳಾಚೆ ಪಶ್ಚಿಮ ರೇಲ್ವೆಯ ರೇಲು ಹಳಿಗಳು. ಇವೆಲ್ಲವುಗಳ ಆಚೆ, ಅತಿ ದೂರದ ಹಿನ್ನೆಲೆಯಾಗಿ ಓಪನ್ ಏರ್ ಥಿಯೇಟರಿನ ಭವ್ಯ ರಾಕ್ಷಸ ಆಕಾರದ ಸ್ಕ್ರೀನ್! ನೀಲಿ ಆಕಾಶದಿಂದಲೋ, ದೂರದ ಸಮುದ್ರದ ನೀರಿನೊಳಗಿಂದಲೋ ಹುಟ್ಟಿ ಬರುತ್ತಿದ್ದ ಬೆಳಕನ್ನು ಪರಿಸರದ ಈ ದೃಶ್ಯ ವಿವರಗಳು ಮನಸ್ಸಿಗೆ ವಿಚಿತ್ರ ಭ್ರಮೆ ಹುಟ್ಟಿಸುವ ಹಾಗೆ ಹರಡುತ್ತಿವೆ ಎಂದು ಬೇನ್ಯಾ ತಿಳಿದಿದ್ದಾನೆ. ಆ ಬೆಳಕಿಗೂ, ಈ ಹೆದ್ದಾರಿಗಳ ಮೇಲೆ ಅವ್ಯಾಹತವಾಗಿ ನಡೆಯುವ ವಾಹನಗಳ ಓಡಾಟಕ್ಕೂ ಸಂಬಂಧ ಇದೆ ಎನ್ನುವಂಥ ವಿಚಿತ್ರ ವಿಚಾರವೊಂದು ಬೇನ್ಯಾನ ಮೆದುಳನ್ನು ಹಾದುಹೋಗುವುದುಂಟು. ಈ ಎಲ್ಲರಿಗೆ ತನಗೆ ಇಲ್ಲದ ಮನೆ ಇದ್ದದ್ದು; ಮನೆಯ ಸುತ್ತಲೂ ಹಿತ್ತಿಲು ಇದ್ದದ್ದು; ಓಡಾಡಲು ಕಾರು, ಬಸ್ಸುಗಳಿದ್ದದ್ದು : ಟ್ಯಾಕ್ಸಿ, ಟ್ರೇನುಗಳಿದ್ದದ್ದು ಇವರಲ್ಲಿಯ ಪ್ರತಿಯೊಬ್ಬನೂ ಈ ಬೆಳಕನ್ನು ಕಟ್ಟಿಹಾಕಿದ್ದರಿಂದ; 'ಈ ಮನೆ ನನ್ನದು, ಯಾಕೆಂದರೆ ಇಲ್ಲಿ ಬೆಳಕನ್ನು ಕಟ್ಟಿಹಾಕಿದವನು ನಾನು' ಎಂದದ್ದರಿಂದ. ಈ ವಿಚಿತ್ರ ಕಲ್ಪನೆ ನಮ್ಮ ನಾಯಕನ ಮೆದುಳಿನಲ್ಲಿ ಹುಟ್ಟಲು ಕೆಲವು ಕಾಲದ ಹಿಂದೆ ನಡೆದ ಒಂದು ಅದ್ಭುತ ಘಟನೆಯೇ ಕಾರಣವಾಗಿರಬಹುದು. ಆ ಘಟನೆಯೆಂದರೆ ಇಲ್ಲಿಂದ ಬರೇ ನೂರು ಗಜ ದೂರವಿದ್ದ ದೊಡ್ಡ ಮೈದಾನಿನ ಮೇಲೆ 'ಗ್ರೇಟ್ ಈಸ್ಟರ್ನ್ ಸರ್ಕಸ್' ಎಂಬ ಹೆಸರಿನ ಸರ್ಕಸ್ ಕಂಪನಿಯೊಂದು ಟೆಂಟು ಹೂಡಿದ್ದು.

ಧಡ, ಧಡ, ಘಡ ಸದ್ದು ಮಾಡುತ್ತ ದೊಡ್ಡ ದೊಡ್ಡ ಮನೆಗಳಂತಹ ಟ್ರಕ್ಕುಗಳಲ್ಲಿ ಬಂದಿಳಿದ ಈ ಜನರ ಪ್ರತಿಯೊಂದು ಚಟುವಟಿಕೆ ಚಿಕ್ಕ ಬೇನ್ಯಾನ ಮಿದುಳುನಿಂದ ಎಂದೆಂದೂ ಮಾಯವಾಗದಂಥ ಸಂಗತಿ. ಸುತ್ತಮುತ್ತಲಿನ ಕೇರಿಗಳ ಮಕ್ಕಳ ಆಕರ್ಷಣೆಗೆ ಕಾರಣವಾದಂಥ ಹುಲಿ, ಕರಡಿ, ಆನೆ, ಒಂಟೆ, ಕುದುರೆಗಳಿಗಿಂತ ಹೆಚ್ಚಾಗಿ ಬೇನ್ಯಾನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತದ್ದು ಸರ್ಕಸ್ಸಿನ ಟೆಂಟು ಎದ್ದು ನಿಂತ ರೀತಿ. ಗಿಡಗಂಟಿಗಳಿಂದ, ದಿನ್ನೆ ಹೊಂಡಗಳಿಂದ, ಕಲ್ಲು ಕಡ್ಡಿಗಳಿಂದ ಕಾಲಿಡಲೂ ಸಾಧ್ಯವಾಗದ ಹಾಗೆ ಹೊಲಸಾದ ನೆಲವನ್ನು ಕಡಿದು, ಮುಚ್ಚಿ ನೂರಾರು ಜನ ಕೂಡಿ ಭಡ ಭಡ ಎಂದು ಎರಡು ಮೂರು ದಿನಗಳಲ್ಲಿ ಸಪಾಟುಗೊಳಿಸಿಬಿಟ್ಟರು. ಸಪಾಟುಗೊಳಿಸಿದ ಜಾಗದ ಸುತ್ತಲೂ ತಗಡುಗಳ ಆಳೆತ್ತರ ಗೋಡೆ ನಿಲ್ಲಿಸಿದರು. ಆಮೇಲೆ ಹಾಹಾ ಎನ್ನುವಷ್ಟರಲ್ಲಿ ಎದ್ದು ನಿಂತಿತಪ್ಪಾ ಆಕಾಶ ಮುಟ್ಟುವಷ್ಟು ಎತ್ತರದ-ದಪ್ಪ ಗುಡಾರಗಳಿಂದ, ಕಂಬ, ಗಡಗಡ, ಹಗ್ಗಗಳಿಂದ ಕಟ್ಟಿದ-ದೊಡ್ಡಗುಡ್ಡದ ಹಾಗೆ ಕಾಣಿಸುವ ಡೇರೆ! ಹಾಹಾ ಎನ್ನುವಷ್ಟರಲ್ಲಿ ಗೋಡೆಯ ಒಳಗಡೆಯ ಕಾಂಪೌಂಡಿನ ತುಂಬ ಬಣ್ಣಬಣ್ಣದ ಪತಾಕೆಗಳು, ಬೆಲೂನುಗಳು, ಜನರನ್ನು ಒಳಗೆ ಹೊರಗೆ ಬಿಡಲು ವಿಶೇಷವಾಗಿ ಸಿಂಗರಿಸಿದ ಮಹಾದ್ವಾರಗಳು ! ತಗಡಿನ ಗೋಡೆಯ ಮೇಲೆಲ್ಲ ಸರ್ಕಸ್ ಸಾಹಸಗಳ, ಡೊಂಬರಾಟಗಳ ಚಿತ್ರ ಹೊತ್ತ ಪಟಗಳು ! ಕತ್ತಲಾಗುವುದೇ ತಡ, ಇಡೀ ಭೂಪ್ರದೇಶಕ್ಕೆ ಮಾಯಾನಗರಿಯ ಕಳೆ ತಂದಂಥ ಕಣ್ಣು ಕುಕ್ಕಿಸುವ ದೀಪಗಳ ಝಗಮಗ ಬೆಳಕು-ಡೇರೆಯ ಒಳಗೆ, ಡೇರೆಯ ಹೊರಗೆ ! ಮೈಯನ್ನು ನವಿರಿಗೊಳಗಾಗಿಸುವಂಥ ಬ್ಯಾಂಡ್ ವಾದ್ಯ. ಇದ್ದಕ್ಕಿದ್ದ ಹಾಗೆ ಹಾಳುಬಿದ್ದ ನೆಲವನ್ನು ಸಪಾಟುಗೊಳಿಸಲು, ತಗಡಿನ ಪಾಗಾರ ನಿಲ್ಲಿಸಿ ಇದೆಲ್ಲ ತಮ್ಮದು ಎನ್ನಲು ಇವರಿಗೆ ಧೈರ್ಯ ಬಂದದ್ದು ಹೇಗೆ? ಅಧಿಕಾರ ಬಂದದ್ದು ಹೇಗೆ ? ಬೇನ್ಯಾಗೆ ದಿಗಿಲು. ತಾನು ತಳವೂರಿದ ಜಾಗದ ನೆರೆಯಲ್ಲೇ ನಡೆಯುತ್ತಿದ್ದ ಎಲ್ಲ ಸಂಭ್ರಮ ನೋಡುತ್ತಿರುವಾಗಲೂ ನೋಡಿ ಖುಷಿಪಡುತ್ತಿರುವಾಗಲೂ ಮನಸ್ಸಿನ ಆಳದಲ್ಲಿ ಗೊಂದಲ. ಇವರು ಭಡ ಭಡ ಬಂದು ಮಾಡಿದ ಒಂದೇ ಒಂದು ಕೆಲಸವೆಂದರೆ ಟೆಂಟು ನಿಲ್ಲಿಸಿದ್ದು, ಬೆಳಕನ್ನು ಕಟ್ಟಿಹಾಕಿದ್ದು ! ಎಲ್ಲಿ ಬೇಕೆಂದರೆ ಅಲ್ಲಿ ಪಾಗಾರ ಎಬ್ಬಿಸುವ, ಟೆಂಟು ನಿಲ್ಲಿಸಿ ಬೆಳಕನ್ನು ಕಟ್ಟಿಹಾಕುವ ಈ ಬಲಾಢ್ಯರ ತಂಡದ ಬಗ್ಗೆ ಬೇನ್ಯಾಗೆ ನಿಗೂಢ ಭಯ, ಕೌತುಕ.

ಬ್ಯಾಂಡ್‌ಸ್ಟ್ಯಾಂಡ್ ಕಡೆಯಿಂದ ನಗರದ ಕಡೆಗೆ ಹೋಗುವ ಕಾರುಗಳು ಈ ಕೂಟಸ್ಥಾನವನ್ನು ದಾಟಿಯೇ ಮುಂದೆ ಹೋಗಬೇಕಾಗುತ್ತದೆ. ಸಿಗ್ನಲ್ ಸಲುವಾಗಿ ಕಾರುಗಳು ಚೌಕದ ಬಳಿ ಸಾಲುಗಟ್ಟಿ ನಿಂತಾಗ ಬೇನ್ಯಾನ ದಂಧೆಗೆ ತೇಜಿ ಬರುತ್ತದೆ. ನಿಂತ ಪ್ರತಿಯೊಂದು ಕಾರನ್ನು ಸಮೀಪಿಸಿ 'ಸಾಬ್' ಎನ್ನುತ್ತಾನೆ. ಅವನ ಹರಕು ಚಡ್ಡಿ, ಹರಕು ಬನಿಯನ್ನುಗಳಿಗಿಂತ ಹೆಚ್ಚಾಗಿ ಅವನು ನಿಂತ ಬಗೆ, ಕೈ ಮುಂದೆ ಮಾಡಿದ ರೀತಿ, ದೂರ ಮೈ ಮುದುಡಿ ಕುಳಿತ ಮುದುಕ–ಮುದುಕಿಯರ ಕಡೆಗೆ ಬರಿಯ ಕಣ್ಣುಸನ್ನೆಯಿಂದಲೇ ಅವರ ಲಕ್ಷ್ಯ ಸೆಳೆಯುವ ರೀತಿ – ಇವೆಲ್ಲವುಗಳ ಜತೆಗೆ 'ಸಾಬ್' ಎಂದಾಗಿನ ಧ್ವನಿ ಜನರ ಕೈಯನ್ನು ಒಮ್ಮೆಲೇ ಅವರ ಪಾಕೀಟಿನ ಕಡೆಗೆ ಹೋಗುವಂತೆ ಮಾಡುತ್ತಿದ್ದವು. ಯಾರ ಮನಸ್ಸನ್ನೂ ಕರಗಿಸುವ ನಟನಶಕ್ತಿಯ ಅದ್ಭುತವೊಂದು ತನ್ನ ಹತ್ತಿರವಿದೆ ಎಂಬುದರ ಅರಿವು ಇಲ್ಲದವನಲ್ಲ, ಬೇನ್ಯಾ. ಒಮ್ಮೆ ಈ ಊರಿಗೆ ಹೊಸಬರಾಗಿ ಕಂಡ ಪಾರಸೀ ದಂಪತಿಗಳು ಹಣಕೊಡುವಾಗ 'ವಾಟ್ ಏ ಕ್ಯೂಟ್ ಚ್ಯಾಪ್' ಅಂದಿದ್ದರು. ಮಾತಿನ ಅರ್ಥ ತಿಳಿಯದಿದ್ದರೂ ಅದರಲ್ಲಿ ತನ್ನ ಬಗ್ಗೆ ಪ್ರಶಂಸೆ ಇದೆ ಎಂಬುದನ್ನಷ್ಟಾದರೂ ತಿಳಿಯದಿರಲಿಲ್ಲ. ಹೆಂಡತಿ ಮಾಡಿದ ಪ್ರಶಂಸೆಗೆ ದೊಡ್ಡ ದಾರ್ಶನಿಕನ ಹಾಗೆ ಗಂಡ ತೆಗೆದ ಉದ್ಗಾರವನ್ನು ಮಾತ್ರ ಬೇನ್ಯಾ ಕೇಳಿರಲೂ ಇಲ್ಲ. "ಯೆಸ್ ! ಬಟ್ ವಾಟ್ ಏ ಕೋಲೋಸಲ್ ವೇಸ್ಟ್ ಆಫ್ ಹ್ಯೂಮನ್ ಟೇಲೆಂಟ್ಸ್!" ರವಿವಾರ ಹಾಗೂ ಆಫೀಸುಗಳಿಗೆ ರಜೆಯಿದ್ದ ಉಳಿದ ದಿನಗಳಲ್ಲಿ ಬೇನ್ಯಾನ ದಂಧೆಗೂ ರಜೆ; ಆ ದಿನಗಳಲ್ಲಿ ಈ ಮೂವರೂ ಎಲ್ಲಿ ಮಾಯವಾಗಿಬಿಡುತ್ತಾರೆ? ರಾತ್ರಿ ಎಲ್ಲಿ ಮಲಗುತ್ತಾರೆ ? ಎನ್ನುವುದು ಬಹಳಷ್ಟು ಜನರಿಗೆ ಗೊತ್ತಿಲ್ಲವಾದರೂ ಮುದುಕ ಮುದುಕಯರು ಬಾಯ್ಕುಲಾದಲ್ಲಿ ವಿಕ್ಟೋರಿಯಾ ಗಾರ್ಡನ್ನಿನ ಹೊರಗೆ ಫುಟ್‌ಪಾಥ್ ಮೇಲೆ ದೊಡ್ಡ ಬುಟ್ಟಿಗಳ ಕೆಳಗೆ ನಾಯಿಗಳ ಹಾಗೆ ಮೈಮುದುಡಿ ಮಲಗಿದ್ದನ್ನು ಕಂಡ ಜನರಿದ್ದಾರೆ. ಅಲ್ಲಿ ಕಾಯಿಪಲ್ಯೆ ಮಾರುವವರ ಸಂಬಂಧಗಳಿರಬಹುದು, ದೂರದ ಹಳ್ಳಿಗಳಿಂದ ಬಂದ ಬಡ ಒಕ್ಕಲಿಗರಿರಬಹುದು ಎನ್ನುವರು ಇವರ ಊಹೆ. ಬೇನ್ಯಾನ ಪತ್ತೆಯನ್ನು ಮಾತ್ರ ಅಂದಿನ ದಿನಗಳಲ್ಲಿ ಹಿಡಿಯುವುದೇ ಕಷ್ಟ. ಒಂದು ಜಾಗಕ್ಕೆ ಕಟ್ಟಿ, ಬೀಳುವ ಚೈತನ್ಯವೇ ಅಲ್ಲ ಅವನದು. ದಂಧೆಯ ಕಾಲದಲ್ಲಾದರೂ ಆ ಕೂಟಸ್ಥಾನಕ್ಕೆ ಅಂಟಿಕೊಂಡಿರುತ್ತಾನೆ ಎನ್ನುವುದೇ ಆಶ್ಚರ್ಯ, ಬಾಂದ್ರಾಕ್ಕೆ ಸರ್ಕಸ್ ಬಂದ ಒಂದು ತಿಂಗಳು ಮಾತ್ರ ದಂಧೆಯಿಂದ ಬಿಡುವಾದಾಗಲೆಲ್ಲ ಸರ್ಕಸ್ ಥಿಯೇಟರಿನ ಹೊರಾಂಗಣದಲ್ಲಿ ಅಲ್ಲಿಯ ಚಟುವಟಿಕೆಗಳಿಂದ ಮೈಮರೆತು ನಿಂತಿರುವುದನ್ನು ನೀವು ಕಾಣಬಹುದಿತ್ತು. ಗಿರ್ಗಾಂವ್, ಖೇತವಾಡಿಗಳನ್ನು ಬಿಟ್ಟು ಬಾಂದ್ರಾಕ್ಕೆ ಬಂದ ಹೊಸತರಲ್ಲಿ ಒಂದು ದಿನ ಸಂಜೆ ವೆಸ್ಟರ್ನ್ ಎಕ್ಸ್‌ಪ್ರೆಸ್ ಹಾಯ್‌ವೇಗುಂಟ ನಡೆಯುತ್ತ ನಡೆಯುತ್ತ ವಿಮಾನನಿಲ್ದಾಣದವರೆಗೂ ಹೋಗಿ ತಲುಪಿದ್ದ. ಹೊತ್ತು ಮುಳುಗುವ ಮೊದಲಿನ ಹೊಂಬಿಸಿಲಲ್ಲಿ ಬೆಳಗಿ ನಿಂತ ಹೆದ್ದಾರಿಯ ಎರಡೂ ಬದಿಗಳಲ್ಲಿಯ ಹಸಿರು ಗಿಡಗಳು; ಕೆಂಪು ಬಣ್ಣಕ್ಕೆ ಪ್ರಾಧಾನ್ಯ ಸಿಕ್ಕ 'ಲಾಲೀಪಾಪ್ಸ್' ಜಾಹೀರಾತು ಕಂಬಗಳ ಮೇಲಿನ ಚಿತ್ರಗಳು, ಎಡೆಬಿಡದೆ ಸಾಲುಗಟ್ಟಿ ಓಡುತ್ತಿದ್ದ ಝುಗಮಗಿಸುವ ಕಾರುಗಳು; ಬಸ್ಸು, ಟ್ಯಾಕ್ಸಿಗಳು; ಕತ್ತಲಾದದ್ದೇ ರಸ್ತೆಯ ಉದ್ದಕ್ಕೂ ಭಗ್ ಎಂದು ಹೊತ್ತಿಕೊಂಡ ಸಾವಿರ ದೀಪದ ಕಂಬಗಳು! ಕಲಾನಗರ ಹತ್ತಿರದ ರಾಕ್ಷಸ ಆಕಾರದ ಪರದೆಯ ಮೇಲೆ ಬಾಯಿಮುಚ್ಚಿ ನಾಟಕ ನಡೆಸಿದ ಓಪನ್ ಏರ್ ಸಿನಿಮಾದ ವಿಚಿತ್ರ ವಿದ್ಯಮಾನಗಳು! ಬೇನ್ಯಾ ಗೊಂದಲಿಸಿದ. ನಿಂತಲ್ಲೇ ನಡುಗಿದ ; ತನಗೇ ಗೊತ್ತಾಗದಹಾಗೆ ಯಾರೋ ಇನ್ನೊಬ್ಬರ ಕನಸಿನಲ್ಲಿ ನಡೆದುಬಿಟ್ಟಿದ್ದೇನೆ ಎಂಬ ಭಯವಗಿ, ಅವರಿಗೆ ಎಚ್ಚರವಾಗುವ ಮೊದಲೇ ಅದರೊಳಗಿಂದ ಹೊರಗೆ ಬೀಳುವ ಅವಸರದಲ್ಲಿದ್ದವನ ಹಾಗೆ ಅಲ್ಲಿಂದ ಓಟಕಿತ್ತ. ತಿರುಗಿ ಹಾಯ್‌ವೇದ ಕಡೆಗೆ ಹೋಗುವ ಧೈರ್ಯ ಮಾಡಲಿಲ್ಲ. ಆದರೆ ತಾನು ಸದ್ಯ ಕೂಡುವ ನೆಲ ಕೂಡ ಹಾಯ್‌ವೇಗೆ ಕಾರಣವಾದ ಮಹಾಯೋಜನೆಯದೇ ಭಾಗವಾಗಿತ್ತು ಎನ್ನುವ ಕಲ್ಪನೆ ಬೇನ್ಯಾನಿಗಿರುವುದು ಎಷ್ಟೊಂದು ನಾಟಕೀಯವಾಗಿತ್ತೆಂದರೆ ಅದು ಹುಟ್ಟಿಸಿದ ಮೈಮರೆವಿನಿಂದ ಎಚ್ಚರವಾಗುವ ಪುರಸತ್ತನ್ನೂ ಕೊಡದೇ ಬೇನ್ಯಾನನ್ನು, ಈ ಭವ್ಯ ಯೋಜನೆಯ ಹೊಟ್ಟೆಯೊಳಗೆ ಮೊದಲಿನಿಂದಲೂ ಹೊಂಚುಹಾಕಿ ಕೂತಂತಿದ್ದ ಗಂಡಾಂತರದ ಬಲಾಢ್ಯ ದವಡೆಗಳತ್ತ ನೂಕಿಬಿಟ್ಟಿತ್ತು.

ಸರ್ಕಸ್ ಕಂಪನಿ ಟೆಂಟು ಕಿತ್ತು, ಬಾಂದ್ರಾದಿಂದ ಹೊರಟುಹೋಗಿ ಒಂದು ವಾರವೂ ಕಳೆದಿರಲಿಕ್ಕಿಲ್ಲ. ಒಂದು ದಿನ ಮುಂಜಾವಿನಲ್ಲಿ ಬೇನ್ಯಾ ತನ್ನ ಮಾಮೂಲು ಜಾಗದಲ್ಲಿ ಕೂರುವ ಸಮಯದಲ್ಲಿ ನೋಡುತ್ತಾನೆ; ತನ್ನ ಕಣ್ಣುಗಳನ್ನು ತಾನೇ ನಂಬಲಾಗದಂಥ – ಅವನ ಪರಿಭಾಷೆಯಲ್ಲೇ ವರ್ಣಿಸುವುದಾದರೆ – ಬೆಳಕನ್ನು ಕಟ್ಟಿಹಾಕುವಂಥ ಕೆಲಸ ಇದಿರುಗಡೆಯೇ ನಡೆದಿದೆ! ಕಟ್ಟುವ ಕೆಲಸ ರಾತ್ರಿಯಿಡೀ ಸಾಗಿರಬೇಕು. ಇವನು ನೋಡುವ ಹೊತ್ತಿಗೆ ಮುಗಿಯುತ್ತ ಬಂದಿತ್ತು. ಎಲಾ ಇವರ ಎಂದುಕೊಂಡ. ಕತ್ತಲೆಯ ಹೊತ್ತಿಗೇ ಇಂಥದ್ದನ್ನು ನಡೆಸಿದ್ದಾರಲ್ಲ ಎನ್ನುವ ಸಂಗತಿಗಿಂತ

ಹೆಚ್ಚಾಗಿ ಇಂಥ ಕೆಲಸದಲ್ಲಿ ತೊಡಗಿದವರು ತನ್ನಂಥ ನಿರ್ಗತಿಕರೇ ಎಂಬ ಅರಿವು ಬೇಸ್ತ್ಯಾನ ದಿಗಿಲಿಗೆ, ರೋಮಾಂಚನಕ್ಕೆ ಕಾರಣವಾಗಿದೆ. ಅರೆಹೊಟ್ಟೆ ಉಂಡವರು, ಹರಕುಬಟ್ಟೆ ತೊಟ್ಟವರು, ಐದಾರು ಮಂದಿ ಗಂಡುಹೆಣ್ಣುಗಳು ; ಏಳೆಂಟು ಚಿಳ್ಳೆಪಿಳ್ಳೆ ಮಕ್ಕಳು ; ಒಂದು ಹಣ್ಣುಹಣ್ಣು ಮುದುಕಿ. ಹೌದೋ ಅಲ್ಲವೋ ಎನ್ನುವುದನ್ನು ಖಾತರಿ ಮಾಡಿಕೊಳ್ಳಲು ಎನ್ನುವ ಹಾಗೆ ಕಣ್ಣು ತಿಕ್ಕಿತಿಕ್ಕಿ ನೋಡುತ್ತಾನೆ, ಬೇಸ್ತ್ಯಾ ; ಮುಂದೆ ಕಾಣುವ ದೃಶ್ಯ ನಿಜವಾದದ್ದು, ಕನಸಲ್ಲ. ಕನಸಿನೊಳಗಿನ ಕನಸೂ ಅಲ್ಲ. ಒಂದೇಕೆ ಮೂರು ಜೋಪಡಿಗಳು ಎದ್ದು ನಿಲ್ಲುತ್ತಿವೆ. ಥೇಟು ಮನೆಯ ಆಕಾರವಿದ್ದ ಗೂಡುಗಳು. ನಿನ್ನೆ ಕತ್ತಲಾಗುವ ತನಕವೂ ಬೇಸ್ತ್ಯಾ ಇಲ್ಲೇ ಇದ್ದ. ಈ ಸರಂಜಾಮನ್ನೆಲ್ಲ ಯಾವಾಗ ಹೇಗೆ ತಂದರೋ! ಎಲ್ಲಿಂದ ಬಂದರೋ! ಇದೆಲ್ಲ ಕದ್ದುಮುಚ್ಚಿ ನಡೆದ ಕೆಲಸವೆಂಬಂತೆ ಯಾರೊಬ್ಬರ ಮಾತೇ ಇಲ್ಲ. ಸದ್ದೇ ಇಲ್ಲ. ತಗಡು, ರಟ್ಟು, ಗೋಣಿಚೀಲ, ಚಾಪೆ, ಟಾರ್ಪೋಲೀನ್, ಗ್ಯಾಜೇಟು–ಹೊದಿಕೆಯಾಗಬಲ್ಲ ಪ್ರತಿ ವಸ್ತು ಹಳೆಯ ರದ್ದಿಯ ರಾಶಿಯಿಂದಲೇ ಎತ್ತಿ ತಂದವುಗಳು ಎನ್ನುವಷ್ಟು ಹೊಲಸಾಗಿದ್ದುವು. ಗುಡಿಸಲುಗಳಿಗೆ ಒಂದು ಆಕಾರ ಕೊಟ್ಟು, ಅವುಗಳ ಎತ್ತರ ಅಗಲಗಳನ್ನು ನಿಶ್ಚಯಿಸಿದ ಹಂದರಕ್ಕೆ ಉಪಯೋಗಿಸಿದ ಬಿದಿರುಕೋಲುಗಳು ಮಾತ್ರ ಹೊಸತಾಗಿದ್ದುವು. ಆದರೆ ಕಟ್ಟುವ ಕುಶಲಕರ್ಮಿ ಸರ್ಕಸ್ ಡೇರೆಯನ್ನು ನಿಲ್ಲಿಸಿದ ಅದ್ಭುತಕ್ಕಿಂತ ಯಾವ ರೀತಿಯಿಂದಲೂ ಕಡಿಮೆಯಾದದ್ದಲ್ಲ. ಹುಬೇಹೂಬ ಮನೆಗಳು: ತಟ್ಟಿಗಳಿವೆ, ಮಾಡುಗಳಿವೆ, ಬಾಗಿಲು ಕಿಡಿಕಿಗಳಿವೆ. ಅಷ್ಟೇಕೆ, ಸಂಜೆಯಾಗುವುದರಲ್ಲಿ ಮನೆಗಳ ಇದಿರು ಅಂಗಳ ಕೂಡ ಸಿದ್ಧವಾಗುತ್ತಿದ್ದುವು. ಖಾಡಿಯ ದಂಡೆಯಿಂದಲೇ ಕಿತ್ತು ತಂದಂತಿದ್ದ ಕಲ್ಲುಗುಂಡುಗಳಿಂದ ಕಟ್ಟಿದ ಅರ್ಧ ವೃತ್ತಾಕಾರದ ಮೇರೆಗಳು ಅಂಗಳದ ಸುತ್ತ ಎದ್ದು ನಿಂತಿದ್ದುವು. ಮಾರನೆಯ ದಿವಸ ನಿತ್ಯ ಸಂಸಾರಕ್ಕೆ ಬೇಕಾಗುವ ವಸ್ತು ಒಡವೆಗಳ ಜತೆಗೆ ಚಾರಪಾಯಿಗಳೂ ಬಂದು ಅಂಗಳದಲ್ಲಿ ಹಾಜರಾಗಿದ್ದುವು. ಇನ್ನೂ ಕೆಲ ದಿನ ಬಿಟ್ಟು, ಒಂದು ಚಾರಪಾಯಿಯ ಕೆಳಗೆ ಒಂದು ನಾಯಿಮರಿ ಇನ್ನೊಂದರ ಕೆಳಗೆ ನಾಲ್ಕು ಕೋಳಿಗಳೂ ಬಂದು ಕೂಡಿದುವು. ಹಾಗೆಯೇ ಗುಡಿಸಲುಗಳ ಹಿಂದೆ ಮೂಲೆಯೊಂದರಲ್ಲಿ ಸೊಂಟದೆತ್ತರದ ಎರಡು ಎಳೆಯ ಬಾಳೆಯ ಸಸಿಗಳು. ಬೇಸ್ತ್ಯಾಗೆ ಆಶ್ಚರ್ಯವೆಂದರೆ ಆಶ್ಚರ್ಯ, ಎಲ್ಲಕ್ಕೂ ಮಿಗಿಲಾಗಿ ಜೋಪಡಿಗಳ ಇದಿರಿನ ಅಂಗಳ ನೋಡಿ; ಥೈ ಥೈ ಕುಣಿಯುವಷ್ಟು ಉತ್ಸಾಹ. ಒಂದು ದಿನ ದಂಥೆಯಿಂದ ತುಸುಬಿಡುವಿದ್ದ ಕಾಲದಲ್ಲಿ ಮುಂದಿನ ಜೋಪಡಿಗಳನ್ನು ನೋಡುತ್ತ ಕೂತವನಿಗೆ ಅದೇನಾಯಿತೋ, ಭಡಕ್ಕನೆ ಎದ್ದ, ಮುದುಕ ಮುದುಕಿಯರಿಗೆ ಇವನು ಏನು ಮಾಡುತ್ತಿದ್ದಾನೆ ಎನ್ನುವುದು ತಿಳಿಯುವ ಮೊದಲೇ ಎಲ್ಲಿಂದಲೋ ಕಲ್ಲುಗಳನ್ನು ಎತ್ತಿ ತಂದು ತಾವು ಕೂರುವ ಜಾಗದ ಸುತ್ತಲೂ ಇಡಹತ್ತಿದ. ಹಾಗೆ ಇಟ್ಟದ್ದೇ ತಡ, ಕಲ್ಲುಗಡಿಯಿಂದಾಗಿ ನಿರ್ದಿಷ್ಟ ಆಕಾರ ಅಳತೆಗಳು ಮೂಡಿದ ನೆಲಕ್ಕೆ ವಿಚಿತ್ರ ಮಾಂತ್ರಿಕ ಬಲ ಬಂದಿತ್ತು ಎನ್ನುವ ರೀತಿ ಬೇಸ್ತ್ಯಾ ಅಲ್ಲವೇ ಅಲ್ಲ ಎನ್ನುವಷ್ಟು ಸ್ಪಷ್ಟವಾಗಿ, ಆದರೆ ಈ ಸ್ಥಿತಿ ಬಹಳ ದಿನ ಇರುವಂಥದ್ದಲ್ಲವಾಗಿತ್ತೇನೋ ಎನ್ನುವ ಹಾಗೆ ಅವನ ಹೊಸ ಉಮೇದು ಉತ್ಸಾಹಗಳಿಗೆ ಮೂಲಸ್ಫೂರ್ತಿಯಾದ ಇದಿರಿನ ಜೋಪಡಿಗಳ ಮೇಲೆಯೇ ದೊಡ್ಡ ಅನಾಹುತವೊಂದು ಎರಗಿ ಬಂತು. ಮಟಮಟ ಮಧ್ಯಾಹ್ನವೇ ಬಂದುಬಿಟ್ಟಿತು. ಒಂದು ದಿನ ಮ್ಯುನಿಸಿಪ್ಯಾಲಿಟಿಯ ದೊಡ್ಡ ಟ್ರಕ್ಕು. ಜತೆಗೆ ಲಾಠಿ ಹಿಡಿದ ಮೂರು ನಾಲ್ಕು ಪೊಲೀಸ್ ಕಾನ್ಸ್‌ಟೇಬಲ್ಲರು. ಒಬ್ಬ ಇನ್ಸ್‌ಪೆಕ್ಟರ್ ಇದ್ದ ಜೀಪು, ತನಗೂ ಈ ಟ್ರಕ್ಕಿಗೂ ಸಂಬಂಧವೇ ಇಲ್ಲವೆಂಬ ರೀತಿ ತುಸು ದೂರ ಹೋಗಿ ನಿಂತಿತು. ಡ್ರ್ಯಾವರ್‌ನ ಮಗ್ಗುಲಲ್ಲಿ ಕೂತ ಖಾಕೀ ಡ್ರೆಸ್ಸಿನ, ದೊಡ್ಡ ಮೀಸೆಯ ಇನ್ಸ್‌ಪೆಕ್ಟರ್ ಬೇಸ್ತ್ಯಾನ ಲಕ್ಷ್ಯ ವೇಧಿಸಿದ. ಅದೆಷ್ಟು ಹೊತ್ತು ಬೇಸ್ತ್ಯಾ ಅವನನ್ನು ನೋಡುತ್ತಿದ್ದನೋ, ಅವನೂ ಇವನತ್ತ ದುರುಗುಟ್ಟಿ ನೋಡಲು ಹತ್ತಿದ್ದೇ ಬೇಸ್ತ್ಯಾ ಅವನ ದೃಷ್ಟಿ ತಪ್ಪಿಸಿ ಗುಡಿಸಲುಗಳ ಕಡೆಗೆ ದೃಷ್ಟಿ ಹೊರಳಿಸುವಷ್ಟರಲ್ಲಿ ಗುಡಿಸಲುಗಳು ಮಾಯವಾಗಿಬಿಟ್ಟಿದ್ದವು; ಟ್ರಕ್ಕಿನಲ್ಲಿ ಬಂದ ಖಾಕೀ ಚಡ್ಡಿ ಖಾಕೀ ಅಂಗಿ ತೊಟ್ಟವರ ದೊಡ್ಡ ಪಡೆ ಮನೆ ಮುರಿಯುವ ಕೆಲಸದಲ್ಲಿ ನಿಷ್ಣಾತರೆಂದು ತೋರುತ್ತದೆ!

ಕಟ್ಟಲು ಒಂದು ರಾತ್ರಿ ಒಂದು ಹಗಲು ತೆಗೆದುಕೊಂಡ ಗುಡಿಸಲುಗಳು ಒಂದೆರಡು ತಾಸುಗಳಲ್ಲೇ ಮುರಿದು ಚೆಲ್ಲಾಪಿಲ್ಲಿಯಾಗಿ ಟ್ರಕ್ಕು ಸೇರಿಯಾಗಿತ್ತು. ನೋಡಿ ತಾನೇ ಬೊಬ್ಬಿಡಬೇಕೆಂದು ಕೊಂಡವನನ್ನು ನಡೆದದ್ದರ ವೇಗವೇ ಚಕಿತಗೊಳಿಸಿ ಬಾಯಿ ಕಟ್ಟಿಹಾಕಿದಂತಿತ್ತು. ನಿರ್ಮೂಲನದ ಈ ಕರ್ಮಕಾಂಡಕ್ಕೆ ಸುತ್ತಲಿನವರ ಮೌನ ಅತ್ಯವಶ್ಯ ಎಂಬಂತೆ ಇಡೀ ಕ್ರಿಯೆ ಗಂಟಲು ತೆರೆಯದ ಮೌನದಲ್ಲಿ ನಡೆದಿತ್ತು: ಮಣ್ಣಿನ ಗಡಿಗೆಗಳು, ಅಲ್ಯೂಮಿನಿಯಮ್ಮಿನ ತಟ್ಟೆ, ಹಂಡೆ ಪಾತ್ರೆಗಳು, ಹರಕು ಅರಿವೆ ಅಂಚಡಿಗಳು, ಮೂರು ಮೂರು ಕಲ್ಲುಗಳನ್ನು ಜೋಡಿಸಿ ಹೂಡಿದ ಒಲೆಗಳಲ್ಲಿ ಪೂರ ಉರಿಯದೇ ಉಳಿದ ಕಟ್ಟಿಗೆಯ ತುಂಡುಗಳು ಇವಷ್ಟು ಉಳಿದು ಮಿಕ್ಕದ್ದೆಲ್ಲ ಟ್ರಕ್ಕಿನಲ್ಲಿ ಅನಾಥ ರಾಶಿಯಾಗುವುದನ್ನು

ನೋಡುವಾಗ ಸಂಬಂಧಪಟ್ಟ ಯಾರೂ ತುಟಿ ಪಿಟ್ಟೆನ್ನಲಿಲ್ಲ ಎನ್ನುವುದೇ ಬೇನ್ಯಾಗೆ ಆಶ್ಚರ್ಯದಲ್ಲಿ, ಆಶ್ಚರ್ಯ. ಇದೆಲ್ಲ ತೀರ ಪರಿಚಯವಿದ್ದ ವ್ಯವಹಾರವೇ ಎನ್ನುವ ರೀತಿ ಅವರೆಲ್ಲ ಕೈಚೆಲ್ಲಿ ನಿಂತ ರೀತಿಯೇ ಬರಬರುತ್ತ ಭಯಕ್ಕೆ ಕಾರಣವಾಗಹತ್ತಿತು. ಯಾಕೋ ಟೆಂಟು ಎದ್ದು ನಿಲ್ಲಿಸಿದ ಸರ್ಕಸ್ಸಿನ ಬಲಾಢ್ಯರಿಂದ ತೀರ ಭಿನ್ನವಾದ ಜನವಿದು ಎಂಬ ಅರಿವು ನಿರುತ್ಸಾಹಕ್ಕೂ ಎಡೆಮಾಡಿಕೊಟ್ಟಿತು. ಟ್ರಕ್ಕು ಜೀಪುಗಳು ಒಂದರ ಹಿಂದೆ ಒಂದು ಭುರ್ ಎಂದು ಹೊರಟುಹೋದವು. ಕೆಲಹೊತ್ತಿನ ನಂತರ ಗುಡಿಸಲುಗಳ ಜನ ಕೂಡಾ. ಒಲೆ ಹೂಡಿದ ಜಾಗದಲ್ಲಿ ಬೆಂಕಿ ಉರಿದ ಕುರುಹುಗಳನ್ನು ಬಿಟ್ಟರೆ ಇಲ್ಲಿ ಜೋಪಡಿಗಳು ಇದ್ದದ್ದೇ ಸುಳ್ಳು ಎನ್ನುವಷ್ಟರ ಮಟ್ಟಿಗೆ ಸಾಫಾದ ನೆಲವನ್ನು ನೋಡಿದ್ದೇ ಬೇನ್ಯಾಗೆ ತನ್ನ ಸುತ್ತಲಿನ ಕಲ್ಲುಗಳಲ್ಲಿ ಮೊದಲಿನ ಆಸ್ಥೆ ಉಳಿಯಲಿಲ್ಲ. ಬೇರೆಯವರು ಬಂದು ಕಿತ್ತಿ ಒಗೆಯುವ ಮೊದಲು ತಾನೇ ಕೊತ್ತೊಗೆಯಬೇಕು ಎಂದು ವಿಚಾರಮಾಡುತ್ತಿರುವಾಗಲೇ ಈ ಕತೆಗೆ ಮೂಲ ಪ್ರಚೋದನೆಯಾದ ಘಟನೆ ನಡೆದುಹೋಗಿತ್ತು.

ಸೆಪ್ಟೆಂಬರ್ ತಿಂಗಳಲ್ಲಿ ಬಾಂದ್ರಾದ ಮೌಂಟ್‌ಮೇರಿ ಗುಡ್ಡದ ನೆತ್ತಿಯಲ್ಲಿ ನಿಂತ ಚರ್ಚಿನಲ್ಲಿ 'ಮಥ ಮಾವುಲೀ' ಜಾತ್ರೆ ನಡೆಯುತ್ತದೆ. ಎಂಟು ದಿನ ನಡೆಯುವ ಈ ಜಾತ್ರೆ 'ಮೌಂಟ್ ಮೇರೀ ಫೇರ್' 'ಬಾಂದ್ರಾ ಫೇರ್' ಎಂಬ ಹೆಸರುಗಳಿಂದಲೂ ಪ್ರಖ್ಯಾತವಾಗಿದೆ. ಕ್ರಿಶ್ಚನ್ನರು ಮಾತ್ರವಲ್ಲದೇ ಉಳಿದ ಪಂಥದವರೂ ಇದರಲ್ಲಿ ಭಾಗವಹಿಸುವುದು ಜಾತ್ರೆಯ ವಿಶೇಷ. ಹಿಲ್‌ರೋಡ್ ಹಾಗೂ ಹೊಸತಾಗಿ ಆರಂಭವಾದ ಈ ಕ್ರಿಶನ್‌ಚಂದರ್ ರಸ್ತೆಯಿಂದ ಹಬ್ಬದ ಮೂಡಿನಲ್ಲಿದ್ದ ಜನ ಒಳ್ಳೊಳ್ಳೆ ಉಡುಪು ಧರಿಸಿ ಸಾಲುಗಟ್ಟಿ ಕಾಲುನಡಿಗೆಯಿಂದ, ಕಾರು, ಟ್ಯಾಕ್ಸಿಗಳಿಂದ ಮೌಂಟ್‌ಮೇರೀ ಗುಡ್ಡದ ಕಡೆಗೆ ಹೋಗುವುದನ್ನು ನೋಡುತ್ತ ಕೂಡ್ರುವದೇ ಒಂದು ಹಬ್ಬ. ಬೇನ್ಯಾಗೆ, ಗುಡ್ಡದಿಂದ ಇಳಿದು ಬರುವಾಗ ಸಣ್ಣವರು–ದೊಡ್ಡವರು, ಗಂಡಸರು–ಹೆಂಗಸರು ಎನ್ನುವ ಭೇದವಿಲ್ಲದೆ ತಲೆಗೆ ಬೇಗಡೆಯ ಕಿರೀಟ ಹಾಕಿಕೊಂಡು ಹಾಡುತ್ತ, ತುತೂರಿ ಬಾರಿಸುತ್ತ, ಬೆಂಡು ಬತ್ತಾಸು ಉರ್ಜಿತಾವಸ್ಥೆಗೆ ಬಂದಿತ್ತು, ಇಷ್ಟೇ. ಈ ಉದ್ಯೋಗಕ್ಕೆ ಈಗ ಪ್ರತಿಸ್ಪರ್ಧಿಗಳೂ ಇದ್ದರು. ಬೇನ್ಯಾ ಈ ಮೊದಲು ಎಂದೂ ನೋಡಿರದ ಹತ್ತೆಂಟು ಭಿಕ್ಷುಕ ಕುಟುಂಬಗಳು ಬಂದು ಹೊಸ ರಸ್ತೆಯ ಆಯಕಟ್ಟಿನ ತಿರುವುಗಳಲ್ಲಿ ತಳವೂರಿದ್ದರು. ಆದರೆ ಅದೇಕೋ ಮೊದಲಿನಿಂದಲೂ ಅನೇಕರ ಕಣ್ಣುಗಳು ಬೇನ್ಯಾ ಕೂತ ಜಾಗದ ಮೇಲೇ ಇದ್ದುವು. ಬೇನ್ಯಾನ ಭರಭರಾಟೆಯ ಗಳಿಕೆಗೆ ಆ ಜಾಗವೇ ಕಾರಣವೆಂದು ಕೆಲವರಾದರೂ ತಿಳಿದುಕೊಂಡಂತಿತ್ತು. ಅವರು ತಮ್ಮ ಜಾಗದ ಕಡೆಗೆ ನೋಡಿದ ರೀತಿಯಿಂದಲೇ ಅವರ ಬೇತನ್ನು ಅರಿತುಕೊಂಡವರ ಹಾಗೆ ಬೇನ್ಯಾ ಮತ್ತು ಅವನ ಜತೆಗಾರರು ಜಾತ್ರೆಯ ಎಂಟೂ ದಿನ, ರಾತ್ರಿ ಮಲಗುವುದನ್ನು ಕೂಡ ಆ ಜಾಗದಲ್ಲೇ ಮಾಡತೊಡಗಿದರು. ಕಲ್ಲಿನ ಗಡಿಯನ್ನು ಕಿತ್ತೊಗೆಯದೇ ಇದ್ದದ್ದು ಒಳ್ಳೆಯದೇ ಆಯಿತು ಎಂದೂ ಬೇನ್ಯಾಗೆ ಅನ್ನಿಸಹತ್ತಿತು. ಬೇನ್ಯಾ ಮಾಡಿದ್ದನ್ನು ನೋಡಿ ಉಳಿದ ಭಿಕ್ಷುಕರೂ ತಾವು ತಂಗಿದ ತಾಣದ ಸುತ್ತಲೂ ಕಲ್ಲುಗಳ ಮೇರೆ ಕಟ್ಟಿ ಅದರ ಮೇಲಿನ ತಮ್ಮ ಅಂಕೆಯ ರಕ್ಷಣೆಗಾಗಿ ರಾತ್ರಿ ಅಲ್ಲೇ ಮಲಗಹತ್ತಿದರು. ಸುತ್ತಲಿನ ವಸತಿಯ ಜನರ ಕಣ್ಣುಗಳಲ್ಲಿ ಈ ವಿಚಿತ್ರ ವ್ಯವಹಾರ ಮೊದಮೊದಲು ಕುತೂಹಲದ ವಿಷಯವಾಗಿ ಕಂಡರೂ ಬರಬರುತ್ತ ದೃಷ್ಟಿಗೆ ಗೋಚರವಾಗಿರದ ಸಂಗತಿಗಳು ಮೂಗಿನ ಮುಖಾಂತರ ಅನುಭವಕ್ಕೆ ಬರಹತ್ತಿದಾಗ ತಿರಸ್ಕಾರಕ್ಕೆ ಕಾರಣವಾಗಹತ್ತಿದವು. ಜಾತ್ರೆಯ ಸದ್ದುಗದ್ದಲದಲ್ಲಿ ವಿಶೇಷ ಲಕ್ಷ್ಯ ಸೆಳೆದಿರದವರು ಜಾತ್ರೆ ಮುಗಿದ ನಂತರವೂ ಅದೇ ಜಾಗಕ್ಕೆ ಅಂಟಿಕೊಂಡಿದ್ದರಿಂದ ಸಹಾನುಭೂತಿಯ ಬದಲು ಸಿಟ್ಟಿಗೆ ಎಡೆಮಾಡಿಕೊಡಹತ್ತಿದರು.

ಹೀಗಿರುವಾಗ ಒಂದು ದಿನ ಸರ್ಕಸ್ಸು ನಡೆದ ಮೈದಾನಿಗೆ ಮುಳ್ಳು ತಂತಿಗಳ ಬೇಲಿ ಬಂದಿತು. ಬೇಲಿಯೊಳಗಿನ ಗೇಟಿನಲ್ಲಿ ದೊಡ್ಡ ಬೋರ್ಡು ತೂಗಿತು. ಬಿಳಿಯ ಬಣ್ಣ ಬಳಿದ ಹಲಗೆಯ ಮೇಲೆ ಕಪ್ಪು ಬಣ್ಣದಲ್ಲಿ ಬರೆದ ದಪ್ಪ ದಪ್ಪ ಅಕ್ಷರಗಳು ಸಾರಿ ಹೇಳಿದವು: "ಇಲ್ಲಿ ಮೂಕರು, ಕಿವುಡರ ಸಂಸ್ಥೆಗಾಗಿ ದೊಡ್ಡ ಕಟ್ಟಡ ಏಳುತ್ತದೆ. ವಿದೇಶೀ ಸಂಸ್ಥೆಯೊಂದರ ತಜ್ಞರ ಸಲಹೆ ಸಹಕಾರಗಳಿದ್ದ ಈ ಸಂಸ್ಥೆಯ ಶಂಕುಸ್ಥಾಪನೆಗಾಗಿ ಹಿಂದೂಸ್ತಾನದ ಪ್ರಧಾನಮಂತ್ರಿಗಳೇ ಬರುತ್ತಾರೆ". ಬೋರ್ಡು ತೂಗಿದ ಕೆಲದಿನಗಳಲ್ಲೇ ಒಂದು ದಿನ ದೊಡ್ಡ ದೊಡ್ಡ ಕಾರುಗಳಲ್ಲಿ ದೊಡ್ಡ ದೊಡ್ಡ ಜನ ಸುಯ್ಯೆಂದು ಬಂದರು. ಬೇನ್ಯಾ ಕೂತ ಮೂಲೆಯಲ್ಲೇ ಇಳಿದು ಕಾಲ್ನಡಿಗೆಯಲ್ಲಿ ಬೋರ್ಡು ತೂಗಿದ ಮೈದಾನಿನ ಕಡೆಗೆ ಹೋಗಹತ್ತಿದರು. ಹಾಗೆ ಹೋಗಹತ್ತಿದವರಲ್ಲೊಬ್ಬ ದೊಡ್ಡ ಹೊಟ್ಟೆಯ ಶೇಠಜೀ, ಕಾಲಿಗೆ ಹಾಕಿದ ಕಂದೀಬಣ್ಣದ ಬೂಟುಗಳನ್ನು ಬಿಟ್ಟರೆ ಉಟ್ಟಿದ್ದೆಲ್ಲ ಕಣ್ಣು ಕುಕ್ಕುಸುವಷ್ಟು, ಬೆಳ್ಳಗಿನ ಪೋಷಾಕು : ಬಿಳಿಯ ಧೋತರ, ಉದ್ದನ್ನ ಬಿಳಿಯ ಕೋಟು, ತಲೆಗೆ ಕಿರೀಟದಂಥ ಬಿಳಿಯ ಟೋಪಿ, ಬಂಗಾರದ ಫ್ರೇಮ್ ಇದ್ದ ದಪ್ಪ ಕನ್ನಡಕ. ಕೈಯಲ್ಲಿ ಲಕಲಕಿಸುವ

ಹಿಡಿಕೆಯುಳ್ಳ ಕಂದೀಬಣ್ಣದ ಬೆತ್ತ. ಈ ಮಹಾನುಭಾವನ ಜತೆಗೆ ಇಬ್ಬರು ಸೂಟುಬೂಟು ಧರಿಸಿದ ವಿದೇಶೀಯರು. ಈ ಮೂವರೆ ಹಿಂದೆ ಇನ್ನೂ ಐದಾರು ಮಂದಿ ಹಿಂದೂಸ್ತಾನೀ ಸಾಹೇಬರು ಡೌಲಿನಲ್ಲಿ ಹೆಜ್ಜೆ ಹಾಕುತ್ತ ನಡೆದರು. ಅವರು ನಡೆಯುವ ರೀತಿಗೇ ಬೇಸ್ತ್ಯಾ ನಡುಗಿದ. 'ಸಾಬ್' ಎಂದು ಕೈಚಾಚುವುದುಳಿಯಲ್ಲಿ, ಕೂತಲ್ಲಿಂದ ಎದ್ದುನಿಲ್ಲುವ ಧೈರ್ಯವೂ ಆಗಲಿಲ್ಲ. ಇದ್ದಕ್ಕಿದ್ದ ಹಾಗೆ ಎದ್ದು ಬಂದಂತಿದ್ದ ಈ ಹೊಸ ಭೂಪ್ರದೇಶದ ಮೇಲಿನ ಬೆಳಕೆಲ್ಲ ಇವರಿಗೇ ಸೇರಿದ್ದು ಎನ್ನುವ ರೀತಿ ಕಣ್ಣರಳಿಸಿ ನೋಡಿದ. ರಸ್ತೆಯ ಉಳಿದ ತಿರುವುಗಳಲ್ಲಿ ನಮ್ಮ ದಂಧೆ ಹೂಡಿದ ಭಿಕ್ಷುಕರು ಮಾತ್ರ "ನಾ ಮುಂದೆ ತಾ ಮುಂದೆ" ಎಂಬಂತೆ ಆಗಂತುಕರನ್ನು ಮುತ್ತಿ ಕೈಚಾಚಿ ಗುಲ್ಲೆಬ್ಬಿಸಿದಾಗ ಹಚಾ ಹಚಾ ಎಂದು ಬೈಸಿಕೊಂಡು ಅಟ್ಟಲ್ಪಟ್ಟರು. ರಸ್ತೆ ಬಿಟ್ಟು ಬೇಣದ ಮೇಲೆ ಕಾಲಿಡುವಾಗ, ಕೆಲವೆಡೆಗಳಲ್ಲಿ ಕಾಲಿಡುವುದೇ ಶಕ್ಯ ಇಲ್ಲವೆಂಬಂತೆ ಜಿಗಿಜಿಗಿದು ಹೆಜ್ಜೆ ಹಾಕುವಾಗ ಬಂದವರು ಮೂಗು ಮುಚ್ಚಿಕೊಂಡರು. ಕೊನೆಗೆ ಬೇಲಿಯ ಒಳಗಿನ ನೆಲವನ್ನು ಸ್ಥೂಲವಾಗಿ ಪರಿಶೀಲಿಸಿ, ಸಮಾಧಾನ ಪ್ರಕಟಿಸುವಂತೆ ಮೋರೆ ಅಗಲಿಸಿ, ಕಣ್ಣುಗಳಲ್ಲಿ ಬೆಳಕು ಮೂಡಿಸಿ, ಅಲ್ಲಿ ಇಲ್ಲಿ ಏನೇನು ಮಾಡುವುದಿದೆ ಎನ್ನುವುದನ್ನು ಪರಿಚಯಿಸುವ ಹಾಗೆ ಬೆರಳು ತೋರಿಸಿ, ನಿಂತ ಜಾಗದ ಕಡೆಗೇ ಕಾರುಗಳನ್ನು ತರಿಸಿ, ಡೌಲಾಗಿ ಕೂತು ಭುರ್ ಎಂದು ಬಂದ ಹಾಗೇ ಹೊರಟುಹೋದರು.

ಅವರು ಹಾಗೆ ಹೊರಟುಹೋದ ಮರುದಿನವೇ, ಬೆಳಗಾಗುವ ಪುರಸತ್ತಿಲ್ಲದೆ, ಬಂದು ಬಿಟ್ಟಿತ್ತು–ಮೈಗೆಲ್ಲ ಅಚ್ಚ ನೀಲಿಬಣ್ಣ ಮೆತ್ತಿಕೊಂಡ ಪೊಲೀಸರ ಲಾರೀ. ನೀಲಿಬಣ್ಣದ ಸಮವಸ್ತ್ರ ಧರಿಸಿದ ಹತ್ತೆಂಟು ಕಾನ್‌ಸ್ಟೇಬಲ್ಲರು ದುಬುದುಬು ಲಾರಿಯಿಂದ ಧುಮುಕಿದರು. ರಸ್ತೆಗಳ ಅಂಚಿನಲ್ಲಿ ಪ್ಲಾಸ್ಟಿಕ್ ಫಿಲ್ಮು, ಟಾರ್ಪೋಲೀನ್, ಹರಕು ಕಂಬಳಿ–ಸಿಕ್ಕಿದ್ದನ್ನೆಲ್ಲ ಹೊದ್ದು ಇನ್ನೂ ಗಾಢನಿದ್ದೆಯಲ್ಲಿದ್ದವರನ್ನು, ನಡೆದದ್ದು ಏನೆಂದು ತಿಳಿಯುವ ಅವಕಾಶವನ್ನೂ ಕೊಡದೇ ಒಬ್ಬೊಬ್ಬರನ್ನೇ ಎತ್ತೆತ್ತಿ ಭಡಭಡನೆ ಟ್ರಕ್ಕಿನಲ್ಲಿ ತುರುಕಿಬಿಟ್ಟರು. ಅವರ ಹಿಂದೆಯೇ ಟ್ರಕ್ಕು ಹತ್ತಿದ ಕಾನ್‌ಸ್ಟೇಬಲ್ಲರು ಸುತ್ತಲಿನ ಟಾರ್ಪೋಲೀನ್ ಪರದೆಗಳನ್ನು ಇಳಿಬಿಟ್ಟಿದ್ದೇ ತಡ ಮುಂದಿನ ಸೀಟಿನ ಮೇಲೆ ಕುಳಿತ ಇನ್ಸ್‌ಪೆಕ್ಟರ್, ಡ್ರ್ಯಾವರನಿಗೆ ಗಾಡಿ ಓಡಿಸಲು ಹೇಳಿದ. ತಿಂಗಳುಗಟ್ಟಲೆ ರಂಗತಾಲೀಮು ನಡೆಸಿದ ಪ್ರಯೋಗವೆಂಬಂತೆ ಇಡೀ ವ್ಯವಹಾರ ಹತ್ತೇ ಮಿನಿಟುಗಳಲ್ಲಿ ಮುಗಿದುಹೋಗಿತ್ತು. ಟ್ರಕ್ಕು ಚಲಿಸಹತ್ತಿತು. ಒಳಗಿನವರಿಗೆ ತಾವು ಎಲ್ಲಿದ್ದೇವೆ ಎನ್ನುವುದೇ ತಿಳಿಯುತ್ತಿರಲಿಲ್ಲ. ಇಷ್ಟೊಂದು ಗಾಢ ಕತ್ತಲೆಯಲ್ಲಿ ತಾನು ಹೇಗೆ ಸೇರಿಕೊಂಡೆ ಎನ್ನುವುದು ತಿಳಿಯದೇ ಬೇಸ್ತ್ಯಾ ಕೂಡ ಗಾಬರಿಗೊಂಡ. ಇದು ಬರಿಯ ಕನಸಲ್ಲವಷ್ಟೇ? ತನಗೇ ಬಿದ್ದ ಕನಸೇ ಇದು? ಅಥವಾ ಇಷ್ಟು ದಿನ ಹೆದರಿಕೊಂಡು ದೂರವೇ ಉಳಿದ ಇನ್ನು ಯಾರದೋ ಕನಸಿನಲ್ಲಿ ನನಗೇ ಗೊತ್ತಾಗದ ಹಾಗೆ ಬಂದು ಸೇರಿಬಿಟ್ಟಿದ್ದೇನೆಯೇ? ಹೊರಗೇ ಬರದ ಹಾಗೆ ಸಿಕ್ಕಿಕೊಂಡುಬಿಟ್ಟಿದ್ದೇನೆಯಾ ? ತನ್ನ ಸುತ್ತಲೂ ಇನ್ನೂ ಯಾರು ಯಾರೋ ಇದ್ದಾರೆ. ಕತ್ತಲೆಯಲ್ಲಿ ಮಾತುಗಳಷ್ಟೇ ಕೇಳಿಸುತ್ತಿವೆ:

"ನಾಚಿಕೆಯಿಲ್ಲದ ಸೂಳೇಮಕ್ಕಳು. ಹೇಲಿನಲ್ಲೇ ಹೊರಳಾಡುತ್ತಿದ್ದಿರೇನರೋ?" "ಬಿಕ್ಕೆ ಬೇಡುವುದರ ವಿರುದ್ಧ ಕಾಯಿದೆ ಮಾಡಿದ್ದು ಗೊತ್ತಿಲ್ಲವೇನರೂ.....?" "ಇಷ್ಟು ದಿನ ಬೇಡ ಬೇಡ ಎಂದುಕೊಂಡದ್ದನ್ನು ಕೊನೆಗೂ ನಮ್ಮ ಕೈಯಿಂದ ಮಾಡಿಸಿದಿರಲ್ಲರೋ....?" "ಎಲ್ಲ ಬಿಟ್ಟು ಈ ಹೊಸ ಹಾಯ್‌ವೇದ ಮೇಲೂ ಇವರ ಹೊಲಸಿನ ದಾಳಿ" "ಆ ಬಿಳಿಯರ ಮುಂದೆಯೂ ನಾಚಿಕೆ ಬಿಟ್ಟು ಕೈಮುಂದೆ ಮಾಡಿದರಂತೆ ಬೋಳೀಮಕ್ಕಳು....." "ದೇಶದ ಬಗ್ಗೆ ಎಳ್ಳಷ್ಟೂ ಅಭಿಮಾನ ತೋರಿಸಲಿಲ್ಲವಂತೆ ನಾಯಿಜನ್ಮದವರು". ತನ್ನ ಬದಿಯಲ್ಲಿ ಯಾರೋ ನಾಯಿಯ ಹಾಗೆ ಕುಂಯ್ ಗುಡುತ್ತಿದ್ದಾನೆ. ಇದ್ದಕ್ಕಿದ್ದ ಹಾಗೆ ನಾಯಿಯಾಗಿಬಿಟ್ಟಿದ್ದಾನೋ ಏನೋ ಮತ್ತೆ: "ಈ ಒಂದು ಸಾರೆ ಬಿಟ್ಟುಬಿಡೀ" ಅನ್ನುತ್ತಾನೆ. ಯಾರೋ ನಮ್ಮನ್ನು ಹಿಡಿದಿದ್ದಾರೆ ಹಾಗಾದರೆ; ಯಾರೆಂದು ಗೊತ್ತಾಗಲಿಲ್ಲ. ನಮ್ಮನ್ನು ಎಲ್ಲೋ ಸಾಗಿಸುತ್ತಿದ್ದಾರೆ; ಎಲ್ಲೆಂದು ತಿಳಿಯಲಿಲ್ಲ. ಎಲ್ಲರೂ ಸುಮ್ಮನಾಗಿದ್ದರು, ಬೇಸ್ತ್ಯಾ ತಾನೂ ನಿದ್ದೆಮಾಡಲು ಯತ್ನಿಸುವವನಂತೆ ನಾಯಿಯ ಹಾಗೆ ಮೈಮುದುಡಿ ಕೂತಲ್ಲೇ ಕಣ್ಣು ಮುಚ್ಚಿದ. ಬೆಳಕನ್ನು ಕಟ್ಟಿಹಾಕುವ ವಿದ್ಯೆಯನ್ನು ಕಲಿಸಲು ತಮ್ಮನ್ನೆಲ್ಲ ಎಲ್ಲೋ ಒಯ್ಯುತ್ತಿದ್ದಾರೆ ಎಂಬ ಕನಸು ಕಂಡವನ ಹಾಗೆ ನಿದ್ದೆಗಣ್ಣಿನಲ್ಲೇ ನಕ್ಕ.

**ಆಕರ :** ಐವತ್ತೊಂದು ಕಥೆಗಳು

* * * * *

# ೩. ಅಕ್ಕಯ್ - ಬೆಳವ ಪರಿ

## ಅಕ್ಕಯ್ ಪದ್ಮಶಾಲಿ (ಆತ್ಮಕಥನ)

**– ನಿರೂಪಣೆ : ಡಾ. ಡೊಮಿನಿಕ್**

ಇಲ್ಲಿವರೆಗಿನ ಬದುಕಿನ ಪಯಣವನ್ನು ಕುರಿತು ಹೇಳುವುದಾದರೆ, ಅದು ಸಾಮಾಜಿಕ ಆಕ್ಟಿವಿಸಂನ ಸಣ್ಣ ಸಣ್ಣ ತುಣುಕುಗಳನ್ನು ಹೆಕ್ಕಿ ಹೆಣೆದಿರುವುದೇ ಆಗಿದೆ.

ಅಕ್ಕಯ್ಯ ಅಂದರೆ ಯಾರು? ಆಕೆ ಈ ಆಕ್ಟಿವಿಸಂಗೆ ಬಂದದ್ದಾದರೂ ಹೇಗೆ? ಹೀಗೆ ಕಥೆಯನ್ನು ಶುರುಮಾಡಬಹುದು. ಅಂದರೆ ಈ ಪಯಣವನ್ನು ಬಾಲ್ಯದಿಂದಲೇ ಶುರುಮಾಡಬಹುದಲ್ಲವೇ.....?

ನನ್ನ ಹೆಸರು ಜಗದೀಶ್. ಕೆಳಮಧ್ಯಮ ವರ್ಗದ ಸಣ್ಣಕುಟುಂಬದಲ್ಲಿ ಗಂಡಾಗಿಯೇ ಹುಟ್ಟಿದ್ದು. ತಂದೆ ಭಾರತೀಯ ರಕ್ಷಣಾ ಸಚಿವಾಲಯದ ಏರೋನಾಟಿಕಲ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಕಾರ್ಮಿಕರಾಗಿದ್ದರು. ಅಮ್ಮ ಗೃಹಿಣಿ. ಅಂತಹ ಕುಟುಂಬದ ಸಾಮಾನ್ಯ ನಿರೀಕ್ಷೆಯೆಂದರೆ ಇಬ್ಬರು ಗಂಡುಮಕ್ಕಳು, ಒಬ್ಬಳು ಹೆಣ್ಣಾಗಿದ್ದರೆ ಸಾಕು ಎನ್ನುವುದು. ಹಾಗೆಯೇ ಆಗಿತ್ತು. ಅಂದರೆ, ನನ್ನೊಡನೆ ಮತ್ತಿಬ್ಬರು ಒಡಹುಟ್ಟಿದವರು ಇದ್ದರು. ಹಿರಿಯಳಾದ ಅಕ್ಕನಿಗೆ ದಲಿತ ವ್ಯಕ್ತಿಯೊಡನೆ ಮದುವೆಯಾಗಿದೆ. ಆಕೆಗೆ ಇಬ್ಬರು ಗಂಡುಮಕ್ಕಳು. ತಮ್ಮನಿಗೆ ರೋಮನ್ ಕಥೋಲಿಕ್ ಕ್ರೈಸ್ತ ಮಹಿಳೆಯೊಂದಿಗೆ ಮದುವೆಯಾಗಿದ್ದು, ಒಂದು ಮಗು ಇದೆ. ನಾನು ಈ ಇಬ್ಬರ ನಡುವಿನ ಮಗುವಾಗಿದ್ದೆ!

ಅಪ್ಪ–ಅಮ್ಮ ಇಬ್ಬರ ಕಡೆಯಿಂದಲೂ ಸಂಬಂಧಿಕರು ಹೆಚ್ಚು. ಇಂತಹ ಕುಟುಂಬದೊಳಗೆ ನಾನು ಹೆಣ್ಣುತನದತ್ತ ವಾಲಿದ್ದೆ. ಹುಡುಗಿಯಾಗಬೇಕೆಂದೇ ಇಚ್ಛಿಸಿದ್ದೆ. ಆ ಕುರಿತಂತೆ ಮಾತನಾಡಿದ್ದೂ ಇದೆ ! ಗೆಜ್ಜೆ ತೊಟ್ಟು, ಅಮ್ಮನ ಸೀರೆಯುಟ್ಟು ಸಿಂಗಾರ ಮಾಡಿಕೊಳ್ಳುತ್ತಿದ್ದೆ. ಹಾಗೆಯೇ ಟವಲ್ ತೊಟ್ಟು, ಉದ್ದ ಕೂದಲಿನವಳೆಂದು ನಟಿಸುತ್ತಿದ್ದೆ.

ಅಕ್ಕನ ಚಪ್ಪಲಿಗಳನ್ನು ಕದ್ದು, ಅವುಗಳಲ್ಲಿ ಹೆಜ್ಜೆಯಿಟ್ಟು ನಡೆಯಲು ಪ್ರಯತ್ನಿಸುತ್ತಿದ್ದೆ. ಸ್ನೇಹಿತರ ನಡುವೆ ಹುಡುಗಿಯಂತೆಯೇ ವರ್ತಿಸುತ್ತಿದ್ದೆ. ತೊಟ್ಟಿದ್ದ ಪ್ಯಾಂಟ್ ಶರ್ಟ್ ನನಗೆ ಚೂಡಿದಾರವೇ ಆಗಿತ್ತು. ನಾನು ಹೆಣ್ಣಿನ ಲಕ್ಷಣಗನ್ನು ತೋರುತ್ತಿವುದನ್ನು ಪೋಷಕರು ಗಮನಿಸಿದ್ದರು. ಅದಕ್ಕವರು, "ನೀನು ಹುಡುಗನಾಗಿ ಹುಟ್ಟಿದ್ದೀಯ, ಹುಡುಗನಂತೆಯೇ ಮಾತನಾಡಬೇಕು, ಗಂಡಸಿನಂತೆಯೇ ನಡೀಬೇಕು', ಎಂದು ಗದರಿಸುತ್ತಿದ್ದರು.

ಆ ಸಮಯದಲ್ಲಿ ಪೋಷಕರು ಏನು ಹೇಳಿದರೂ, ಅದರಂತೆ ಮಾಡುತ್ತಿದ್ದೆ. ಹುಡುಗನಂತೆ ದಿಟ್ಟವಾಗಿ ನಡೆಯಲು ಪ್ರಯತ್ನಿಸಿದ್ದೂ ಹೌದು. ಹುಡುಗನಂತೆ ವರ್ತಿಸಲು, ಮಾತನಾಡಲು ಪ್ರಯತ್ನಿಸಿದಷ್ಟು ಕಷ್ಟವೇ ಆಗುತ್ತಿತ್ತು. ಹೀಗಿರುವಾಗ, ಎಂಟನೇ ವಯಸ್ಸಿನಲ್ಲಿಯೇ ಹುಡುಗನಲ್ಲ. ಹುಡುಗಿ ಎಂದು ಸಂಪೂರ್ಣವಾಗಿ ಅರಿತುಕೊಂಡೆ.

ಹುಡುಗಿಯೊಂದು ಗುರುತು ಖಚಿತವಾಗತೊಡಗಿದಂತೆ, ಕುಟುಂಬದಲ್ಲಿನ ಹೆಣ್ಣಿನ ಪಾತ್ರಕ್ಕೆ ಅನುಗುಣವಾಗಿ ವರ್ತಿಸಲು ಆರಂಭಿಸಿದೆ. ಇದನ್ನು ಪೋಷಕರು ಅನೇಕ ಸಲ ನೋಡಿದ್ದರು. 'ನಾನು ಸರಿಯಾಗಿ ವರ್ತಿಸುತ್ತಿಲ್ಲ' ಎನ್ನುತ್ತಿದ್ದರು. ಹೀಗಿರುವಾಗ, ಅವರ ನಡೆ ಮತ್ತೊಂದು ಕಡೆಗೆ ಪಲ್ಲಟಗೊಂಡಿತು. ನನ್ನನ್ನು ಹೊಡೆದರು, ನಿಂದಿಸಿದರು, ಕಿರುಕುಳ ನೀಡಿದರು; ಅಲ್ಲಿ ಬಹುಬಗೆಯ ಚಿತ್ರಹಿಂಸೆ ಇತ್ತು. ಆದರೂ ನನ್ನ ಉದ್ದೇಶ, ಏಕೈಕ ಆಸೆಯೆಂದರೆ ಹುಡುಗಿಯರೊಂದಿಗೆ ಆಟವಾಡುವುದಾಗಿತ್ತು.

ತಂದೆ ಭಿನ್ನ ಹಿನ್ನೆಲೆಯಿಂದ ಬಂದವರಾಗಿದ್ದರು. ತಮ್ಮ ಘನತೆ, ಪ್ರತಿಷ್ಠೆಯ ಬಗ್ಗೆ ಆತಂಕಗೊಂಡಿದ್ದರು. ಹೀಗಿರುವಾಗ, ನನ್ನ ವರ್ತನೆಯ ಕುರಿತು ನೆಂಟರು, ಸ್ನೇಹಿತರು, ನೆರೆಹೊರೆಯವರು ಯಾವಾಗಲೂ ಕೀಟಲೆ ಮಾಡುತ್ತಿದ್ದರು. "ನಿಮ್ಮ ಮಗ ಏಕೆ ಹುಡುಗಿಯಂತೆ ವರ್ತಿಸುತ್ತಿದಾನೆ? ಇದು ಸರಿಯಲ್ಲ....." ಎನ್ನುತ್ತಿದ್ದರು. ಜನ ನನ್ನನ್ನು ಸಂಗ, ಚಕ್ಕಾ,

ಒಂಬತ್ತು ಮುಂತಾದ ಪದಗಳಿಂದ ಕರೆಯುತ್ತಿದ್ದರು. ಇದು ಬಹಳ ಕಷ್ಟಕರವಾಗಿತ್ತು. ಹೀಗಿರುವಾಗ, ಆ ಚಿಕ್ಕವಯಸ್ಸಿನಲ್ಲಿ, ಜನಕ್ಕೆ ಹಿಂತಿರುಗಿ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಜನ ಏನು ಅಂದರೂ ಅದನ್ನು ಒಪ್ಪಿಕೊಳ್ಳುತ್ತಿದ್ದೆ. ನೆರೆಹೊರೆಯವರು ಗಂಡಸಿನಂತೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು. ಇವೆಲ್ಲವೂ ನಾವು ಒತ್ತಾಯಪೂರ್ವಕವಾಗಿ ಒಪ್ಪಿಕೊಂಡ ಸಂಗತಿಗಳಾಗಿದ್ದವು.

ಮರೆಯಲಾಗದ ಘಟನೆಯೊಂದು ನೆನಪಿಗೆ ಬರುತ್ತಿದೆ – ಅದೊಂದು ದಿನ ಹುಡುಗಿಯರೊಂದಿಗೆ 'ಕುಂಟೆಬಿಲ್ಲೆ' ಆಟವಾಡುತ್ತಿದ್ದೆ. ತಂದೆ ಉದ್ದ ವಿದ್ಯುತ್ ತಂತಿ ಹಿಡಿದು ಬಂದರು. ಎಲ್ಲರೆದುರು ಹೊಡೆಯಲು ಶುರುಮಾಡಿದರು. ಹೊಡೆಯುತ್ತಲೇ ಬಾಬ್ ಕಟ್ ಕೂದಲನ್ನು ಹಿಡಿದೆಳೆಯುತ್ತಾ ಮನೆಯತ್ತ ಎಳೆದೊಯ್ದರು. ಮನೆಯೊಳಗೆ ಪಾತ್ರೆಯಲ್ಲಿ ಕುದಿಯುತ್ತಿದ್ದ ಬಿಸಿನೀರನ್ನು ಕಾಲುಗಳ ಮೇಲೆ ಸುರಿದರು. ಹಾಗೆ ಮಾಡುವ ಮೂಲಕ ನಾನು ಮತ್ತೆಂದೂ ಹುಡುಗಿಯಂತೆ ವರ್ತಿಸುವುದಿಲ್ಲ ಎಂದು ಭಾವಿಸಿದ್ದರು.

ಆಗ ನನಗೆ ಎಂಟು ಅಥವಾ ಒಂಬತ್ತು ವರುಷವಾಗಿತ್ತೆಂದು ಕಾಣುತ್ತೆ. ಜೋರಾಗಿ ಚೀರಿಕೊಂಡೆ. ಕೂಗು ಕೇಳಿದ ಅಕ್ಕಪಕ್ಕದವರೆಲ್ಲ ಅಲ್ಲಿಗೆ ಬಂದು ಏನಾಯಿತೆಂದು ಕೇಳಿದರು. ಆಗ ತಂದೆ, "ಈತ ನನ್ನ ಮಗ. ಈ ರೀತಿ ವರ್ತಿಸುತ್ತಿದ್ದಾನೆ....ನಾನಿಲ್ಲಿ ಕೆಲಸ ಮಾಡುತ್ತಿದ್ದೇನೆ. ಜನ ಅವನನ್ನು ಚಕ್ಕಾ, ಸಂಗ, ಒಂಬತ್ತು ಎಂದು ಕರೆಯುತ್ತಿದ್ದರು. ನಾ ಇದನ್ನು ಒಪ್ಪಿ ಸುಮ್ಮನಿರಬೇಕಾ....?" ಎಂದರು.

ಕಾಲುಗಳು ಬೆಂದುಹೋದವು. ಮಾತನಾಡಲು ಸಾಧ್ಯವಾಗುತ್ತಿಲ್ಲ. ತಾಯಿ ನಮ್ಮಿಬ್ಬರ ನಡುವೆ ಬಂದರು. ಒಡಹುಟ್ಟಿದವರು ಬಂದರು. ಆದರೂ ತಂದೆ ಕೋಪ ಕಡಿಮೆಯಾಗಲಿಲ್ಲ. ಈ ಎಲ್ಲದರ ನಂತರ, ಮೂರು ತಿಂಗಳ ಕಾಲ ನನ್ನನ್ನವರು ಮನೆಯಲ್ಲಿ ಕೂಡಿ ಹಾಕಿದ್ದರು. ಎಲ್ಲಿಯೋ ಹೋಗಲಾಗಲಿಲ್ಲ. ಸೂರ್ಯನನ್ನು ನೋಡಲಾಗಲಿಲ್ಲ. ಸ್ನೇಹಿತರನ್ನು ನೋಡಲು ಬಿಡಲಿಲ್ಲ. ಶಾಲೆಗೂ ಹೋಗಲು ಬಿಡಲಿಲ್ಲ.

ಮನೆಯಲ್ಲಿ ಬಂದಿಯಾದ ಆ ಸಮಯದಲ್ಲಿ ಪಾತ್ರೆ ತೊಳೆಯುತ್ತಿದ್ದೆ; ಅಮ್ಮನೊಡನೆ ಅಡಿಗೆ ಮಾಡುವುದು; ಬಟ್ಟೆ ತೊಳೆದು ಮನೆಯನ್ನು ಒರೆಸಿ ಸ್ವಚ್ಛ ಮಾಡುವುದು....ಮುಂತಾದ ಕೆಲಸ ಮಾಡುತ್ತಿದ್ದೆ. ಹೀಗೆ, ಮಹಿಳೆಯರು ಮನೆಯಲ್ಲಿ ಏನು ಮಾಡುತ್ತಾರೋ, ಅದಕ್ಕೆ ಹೊಂದಿಕೊಂಡು ನಡೆದೆ. ರಂಗೋಲಿ ಹಾಕುವುದನ್ನು ಇಷ್ಟಪಟ್ಟು ಕಲಿತುಕೊಂಡೆ. ಹೀಗೆ ಏಕಾಂತವಾಗಿ, ಮನೆಯ ಕೆಲಸ ಮಾಡುತ್ತಾ ಹಾಯಾಗಿದ್ದೆ. ಅದು ನನಗೆ ಸಂತಸವನ್ನೂ ನೀಡಿತ್ತು. ಈ ಕೆಲಸಗಳಲ್ಲಿ ತೊಡಗಿದ್ದರಿಂದ ಸಮಯ ಕಳೆಯುತ್ತಿತ್ತು. ಅದನ್ನು ಆನಂದಿಸಿದೆ. ಇದೇ ನನ್ನ ಬದುಕು, ಗುರುತು ಎಂದು ಭಾವಿಸಿದೆ. ಆ ನಾಲ್ಕು ಗೋಡೆಗಳ ಮಧ್ಯೆ ಖುಷಿಯಾಗಿಯೇ ಇದ್ದೆ.

ಹೆತ್ತವರು ಹತ್ತಿರ ಬಂದಾಗ ಗಂಡಸಿನಂತೆ ವರ್ತಿಸಿ, ಗಂಡಸಿನಂತೆ ಹೆಜ್ಜೆ ಹಾಕುತ್ತಿದ್ದೆ. ಇದು ಸುಲಭವಿರಲಿಲ್ಲ. ದನಿ ಅಡಗಿಹೋಗಿತ್ತು. ನಾನು ಡಬಲ್ ರೋಲ್ ಮಾಡುತ್ತಿದ್ದೆ. ಹೊರಗೆ ಗಂಡಸು. ಆದರೆ ನನ್ನೊಳಗೆ ಹೆಣ್ಣಾಗಿದ್ದೆ. ಲಿಂಗ ಸಂಬಂಧವಾದ ಈ ದ್ವಿಪಾತ್ರ ಮನೋರಂಗದಲ್ಲಿ ದೊಡ್ಡ ಗದ್ದಲವನ್ನೇ ಏರ್ಪಡಿಸಿತ್ತು.

ತಂದೆಯ ಪ್ರತಿಷ್ಠೆಯ ಕಾರಣ, ನನ್ನನ್ನು ಒಂದು ಗಂಡಸರ ಆಸ್ಪತ್ರೆಗೆ ಕರೆದೊಯ್ದರು. ವೈದ್ಯರು ತಂದೆಗೆ 'ಮಗ ಪಕ್ಕಾ' ಎಂದರು. ಸ್ವಲ್ಪ ಔಷಧಿ ನೀಡಿದರು; ನಂತರ ತಲೆ, ಎದೆ, ಬೆನ್ನು, ಜನನಾಂಗ ಮೇಲೆ ಒಂದು ರೀತಿಯ ತಂತಿಯನ್ನು ಅಂಟಿಸಲಾರಂಭಿಸಿದರು. ಹೆದರಿಕೆಯಿಂದ ನಡುಗುತ್ತಿದ್ದೆ. ಅಲ್ಲಿ ಏನಾಗುತ್ತಿದೆ ಎಂದೂ ತಿಳಿಯಲಿಲ್ಲ. ಈ ಜನಕ್ಕೆ ಹೇಗೆ ಮುಖಾಮುಖಿಯಾಗೋದು? ವೈದ್ಯರ ಮುಂದೆ ನನ್ನ ಬಟ್ಟೆಗಳನ್ನು ಬಿಚ್ಚಿದರು. ಹೆತ್ತವರಿಗೂ ಅವಮಾನವಾಗಿತ್ತು.

ಎರಡು–ಮೂರು ತಿಂಗಳ ನಂತರ ಒಬ್ಬ ಸಾಂಪ್ರದಾಯಿಕ ವೈದ್ಯರ ಬಳಿ ಕರೆದೊಯ್ದರು. ನನ್ನ ಮೇಲೆ ಎಲ್ಲ ರೀತಿಯ ಪ್ರಯೋಗಗಳನ್ನು ಮಾಡಿದರು. ನನ್ನ ದೇಹದೊಳಗೆ ಯಾವುದೇ ದೆವ್ವ ಇದ್ದಂತೆ ಬಡಿದರು. ಬೇವು, ನಿಂಬೆ, ಅರಿಶಿನ, ಕುಂಕುಮ ಬಳಸಿದರು. ಕೊನೆಗೆ ಮನೆಗೆ ಬಂದಾಗ, ಏನಾಯಿತು ಎಂದು ನಂಬಲಾಗಲಿಲ್ಲ. ಅದು ತೀರಾ ಚಿತ್ರಹಿಂಸೆಯಾಗಿತ್ತು.

ಮತ್ತೆ ಗಂಡಸಿನಂತೆ ವರ್ತಿಸಲಾರಂಭಿಸಿದೆ. ಹೆತ್ತವರ ನೋಟ, ಸಮಾಜದ ದೃಷ್ಟಿ. ನೆರೆಹೊರೆಯವರ ಕಣ್ಣೋಟ, ಸ್ನೇಹಿತರ ನೆಲೆಗಟ್ಟು – ಇವುಗಳನ್ನೆಲ್ಲ ಕುರಿತು ಯೋಚಿಸಿದೆ. ಆ ಸಂದರ್ಭದಲ್ಲಿ, ಮಾತನಾಡಲು ನನ್ನವರೆಂದು ಯಾರೂ ಇರಲಿಲ್ಲ.

ಹುಡುಗಿಯರೊಂದಿಗೆ ಆಟವಾಡಲು ಹೋದಾಗ, ಹುಡುಗರೊಂದಿಗೆ ಆಟವಾಡುವಂತೆ ಕಳುಹಿಸಿದರೆ, ಹುಡುಗರತ್ತ ಹೋದಾಗ, ಹೊರದೂಡುತ್ತಿದ್ದರು. ಪ್ಯಾಂಟ್–ಶರ್ಟನ್ನು ಕೆಳಕ್ಕೆಳೆದು ಕಿರುಕುಳ ನೀಡುತ್ತಿದ್ದರು. ಬ್ಯಾಟ್, ಚೆಂಡನ್ನು ಮುಟ್ಟಲೂ ಬಿಡುತ್ತಿರಲಿಲ್ಲ. ಹುಡುಗಿಯರು 'ಕುಂಟೆಬಿಲ್ಲೆ' ಆಟದಿಂದ ಹೊರಹಾಕಿದ್ದರು. ಎಷ್ಟರಮಟ್ಟಿಗೆ ಒಂಟಿತನವನ್ನು ಅನುಭವಿಸಿದೆನೆಂದು ವಿವರಿಸುವುದು ಕಷ್ಟ. ಹುಡುಗರು ಅಥವಾ ಹುಡುಗಿಯರೊಂದಿಗೆ ಆಟವಾಡಲು ಸಾಧ್ಯವಾಗದ ಕಾರಣ, ನಾನೇ ಆಟ ಆಡಿಕೊಳ್ಳುತ್ತಿದ್ದೆ.

ಇದೆಲ್ಲ ಆದ ಮೇಲೂ....ನಾನೊಬ್ಬಳು ಹೆಣ್ಣು ಎಂದೇ ಮನೆಗೆ ವಾಪಸ್ಸಾಗುತ್ತಿದ್ದೆ. ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ಮೇಕಪ್ ಮಾಡಿಕೊಳ್ಳುತ್ತಿದ್ದೆ. "ನಾನೇಕೆ ಹೀಗೆ ಮಾಡಿಕೊಳ್ಳುತ್ತಿರುವೆ ? ಜನರೇಕೆ ಒಪ್ಪಿಕೊಳ್ಳುತ್ತಿಲ್ಲ?" ನನ್ನಷ್ಟಕ್ಕೇ ಕೇಳಿಕೊಳ್ಳುತ್ತಿದ್ದೆ.

ಲಕ್ಷ್ಮಿದೇವತೆಗೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆ. ಈ ದೇವತೆ ನನಗೆ ಅತ್ಯಂತ ಸೌಂದರ್ಯವತಿಯಾಗಿದ್ದಳು. ಅವಳು ಸುಂದರವಾದ ಕಿವಿಯೋಲೆ ಮೂಗುತಿ, ಉದ್ದ ಕೂದಲು, ತನ್ನ ಸುತ್ತಲೂ ಹೂವನ್ನು ಹೊಂದಿರುವುದಲ್ಲದೆ, ಆಕೆ ಕಮಲದ ಮೇಲೆ ಕುಳಿತಿದ್ದಳು. ಈ ಲಕ್ಷ್ಮಿ ನನಗೆ ತುಂಬಾ ಆಪ್ತಳಾಗಿದ್ದು, ಆಕೆಯ ಬಳಿ ಹೋಗಿ, ನನ್ನೆಲ್ಲ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೆ. ಈ ಎಲ್ಲ ಹಿಂಸೆ–ಕಿರುಕುಳ ವೆಲ್ಲವನ್ನೂ ಹೇಳಿಕೊಳ್ಳುತ್ತಿದ್ದೆ. "ಇವುಗಳಿಂದೆಲ್ಲ ನನಗೆ ಮುಕ್ತಿ ಕೊಡಬಾರದೆ ?" ಎಂದು ಅಲವತ್ತುಕೊಳ್ಳುತ್ತಿದ್ದೆ. ಆಕೆ ನಿಜವಾಗಿಯೂ ಅಲ್ಲಿದ್ದಾಳೆಂದು ಭಾವಿಸಿದ್ದೆ.

ನಮ್ಮ ಮನೆ ಬೆಂಗಳೂರಿನ ಮೈಸೂರು ರಸ್ತೆ ಬದಿಯಲ್ಲಿರುವ ಚಾಮರಾಜಪೇಟೆಯ ಟೋಲ್‌ಗೇಟ್‌ನಲ್ಲಿತ್ತು. ಅಲ್ಲಿ ಬ್ರಾಹ್ಮಣರದ್ದೇ ಸಾಮ್ರಾಜ್ಯ. ತಂದೆ ರಕ್ಷಣಾ ಸಚಿವಾಲಯದಲ್ಲಿ ಕೆಲಸ ಮಾಡುತ್ತಿದ್ದರಾದ್ದರಿಂದ ಒಳ್ಳೆಯ ಸಂಬಳ ಸಿಗುತ್ತಿತ್ತು. ಅವರಂತೂ ಧಾರಾಳ ವ್ಯಕ್ತಿಯಾಗಿದ್ದರು. ಸಾಲ ತೆಗೆದುಕೊಳ್ಳುವ ಅನೇಕರಿಗೆ ಜಾಮೀನು ನೀಡುತ್ತಿದ್ದರು. ಅವರು ಬ್ಯಾಂಕಿಗೆ ಸಾಲವನ್ನು ಸರಿಯಾದ ಸಮಯಕ್ಕೆ ಪಾವತಿಸದಿದ್ದಾಗ, ತಂದೆಯ ಹಣ ಕಡಿತಗೊಳಿಸಲಾಗುತ್ತಿತ್ತು. ಮೂವತ್ತು ವರ್ಷಗಳಿಂದ ಗಳಿಸುತ್ತಿದ್ದ ಸಂಬಳ ಏನೇ ಇರಲಿ, ಅದರಲ್ಲಿ ಬಹುಪಾಲು 65% ರಷ್ಟು ಹಣ ಅತ್ತಲೇ ಹೋಗಿತ್ತು. ಇದೇ ನಮ್ಮ ಕಡುಬಡತನಕ್ಕೂ ಕಾರಣವಾಯಿತೆಂದರೆ ಯಾರು ನಂಬುವುದಿಲ್ಲ! ನಮ್ಮ ಇಡೀ ಕುಟುಂಬವೇ ಚೂರಾಯಿತು. ಪ್ರತಿದಿನ, ಅಪ್ಪ–ಅಮ್ಮ ಜಗಳವಾಡುತ್ತಿದ್ದರು.

ನಾವು ಕಡುಬಡವರಾದೆವು. ತಿನ್ನಲು ಸಾಕಷ್ಟು ಊಟ, ತೊಡಲು ಬಟ್ಟೆ ಇರುತ್ತಿರಲಿಲ್ಲ. ಕೆಲವೊಮ್ಮೆ ತಿಂಗಳುಗಳೇ ಕಳೆದುಹೋದರೂ ಶಾಲಾ ಫೀಸು ಕಟ್ಟಲಾಗದೆ ಅನೇಕ ತೊಂದರೆಗಳನ್ನು ಎದುರಿಸಿದ್ದೇನೆ. ಆ ಸನ್ನಿವೇಶದಲ್ಲಿ ಬ್ರಾಹ್ಮಣ ಟೀಚರ್ ಎಂ.ಚಂದ್ರಮತಿ ಎನ್ನುವವರು ಒಮ್ಮೆ ನನಗೆ ಬೆಂಬಲವಾಗಿ ನಿಂತು, ಫೀಸು ಕಟ್ಟಿದ್ದರು (ನಂತರ ತಿಳಿದದ್ದೇನೆಂದರೆ, ಆ ಟೀಚರ್ ಮಗನೂ ಸಹ ನನ್ನಂತೆಯೇ ಇದ್ದು, ಕೊನೆಗೆ ಎಂಟನೇ ತರಗತಿಯಲ್ಲಿ ಓದುತ್ತಿರುವಾಗ ತನ್ನ ಜೀವವನ್ನು ಕೊನೆಗೊಳಿಸಿಕೊಂಡಿದ್ದ).

ಕೆಲವೊಮ್ಮೆ ಪರಿಸ್ಥಿತಿ ಎಷ್ಟು ಹದಗೆಟ್ಟಿರುತ್ತಿತ್ತೆಂದರೆ, ಸತ್ತ ಹೆಣಕ್ಕೆ ಜನ ಇಡುತ್ತಿದ್ದ ಎಡೆಯನ್ನೂ ತಿಂದಿದ್ದಿದೆ. ಅಂತ್ಯಕ್ರಿಯೆ ನಡೆಯುತ್ತಿದ್ದಲ್ಲಿಗೆ ಹೋಗಿ ಆ ಎಡೆಯನ್ನು ಮನೆಗೆ ತಂದು, ಒಡಹುಟ್ಟಿದವರೊಂದಿಗೆ ಹಂಚಿಕೊಳ್ಳುತ್ತಿದ್ದೆ. ಮೃತದೇಹಗಳ ಮೇಲೆ ಇಡುತ್ತಿದ್ದ ಹಣ ತಂದು, ಮನೆಯಲ್ಲಿ ಹಾಲು–ಸಕ್ಕರೆ ತರಲು ಕೊಡುತ್ತಿದ್ದೆ.

ಆ ಸಂದರ್ಭದಲ್ಲಿ ಅಮ್ಮ ಹೇಗಾದರೂ ಮಾಡಿ ಹಸಿವು ನೀಗಿಸಲು ಪ್ರಯತ್ನಿಸುತ್ತಿದ್ದರು. ಕೆಲವೊಮ್ಮೆ ಸಾಂಬಾರ್‌ಪುಡಿ ಮಾರಿ, ಅಕ್ಕಿ ತರುತ್ತಿದ್ದರು. ಮತ್ತೆ ಕೆಲವೊಮ್ಮೆ ಸೀರೆಗಳನ್ನು, ಹಿತ್ತಾಳೆ ಪಾತ್ರೆಗಳನ್ನು ಅಡವಿಟ್ಟು ಅಡಿಗೆ ಸಾಮಾನು ತರುತ್ತಿದ್ದರು. ಒಮ್ಮೆ ದೊಡ್ಡಮ್ಮನ ಮನೆಯಲ್ಲಿ ಅಕ್ಕಿ ರಾಶಿ ಮಾಡಿದ್ದರು. ಸ್ವಲ್ಪ ಅಕ್ಕಿ ಕೇಳಿದೆ. ಕೂಡಲೇ ದೊಡ್ಡಮ್ಮ ರಗ್ಗನ್ನು ತಂದು ಅಕ್ಕಿಯ ಮೇಲೆ ಹಾಸಿ, ಮುಚ್ಚಿಬಿಟ್ಟು, ಅಕ್ಕಿಯಿಲ್ಲವೆಂದರು!

ಶಾಲೆಯಲ್ಲಿ, ಎಲ್ಲರೂ ತಮ್ಮ ತಮ್ಮ ಸ್ನೇಹಿತರೊಂದಿಗೆ ಕುಳಿತು ಮಾತನಾಡಲು ಹೋದರೆಂದರೆ, ಅಲ್ಲಿ ಹುಡುಗರ ಬೆಂಚ್, ಹುಡುಗಿಯರ ಬೆಂಚ್ ಇದ್ದವು. ನನಗೆ ಹುಡುಗರ ಬೆಂಚಿನಲ್ಲೇ ಕೂರಲು ಒತ್ತಾಯಿಸಲಾಗುತ್ತಿತ್ತು. ತರಗತಿಯಲ್ಲಿ ಟೀಚರ್ ಕೇಳಿದ ಪ್ರಶ್ನೆಗೆ; ನಾವು ನಿಂತು, ಕೈಕಟ್ಟಿಕೊಂಡು ಉತ್ತರಿಸಬೇಕಾಗಿತ್ತು. "ಭಾರತದ ಪ್ರಧಾನಿ ಯಾರು ?" ಎಂದು ಶಿಕ್ಷಕರು ಕೇಳಿದರೆ, ನನ್ನ ದನಿಯಲ್ಲೇ ಉತ್ತರ ಹೇಳಿದರೂ ಸಹಪಾಠಿಗಳು ಗೇಲಿ ಮಾಡುತ್ತಿದ್ದರು. ನಿಧಾನವಾಗಿ ನಿರಾಸಕ್ತಿ ಆವರಿಸುತ್ತಿತ್ತು. ಅಂಗಿಯಲ್ಲಿ ಮುಖ ಹುದುಗಿಸಿ ಅಳುತ್ತಿದ್ದೆ. ಪ್ಯಾಂಟ್ ಹರಿದಾಗ ಅದನ್ನು ಕಾಗದದ ಮೂಲಕ ಮುಚ್ಚಿಕೊಳ್ಳುತ್ತಿದ್ದೆ.

ನನ್ನೊಂದಿಗೆ ಓದುತ್ತಿದ್ದ ಸಹಪಾಠಿಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದವರು. ಚಾಕೋಲೇಟ್ ಕುರಕಲು ತಿಂಡಿಯನ್ನು ಶಾಲೆಗೆ ತರುತ್ತಿದ್ದರು. ನನಗೆ ಅಂತಹ ತಿಂಡಿಯೇನೂ ಇರಲಿಲ್ಲ. ಅನೇಕ ಸಲ, ನಾವು ಹಳಸಿದ ತಿಂಡಿಯನ್ನು ತಿನ್ನಬೇಕಾಗಿತ್ತು. ಮನೆಯಲ್ಲಿ ಸರಿಯಾದ ಅಕ್ಕಿ ಇರಲಿಲ್ಲ. ಅಮ್ಮ ಇದ್ದದ್ದರಲ್ಲಿ ಅಡಿಗೆ ಮಾಡುತ್ತಿದ್ದರು. ಅದನ್ನೇ ಶಾಲೆಗೆ ಒಯ್ಯುತ್ತಿದ್ದೆವು. ಹಳಸಿದ ತಿಂಡಿಯನ್ನು ಬಿಸಿನೀರಿನೊಂದಿಗೆ ಬೆರೆಸಿ, ಅದಕ್ಕೆ ಸ್ವಲ್ಪ ಉಪ್ಪು ಸೇರಿಸಿ, ಸಣ್ಣ ಬುತ್ತಿ ಮಾಡಿ ಶಾಲೆಗೆ ಒಯ್ಯುತ್ತಿದ್ದೆವು. ಸ್ನೇಹಿತರು ಮಧ್ಯಾಹ್ನದ ಊಟದ ಸಮಯಕ್ಕಾಗಿ ಸಂತಸದಿಂದ ಕಾಯುತ್ತಿದ್ದರು. ಯಾವಾಗ ಅವರು ನನ್ನ ತಿಂಡಿಯನ್ನು ಮೂಸುತ್ತಿದ್ದರೋ, 'ಹಳಸಿದೆ' ಎನ್ನುತ್ತಿದ್ದರು. "ಹುಂ....ಕೆಟ್ಟಿದೆ", ಎಂದ ಕೂಡಲೇ ಡಬ್ಬಿಯನ್ನು ಮುಚ್ಚುತ್ತ, "ಬಹುಶಃ ಅಮ್ಮ ಇದನ್ನು ಗಮನಿಸಿಲ್ಲ ಎನಿಸುತ್ತದೆ. ಅತ್ತ ಚರಂಡಿಗೆ ಬಿಸಾಡುತ್ತೇನೆ" ಎಂದು ಹೇಳಿ, ಶಾಲೆಯ ಹಿಂಬದಿಗೆ ಹೋಗಿ, ಅದನ್ನೇ ತಿಂದು ಹಿಂತಿರುಗುತ್ತಿದ್ದೆ.

ಈ ಸತ್ಯ ಸಂಗತಿಗಳನ್ನು ಸ್ನೇಹಿತರಿಂದ ಮುಚ್ಚಿಡುತ್ತಿದ್ದರಿಂದ ಶಾಲೆಯೇ ಬಹುಕಷ್ಟಕರವೆನಿಸತೊಡಗಿತು. ನನ್ನ ದನಿ, ದೈಹಿಕ ಹಾವಭಾವ, ಉಡುತ್ತಿದ್ದ ಬಟ್ಟೆ, ಮಾಡಿಕೊಂಡಿದ್ದ ಮೇಕಪ್–ಇವುಗಳಿಂದಾಗಿ ಜನ ನನಗೆ ಕಿರುಕುಳ ನೀಡುತ್ತಿದ್ದರು. ನಾನು ಯಾವ ಲಿಂಗ ಹೊಂದಿದ್ದೇನೆಂದು ನೋಡಲು ಸ್ನೇಹಿತರಿಗೆ ಯಾವಾಗಲೂ ಕುತೂಹಲ, ಮರೆಯಲಾಗದ ಒಂದು ಘಟನೆ ನಡೆಯಿತು.

ರೇಖಾಗಣಿತ ಕಲಿಯಲು ನಾವು ಕಂಪಾಸ್ ಬಳಸುತ್ತೇವೆ. ಅದರ ಒಂದು ಬದಿಯಲ್ಲಿ ಸೂಜಿಯಂತೆ ಚೂಪಾದ ತುದಿ ಇರುತ್ತದೆ. ಅಂದು ತರಗತಿಯಲ್ಲಿ ಶಿಕ್ಷಕರು ಕೇಳಿದ ಪ್ರಶ್ನೆಗೆ ಉತ್ತರಿಸಲು, ಕೈಕಟ್ಟಿ ಎದ್ದು ನಿಂತೆ. ನನಗೆ ಗೊತ್ತಿಲ್ಲದೆ ಸ್ನೇಹಿತರು ಕಂಪಾಸನ್ನು ಕೂರುವಲ್ಲಿ ಇಟ್ಟಿದ್ದರು. ಅದರ ಮೇಲೆಯೇ ಕುಳಿತುಕೊಳ್ಳಲು ದೂಡಿದರು. ಕೂತ ರಭಸಕ್ಕೆ ಕಂಪಾಸ್ ಸೂಜಿ ಆಳವಾಗಿ ಚುಚ್ಚಿತು. ರಕ್ತ ಸೋರಿತ್ತಲ್ಲದೆ ನೋವು ನನ್ನನ್ನು ಘಾಸಿಗೊಳಿಸಿತ್ತು. ಟೀಚರ್‌ಗೆ ಏನೂ ಹೇಳಲಾಗದೆ ಅಳುತ್ತಾ ಕುಳಿತೆ. ಕುಳಿತ ಜಾಗ ರಕ್ತಮಯವಾಗಿತ್ತು.

ಇದಾದ ನಂತರ, ಶಾಲೆಗೆ ಹೋಗಲಾಗಲೀ, ಯಾರೊಂದಿಗಾದರೂ ಮಾತನಾಡಲಾಗಲೀ ಹೆದರುತ್ತಿದ್ದೆ. ಸ್ನೇಹಿತರೊಡನೆ ಆಹಾರ, ಆಟದ ಸಾಮಾನು, ನೋಟ್‌ಬುಕ್‌ಗಳನ್ನು ಹಂಚಿಕೊಳ್ಳಲು, ಮಾತನಾಡಲು ಭಯವಾಗುತ್ತಿತ್ತು.

ಆದರೂ, ಶಾಲೆಯಲ್ಲಿ ಕನ್ನಡ ವಿಷಯದಲ್ಲಿ ಉಳಿದವರಿಗಿಂತ ಹೆಚ್ಚು ಅಂಕ ಪಡೆದು ಬೀಗುತ್ತಿದ್ದೆ. ಇದರಿಂದ, ಟೀಚರ್‌ಗಳು ಸಹ ಕೆಲವೊಮ್ಮೆ ನನಗೆ ಬೆಂಬಲವಾಗಿ ನಿಲ್ಲುತ್ತಿದ್ದರು. ಈ ಟೀಚರ್‌ಗಳಲ್ಲಿ ನನ್ನನ್ನು ವಿರೋಧಿಸುವವರೂ ಇದ್ದರು; ಮೆಚ್ಚುಗೆ ಸೂಚಿಸುವವರೂ ಇದ್ದರು. ಇದರಿಂದಾಗಿಯಷ್ಟೇ ತರಗತಿಗೆ ಹೋಗಬೇಕೆನಿಸುತ್ತಿತ್ತು. ಆ ಸಂದರ್ಭದಲ್ಲಿ ಮನೆಯಲ್ಲಿ ವಿದ್ಯುತ್ ದೀಪ ಇರಲಿಲ್ಲ. ಬೀದಿ ದೀಪದ ಕೆಳಗೆ ಕೂತು ಓದುತ್ತಿದ್ದೆ.

ಶಾಲೆಯಲ್ಲಿ, ಹುಡುಗ, ಹುಡುಗಿಯರಿಗೆ ಪ್ರತ್ಯೇಕ ಆಟಗಳಿದ್ದವು. ನಾನು ಆದ್ಯತೆ ನೀಡಿದ ಆಟಗಳನ್ನು ಹುಡುಗಿಯರ ಆಟಗಳು ಎಂದೇ ಪರಿಗಣಿಸಲಾಗಿತ್ತು. ಹುಡುಗಿಯರೊಡನೆ ಇರಲು ಬಯಸುತ್ತಿದ್ದೆ. ಆದರೆ ಹೊರದೂಡುತ್ತಿದ್ದರು. ಹೀಗೆ, ಆಟಗಳಿಂದಲೂ ಹೊರಗುಳಿದೆ. ಇದು ಸಣ್ಣ ವಿಷಯವಾದರೂ ನನಗೆ ಮಾತ್ರ ಅದು ಬಲು ಸೂಕ್ಷ್ಮ ಸಂಗತಿಯಾಗಿತ್ತು.

ಅಷ್ಟು ಚಿಕ್ಕ ವಯಸ್ಸಿನಲ್ಲಿ ಈ ಬಿಕ್ಕಟ್ಟಿನಿಂದ ಬಿಡಿಸಿಕೊಳ್ಳುವುದಾದರೂ ಹೇಗೆ ? ಶಾಲೆಯಲ್ಲಿ ಸ್ನೇಹಿತರಿಂದಲೇ ತುಂಬಾ ಕಿರುಕುಳವಿತ್ತು. ಶಿಕ್ಷಕರೂ ಸಹ ನನ್ನನ್ನು ಸ್ವೀಕರಿಸಲಿಲ್ಲ. ಎಲ್ಲರಿಂದಲೂ ಪ್ರತ್ಯೇಕಿಸಿ, ಬೇರೆಯ ಟೇಬಲ್,

ಕುರ್ಚಿಯಲ್ಲಿ ಕೂರಿಸಿದರು. ಒಮ್ಮೆ ಅವರನ್ನು ಪ್ರಶ್ನಿಸಿದೆ. "ನೀನು ಹೆಚ್ಚಾಗಿ ಹೆಣ್ಣಂತೆಯೇ ಇದ್ದೀಯ....." ಎಂದರು. ಹಾಗಿರುವುದೆಂದರೆ ಅದೊಂದು ರೀತಿಯ ಸಾಂಕ್ರಾಮಿಕ ಕಾಯಿಲೆಯಾಗಿ ಇತರ ಮಕ್ಕಳಿಗೂ ಹರಡಬಹುದೆಂಬುದು ಅವರ ಕಲ್ಪನೆಯಾಗಿತ್ತು.

ಇದನ್ನು ನೀವು ಎದುರಿಸುವುದಾದರೂ ಹೇಗೆ? ಈ ಸಂಗತಿಗಳ ಕುರಿತು ನಿಮ್ಮ ಕುಟುಂಬದಲ್ಲಿ ನೀವು ಮಾತನಾಡುವುದಾದರೂ ಹೇಗೆ? ಮನೆಯಲ್ಲಿ ಈ ಕುರಿತಂತೆ ಮಾತನಾಡಿದರೆ, ಖಂಡಿತವಾಗಿಯೂ ಬೈಯುತ್ತಾರೆಂದು ನನಗೆ ಗೊತ್ತಿತ್ತು. ಆದ್ದರಿಂದಲೇ ಗಂಡಸಿನಂತೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು. ನನ್ನೊಳಗೇ ಆಗುತ್ತಿದ್ದ ಬದಲಾವಣೆಗಳಾಗಲೀ, ಗುರುತಿನ ಚಹರೆಯಾಗಲೀ ಯಾರಿಗೂ ಬೇಡವಾಗಿತ್ತು. ಶಿಕ್ಷಕರಾಗಲೀ, ಸಹಪಾಠಿಗಳಾಗಲೀ, ಒಡಹುಟ್ಟಿದವರಾಗಲೀ, ಸಂಬಂಧಿಕರಾಗಲೀ ನನ್ನನ್ನು ಸ್ವೀಕರಿಸಲಿಲ್ಲ.

ಇದೆಲ್ಲವನ್ನೂ ಗಮನಿಸಿ, ಹನ್ನೊಂದನೇ ವಯಸ್ಸಿನಲ್ಲೇ ಹುಟ್ಟಿಬೆಳೆದ ಮನೆಯಲ್ಲೇ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದೆ. ಮೊದಲನೇ ಸಲ ಆ ರೀತಿ ಮಾಡಲು ಪ್ರಯತ್ನಿಸಿದಾಗ, ಭಯದಿಂದ ನಡುಗುತ್ತಿದ್ದೆ. ಅಮ್ಮನ ಸೀರೆಯನ್ನು ಬಳಸಿ ನೇಣುಬಿಗಿದುಕೊಂಡು ನಿಂತ ಕುರ್ಚಿಯನ್ನು ಪಕ್ಕಕ್ಕೆ ತಳ್ಳಿಬಿಟ್ಟೆ. ಉರುಳು ಬಿಗಿಯಾಗಿಬಿಟ್ಟಿತು. ಕೂಡಲೇ ತಮ್ಮ ಕೋಣೆಗೆ ಬಂದ. ಆ ಕ್ಷಣದಲ್ಲಿ ಬಿಗಿಯಾಗಿದ್ದ ನೇಣಿನಿಂದ ಬಿಡಿಸಿದ. "ನೀನ್ಯಾಕೆ ಸಾಯಲು ಬಯಸಿದ್ದೀಯಾ? ನೀನಿದನ್ನು ಮಾಡಬಾರದು". ಎಂದು ಜೋರಾಗಿ ಗದರಿದ. ಆತ ನನ್ನನ್ನು ಮೇಲಕ್ಕೆತ್ತಿ ಹಿಡಿದಿದ್ದ.

ನನಗೆ ವಿವರಿಸಲಾಗಲಿಲ್ಲ. ತಮ್ಮನೂ ಕೂಡ ನನ್ನ ವಿರುದ್ಧ ಇದ್ದ. ಆತನೂ ನಾನಿರುವಂತೆ ಒಪ್ಪಿರಲಿಲ್ಲ. ಅಕ್ಕ ಸಹ ನನ್ನ ಗುರುತನ್ನು ಒಪ್ಪಿಕೊಂಡಿರಲಿಲ್ಲ. ಅಮ್ಮ ಅಂತೂ ಪದೇ ಪದೇ ಹುಡುಗಿಯಂತೆ ವರ್ತಿಸಬಾರದೆಂದು ಚೀರಾಡುತ್ತಿದ್ದರು. ಅಪ್ಪನೊಂದಿಗೆ ಮಾತನಾಡಲು ತುಂಬಾ ಹೆದರುತ್ತಿದ್ದೆ. ತಂದೆಗೆ ಪ್ರತಿಷ್ಠೆಯೇ ಮುಖ್ಯವಾಗಿತ್ತು. ಅದೊಂದು ದಿನ, ಬಟ್ಟೆಗಳನ್ನೆಲ್ಲ ಪ್ಯಾಕ್ ಮಾಡಿ, ಮನೆಯಿಂದ ಹೊರಗಟ್ಟಿದರು. ಇನ್ನೆಂದೂ ನೀನು ಈ ಕುಟುಂಬದ ಭಾಗವಲ್ಲ, ನೀನು ಮನೆಬಿಟ್ಟು ತೊಲಗಿ ಹೋಗೆಂದು ಹೇಳಿಬಿಟ್ಟರು.

ಮಾರುಕಟ್ಟೆ ಫ್ಲೈಓವರ್ ಬಳಿಯ ಬೀದಿಗೆ ಹೋದೆ. ಎಷ್ಟೋ ಜನರಿರುವ ಈ ಬೃಹತ್ ಜಗತ್ತಿಗೆ ಹೊಸಬಳಾಗಿದ್ದೆ. ಅದು ಅಕ್ಟೋಬರ್ ತಿಂಗಳು, ಚಳಿ. ಕೇವಲ ಎರಡು ಜೊತೆ ಬಟ್ಟೆ ಇದೆ. ಊಟಕ್ಕಾಗಿ ಏನು ಮಾಡಬೇಕು? ಬೆಡ್‌ಶೀಟ್, ದಿಂಬು, ಚಾಪೆಯೂ ಇರಲಿಲ್ಲ. ಅಂದು ಸಂಜೆ ಸುಮಾರು ಆರು ಅಥವಾ ಏಳು ಗಂಟೆಯಾಗಿತ್ತು. ಚಳಿ ತಡೆದುಕೊಳ್ಳಲು ಆಗಲಿಲ್ಲ. ಮೊದಲು ಬಂದ ಆಲೋಚನೆಯೆಂದರೆ ಮನೆಗೆ ಹಿಂತಿರುಗುವುದಾಗಿತ್ತು. ಹಾಗೇನಾದರೂ ಮನೆಗೆ ಹೋದಲ್ಲಿ ತಂದೆಯೇ ನನ್ನನ್ನು ಕೊಲ್ಲುತ್ತಾರೆಂದು ಭಯವಾಗಿತ್ತು.

ಬೀದಿಯಲ್ಲಿನ ಬದುಕಿನ ಹತ್ತು ದಿನಗಳಲ್ಲಿ ನನಗೆ ಮನವರಿಕೆಯಾದುದೆಂದರೆ, ಸಾರ್ವಜನಿಕ ಜಾಗದಲ್ಲಿಯೂ ಸಹ ಹಿಂಸೆ–ಕಿರುಕುಳವೇ ಆಗುತ್ತದೆ ಎಂಬುದು. ಯಾವುದೇ ಸಾಮಾಜಿಕ ಗೌರವ ಇಲ್ಲ. ಆ ಸಮಯದಲ್ಲಿ ಶಾಲೆಯಿಂದ ಹೊರಗುಳಿದಿದ್ದೆ. ಕುಟುಂಬ ಯಾವುದೇ ರೀತಿಯ ಹಿಂಸೆ ನೀಡಿದರೂ ಪರವಾಗಿಲ್ಲ. ಅದನ್ನು ಸ್ವೀಕರಿಸುತ್ತೇನೆಂದು ನಿರ್ಧರಿಸಿದೆ.

ಹತ್ತನೇ ದಿನ ಮತ್ತೆ ಮನೆಗೆ ವಾಪಸ್ಸು ಹೋದೆ. ಅಪ್ಪ ಹೊರಗೆ ಕುಳಿತಿದ್ದರು. ಅವರನ್ನು ನೋಡಿದ ಕೂಡಲೇ ತಲೆತಿರುಗಿ ನೆಲಕ್ಕುರುಳಿ ಬಿದ್ದೆ. ಮನೆಗೆ ಏಕೆ ಬಂದೆ ? ಎನ್ನುತ್ತಾ, ಬೆಲ್ಟ್ ತೆಗೆದು ಹೊಡೆಯಲು ಬಂದರು. ಹಿಂತಿರುಗಿ ಬರುವ ಬದಲು ಸಾಯಬೇಕಿತ್ತು ಎಂದು ಗುಡುಗಿದರು.

ಅಮ್ಮ, ಸುತ್ತಲಿನ ಎಲ್ಲರೂ ನಮ್ಮ ನಡುವೆ ಬಂದು ನಿಂತರು. ಮನೆಯವರು ಕೆಲವು ಷರತ್ತುಗಳನ್ನಿಟ್ಟು ಕುಟುಂಬಕ್ಕೆ ಸೇರಿಸಿಕೊಂಡರು. ಉದ್ದ ಕೂದಲನ್ನು ಕತ್ತರಿಸಿ, ಸರಿಯಾದ ಪ್ಯಾಂಟ್ ಶರ್ಟ್ ಧರಿಸಬೇಕು. ಯಾವುದೇ ಕಾರ್ಯಕ್ರಮಗಳಿಗೆ ಹೋಗಬಾರದು. ಮಾತು, ನಡೆ ಗಂಡಸಿನಂತಿರಬೇಕು !

ಆ ಷರತ್ತುಗಳನ್ನೆಲ್ಲ ಒಪ್ಪಿಕೊಂಡೆ. ಎಲ್ಲದರೊಡನೆ ರಾಜಿಮಾಡಿಕೊಂಡೆ. ಬೀದಿಯಲ್ಲಿ ಜಾಸ್ತಿ ಹಿಂಸೆ ಅನುಭವಿಸಿದ್ದೆ. ಹಾಗಾಗಿ, ಈ ಕೌಟುಂಬಿಕ ಹಿಂಸೆಯನ್ನು ಒಪ್ಪುವುದಲ್ಲದೆ, ಗಂಡಸಿನಂತೆ ಇರುತ್ತೇನೆಂದೆ.

ಹನ್ನೆರಡನೇ ವಯಸ್ಸಿನಲ್ಲಿ ಮತ್ತೆ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆ. ನನ್ನನ್ನೇ ಕೊಂದುಕೊಳ್ಳುವ ಎರಡನೇ ಪ್ರಯತ್ನವಿದು. ಕೋಣೆಯಲ್ಲಿ ಹಗ್ಗವನ್ನು ಕಟ್ಟಿ ನೇಣಿಗೇರಿದೆ. ಇನ್ನೆರಡು ಸೆಕೆಂಡುಗಳಲ್ಲಿ ಸಾಯಬಹುದು.

ಲಕ್ಷ್ಮೀದೇವಿಯನ್ನು ಬಯ್ಯಲಾರಂಭಿಸಿದೆ, ನೀ ಇಲ್ಲಿಲ್ಲ, ನನ್ನಂತಹ ಹೆಣ್ಣಿನ ಮೇಲೆ ಸಹಿಸಲಾರದ ಹಿಂಸೆ ನಡೆಯುತ್ತಿದೆ. ನೀನು ಮಾತ್ರ ಫೋಟೋದೊಳಗಿರುವೆ? ಎಲ್ಲಿದ್ದೀ ನೀನು?" ಎಂದು ಕೇಳಿದೆ. ಆ ದಿನದಿಂದಲೇ ಯಾವುದೇ ಧರ್ಮದಲ್ಲಿ ನಂಬಿಕೆ ಇಡುವುದನ್ನು ಬಿಟ್ಟುಬಿಟ್ಟೆ; ಯಾವುದನ್ನೂ ಆಚರಿಸುವುದಿಲ್ಲವೆಂದು ನಿರ್ಧರಿಸಿದೆ.

ತದನಂತರದಲ್ಲಿ ಕೆಲವೇ ಕ್ಷಣಗಳಲ್ಲಿ ಎಲ್ಲದರ ಬಗ್ಗೆ ಯೋಚಿಸಿದೆ. ಈ ಎಲ್ಲವನ್ನು ಬಗೆಹರಿಸಿಕೊಳ್ಳಬೇಕೆಂದು ಇಚ್ಛಿಸಿದೆ. ಹಗ್ಗವನ್ನು ಪ್ರಶ್ನಿಸಿದೆ. ಬದುಕಬೇಕೆಂದು ಯೋಚಿಸಿದೆ. "ಹಗ್ಗವೇ ನೋಡು, ಸೊಗಸಾಗಿದ್ದೇನೆ" ಎಂದೆ. "ಇದೇ ನನ್ನ ಗುರುತು. ದಿಟವಾಗಿಯೂ ಹೆಣ್ಣಾಗಲು ಬಯಸುತ್ತೇನೆ. ನಾನ್ಯಾರಿಗೂ ಹಾನಿಮಾಡಲು ಇಲ್ಲಿ ಇಲ್ಲ. ನನ್ನ ಗುರುತನ್ನು ಹೇಳಲು ಇಲ್ಲಿದ್ದೇನೆ. ಯಾರೂ ನನ್ನನ್ನು ಒಪ್ಪುತ್ತಿಲ್ಲ. ಹೀಗಿರುವಾಗ, ಏಕೆ ಸಾಯಬೇಕು? ನಾನು ಪರಿಪೂರ್ಣಳು. ನೀನು ಏನೂ ಅಲ್ಲದವ?" ಆ ಕ್ಷಣದಲ್ಲಿ ಹಗ್ಗವೇ ಕುಟುಂಬವಾಯಿತು; ಸ್ನೇಹಿತರು, ಸಂಬಂಧಿಕರು, ಶಿಕ್ಷಕರು, ಸಹಪಾಠಿಗಳು ಯಾರೂ ಪರಿಪೂರ್ಣರಲ್ಲ. ವಾಸಿಸುತ್ತಿದ್ದ ಸಮಾಜ, ಅನುಭವಿಸಿದ ಹಿಂಸೆ ಯಾವುದೂ ಪರಿಪೂರ್ಣವಾಗಿಲ್ಲ.

ಈ ಸಮಾಜಕ್ಕಾಗಿ ಬದುಕಬೇಕು; ಜನರ ಮನಸ್ಥಿತಿಯನ್ನು ಮತ್ತವರ ನಡಾವಳಿಯನ್ನು ಬದಲಾಯಿಸಬೇಕು ಎಂದು ನಿರ್ಧರಿಸಿದೆ. ಇಂದು ಬದುಕುತ್ತಿರುವ ಆ ಸ್ವಾಭಿಮಾನ ನನ್ನೊಳಗೆ ಅಂದು ಕಂಡಿತು. ಅದೇ ಈಗ ನನ್ನಲ್ಲಿರುವ ಶಕ್ತಿ. ಇಲ್ಲದಿದ್ದರೆ, ಇಪ್ಪತ್ತೆಂಟು ವರ್ಷಗಳ ಹಿಂದೆಯೇ ಸತ್ತುಹೋಗಿರುತ್ತಿದ್ದೆ. ಆ ಎರಡು ಸೆಕೆಂಡುಗಳು ಇಡೀ ಜೀವನವನ್ನು ಬದಲಿಸಿಬಿಟ್ಟವು!

**ಆಕರ :** ಅಕ್ಕಯ್ ಪದ್ಮಶಾಲಿ (ಆತ್ಮಕಥನ)

* * * * *

# 4. ನಮ್ಮ ಸಮಾಜ - ಒಂದು ಮೌಲ್ಯಮಾಪನ (ಓದು ಪಠ್ಯ)

– ಎಂ. ಬಸವಣ್ಣ

ನಮ್ಮ ಸಮಾಜ ಇಂದು ಬಹಳ ದುಸ್ಥಿತಿಯಲ್ಲಿದೆ ಎನ್ನುವ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಸುದ್ದಿ ಮತ್ತು ದೃಶ್ಯ ಮಾಧ್ಯಮಗಳು ಬಿತ್ತರಿಸುತ್ತಿರುವ ಸಮಾಚಾರಗಳನ್ನು ಅವಲೋಕಿಸಿದರೆ ಅದು ಬಹಳಮಟ್ಟಿಗೆ ನಿಜವೆನಿಸುತ್ತದೆ. ಪ್ರತಿದಿನ ಪತ್ರಿಕೆಗಳ ಮೂರನೆಯ ಪುಟದಲ್ಲಿ ಅಚ್ಚಾಗುತ್ತಿರುವ ಹಾಗೂ ದೂರದರ್ಶನ ಚಾನಲ್‌ಗಳು ಬಿತ್ತಿರಿಸುತ್ತಿರುವ ವಿಷಯಗಳನ್ನು ಗಮನಿಸಿ. ಕಳ್ಳತನ, ಕೊಲೆ, ಸುಲಿಗೆ, ಭ್ರಷ್ಟಾಚಾರ, ಆತ್ಮಹತ್ಯೆ, ಸ್ತ್ರೀಯರ ಮೇಲಣ ಅತ್ಯಾಚಾರ (ಇತ್ತೀಚೆಗೆ ಇದು ಗಂಡಸರ ಮೇಲೂ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ), ಮುಂತಾದವೇ ಅಲ್ಲಿ ತುಂಬಿರುತ್ತವೆ. ಇದನ್ನೆಲ್ಲಾ ಗಮನಿಸಿದಾಗ ನಮ್ಮದು ರೋಗಿಷ್ಠ ಸಮಾಜ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಅಭಿಪ್ರಾಯದಲ್ಲಿ ಕೊಂಚ ಉತ್ಪ್ರೇಕ್ಷೆ ಇರಬಹುದು. ಮೇಲೆ ಹೇಳಿದ್ದೆಲ್ಲಾ ಸಂಪೂರ್ಣ ನಿಜವಾಗಿದ್ದರೆ, ನಾನು ಇದನ್ನು ಬರೆಯಲು ಬದುಕುತ್ತಿರಲಿಲ್ಲ; ಓದಲು ನೀವೂ ಇರುತ್ತಿರಲಿಲ್ಲ. ಯುದ್ಧ, ಕೊಲೆ, ಸುಲಿಗೆ, ಕಳ್ಳತನ, ಅತ್ಯಾಚಾರಗಳು ನಡೆಯುತ್ತಿವೆ ನಿಜ. ಅವು ಎಲ್ಲಾ ಕಾಲದಲ್ಲೂ ಇದ್ದವೆ. ಸುಮಾರು ಕಳೆದ 5,600 ವರ್ಷಗಳಲ್ಲಿ 14,600 ಯುದ್ಧಗಳು ನಡೆದಿರುವುದಾಗಿ ಇತಿಹಾಸ ಹೇಳುತ್ತದೆ. ಕ್ರೌರ್ಯ, ಆಕ್ರಮಣ ಎಲ್ಲಾ ಜೀವಿಗಳಲ್ಲೂ ಕಂಡುಬರುವ ಒಂದು ಹುಟ್ಟುಗುಣ. ಆದರೆ, ಒಟ್ಟಾರೆಯಾಗಿ ನೋಡಿದರೆ ಅವುಗಳ ಸಂಭವನೀಯತೆ ಬಹಳ ಕಡಿಮೆ. ಅಂಥ ದುಷ್ಕೃತ್ಯಗಳಲ್ಲಿ ತೊಡಗುವ ಜನಗಳ ಸಂಖ್ಯೆ ಅಷ್ಟೇನು ಹೆಚ್ಚಾಗಿರಲಿಕ್ಕಿಲ್ಲ. ಅವರ ಸಂಖ್ಯೆ ಇಡೀ ಸಮಾಜದಲ್ಲಿ ಸುಮಾರು ಶೇಕಡ ಎರಡರಿಂದ ಐದರವರೆಗೆ ಇರಬಹುದು.

ಸಮಾಜದಲ್ಲಿ ಅವ್ಯವಹಾರಗಳು ಹೆಚ್ಚಾಗಿ ನಡೆಯುತ್ತಿರುವಂತೆ ನಮಗೆ ತೋರಲು ಒಂದು ಕಾರಣವಿದೆ. ನಾವು ನಮ್ಮ ಪರಿಸರದಲ್ಲಿ ನಡೆಯುವ ಕೆಟ್ಟ ಘಟನೆಗಳನ್ನು ಗಮನಿಸುವಷ್ಟು ಸುಲಭವಾಗಿ ಒಳ್ಳೆಯವನ್ನು ಗಮನಿಸುವುದಿಲ್ಲ. ಮನೋವಿಜ್ಞಾನಿಗಳ ಪ್ರಕಾರ, ನಮ್ಮ ಮನಸ್ಸು ನಕಾರಾತ್ಮಕ ವಿಷಯಗಳನ್ನು ಶೀಘ್ರವಾಗಿ ಗ್ರಹಿಸುತ್ತಿದೆ. ಅವನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತದೆ. (According to physhologists we are more sensitized to notice the negative than the positive. The phenomenon is called automatic vigilance - a strong tendency to notice the undesirable and remember it.) ನಮ್ಮ ಪತ್ರಿಕೆಗಳು ಕೂಡ ಹೆಚ್ಚಿಗೆ ಅಹಿತಕರವಾದ ವಿಷಯಗಳನ್ನೇ ಪ್ರಕಟಿಸುತ್ತವೆ. ಒಳ್ಳೆಯದನ್ನು ಪ್ರಕಟಿಸಿದರೆ ಓದುವವರಾರು? ಒಂದು ರೇಪ್ ಸುದ್ದಿ ಸ್ವಾರಸ್ಯವಾಗಿ ಕಂಡಷ್ಟು ರಾಮನವಮಿ ಸಂಗೀತದ ಸುದ್ದಿ ಕಂಡುಬರುವುದಿಲ್ಲ. ನಿಮ್ಮ ಪತ್ನಿ ಒಂದು ದಿನ ಸಾರಿಗೆ ಉಪ್ಪು ಹೆಚ್ಚಾಗಿ ಹಾಕಿದ್ದರೆ ಅವಳನ್ನು ತೀವ್ರವಾಗಿ ಆಕ್ಷೇಪಿಸುವ ನೀವು, ಅವಳು ಚೆನ್ನಾಗಿ ಅಡಿಗೆ ಮಾಡಿದ ದಿನ ಹೊಗಳಿದ್ದು ಕಡಿಮೆ. ಥಾಮಸ್ ಹಾರ್ಡಿ ಹೇಳಿರುವಂತೆ ನಾವು ಯುದ್ಧದ ಇತಿಹಾಸವನ್ನು ಓದುವಷ್ಟು ಆಸಕ್ತಿಯಿಂದ ಶಾಂತಿಯ ಇತಿಹಾಸವನ್ನು ಓದುವುದಿಲ್ಲ. ಒಳ್ಳೆಯದನ್ನು ಕೇಳುವ, ನೋಡುವ, ಓದುವ, ಆಲೋಚಿಸುವ, ತಿಳಿಯಲು ಹಂಬಲಿಸುವ ಪ್ರವೃತ್ತಿ ನಮ್ಮಲ್ಲಿ ಕಡಿಮೆ. ಅದೊಂದು ಮಾನವ ಸಹಜ ಪ್ರವೃತ್ತಿ.

ಹಾಗೆಂದ ಮಾತ್ರಕ್ಕೆ ನಮ್ಮ ಸಮಾಜದಲ್ಲಿ ನಡೆಯುತ್ತಿರುವುದೆಲ್ಲಾ ಲೇಸೆಂದು ಹೇಳಬರುವುದಿಲ್ಲ. ಎಲ್ಲಾ ಸಮಾಜಗಳಲ್ಲೂ, ಎಲ್ಲಾ ಕಾಲದಲ್ಲೂ ಒಳ್ಳೆಯವು ಕೆಟ್ಟವು ಜತೆಜತೆಯಾಗಿಯೇ ಜರುಗುತ್ತವೆ. ಇಡೀ ವಿಶ್ವದಲ್ಲಿ ಪರಸ್ಪರ ವಿರೋಧಿ ಕ್ರಿಯೆಗಳು ಸದಾ ನಡೆಯುತ್ತವೆ. ಹುಟ್ಟು–ಸಾವು, ಕತ್ತಲೆ–ಬೆಳಕು, ಆರೋಗ್ಯ–ಅನಾರೋಗ್ಯ, ಯುದ್ಧ–ಶಾಂತಿ, ಕಳ್ಳತನ–ಪರೋಪಕಾರ, ಕೊಲೆ–ರಕ್ಷಣೆ, ಒಳ್ಳೆಯದು–ಕೆಟ್ಟದು, ಜತೆಯಾಗಿ ಬರುತ್ತವೆ, ಇರುತ್ತವೆ, ಹೋಗುತ್ತವೆ. ಆದುದರಿಂದ ನಮ್ಮ ಸಮಾಜ ಒಳ್ಳೆಯದೊ ಕೆಟ್ಟದೊ ಎಂದು ಒಂದು ಖಚಿತವಾದ ತೀರ್ಮಾನಕ್ಕೆ ಬರುವುದು ಸುಲಭವಲ್ಲ. ಸಮಾಜ ಒಳ್ಳೆಯದೊ ಕೆಟ್ಟದೊ ಎಂಬುದನ್ನು ವಿಮರ್ಶಿಸುವ ಮೊದಲು ಸಮಾಜವೆಂದರೇನು ಎಂಬುದನ್ನು ಕೊಂಚ ಪರಿಶೀಲಿಸೋಣ.

## ಸಮಾಜದ ಪರಿಕಲ್ಪನೆ

ಸಮಾಜವೆಂಬುದು ಒಂದು ಅಮೂರ್ತ ಪರಿಕಲ್ಪನೆ; ಇದು ಸಮಾಜ ಎಂದು ಅದನ್ನು ಮುಟ್ಟಿ ತೋರಿಸಲು ಬರುವುದಿಲ್ಲ. ನಮ್ಮ ಪರಿಸರದಲ್ಲಿರುವ ಸಂಘ–ಸಂಸ್ಥೆಗಳು, ಅವುಗಳು ನಡೆಸುತ್ತಿರುವ ವ್ಯಾಪಾರ ವ್ಯವಹಾರಗಳು, ಅವು ಅನುಸರಿಸುತ್ತಿರುವ ನೀತಿ–ನಿಯಮಗಳು, ಇವೆಲ್ಲವುಗಳನ್ನು ಒಟ್ಟಾಗಿ ನಿರ್ದೇಶಿಸಲು ನಾವು ಹುಟ್ಟಿಹಾಕಿರುವ ಒಂದು ಪರಿಕಲ್ಪನೆ "ಸಮಾಜ". ನಮ್ಮ ಕುಟುಂಬ ಸಮಾಜದ ಒಂದು ಪ್ರಮುಖ ಘಟಕ, ಹಾಗೆ ನಮ್ಮ ವಿದ್ಯಾಸಂಸ್ಥೆಗಳು, ವ್ಯಾಪಾರಿ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು, ನ್ಯಾಯಾಲಯಗಳು, ರಾಜಕೀಯ ಪಕ್ಷಗಳು, ಸರ್ಕಾರ, ಇವೆಲ್ಲಾ ಸಮಾಜದ ಪರಿಕಲ್ಪನೆಯ ಒಳಗೆ ಬರುತ್ತವೆ. ಇವೆಲ್ಲವೂ ಸುಗಮವಾಗಿ ನಡೆಯುತ್ತಿದ್ದರೆ ನಮ್ಮ ಸಮಾಜ ಅಭಿವೃದ್ಧಿ ಪಥದಲ್ಲಿದೆ. ಆರೋಗ್ಯವಾಗಿದೆ ಎನ್ನಬಹುದು. ಇಲ್ಲವಾದರೆ ನಮ್ಮದು ರೋಗಿಷ್ಟ ಸಮಾಜ. ನಾನು ಮೊದಲೇ ಹೇಳಿದಂತೆ ಸಮಾಜದಲ್ಲಿ ಒಳ್ಳೆಯದು ಕೆಟ್ಟದು ಒಟ್ಟೊಟ್ಟಿಗೆ ಇರುತ್ತವೆ. ಸಮಾಜ ನಿಂತ ನೀರಲ್ಲ. ಅದು ಗತಿಶೀಲವಾದುದು; ಅದರಲ್ಲಿ ಬದಲಾವಣೆಯಾಗುತ್ತಲೇ ಇರುತ್ತದೆ. ಆಗುತ್ತಿರುವ ಬದಲಾವಣೆಗಳು ಒಳ್ಳೆಯವೊ ಕೆಟ್ಟವೊ ಎಂಬುದು ನಾವು ಅವನ್ನು ನೋಡುವ ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ. ನಮ್ಮ ದೃಷ್ಟಿಕೋನ ಪ್ರಚಲಿತ ಸಾಮಾಜಿಕ ಮೌಲ್ಯಗಳಿಂದ ನಿರ್ಧರಿಸಲ್ಪಟ್ಟಿರುತ್ತದೆ. ಆರ್ಥಿಕ, ಧಾರ್ಮಿಕ, ನೈತಿಕ, ಮಾನವೀಯ, ಮುಂತಾದ ಮೌಲ್ಯಗಳಲ್ಲಿ ಯಾವುದರ ಪ್ರಭಾವ ಪ್ರಧಾನವಾಗಿದೆ ಎಂಬುದು ಇಲ್ಲಿ ಮುಖ್ಯ. ಆರ್ಥಿಕ ಮೌಲ್ಯದ ಪ್ರಭಾವ ಹಿರಿದಾಗಿದ್ದರೆ, ಮಾನವೀಯ ಮತ್ತು ನೈತಿಕ ಮೌಲ್ಯಗಳು ಕೆಳಮುಖವಾಗಬಹುದು. ಸಂಬಂಧಗಳಲ್ಲಿ ಬಿರುಕು ಕಂಡುಬರಬಹುದು. ನಮಗೆ ತಪ್ಪಾಗಿ ಕಂಡದ್ದು ಕೆಲವು ವಿಮುಕ್ತ (ಲಿಬರಲ್) ಸಮಾಜಗಳಲ್ಲಿ ಸರಿಯಾಗಿರುವಂತೆ ಕಂಡುಬರಬಹುದು. ಕಾಲಕಳೆದಂತೆ ಮೌಲ್ಯಗಳು ಬದಲಾಗುತ್ತಿರುತ್ತವೆ. ಉದಾಹರಣೆಗೆ, ಒಂದು ಕಾಲದಲ್ಲಿ ನಮ್ಮಲ್ಲಿ ಬಾಲ್ಯವಿವಾಹ ಶ್ರೇಷ್ಠವೆನಿಸಿತ್ತು. ಯಾವುದೋ ಒಂದು ಕುಟುಂಬದವರು ಹೆಣ್ಣುಮಗುವಿಗೆ ಅವಳು ಋತುಮತಿಯಾಗುವುದರೊಳಗೆ ವಿವಾಹ ಮಾಡದಿದ್ದರೆ ಅಂಥವರನ್ನು ಸಮಾಜದಿಂದ ಬಹಿಷ್ಕರಿಸಲಾಗುತ್ತಿತ್ತು. ಮನುಧರ್ಮ ಶಾಸ್ತ್ರದ ಪ್ರಕಾರ ಹೆಣ್ಣುಮಕ್ಕಳಿಗೆ 8–12 ವರ್ಷಗಳೊಳಗೆ ವಿವಾಹ ಮಾಡಬೇಕಿತ್ತು. ಇಂದು ಬಾಲ್ಯವಿವಾಹ ನಿಷೇಧಿಸಲ್ಪಟ್ಟಿದೆ. ನಮ್ಮ ಸಮಾಜದಲ್ಲಿ ವಿವಾಹ ವಿಚ್ಛೇದನ, ವಿಧವಾ ವಿವಾಹಗಳನ್ನು ಕುರಿತು ಆಲೋಚಿಸುವುದು ಕೂಡ ಸಾಧ್ಯವಿರಲಿಲ್ಲ. ಈಗ ಅವು ನಡೆಯುತ್ತಿವೆ. ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವದಿಂದಾಗಿ ಲೈಂಗಿಕ ವರ್ತನೆಗಳಿಗೆ ಸಂಬಂಧಿಸಿದ ನೀತಿನಿಯಮಗಳು ಸಡಿಲಗೊಳ್ಳುತ್ತಿವೆ. ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳಬರುವುದಿಲ್ಲ. ಅವು ನಾವು ನೋಡುವ ದೃಷ್ಟಿಯನ್ನನುಸರಿಸಿರುತ್ತವೆ. ಈ ದೃಷ್ಟಿಯಿಂದ ಸಮಾಜವನ್ನು ಅದರ ಘಟಕಗಳು ಮತ್ತು ಅಂಗ ಸಂಸ್ಥೆಗಳನ್ನು ಪರಿಶೀಲಿಸಬೇಕು/ವಿಮರ್ಶಿಸಬೇಕು. ಅವುಗಳಲ್ಲಿ ಕೆಲವನ್ನು ನೋಡೋಣ.

## ಕೌಟುಂಬಿಕ ವ್ಯವಸ್ಥೆ

ಮೊದಲಿಗೆ ನಮ್ಮ ಕುಟುಂಬಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸೋಣ. ಕುಟುಂಬ ಸಮಾಜದ ಮೂಲ ಘಟಕ. ಕುಟುಂಬಗಳಿಲ್ಲದ ಸಮಾಜವನ್ನು ಊಹಿಸುವುದು ಸಾಧ್ಯವಿಲ್ಲ. ಒಂದು ಕಾಲದಲ್ಲಿ ನಮ್ಮ ದೇಶ ಹಳ್ಳಿಗಳಿಂದ ತುಂಬಿತ್ತು. ವ್ಯವಸಾಯ (ಕೃಷಿ) ನಮ್ಮ ಜನರ ಪ್ರಮುಖ ಉದ್ಯೋಗವಾಗಿತ್ತು. ನಮ್ಮಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತು. ಅಂಥ ಕುಟುಂಬಗಳಲ್ಲಿ ಹಿರಿಯರು, ಕಿರಿಯರು, ಹೆಂಗಸರು, ಗಂಡಸರು, ಅಶಕ್ತರು, ಸಶಕ್ತರು ಎಲ್ಲರೂ ಒಟ್ಟಾಗಿ ವಾಸಿಸುತ್ತಿದ್ದರು. ಒಟ್ಟಾಗಿ ದುಡಿಯುತ್ತಿದ್ದರು. ಒಟ್ಟಾಗಿ ಉಣ್ಣುತ್ತಿದ್ದರು. ನಿಧಾನವಾಗಿ ಕಾಲ ಬದಲಾಗುತ್ತಾ ಬಂತು. ಕೈಗಾರಿಕೆಗಳು ನಗರಗಳಲ್ಲಿ ಸ್ಥಾಪಿತವಾದವು. ಕೃಷಿಗಿಂತ ಫ್ಯಾಕ್ಟರಿ ಕೆಲಸ ಆಕರ್ಷಕವಾಯಿತು. ಕೈಗಾರಿಕೆಗಳಲ್ಲಿ ಕೆಲಸ ದೊರಕಿಸಿಕೊಳ್ಳಲು ಹೆಚ್ಚಿಗೆ ವಿದ್ಯಾಭ್ಯಾಸದ ಅವಶ್ಯಕತೆ ಬಂತು. ಇದಕ್ಕಾಗಿ ಹಳ್ಳಿಯ ಮಕ್ಕಳು ಪಟ್ಟಣಗಳಿಗೆ ಹೋಗಬೇಕಾಯ್ತು. ಪಟ್ಟಣಕ್ಕೆ ಬಂದು, ವಿದ್ಯೆ ಕಲಿತು, ಅಲ್ಲಿಯೇ ಕೆಲಸಕ್ಕೆ ಸೇರಿ, ಯಾರನ್ನಾದರೂ ಮದುವೆಯಾಗಿ, ಪುಟ್ಟದೊಂದು ಮನೆಮಾಡಿ, ವಾಸ್ತವ್ಯ ಹೂಡುವುದು ಆರಂಭವಾಯಿತು. ಮೊದಲಿಗೆ ತಿಂಗಳಿಗೋ ವರ್ಷಕ್ಕೋ ಒಂದು ಸಾರಿ ಹಳ್ಳಿಗೆ ಹೋಗಿಬರುತ್ತಿದ್ದ ಮಕ್ಕಳು, ಬರುಬರುತ್ತಾ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದರು. ಹಳ್ಳಿಯ ಪರಿಸರ ಪಟ್ಟಣದರಷ್ಟು ಆಕರ್ಷಕವಾಗಿಲ್ಲದೆ, ಹಳ್ಳಿಯ ಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಿ, ಪಟ್ಟಣಕ್ಕೆ ಬಂದವರು ಅಲ್ಲೇ ಉಳಿಯುವಂತಾಯಿತು. ಪಟ್ಟಣದಲ್ಲಿ ವಾಸ್ತವ್ಯ ಹೂಡಿದ ಮಕ್ಕಳು ತಮ್ಮ ತಂದೆ ತಾಯಿ, ಸೋದರ ಸೋದರಿಯರನ್ನು

ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬರುವಂತೆ ಕರೆಯುತ್ತಿದ್ದರು. ನಿಜ. ಆದರೆ, ಅದು ಇಬ್ಬರಿಗೂ ಅನಾನುಕೂಲವಾದ್ದರಿಂದ, ಅಂಥ ಪ್ರಯತ್ನ ಮುಂದುವರೆಯಲಿಲ್ಲ. ಹಳ್ಳಿಯಿಂದ ಮಕ್ಕಳು ಪಟ್ಟಣಕ್ಕೆ ಬಂದು ಹಳ್ಳಿಯ ಮನೆಗಳು "ಖಾಲಿ ಗೂಡು" ಗಳಾದವು (Empty nest). ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾದವು.

ಕೆಲವು ಬುದ್ಧಿವಂತ ಮಕ್ಕಳು ದೂರದ ಹೊರ ಪ್ರಾಂತಗಳಲ್ಲಿ ನೆಲಸಿ ತಮ್ಮ ಕುಟುಂಬಗಳನ್ನು ಸಂಪೂರ್ಣವಾಗಿ ಮರೆಯುವಂತಾಯ್ತು; ಇನ್ನೂ ಕೆಲವು ಅತಿ ಬುದ್ಧಿವಂತರಾದವರು ವಿದೇಶಗಳಲ್ಲಿ ನೆಲೆಸಿ, ತಮ್ಮ ಊರು ಕೇರಿ ಇರಲಿ, ತಾವು ಹುಟ್ಟಿದ ನಾಡಿನಿಂದಲೇ ದೂರವಾದರು. ಹೀಗೆ, ನಗರೀಕರಣ (Urbanization), ಕೈಗಾರಿಕೀಕರಣ (Industrialization) ಮತ್ತು ಜಾಗತೀಕರಣ (Globalization) ಗಳಿಂದಾಗಿ, ಜನರ ಜೀವನಶೈಲಿ ಬದಲಾಗಿ, ಅವಿಭಕ್ತ ಕುಟುಂಬ ವ್ಯವಸ್ಥೆ ಮುರಿದುಬಿತ್ತು. ಅವಿಭಕ್ತ ಕುಟುಂಬ ವ್ಯವಸ್ಥೆ ಉತ್ತಮವಾಗಿತ್ತು. ಅದು ಮುರಿದುಬಿದ್ದು, ನಮ್ಮ ಸಮಾಜ ಹಾಳಾಯಿತೆಂಬುದು ಇಲ್ಲಿನ ಅಭಿಪ್ರಾಯವಲ್ಲ. ಹಳ್ಳಿಯ ಮಕ್ಕಳು ಪಟ್ಟಣಕ್ಕೆ ಬಂದರು, ಮತ್ತೆ ಹಳ್ಳಿಗೆ ಹಿಂದಿರುಗಲಿಲ್ಲ. ಸಮಾಜದಲ್ಲಿ ಬದಲಾವಣೆಯಾಯ್ತು, ಎಂದು ಹೇಳುವುದಷ್ಟೇ ಇಲ್ಲಿನ ಉದ್ದೇಶ. ಇಲ್ಲಿ ನಡೆಯುತ್ತಿರುವ ಬದಲಾವಣೆ ಒಳ್ಳೆಯದೋ ಕೆಟ್ಟದೋ ಎಂಬುದನ್ನು ಕಾಲವೇ ನಿರ್ಧರಿಸಬೇಕು. ಸದ್ಯದ ಸ್ಥಿತಿ ಎಂದರೆ ಈ ಬದಲಾವಣೆಯಿಂದಾಗಿ ತಂದೆ ತಾಯಿಯರಿಂದ ಮಕ್ಕಳು ದೂರವಾದರು, ಕೊನೆಗಾಲದಲ್ಲಿ ತಂದೆ ತಾಯಿಯರು ವೃದ್ಧಾಶ್ರಮ ಸೇರುವಂತಾಯಿತು.

ಈ ಸಂದರ್ಭದಲ್ಲಿ, ಬಹಳ ಹಿಂದೆ ನನ್ನ ಹಳ್ಳಿಯ ಇಬ್ಬರು ಹಿರಿಯರ ನಡುವೆ ನಡೆದ ಸಂಭಾಷಣೆ ನೆನಪಿಗೆ ಬರುತ್ತಿದೆ. ಅವರಿಬ್ಬರು ಊರಿನ ಪ್ರಮುಖರು, ಕೃಷಿಕರು, ತಕ್ಕಮಟ್ಟಿಗೆ ಅನುಕೂಲವಾಗಿದ್ದವರು. ಒಬ್ಬರು ತಮ್ಮ ಮಕ್ಕಳನ್ನು ಉನ್ನತ ವ್ಯಾಸಂಗಕ್ಕಾಗಿ ಪಟ್ಟಣಕ್ಕೆ ಕಳಿಸಿದ್ದರು. ಇನ್ನೊಬ್ಬರು ತಮ್ಮೂರ ಶಾಲೆಯಲ್ಲಿ ಕಲಿತದ್ದು ಸಾಕೆಂದು ತಮ್ಮ ಮಕ್ಕಳನ್ನು ಮನೆಯಲ್ಲೇ ಉಳಿಸಿಕೊಂಡಿದ್ದರು. ಮೊದಲನೇ ಹಿರಿಯರು ಎರಡನೆಯವರನ್ನು "ನೀವೇಕೆ ನಿಮ್ಮ ಮಕ್ಕಳನ್ನು ಹೆಚ್ಚಿಗೆ ಓದಲು ನಗರಕ್ಕೆ ಕಳಿಸಲಿಲ್ಲ ?" ಎಂದು ಕೇಳಿದರು. ಅದಕ್ಕೆ ಎರಡನೆಯವರು ಕೊಟ್ಟ ಉತ್ತರ: "ನನಗೆ ನನ್ನ ಮಕ್ಕಳನ್ನು ಕಳೆದುಕೊಳ್ಳುವುದು ಬೇಕಿರಲಿಲ್ಲ" ಎಂದು. ಅವರ ಮಾತು ನನ್ನನ್ನು ಬಹಳ ಆಲೋಚನೆಗೆ ಹಚ್ಚಿತು. ಎರಡನೆಯವರ ಪ್ರಕಾರ, ಆಧುನಿಕ ವಿದ್ಯಾಭ್ಯಾಸ ಮಕ್ಕಳನ್ನು ಮನೆಯಿಂದ, ತಂದೆ ತಾಯಿಯರಿಂದ, ದೂರಮಾಡುತ್ತದೆ; ಮನೆಯನ್ನು ಒಡೆಯುತ್ತದೆ. ಹಳ್ಳಿಯವರ ಮಾತಿನಲ್ಲಿ "ಮನೆ ಮುರಿಯುವ" ಕೆಲಸ ಮಾಡುತ್ತದೆ ಎಂದಾಗಿತ್ತು. ಓದಲು ಪಟ್ಟಣಕ್ಕೆ ಬಂದ ಮಕ್ಕಳು ಮರಳಿ ಮನೆಗೆ ಹಿಂತಿರುಗುವುದಿಲ್ಲ ಎಂಬುದು ಅವರ ಅಭಿಪ್ರಾಯ. ಅವರಿಗೆ ಉನ್ನತ ವಿದ್ಯಾಭ್ಯಾಸಕ್ಕಿಂತ ತಮ್ಮ ಕುಟುಂಬದ ಒಳಿತು ಮುಖ್ಯವಾಗಿತ್ತು. ಅವರ ಆಲೋಚನೆ ನಮಗೆ–ನಿಮಗೆ ತಪ್ಪಾಗಿ ತೋರಬಹುದು. ಅವರಿಗೆ ಅದೇ ಯೋಗ್ಯವೆನಿಸಿತ್ತು. ಹಳ್ಳಿಯಿಂದ ಪಟ್ಟಣಕ್ಕೆ ಬಂದ ಮಕ್ಕಳೆಲ್ಲಾ ಓದಿ, ಶಿಕ್ಷಕರಾಗಿ, ವಿಜ್ಞಾನಿಗಳಾಗಿ, ಡಾಕ್ಟರಾಗಿ, ಲಾಯರಾಗಿ, ಇಂಜಿನೀಯರಾಗಿ, ಸರ್ಕಾರಿ ಅಧಿಕಾರಿಗಳಾಗಿ, ದೊಡ್ಡವರಾಗಿ ಬೆಳೆಯುತ್ತಾರೆಂಬ ಗ್ಯಾರಂಟಿ ಏನು? ಆಗಬಹುದು, ಆಗದಿರಲೂಬಹುದು. ಅದಕ್ಕೆ ಬದಲು ಎಷ್ಟೋ ಅಷ್ಟು ಓದುಬರಹ ಕಲಿತು, ಹುಟ್ಟಿದ ಊರಲ್ಲಿ, ಮನೆಯಲ್ಲಿ ಉಳಿದು, ಅಲ್ಲೇ ಸಮೃದ್ಧ ಜೀವನ ನಡೆಸಬಾರದೇಕೆ? ಹಾಗೆ ಮಾಡುವುದು ಸಾಮಾಜಿಕವಾಗಿ ಲೇಸಲ್ಲವೇ? ಅದು ಮೇಲೆ ಹೇಳಿದ ಹಿರಿಯರ ಆಲೋಚನಾಸರಣಿ.

ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಹಳ್ಳಿಯ ಮಕ್ಕಳನ್ನು ತಂದೆ ತಾಯಿಯರಿಂದ ದೂರಮಾಡುತ್ತಿದೆ ಎಂಬುದಂತು ನಿಜ. ಪಟ್ಟಣಕ್ಕೆ ಬಂದ ಮಕ್ಕಳು, ತಮ್ಮ ಹಳ್ಳಿ ಮನೆಗೆ, ತಂದೆ ತಾಯಿಯರ ಬಳಿಗೆ ಹಿಂದಿರುಗುವ ಸಾಧ್ಯತೆ ಬಹಳ ಕಡಿಮೆ; ಇಲ್ಲವೇ ಇಲ್ಲ ಎಂದರೂ ತಪ್ಪಿಲ್ಲ, ಹಿರಿಯರ ಕಷ್ಟಸುಖಗಳಿಗೆ ಮಕ್ಕಳು ಆಗುವುದಿಲ್ಲ. ಎಷ್ಟೋ ವೇಳೆ ಅವರು ಸತ್ತಾಗ ನೋಡಲು ಹೋಗದಿದ್ದದ್ದು ಇದೆ. ಇದು ನಮಗೆ ಆಧುನಿಕ ಶಿಕ್ಷಣ ನೀಡಿರುವ ವರ, ಮಾಡಿರುವ ಉಪಕಾರ. ಇಂಥ ಶಿಕ್ಷಣ ನಮಗೆ ಬೇಕೆ? ವಿದ್ಯಾವಂತರಾದ ಮಕ್ಕಳು ಹುಟ್ಟಿದ ಮನೆಗೆ ಹಿಂತಿರುಗಿ, ಅಲ್ಲಿಯೇ ಏನಾದರೂ ಉದ್ಯೋಗ ಮಾಡಿಕೊಂಡು, ನಾಲ್ಕು ಜನರಿಗೆ ಬೇಕಾಗುವಂತೆ ಬಾಳಿ ಬದುಕಲು ಅನುವಾಗುವಂಥ ಶಿಕ್ಷಣವನ್ನು ರೂಪಿಸುವುದು ಸಾಧ್ಯವಿಲ್ಲವೆ? ನಮಗೆ ಈಗಿರುವ "ಮನೆಮುರುಕ" ಶಿಕ್ಷಣವಷ್ಟೇ ಸಾಕೆ? ಯೋಚಿಸಬೇಕಾದ ವಿಚಾರ.

ಇದಿಷ್ಟು ಹಳ್ಳಿಗಳ ಕುಟುಂಬಗಳ ಕತೆ. ನಗರಗಳಲ್ಲಿ ಕೌಟುಂಬಿಕ ವ್ಯವಸ್ಥೆ ಇನ್ನೊಂದು ಬಗೆಯದು. ಇಲ್ಲಿ ಕೌಟುಂಬಿಕ ಜೀವನ ಯಾಂತ್ರಿಕವಾಗಿದೆ. ಇಲ್ಲಿರುವುದೆಲ್ಲಾ ಹೆಚ್ಚಿಗೆ ವಿಭಕ್ತ ಕುಟುಂಬಗಳಿಗೆ ತಂದೆ, ತಾಯಿ ಮತ್ತು

ಒಂದೋ ಎರಡೋ ಮಕ್ಕಳು, ಮನೆಯಲ್ಲಿ ಅವರು ಒಬ್ಬರೊಡನೊಬ್ಬರು ಮಾತನಾಡುವುದು, ಕಾಲ ಕಳೆಯುವುದು, ಒಟ್ಟಿಗೆ ಕುಳಿತು ಊಟ ಮಾಡುವುದು ಅಪರೂಪ. ತಂದೆ ಕೆಲಸಕ್ಕೆ ಹೋಗುವಾಗ ಮಗು ಇನ್ನೂ ಎದ್ದಿರುವುದಿಲ್ಲ. ಅವನು ಮನೆಗೆ ಬಂದಾಗ ಮಗು ಮಲಗಿರುತ್ತದೆ. ರಜಾದಿನಗಳಲ್ಲಿ ತಂದೆ ಮಲಗಿ ವಿಶ್ರಾಂತಿ ಪಡೆಯುತ್ತಿರುತ್ತಾನೆ. ಹತ್ತು ವರ್ಷಗಳಾದರೂ ಪಕ್ಕದ ಮನೆಯವರ ಹೆಸರು ಗೊತ್ತಿರುವುದಿಲ್ಲ. ಅವರ ಪರಿಚಯವಾಗಿರುವುದಿಲ್ಲ. ನನ್ನ ಪಕ್ಕದ ಮನೆಯವರ ಹೆಸರು ನನ್ನ ಮಗನಿಂದ ತಿಳಿದುಬಂತು. ಒಂದು ಸಾರಿ ನಮ್ಮ ಮನೆಯಲ್ಲಿ ಕಳ್ಳತನವಾಯ್ತು. ಮರುದಿನ ನ್ಯೂಸ್‌ಪೇಪರ್‌ನಲ್ಲಿ ನೋಡಿ ನಮ್ಮ ಪಕ್ಕದ ಮನೆಯವರು ಬಂದು ವಿಚಾರಿಸಿದರು. ಹಾಗಿದೆ ನಮ್ಮ ನಗರವಾಸಿಗಳ ಸಾಂಘಿಕ ಕಳಕಳಿ.

ಹೀಗೆ ಆಧುನಿಕ ಶಿಕ್ಷಣ, ನಗರೀಕರಣ, ಕೈಗಾರಿಕೀಕರಣ, ಜಾಗತೀಕರಣಗಳಿಂದ ನಮ್ಮ ಸಮಾಜದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ನಾವು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮುಂದುವರೆದಿದ್ದೇವೆಂದು ಹೇಳಲಾಗುತ್ತಿದೆ. ಅದು ನಿಜವಿದ್ದರೆ ಅದರಿಂದ ನಮ್ಮ ಸಮಾಜಕ್ಕೆ ಎಷ್ಟು ಒಳ್ಳೆಯದಾಗಿದೆ ಎಂಬುದು ಯೋಚಿಸಬೇಕಾದ ವಿಷಯ.

**ಶಿಕ್ಷಣ ಸಂಸ್ಥೆಗಳು**

ಇನ್ನು ಸಮಾಜದ ಅಂಗ ಸಂಸ್ಥೆಗಳನ್ನು ಪರಿಶೀಲಿಸೋಣ. ಕುಟುಂಬ ವ್ಯವಸ್ಥೆಯಲ್ಲಿ ಬದಲಾವಣೆ ಆಗುತ್ತಿರುವುದನ್ನು ನೋಡಿದೆವು. ನಮ್ಮ ಶಿಕ್ಷಣ ರಂಗದಲ್ಲಿ ಏನಾಗುತ್ತಿದೆ ಎಂಬುದನ್ನು ಪರಿಶೀಲಿಸೋಣ. ಸಂಖ್ಯಾದೃಷ್ಟಿಯಿಂದ ಹೇಳುವುದಾದರೆ ಇಂದು ನಾವು ಬಹಳ ಮುಂದುವರೆದಿದ್ದೇವೆ. 1900 ರಲ್ಲಿ ಭಾರತದಲ್ಲಿ ಸಾಕ್ಷರತೆ 5%, 1945 ರಲ್ಲಿ 20% ಇದ್ದದ್ದು ಇಂದು ಸುಮಾರು 75% ಆಗಿದೆ : ಪುರುಷರು 82% ; ಹೆಂಗಸರು 65%, ಶಾಲಾಕಾಲೇಜುಗಳು ಎಲ್ಲೆಲ್ಲೂ ತಲೆ ಎತ್ತಿ ನಿಂತಿವೆ. ಸುಮಾರು 95% ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. 80% ಶಾಲೆಗಳನ್ನು ಸರ್ಕಾರ ನಡೆಸುತ್ತಿದೆ. 20% ಖಾಸಗಿಯವು, 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಲಾಗುತ್ತಿದೆ. ಆದರೆ, ಪ್ರಾಥಮಿಕ ಶಿಕ್ಷಣ ಪಡೆದವರಲ್ಲ 15% ಹೈಸ್ಕೂಲ್ ತಲುಪುತ್ತಾರೆ. ಹೈಸ್ಕೂಲ್‌ಗೆ ಬಂದವರಲ್ಲಿ ಕೆಲವು ಮಂದಿ ಕಾಲೇಜುಗಳಿಗೆ ಬರುತ್ತಾರೆ. ನಮ್ಮ ದೇಶದ ಕಾಲೇಜು ವಯಸ್ಸಿನ ಮಕ್ಕಳಲ್ಲಿ 7% ಮಾತ್ರ ಕಾಲೇಜ್ ಶಿಕ್ಷಣ ಕೊಡಬಲ್ಲೆವು.

ಕೆಲದಿನಗಳ ಹಿಂದೆ ನನ್ನ ಗಮನಕ್ಕೆ ಬಂದ ಅಂಕಿಅಂಶಗಳ ಪ್ರಕಾರ, ಇಂದು ನಮ್ಮಲ್ಲಿ 20 ಕೇಂದ್ರಾಡಳಿತ ವಿಶ್ವವಿದ್ಯಾಲಯಗಳಿವೆ. 215 ರಾಜ್ಯಗಳು ನಡೆಸುವಂಥವು. ಇವುಗಳಡಿಯಲ್ಲಿ 16,000 ಕಾಲೇಜುಗಳಿವೆ. ಅವುಗಳಲ್ಲಿ 1,800 ಹೆಣ್ಣುಮಕ್ಕಳಿಗೆ ಮೀಸಲಾದವು. 1,522 ಇಂಜಿನಿಯರಿಂಗ್ ಕಾಲೇಜುಗಳಲ್ಲಿ 5,82,000 ವಿದ್ಯಾರ್ಥಿಗಳಿದ್ದಾರೆ. 1,244 ಪಾಲಿಟೆಕ್ನಿಕ್‌ಗಳಲ್ಲಿ 2,65,000 ವಿದ್ಯಾರ್ಥಿಗಳು ಓದುತ್ತಿದ್ದಾರೆ. ನಮ್ಮ ಐಐಟಿಗಳಲ್ಲಿ 10,000 ವಿದ್ಯಾರ್ಥಿಗಳು ಓದುತ್ತಿದ್ದು ಇವರು ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ. ಇದಲ್ಲದೆ ವಿಶಿಷ್ಟ ತರಬೇತಿಗಾಗಿ ನಿರ್ಮಿಸಲ್ಪಟ್ಟಿರುವ 33 ರಾಷ್ಟ್ರಮಟ್ಟದ ಸಂಸ್ಥೆಗಳು ಕೆಲಸಮಾಡುತ್ತಿವೆ. 100 ಡೀಮ್ಡ್ ವಿಶ್ವವಿದ್ಯಾಲಯಗಳಿವೆ. ಇತ್ತೀಚೆಗೆ ದೂರಶಿಕ್ಷಣದ ಮೂಲಕ ಕಾಲೇಜು ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಇಡೀ ಪ್ರಪಂಚದಲ್ಲಿ ಹೈಯರ್ ಎಜುಕೇಶನ್‌ನಲ್ಲಿ ನಮ್ಮದು 3ನೇ ಸ್ಥಾನ (ಚೈನಾ, ಯುಎಸ್‌ಎ ಅನಂತರ). ಇದೆಲ್ಲ ಸಂತೋಷಪಡಬೇಕಾದ ವಿಚಾರ.

ಆದರೆ, ನಮ್ಮಲ್ಲಿರುವ ಶಿಕ್ಷಣ ಸಂಸ್ಥೆಗಳ ಸ್ಥಿತಿ ಹೇಗಿದೆ ಎಂಬುದು ಗಮನಿಸಬೇಕಾದ ವಿಚಾರ. ಹಳ್ಳಿಗಾಡಿನ ಪ್ರಾಥಮಿಕ ಶಿಕ್ಷಣದ ಸ್ಥಿತಿ ಚಿಂತಾಜನಕವಾಗಿದೆ. ಅಲ್ಲಿನ ಶಿಕ್ಷಣದ ಗುಣಮಟ್ಟ ಬಹಳ ಕೆಳಗಿದೆ. ಸಾರ್ವಜನಿಕ (ಸರ್ಕಾರಿ) ಶಾಲೆಗಳು ದನದ ದೊಡ್ಡಿಗಳಾಗಿವೆ. ಅವುಗಳಲ್ಲಿ ಕಟ್ಟಡವಿದ್ದರೆ, ಬೆಂಚು ಕುರ್ಚಿಗಳಿರುವುದಿಲ್ಲ. ಅವೆರಡೂ ಇದ್ದರೆ ಅಧ್ಯಾಪಕರಿರುವುದಿಲ್ಲ. ಇರುವವರು ಪಾಠ ಮಾಡುವುದಿಲ್ಲ. ಕೆಲವರಿಗೆ ಪಾಠ ಮಾಡುವುದು ತಿಳಿದಿರುವುದಿಲ್ಲ. ಕೆಲವೆಡೆ ಸರ್ಕಾರಿ ಶಾಲೆಗಳನ್ನು ಎಂದು, ಹೇಗೆ ಮುಚ್ಚುವುದೆಂದು ಆಲೋಚಿಸಲಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಇದ್ದುದರಲ್ಲಿ ಚೆನ್ನಾಗಿವೆ. ಅವು ಇರುವುದೆಲ್ಲಾ ನಗರಗಳಲ್ಲಿ. ನಗರಗಳಲ್ಲಿ ಸುಮಾರು 50% ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ಹೋಗುತ್ತಿದ್ದಾರೆ. ಅವು ವ್ಯಾಪಾರಿ ಕೇಂದ್ರಗಳಾಗಿವೆ; ಅಲ್ಲಿ ವಿದ್ಯೆ ಮಾರಾಟದ ವಸ್ತುವಾಗಿದೆ. ಸಾಮಾನ್ಯ ಜನರು ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವುದು ಕನಸಿನ ಮಾತು. ಈ ಎರಡು ಬಗೆಯ ಸಂಸ್ಥೆಗಳಲ್ಲಿ ಅಂತರ ಬಹಳವಿದ್ದು, ಆ ಅಂತರ ಅಲ್ಲಿ ಕಲಿತ ಮಕ್ಕಳ ಮೇಲೆ ಪ್ರಭಾವ ಬೀರಿ, ಸಮಾಜವನ್ನೇ ಇಬ್ಬಗೆಯಾಗಿಸುತ್ತಿದೆ.

ನಮ್ಮ ಕಾಲೇಜು ಶಿಕ್ಷಣದ ಮಟ್ಟ ಕೂಡ ಕೆಳಮಟ್ಟದ್ದು. ಪ್ರಪಂಚದಲ್ಲಿರುವ 200 ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ನಮ್ಮದು ಒಂದೂ ಇಲ್ಲ. ನಮ್ಮಲ್ಲಿ ನಡೆಯುವ ಸಂಶೋಧನೆಗಳು ಪ್ರಪಂಚದಲ್ಲಿ ಗುರುತಿಸಲ್ಪಟ್ಟಿಲ್ಲ. ಅವು ಮೇಲ್ಮಟ್ಟದ ಜರ್ನಲ್‌ಗಳಲ್ಲಿ ಪ್ರಕಟವಾಗಿಲ್ಲ. ಶ್ರೇಷ್ಠಮಟ್ಟದ ಸಂಶೋಧನೆಗಳಿಗೆ ಪ್ರೋತ್ಸಾಹವಿಲ್ಲ. ನಮ್ಮ ಕಾಲೇಜುಗಳಲ್ಲಿ 25% ಅಧ್ಯಾಪಕರ ಸ್ಥಾನಗಳು ಖಾಲಿ ಇವೆ. 57% ಅಧ್ಯಾಪಕರಿಗೆ ಪಿ.ಎಚ್.ಡಿ. ಡಿಗ್ರಿ ಇಲ್ಲ. ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮ ಇಂಗ್ಲೀಷ್ ಆಗಿದ್ದು, ಆ ಭಾಷೆಯಲ್ಲಿನ ಪ್ರಾವೀಣ್ಯತೆ ಹಲವರಿಗಿಲ್ಲದ್ದು ಎದ್ದುಕಾಣುತ್ತಿದೆ.

ನಮ್ಮ ಶಾಲಾ ಕಾಲೇಜುಗಳು ಕಲಿಸುತ್ತಿರುವ ವಿದ್ಯೆಯಾದರೂ ಎಂಥದು ? ಇಂದು ಅಲ್ಲಿ ಕಲಿಸುತ್ತಿರುವುದು ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಹೇಗೆ ಎಂಬುದನ್ನು; ಜೀವನ ಮಾಡುವುದನ್ನಲ್ಲ. ಉನ್ನತ ಶಿಕ್ಷಣ ಪಡೆದು ಹೊರಬಂದ ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಏನನ್ನಾದರೂ ಮಾಡಲು ಕಲಿಸಲಾಗಿದೆಯೆ? ಅವರಿಗೆ ಸ್ವತಂತ್ರವಾಗಿ ಆಲೋಚಿಸುವುದು ಕೂಡ ಬರುವುದಿಲ್ಲ. ಅವರ ಗುರಿಯೆಲ್ಲಾ ಕಷ್ಟಪಟ್ಟು, ಏನಾದರೂ ಮಾಡಿ, ಪರೀಕ್ಷೆಯಲ್ಲಿ ಪಾಸಾಗಿ, ಎಂಥದಾದರೂ ಒಂದು ಸರ್ಕಾರಿ ಕೆಲಸ ಗಿಟ್ಟಿಸಿಕೊಳ್ಳುವುದು; ಅನಂತರ ವಿರಾಮವಾಗಿ (ಕೆಲಸ ಮಾಡದೆ) ಕಾಲ ಕಳೆಯುವುದು. ನಮ್ಮ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಪಡೆದು ಹೊರಬಂದು ಜೀವನ ನಡೆಸುತ್ತಿರುವ ಕೆಲವರು ಹೇಳಿದ ಮಾತುಗಳು ಸ್ವಾರಸ್ಯವಾಗಿವೆ. ಒಬ್ಬ ಒಳ್ಳೆಯ ಡಾಕ್ಟರಾಗಬೇಕಾದರೆ, ಅವನು ಮೆಡಿಕಲ್ ಕಾಲೇಜಿನಲ್ಲಿ ಕಲಿತದ್ದನ್ನು ಮರೆಯಬೇಕಂತೆ. ಒಬ್ಬ ಒಳ್ಳೆಯ ಉಪಾಧ್ಯಾಯನಾಗಬೇಕಾದರೆ ಅವನು ಟೀಚರ್ ಟ್ರೈನಿಂಗ್ ಕಾಲೇಜಿನಲ್ಲಿ ಕಲಿತದ್ದನ್ನು ಮರೆತನಂತರವಂತೆ. ಹಾಗೆ ಲಾ ಕಾಲೇಜಿನಲ್ಲಿ ಕಲಿತದ್ದನ್ನು ಅಲ್ಲಿಯೇ ಬಿಟ್ಟುಬಂದಾಗ ಮಾತ್ರ ಒಳ್ಳೆಯ ಲಾಯರ್ ಆಗುವುದು ಸಾಧ್ಯವಂತೆ. ಹೀಗೆ ವೃತ್ತಿಶಿಕ್ಷಣಕ್ಕೂ ವೃತ್ತಿ ಜೀವನಕ್ಕೂ ನಡುವಿನ ಅಂತರ ಬಹಳವಿದೆ. ಇಂಥ ಶಿಕ್ಷಣ ನಮಗೆ ಬೇಕೆ?

ಬುದ್ಧಿಗೆ ಹೆಚ್ಚು ಒತ್ತುಕೊಡುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಾನವೀಯ ಭಾವನೆಗಳು ನಾಶವಾಗುತ್ತಿವೆ. ಓದುವುದು, ಬರೆಯುವುದು, ಕೂಡುವುದು–ಕಳೆಯುವುದನ್ನು ಕಲಿಯುವ ಭರದಲ್ಲಿ ಮಾನವರಾಗಿ ಬದುಕುವುದನ್ನು ಮರೆಯುತ್ತಿದ್ದೇವೆ. ನಮ್ಮ ಹಿರಿಯರು ಮಹಾಭಾರತ, ರಾಮಾಯಣ, ಪಂಚತಂತ್ರದ ಕತೆಗಳನ್ನು ಓದುತ್ತಾ ಬೆಳೆದುಬಂದವರು. ಇಂದಿನ ಮಕ್ಕಳು ಓದುವುದು ಫ್ಯಾಂಟಮ್, ಮಿಕ್ಕಿ ಮೌಸ್ ಬಗ್ಗೆ. ನಾನು 70 ವರ್ಷಗಳ ಹಿಂದೆ 6ನೇ ತರಗತಿಯಲ್ಲಿ ಓದಿದ "ಗುರುಕುಲ ಕಥಾವಳಿ" ಎಂಬ ಗುರುಶಿಷ್ಯರ ಸಂಬಂಧವನ್ನು ವಿವರಿಸುವ ಪೌರಾಣಿಕ ಕತೆಗಳ ಪುಸ್ತಕವನ್ನು ಇಂದು ಕೂಡ ನೆನೆಸಿಕೊಳ್ಳುತ್ತೇನೆ.

## ಅಣೆಕಟ್ಟುಗಳು–ಕೈಗಾರಿಕೆಗಳು

ಸ್ವಾತಂತ್ರ್ಯೋತ್ತರ ಭಾರತ ಕೆಲವು ರಂಗಗಳಲ್ಲಿ ಅಭಿವೃದ್ಧಿ ಹೊಂದಿದೆ. ಸ್ವಾತಂತ್ರ್ಯಪೂರ್ವದಲ್ಲಿ ನಾವು ನಮಗೆ ಸಾಲುವಷ್ಟು ಆಹಾರಧಾನ್ಯಗಳನ್ನು ಬೆಳೆಯಲಾಗುತ್ತಿರಲಿಲ್ಲ. ಸ್ವತಂತ್ರ ಬಂದ ಮೇಲೂ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾಗಿತ್ತು. ನಮ್ಮ ಮೊದಲ ಪಂಚವಾರ್ಷಿಕ ಯೋಜನೆಯ ಗುರಿ ಹಸಿರುಕ್ರಾಂತಿ. ಅದಕ್ಕಾಗಿ ಹಲವಾರು ಬೃಹತ್ ಅಣೆಕಟ್ಟುಗಳನ್ನು ಕಟ್ಟಲಾಯಿತು. ಈ ಅಣೆಕಟ್ಟುಗಳನ್ನು ಆಧುನಿಕ ದೇಗುಲಗಳೆಂದು ಕರೆಯಲಾಯ್ತು. ಸಾಕಷ್ಟು ಆಹಾರ ಬೆಳೆಯುವುದು ಸಾಧ್ಯವಾಯಿತು. ಸ್ವಾವಲಂಬನೆ ಸಾಧ್ಯವಾಯ್ತು. ಎರಡನೆಯ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಒತ್ತುಕೊಡಲಾಯ್ತು. ಅಂದು ನಮ್ಮ ನಾಯಕರ ದೂರದರ್ಶಿತ್ವದಿಂದ ನಮಗೆ ದುಡಿಯಲು ಕೆಲಸ, ಉಣ್ಣಲು ಅನ್ನ ದೊರಕುವಂತಾಯ್ತು. ಮುಂದಿನ ಯೋಜನೆಗಳು ನಮ್ಮನ್ನು ಅಭಿವೃದ್ಧಿಶೀಲ ದೇಶವೆಂದು ಗುರುತಿಸಿಕೊಳ್ಳಲು ಸಹಾಯಮಾಡಿದವು. ಇವೆಲ್ಲಾ ಒಳ್ಳೆಯ ಕೆಲಸಗಳೇ. ಇವುಗಳಿಂದಾಗಿ ನಾವು ಬಹಳ ಅಭಿವೃದ್ಧಿ ಹೊಂದಿದೆವು. ನಿಜ. ಆದರೆ ಇವುಗಳಿಗೆ ಒಂದು ಡಾರ್ಕ್ ಸೈಡ್ ಕೂಡ ಇದೆ. ಅದನ್ನು ಕೊಂಚ ಗಮನಿಸೋಣ.

ಅಣೆಕಟ್ಟುಗಳ ಮತ್ತು ಕೈಗಾರಿಕೆಗಳ ನಿರ್ಮಾಣದ ಇನ್ನೊಂದು ಮುಖವನ್ನು ನೀವು ಕಂಡಿದ್ದೀರೇನು? ಅಣೆಕಟ್ಟುಗಳನ್ನು ಕಟ್ಟಿ ಅಲ್ಲಿ ನದಿ ನೀರನ್ನು ಶೇಖರಿಸಲಾಯ್ತು. ಇದರಿಂದ ಅಪಾರವಾದ ಫಲವತ್ತಾದ ಭೂಮಿ ಮುಳುಗಡೆಯಾಯಿತು. ಹಲವು ರೈತರು ತಮಗೆ ಜೀವನಾಧಾರವಾಗಿದ್ದ ಭೂಮಿಯನ್ನು ಕಳೆದುಕೊಂಡರು. ಅಲ್ಲಿ ವಾಸಿಸುತ್ತಿದ್ದ ಜನರು ನಿರಾಶ್ರಿತರಾದರು. ಅವರಿಗೆ ಪರಿಹಾರ ಕೊಡಬೇಕೆಂದು ಸರ್ಕಾರ ಆದೇಶವನ್ನೇನೋ ಹೊರಡಿಸಿತು. ಅಂಥ ಪರಿಹಾರ

ಸರಿಯಾಗಿ ಭೂಮಿ ಕಳೆದುಕೊಂಡವರಿಗೆ ದೊರಕಿತೆ? ಹಾಗೆ ದೊರಕಲು ನಮ್ಮ ವ್ಯವಸ್ಥೆಯಲ್ಲಿ ಸಾಧ್ಯವಿದೆಯೇ? ಬಹಳಷ್ಟು ಪರಿಹಾರಧನ ಕೆಲವು ಅಧಿಕಾರಿಗಳ ಕಿಸೆ ಸೇರಿತು. ಉಳಿದದ್ದು ಭೂಮಿ ಕಳೆದುಕೊಂಡೆವೆಂದು 'ಬೊಬ್ಬೆಹೊಡೆದ' ಕೆಲವು ಶ್ರೀಮಂತರ ಪಾಲಾಯ್ತು. ಕೆಲವು ಅಯೋಗ್ಯ ಭೂಮಾಲೀಕರು ಬಂದ ಹಣದಿಂದ ತಿಂದು, ಕುಡಿದು, ಮಜಾಮಾಡಿ ಹಾಳಾದರು. ನಿಜವಾಗಿ ಭೂಮಿ ಕಳೆದುಕೊಂಡ ಜನರ ಕತೆ ಏನಾಯ್ತು? ಅವರ ಭೂಮಿ ಮುಳುಗಡೆಯ ಜತೆಯಲ್ಲೇ ಅವರೂ ಮುಳುಗಿಹೋದರು; ಪರಿಹಾರದ ಆಶ್ವಾಸನೆಗಳೂ ಮುಳುಗಿಹೋದವು. ಜನ ನಿರಾಶ್ರಿತರಾದರು. ಅವರ ಜೀವನ ನಾಶವಾಯಿತು. ಈ ವಿಚಾರವಾಗಿ ಹೆಚ್ಚಿಗೆ ತಿಳಿಯಬೇಕೆನ್ನುವವರು ಸರ್ದಾರ್ ಸರೋವರದ ಕತೆಯನ್ನು ಓದಿ ತಿಳಿದುಕೊಳ್ಳಿ. ಮೇಧಾ ಪಾಟ್ಕರ್ ಅವರ "ನರ್ಮದಾ ಬಚಾವ್" ಕುರಿತು ಓದಿರಿ, ತಿಳಿಯುತ್ತದೆ. ಇತ್ತೀಚೆಗೆ ಮಧ್ಯಪ್ರದೇಶದ ಖಾಂಡ್ವ ಜಿಲ್ಲೆಯ ಓಂಕಾರೇಶ್ವರ ಅಣೆಕಟ್ಟಿನ ವಿವಾದದ ಬಗ್ಗೆ ನೀವು ಓದಿರಬಹುದು. ಅಣೆಕಟ್ಟಿನಿಂದಾಗಿ ಭೂಮಿ ಕಳೆದುಕೊಂಡ ರೈತರು ನರ್ಮದಾ ನದಿ ನೀರಿಗಿಳಿದು 17 ದಿನ ಅಲ್ಲೇ ನಿಂತು ಸತ್ಯಾಗ್ರಹ ಮಾಡಿದರು. ನೀರಿನಲ್ಲಿ ನಿಂತ ಅವರ ಕಾಲುಗಳು ಸೆಲೆತು ಹೋಗಿದ್ದವು. ಅಷ್ಟು ದಿನ ಅವರು ಅಲ್ಲಿ ಹೇಗೆ ನಿಂತಿದ್ದರು ಎಂಬುದನ್ನು ಊಹಿಸಿಕೊಳ್ಳುವುದಕ್ಕೂ ಕಷ್ಟವಾಗುತ್ತದೆ. ಪುನರ್ವಸತಿ ವಿಚಾರವಾಗಿ ತಮಗಾಗುತ್ತಿರುವ ಅನ್ಯಾಯವನ್ನು ಅವರು ಹೊರ ಜಗತ್ತಿಗೆ ತೋರಿಸಲು ಅನುಸರಿಸಿದ ಹಾದಿ ಕರುಣಾಜನಕವಾಗಿತ್ತು; ಭಯಂಕರವಾಗಿತ್ತು. ಭೂಮಿಯನ್ನು ಕಳೆದುಕೊಂಡು ತಿನ್ನಲು ಕೂಳಿಲ್ಲದಾದ ಜನ ಇನ್ನೇನು ತಾನೆ ಮಾಡಲು ಸಾಧ್ಯ? ಇದೇ ರೀತಿ ಭೂಸುಧಾರಣೆ ಬೇಕೆಂದು 50 ಸಾವಿರ ಜನ ಗ್ವಾಲಿಯರ್‌ನಿಂದ ದೆಹಲಿಗೆ ಪಾದಯಾತ್ರೆಗೆ ಹೊರಟಾಗ ಅವರಿಗಾದ ಸಂಕಟವನ್ನು ಊಹಿಸಿ.

ಕೈಗಾರಿಕೆಗಳನ್ನು ಸ್ಥಾಪಿಸುವಾಗಲೂ ಆದದ್ದು ಇದೇ ಕತೆ. ಇಂಡಿಯನ್ ಸೋಷಿಯಲ್ ಇನ್‌ಸ್ಟಿಟ್ಯೂಟ್ ಪ್ರಕಾರ, ಇಂದು ನಮ್ಮ ದೇಶದಲ್ಲಿ 2.13 ಕೋಟಿ ಜನ ಭೂಮಿ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಅವರ ಪೈಕಿ 1.64 ಕೋಟಿ ಅಣೆಕಟ್ಟುಗಳಿಂದಾಗಿ ಭೂಮಿ ಕಳೆದುಕೊಂಡವರು. 25 ಲಕ್ಷ ಗಣಿಗಾರಿಕೆಗೆ ಬಲಿಯಾದವರು. 12.5 ಲಕ್ಷ ಕೈಗಾರಿಕೆಗಳಿಂದ ಹತರಾದವರು. 6 ಲಕ್ಷ ರಾಷ್ಟ್ರೀಯ ಉದ್ಯಾನಗಳಡಿಯಲ್ಲಿ ಹೂತಹೋದವರು.

ನಿಜ. ಸಾಕಾದಷ್ಟು ಬೆಳೆ ಬೆಳೆಯಲು, ವಿದ್ಯುತ್ ಉತ್ಪಾದಿಸಲು, ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸಲು, ದೊಡ್ಡ ಅಣೆಕಟ್ಟುಗಳು ಅವಶ್ಯಕ. ಜನರ ಆರ್ಥಿಕ ಸ್ಥಿತಿ ಉತ್ತಮವಾಗಲು, ಮೇಲ್ಮಟ್ಟದ ಜೀವನ ನಡೆಸಲು ಕೈಗಾರಿಕೆಗಳು ಬೇಕು. ದೇಶ ಮುಂದುವರೆಯಬೇಕು. ಅಭಿವೃದ್ಧಿಗಾಗಿ ಕೆಲವರು ತ್ಯಾಗ ಮಾಡಲೇಬೇಕು. ಆದರೆ, ಆ ತ್ಯಾಗಿಗಳ ಜೀವನ ನಾಶವಾಗಬೇಕೆ ? ಭೂಮಿ ಕಳೆದುಕೊಂಡ ಜನರಿಗೆ ಪುನರ್‌ವ್ಯವಸ್ಥೆ ಮಾಡಬೇಡವೆ? ಅಂಥ ಒಂದು ವ್ಯವಸ್ಥೆ ಇಂದಿನವರೆಗೆ ಎಲ್ಲಿಯಾದರು ಜಯಪ್ರದವಾಗಿ ಕೆಲಸಮಾಡಿದೆಯೆ ? ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣದಿಂದ, ಕೈಗಾರಿಕೆಗಳ ಸ್ಥಾಪನೆಯಿಂದ ಆಗಿರುವ ಪರಿಸರದ ನಾಶವನ್ನು ಕುರಿತು ನಾನು ಏನೂ ಹೇಳಿಲ್ಲ. ಅದನ್ನು ನೀವೇ ಊಹಿಸಿಕೊಳ್ಳಿ. ಇದು ನಮ್ಮ ಸಮಾಜ ಉದ್ಧಾರವಾಗುತ್ತಿರುವುದರ ಕತೆ.

### ರಾಜಕೀಯ ವ್ಯವಸ್ಥೆ

ಇಂದು ಬದಲಾಯಿಸಲಾರದಷ್ಟು ಕೆಟ್ಟಿರುವುದು ನಮ್ಮ ರಾಜಕೀಯ ವ್ಯವಸ್ಥೆ. ಏನನ್ನಾದರೂ ಬದಲಾಯಿಸಬಹುದು. ನಮ್ಮ ರಾಜಕೀಯ ವ್ಯವಸ್ಥೆಯನ್ನು, ರಾಜಕಾರಣಿಗಳ ಜೀವನಶೈಲಿಯನ್ನು ಬದಲಾಯಿಸುವುದು ಸಾಧ್ಯವೇ ಇಲ್ಲವೇನೋ ಎನಿಸುತ್ತಿದೆ. ನಮ್ಮ ರಾಜಕಾರಣ ಕೊಳೆತು ನಾರುತ್ತಿದೆ. ನಮ್ಮ ಆಡಳಿತಗಾರರು ಸಾರ್ವಜನಿಕರ ಹಣವನ್ನು ಮನಬಂದಂತೆ ಬಳಸುತ್ತಿದ್ದಾರೆ. ಇವರ ವೈಯಕ್ತಿಕ ತೆವಲುಗಳಿಗೆಲ್ಲಾ ಬೊಕ್ಕಸದ ಹಣ ದುರ್ಬಳಕೆಯಾಗುತ್ತಿದೆ. ದೇಶದ ಸಂಪತ್ತನ್ನು ಲೂಟಿ ಮಾಡುವುದೇ ತಮ್ಮ ಏಕೈಕ ಕಾಯಕವೆಂದು ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು ತಿಳಿದಂತಿದೆ. ಕಚೇರಿಯಲ್ಲಿನ ಪರಿಚಾರಕರು, ಕಾರು ಚಾಲಕರು, ಹೀಗೆ ಹತ್ತಾರು ನಮೂನೆಯ ಜನ ಇವರ ಸೇವೆಗೆಂದೇ ಮುಡುಪಾಗಿರುತ್ತಾರೆ. ಸಾಮಾನ್ಯ ಜನರಿಗಿಂತ ತಾವು ಮೇಲ್ಮಟ್ಟದವರೆನ್ನುವ ಭಾವನೆ ಇವರಲ್ಲಿ ಮನೆಮಾಡಿಕೊಂಡಿದೆ. ಆಫೀಸ್ ಪರಿಚಾರಕರನ್ನು ಇವರ ಮನೆಗೆಲಸದವರಂತೆ ನಡೆಸಿಕೊಳ್ಳುತ್ತಾರೆ. ಇವರ ಹೆಂಡತಿ ಮಕ್ಕಳು ನೆಂಟರಿಷ್ಟರನ್ನು ಎಲ್ಲೆಂದರಲ್ಲಿಗೆ ಕರೆದೊಯ್ಯಲು ಸರ್ಕಾರಿ ವಾಹನಗಳು ಉಪಯೋಗಿಸಲ್ಪಡುತ್ತಿವೆ. ಇವರೆಂದೂ ಜನರ ಕಲ್ಯಾಣ ತಮ್ಮ

ಜವಾಬ್ದಾರಿ ಎಂದು ಯೋಚಿಸಿದಂತೆ ಕಾಣುವುದಿಲ್ಲ. ಹಿಂದಿನ ಕಾಲದ ರಾಜರುಗಳು ಶೋಷಕರಾಗಿದ್ದರೂ, ಅವರಿಗೆ ಜನರ ಬಗ್ಗೆ ಕನಿಷ್ಠ ಕರುಣೆಯಾದರೂ ಇತ್ತು. ಅಂದು ರಾಜ ಒಬ್ಬ ಮಾತ್ರ ಶೋಷಣೆ ಮಾಡುತ್ತಿದ್ದ. ಇಂದು ರಾಜಕಾರಣಿಗಳೆಲ್ಲರೂ ಆ ಕೆಲಸ ಮಾಡುತ್ತಿದ್ದಾರೆ. ದೇಶದ ಸಂಪತ್ತು ಅದಕ್ಕೆ ಸಾಲುತ್ತಿಲ್ಲ.

ಪ್ರಜಾಪ್ರಭುತ್ವದ ಮೂಲಮಂತ್ರ ಜನಕಲ್ಯಾಣವೆಂದು ಬೊಗಳೆ ಬಿಡುತ್ತಾ, ಸರ್ಕಾರ ಆಷಾಡಭೂತಿತನವನ್ನು ಪ್ರದರ್ಶಿಸುತ್ತಿದೆ. ಸ್ವಜನರ ಹಿತಾಸಕ್ತಿಯೇ ಇಂದು ರಾಜಕಾರಣದ ಮೂಲಮಂತ್ರವಾಗಿದೆ. ಜನರ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಮೇರೆ ಮೀರಿದೆ. ಇದರಿಂದಾಗಿ ಜನರ ಅಸಹನೆ, ಅತೃಪ್ತಿ ಒಳಗೊಳಗೆ ಕುದಿಯುತ್ತಿದೆ. ಜನರಿಗೆ ರಾಜಕಾರಣಿಗಳ ಮೇಲೆ, ಆಳುವವರ ಮೇಲೆ, ಗೌರವ ಕಡಿಮೆಯಾಗಿ, ಅವರನ್ನು ಧಿಕ್ಕರಿಸುವ ಕಾಲ ಬಂದಿದೆ. ಅವರ ಅಸಹನೆ ರೊಚ್ಚು ಹೊರಹೊಮ್ಮಿ ಅವರು ಬೀದಿಗಿಳಿಯುವ ದಿನ ದೂರವಿಲ್ಲ. ಜನರಿಗೆ ಆಳುವವರ ಮೇಲೆ ಗೌರವವಿಲ್ಲದಿದ್ದರೆ, ಅವರ ಮೇಲೆ ಕಸ ಎಸೆಯಲು ಮುಂದಾದರೆ, ಅವರ ಮೇಲೆ ತಿರುಗಿ ಬೀಳುವಂತಾದರೆ, ಅದು ಅನಾಯಕತ್ವಕ್ಕೆ ಎಡೆಮಾಡುತ್ತದೆ. ಈಗಾಗಲೇ ರಸ್ತೆ ಸುಂಕ ವಸೂಲಿ ಮಾಡುವವನ ಮೇಲೆ ಗುಂಡು ಹಾರಿಸಿದ್ದನ್ನು, ಕೆಲವು ಪ್ರತಿಷ್ಠಿತರ ಮೇಲೆ ಪಾದರಕ್ಷೆ ಎಸೆದದ್ದನ್ನು, ಕೆನ್ನೆಗೆ ಹೊಡೆದದ್ದನ್ನು ಕೇಳಿದ್ದೇವೆ, ಟಿವಿಯಲ್ಲಿ ನೋಡಿದ್ದೇವೆ. ಹೀಗಾಗಬಾರದು; ಅದು ಶುಭಸೂಚನೆಯಲ್ಲ.

ಭ್ರಷ್ಟಾಚಾರ ಸಮಾಜದ ಎಲ್ಲಾ ಹಂತಗಳಲ್ಲಿ ತಾಂಡವವಾಡುತ್ತಿದೆ. ಸರ್ಕಾರ ನಡೆಸುತ್ತಿರುವ ಜನಪ್ರತಿನಿಧಿಗಳ ಪೈಕಿ ಮೂರನೇ ಒಂದರಷ್ಟು ಜನರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆಯೆಂದು ಬಹಿರಂಗವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದಕ್ಕೆ ಯಾವ ರಾಜಕಾರಣಿಯೂ ವಿರೋಧ ತೋರಲಿಲ್ಲ. ಅಂದ ಮೇಲೆ ಅದು ನಿಜವಿರಬೇಕು. ರಾಜಕಾರಣಿಗಳು ನಡೆಸುತ್ತಿರುವ ಐಷಾರಾಮಿ ಜೀವನವನ್ನು ಗಮನಿಸಿ, ಹಾಗೆ ಮಾಡಲು ಅವರಿಗೆ ಹಣವೆಲ್ಲಿಂದ ಬಂತು? ಅವರು ರಾಜಕಾರಣಕ್ಕೆ ಬಂದ ದಿನ ಅವರ ಆಸ್ತಿ ಎಷ್ಟಿತ್ತು? ಇಂದು ಎಷ್ಟಿದೆ? ಇದು ಎಲ್ಲರಿಗೂ ತಿಳಿದಿರುವ ವಿಷಯ. ಇದನ್ನು ಕಂಡುಹಿಡಿಯಲು ಒಂದು ತಜ್ಞರ ಸಮಿತಿ ಬೇಕೆ?

ಇಂದು ಬೆಳಕಿಗೆ ಬರುತ್ತಿರುವ ಆರ್ಥಿಕ ಅವ್ಯವಹಾರಗಳ ಸಂಖ್ಯೆ ಮತ್ತು ಗಾತ್ರವನ್ನು ನೋಡಿದರೆ ಎದೆನಡುಗುತ್ತದೆ. ನಮ್ಮನ್ನು ಆಳುವವರ ಪೈಕಿ ಯಾರಾದರೂ ಪ್ರಾಮಾಣಿಕರು ಇರುವರೇ ಎಂಬ ಅನುಮಾನ ಬರುತ್ತದೆ. ಭ್ರಷ್ಟಾಚಾರವನ್ನು ಒಂದು ಸಹಜಸ್ಥಿತಿ ಎಂದು ಜನ ಸ್ವೀಕರಿಸಿರುವಂತೆ ಕಾಣುತ್ತಿದೆ. ಒಂದು ವೇಳೆ ಭ್ರಷ್ಟಾಚಾರ ವಿರೋಧಿ ಚಳುವಳಿಗೆ ಗೆಲುವಾಗಿ, ಒಬ್ಬ ಯೋಗ್ಯ ಲೋಕ್‌ಪಾಲ್‌ನನ್ನು ಆಯ್ಕೆ ಮಾಡಬೇಕಾಗಿ ಬಂದರೆ, ಅಂಥ ವ್ಯಕ್ತಿಯನ್ನು ಎಲ್ಲಿಂದ ಹುಡುಕಿ ತರುವುದು? ದೇಶದಲ್ಲಿ ಅಂಥವರು ಯಾರಾದರೂ ಇದ್ದಾರೆಯೆ? ಎನ್ನುವ ಪ್ರಶ್ನೆಗಳು ಏಳುತ್ತಿವೆ.

## ಧರ್ಮ, ದರ್ಶನ ಮತ್ತು ಸಂಸ್ಕೃತಿ

ಭಾರತದ ಧಾರ್ಮಿಕ, ದಾರ್ಶನಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಬಹಳ ಪುರಾತನವಾದುದು. ಅಷ್ಟೇ ಮಹತ್ವ ಉಳ್ಳದ್ದು ಮತ್ತು ಜಗತ್ಪ್ರಸಿದ್ಧವಾದುದು. ಇಡೀ ವಿಶ್ವಬೆರಗಾಗುವಷ್ಟು ಸಾಂಸ್ಕೃತಿಕ ಹಿನ್ನೆಲೆ ಭಾರತದ್ದು. ನಾಲ್ಕು ವೇದಗಳು, ನೂರಾರು ಉಪನಿಷತ್ತುಗಳು, ಹದಿನೆಂಟು ಪುರಾಣಗಳು, ಇತಿಹಾಸವೆಂದು ಕರೆಸಿಕೊಳ್ಳುವ ರಾಮಾಯಣ ಮತ್ತು ಮಹಾಭಾರತಗಳು ನಮ್ಮಲ್ಲಿವೆ. ಜಗತ್ಪ್ರಸಿದ್ಧರಾದ ವ್ಯಾಸ, ವಾಲ್ಮೀಕಿಗಳು ಭಾರತೀಯರು. ಇಡೀ ಮಾನವ ಜನಾಂಗಕ್ಕೆ ಅನ್ವಯವಾಗುವಂತಹ ಮಾನವ ಧರ್ಮಶಾಸ್ತ್ರವನ್ನು (ಮನುಸ್ಮೃತಿ) ರಚಿಸಿದ ಹಿರಿಮೆ ಭಾರತದ್ದು. ಗೃಹಸ್ಥರಾದವರು ಅನುಸರಿಸಬೇಕಾದ ನೀತಿ ನಿಯಮಗಳನ್ನು ವಿವರಿಸುವ ಚಾಣಕ್ಯನ ಅರ್ಥಶಾಸ್ತ್ರವಿದೆ. ಕ್ರಿ.ಪೂ. 300ರಷ್ಟು ಹಿಂದೆಯೇ ವೈದ್ಯಶಾಸ್ತ್ರವನ್ನು ರಚಿಸಿದ ಚರಕ, ಸುಶ್ರುತ ಮತ್ತು ವಾಗ್ಭಟರು ನಮ್ಮವರು. ಪಾಣಿನಿಯಂಥ ವೈಯ್ಯಾಕರಣಿ ಭಾರತೀಯ, ಗಣಿತಶಾಸ್ತ್ರವನ್ನು ಬರೆದ ಆರ್ಯಭಟ ಮತ್ತು ಭಾಸ್ಕರರು ನಮ್ಮವರು. ಕವಿಗಳ, ನಾಟಕಕಾರರು ಜಗತ್ತಿನಲ್ಲಿ ಬೇರೆಲ್ಲೂ ಕಂಡುಬಂದಿಲ್ಲ. ಕಾದಂಬರಿಕಾರ ಬಾಣ, ಇತಿಹಾಸಕಾರ ಕಲ್ಹಣ, ಕವಿ ದಂಡಿನ್‌ನಂಥವರು ವಿಶ್ವದಲ್ಲಿ ಬಹಳ ಕಡಿಮೆ. ವಾತ್ಸಾಯನನ ಕಾಮಸೂತ್ರ ಭಾರತದ ಕೊಡುಗೆ. ಶಂಕರ, ರಾಮಾನುಜ ಮತ್ತು ಮಧ್ವಾಚಾರ್ಯರು ಹುಟ್ಟಿ ಬೆಳೆದ ನಾಡು ನಮ್ಮದು. ಬಸವಾದಿ ಪ್ರಮಥರು, ಪುರಂದರಾದಿ ದಾಸವರೇಣ್ಯರು, ಹಾಡಿದ ನಾಡಿದು, ಕಬೀರ, ರಾಮದಾಸ, ಜ್ಞಾನದೇವ, ನಾಮದೇವ, ವಲ್ಲಭಾಚಾರ್ಯ, ಚೈತನ್ಯ ಮಹಾಪ್ರಭು, ತಿರುವಳ್ಳುವರ್, ನಾರಾಯಣಗುರು, ಮುಂತಾದ

ಮಹನೀಯರು ಪ್ರಾತಃಸ್ಮರಣೀಯರು. ಆಧುನಿಕ ಕಾಲದ ರಾಮಕೃಷ್ಣ–ವಿವೇಕಾನಂದರು ಜಗತ್ಪ್ರಸಿದ್ಧರು, ಭಾರತೀಯ ಸಮಾಜವನ್ನು ಬೆಳಗಿದ ಮಹಾನುಭಾವರ ಹೆಸರುಗಳನ್ನು ಹೇಳ ಹೊರಟರೆ ಅದಕ್ಕೆ ಮೊದಲಿಲ್ಲ, ಕೊನೆಯಿಲ್ಲ.

ದಕ್ಷಿಣ ಭಾರತ ದೇಗುಲಗಳ ನಾಡು. ತಿರುಪತಿ, ಶ್ರೀಶೈಲ, ಮಧುರೈ, ತಿರುವಣ್ಣಾಮಲೈ, ತಂಜಾವೂರು, ಕನ್ಯಾಕುಮಾರಿ, ಪಳನಿ, ತಿರುವನಂತಪುರ; ಒಂದೆ ಎರಡೆ; ಗುಡಿ ಇಲ್ಲದ ಊರು ಇಲ್ಲಿಲ್ಲ. ಎಡವಿಬಿದ್ದೆಡೆಯಲ್ಲೆಲ್ಲಾ ದೇವಸ್ಥಾನಗಳಿವೆ. ಉತ್ತರದ ವಾರಣಾಸಿ, ಹರಿದ್ವಾರ, ಅಮರನಾಥ, ಬದ್ರಿನಾಥ, ಸೋಮನಾಥ, ದ್ವಾರಕ, ವೈಷ್ಣವೋದೇವಿ, ಗಯಾ, ಪ್ರಸಿದ್ಧ ಪುಣ್ಯಕ್ಷೇತ್ರಗಳು. ನಮ್ಮ ಶಿಲ್ಪಕಲೆ ಅಸದೃಶ, ಬೇಲೂರು, ಹಳೇಬೀಡು, ಸೋಮನಾಥಪುರ, ಖಜುರಾಹೋದಲ್ಲಿನ ಶಿಲ್ಪಗಳು ಅನನ್ಯ.

ಎಷ್ಟು ಸಮೃದ್ಧವಾದುದು ನಮ್ಮನಾಡು. ನಮ್ಮ ಸಂಸ್ಕೃತಿ, ಇಲ್ಲಿ ಹುಟ್ಟಿದ ನಾವು ಎಷ್ಟು ಪುಣ್ಯವಂತರು. ವಿಶ್ವದಲ್ಲಿನ ಎಲ್ಲ ಒಳಿತನ್ನು ನಾವು ಪಡೆದು ಬಂದಿರುವಂತೆ ಕಾಣುತ್ತದಲ್ಲವೆ ? ಆದರೆ, ಇಂದೇಕೆ ನಾವು ಇಷ್ಟು ಕೀಳುಮಟ್ಟಕ್ಕಿಳಿದಿದ್ದೇವೆ? ದೇವಾಲಯಗಳನ್ನು ಒಡೆದಿದ್ದೇವೆ. ಶಿಲ್ಪಗಳನ್ನು ನಾಶಪಡಿಸಿದ್ದೇವೆ. ದೇವರ ವಿಗ್ರಹಗಳನ್ನು ಕದ್ದುಮಾರುತ್ತಿದ್ದೇವೆ. ಸತ್ಯಮೇವ ಜಯತೆ ಎಂದು ಸಾರಿದ ನಾಡಿನಲ್ಲಿ ಎಲ್ಲೆಡೆ ಸುಳ್ಳು ಕೇಳಿಬರುತ್ತಿದೆ. ಅಹಿಂಸೆಯೇ ಪರಮಧರ್ಮವೆಂದು ಸಾರಿದ ನಾಡಿನಲ್ಲಿ ಕೊಲೆ, ಸುಲಿಗೆಗಳು ದಿನನಿತ್ಯದ ಸುದ್ದಿಗಳು. ಆಸೆಯೇ ದುಃಖದ ಮೂಲವೆಂದ ಬುದ್ಧನ ನಾಡಿನಲ್ಲಿ ದುರಾಸೆ ಹೆಚ್ಚಿ, ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ತಾವು ಮಾಡುತ್ತಿರುವುದು ಅನ್ಯಾಯವೆಂದು ಲಂಚಕೋರರಿಗೆ ಅನಿಸುತ್ತಲೇ ಇಲ್ಲ. ಅದು ತಪ್ಪೇ ಅಲ್ಲ. ಅದೊಂದು ಜೀವನವಿಧಾನವೆಂದು ಭಾವಿಸಲಾಗುತ್ತಿದೆ. ಭ್ರಷ್ಟಾಚಾರ ಜಗತ್ತಿನ ಎಲ್ಲೆಡೆ ನಡೆಯುತ್ತಿದೆ; ಅದೊಂದು ಸಹಜಕ್ರಿಯೆ ಎಂದು ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುವವರು ನಮ್ಮ ನಡುವಿದ್ದಾರೆ. ಹೆಣ್ಣನ್ನು ಜಗನ್ಮಾತೆ ಎಂದು ಕೊಂಡಾಡಿದ ನಾಡಿನಲ್ಲಿ ಅವಳು ಮಾರಾಟದ ವಸ್ತುವಾಗಿದ್ದಾಳೆ. ಹೆಣ್ಣಿನ ಭ್ರೂಣಹತ್ಯೆ ಅವ್ಯಾಹತವಾಗಿ ನಡೆಯುತ್ತಿದೆ. ಅವಳ ಮೇಲೆ ಅತ್ಯಾಚಾರವೆಸಲಾಗುತ್ತಿದೆ. ನಮ್ಮ ಧರ್ಮ, ಸಂಸ್ಕೃತಿಗಳು ನಾಶವಾಗುತ್ತಿವೆಯೆ? ಈ ನಾಡಿನಲ್ಲಿ ಧರ್ಮ ಸಂಸ್ಥಾಪನೆ ಮಾಡಲು ದೇವರು ಹತ್ತು ಅವತಾರವೆತ್ತಿ ಬಂದು ಏನು ಸಾಧಿಸಲಾಗದೆ ಕೈಚೆಲ್ಲಿ ಶೇಷನ ಮೇಲೆ ಮಲಗಿದ್ದಾನೆ!

**ಯಾಕೆ ಹೀಗೆ?**

ಈ ಪ್ರಶ್ನೆಗೆ ಉತ್ತರಿಸುವುದು ಸುಲಭವಲ್ಲ. ಈ ಮೊದಲೇ ಹೇಳಿರುವಂತೆ, ನಮ್ಮ ವಿಶ್ವದಲ್ಲಿರುವ ಪ್ರತಿಯೊಂದು ವಸ್ತು, ವಿಷಯ, ಪ್ರಾಣಿಗಳ ಅಸ್ತಿತ್ವವೂ ಒಂದು ಧ್ರುವತಾ ನಿಯಮಕ್ಕೆ (Polarity) ಒಳಪಟ್ಟಿರುವಂತೆ ಕಂಡುಬರುತ್ತದೆ. ಅಂದರೆ ಈ ವಿಶ್ವ ಪರಸ್ಪರ ವಿರೋಧಿ ಪ್ರವೃತ್ತಿಗಳ ಹಾಗೂ ನಿಯಮಗಳಿಂದ ಆವೃತವಾಗಿದೆ. ವಸ್ತುವಿನಂತೆ ಪ್ರತಿವಸ್ತು (Antimatter) ಒಂದಿದೆ ಎಂದು ವಿಜ್ಞಾನ ಹೇಳುತ್ತಿದೆ. ಹಾಗೆಯೇ ಮಾನವನ ವ್ಯಕ್ತಿತ್ವ ಕೂಡ ಪರಸ್ಪರ ವಿರೋಧ ಘಟಕಗಳಿಂದ ರಚಿಸಲ್ಪಟ್ಟಿದೆ ಎಂದು ಮನೋವಿಜ್ಞಾನಿಗಳು ಪ್ರತಿಪಾದಿಸುತ್ತಾರೆ. ಮಾನವರಲ್ಲಿ ಒಳ್ಳೆಯ ಗುಣಗಳಿರುವಂತೆ ದುರ್ಗುಣಗಳೂ ಇವೆ. ತನ್ನಲ್ಲಿರುವುದನ್ನೆಲ್ಲಾ ದಾನಮಾಡುವ ಒಬ್ಬ ಮನುಷ್ಯ ಇನ್ನೊಬ್ಬರ ವಸ್ತುಗಳನ್ನು ದೋಚಿದರೆ ಆಶ್ಚರ್ಯವಿಲ್ಲ. ಒಬ್ಬರನ್ನು ಅಮಿತವಾಗಿ ಪ್ರೀತಿಸಿದ ಓರ್ವ ಅದೇ ವ್ಯಕ್ತಿಯನ್ನು ಅದಕ್ಕಿಂತ ಹೆಚ್ಚಾಗಿ ದ್ವೇಷಿಸಿದ್ದಿದೆ. ಬೇರೆಯವರ ಒಳಿತಿಗಾಗಿ ಪ್ರಾಣಕೊಡುವ ಮಾನವ ಇನ್ನೊಬ್ಬನ ಪ್ರಾಣ ತೆಗೆಯಲು ಹೇಸುವುದಿಲ್ಲ. ಇಂಥವು ನಮ್ಮ ಸುತ್ತಲೂ ನಡೆಯುತ್ತಲೇ ಇರುತ್ತವೆ. ನಮ್ಮಲ್ಲಿರುವ ಕೆಡುಕನ್ನು ಮನೋವಿಜ್ಞಾನಿ ಕಾರ್ಲ್ ಯೂಂಗ್ ನೆರಳು ಅಥವಾ ಛಾಯೆ (Shadow) ಎಂದು ನಿರ್ದೇಶಿಸಿದ್ದಾನೆ. ನಿಮ್ಮ ನೆರಳು, ನೀವೆಲ್ಲಿ ಹೋದರೂ, ನಿಮ್ಮನ್ನು ಹಿಂಬಾಲಿಸುತ್ತಲೇ ಇರುತ್ತದೆ. ನೆರಳಿನಿಂದ ನಿಮಗೆ ಬಿಡುಗಡೆ ಇಲ್ಲ. ಅಂದಮೇಲೆ, ಕೊಲೆ, ಸುಲಿಗೆ, ಮೋಸ, ವಂಚನೆ ಮುಂತಾದ ದುರ್ಗುಣಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆಗಳು ನಮ್ಮಲ್ಲಿವೆ. ಅವು ನಮ್ಮಲ್ಲಿರುವುದನ್ನು ಗುರುತಿಸಿ, ಅವುಗಳನ್ನು ನಿಯಂತ್ರಣದಲ್ಲಿಡುವುದೇ ನಮಗಿರುವ ದಾರಿ. ಅಂದರೆ, ನಮ್ಮೊಳಗಿನ ಛಾಯೆ ನಮ್ಮ ವೈರಿ; ಅದನ್ನು ಗೆಲ್ಲುವುದು ಸುಲಭವಲ್ಲ. ಆದುದರಿಂದ ಛಾಯೆಯ ಅಸ್ತಿತ್ವವನ್ನು ಒಪ್ಪಿಕೊಂಡು, ಅರಿತು, ಅದರೊಡನೆ ಸಂಧಿಮಾಡಿಕೊಳ್ಳಬೇಕಾಗುತ್ತದೆ. ನಾವಾರು ಪರಿಪೂರ್ಣರಲ್ಲ. ಪರಿಶುದ್ಧರಲ್ಲ. ನಮ್ಮೆಲ್ಲರಲ್ಲೂ ಒಳ್ಳೆಯದು–ಕೆಟ್ಟದ್ದು ಒಟ್ಟೊಟ್ಟಿಗೆ ಇರುತ್ತದೆ ಎನ್ನುವ ಪರಿಜ್ಞಾನ ನಮಗಿರಬೇಕು. ಆಂತರಿಕ ಅರಿವಿರಬೇಕು. ಆತ್ಮಜ್ಞಾನವಿರಬೇಕು. ಇದನ್ನೇ ನಮ್ಮ ಋಷಿಗಳು "ಆತ್ಮ ಸಾಕ್ಷಾತ್ಕರ"

ಎಂದು ಕರೆದಿರುವುದು. ನಮ್ಮನ್ನು ನಾವು ಅರಿಯುವುದೇ ನಮ್ಮ ಸಮಾಜವನ್ನು ಉತ್ತಮಗೊಳಿಸುವ ಹಾದಿಯಲ್ಲಿ ಮೊದಲ ಹೆಜ್ಜೆ.

ನಾನೊಬ್ಬ ಮಹಾ ಆಶಾವಾದಿ. ನಮ್ಮಲ್ಲಿರುವ ಕೆಡುಕುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ನಾವು ಉತ್ತಮ ಸಮಾಜವನ್ನು ನಿರ್ಮಿಸಬಲ್ಲೆವು ಎನ್ನುವ ದೃಢವಾದ ನಂಬಿಕೆ ನನ್ನದು. ಅದು ಅನಿವಾರ್ಯವೆಂದು ನನಗನ್ನಿಸುತ್ತದೆ. ಡಾರ್ವಿನ್ನನ ಸಿದ್ಧಾಂತದ ಪ್ರಕಾರ ಮಾನವನೂ ಸೇರಿದಂತೆ ಸಕಲ ಜೀವಿಗಲ ಉತ್ಕರ್ಷಕ್ಕೆ ಯಾವ ಲಕ್ಷಣಗಳು ಸಹಾಯಮಾಡುವುವೋ ಅವು ಮಾತ್ರ ಉಳಿದುಬರುತ್ತವೆ. ಇದನ್ನು ಡಾರ್ವಿನ್ ಸ್ವಾಭಾವಿಕ ಆಯ್ಕೆ (Natural selection) ಎಂದಿದ್ದಾನೆ. ಆದುದರಿಂದ, ನಮ್ಮಲ್ಲಿನ ಕೆಡಕು ನಿಯಂತ್ರಣಕ್ಕೊಳಪಡಲೇಬೇಕು. ಒಳ್ಳೆಯದು ಉಳಿಯಲೇ ಬೇಕು. ಈ ಕಾರ್ಯಕ್ಕಾಗಿಯೇ ಸಮಾಜ ನಿರ್ಮಿತವಾಗಿರುವುದು. ಸಾಮಾಜಿಕ ಬದಲಾವಣೆಗೆ ಕಾಲ ಹಿಡಿಯುತ್ತದೆ. ಅದಕ್ಕಾಗಿ ನಾವು ಕಾಯಬೇಕು. "ಋತಮೊಂದೆ ಗೆಲ್ವುದು, ಅನೃತಮಲ್ತು".

## ಕೊನೆಯ ಮಾತು

ಒಂದು ಸಾರಿ, ಬಹಳ ಮನನೊಂದು ಸಮಾಜದ ದುಸ್ಥಿತಿಯ ಬಗ್ಗೆ ಮಾತನಾಡಿದ್ದನ್ನು ಕೇಳಿಸಿಕೊಂಡ ವ್ಯಕ್ತಿಯೊಬ್ಬರು ನನ್ನನ್ನು ಪ್ರಶ್ನಿಸಿದರು : "ನಮ್ಮ ಸಮಾಜ ಕೊಳೆತು ನಾರುತ್ತಿದೆ, ನಿಜ. ಇದನ್ನು ಬದಲಾಯಿಸಲು ಸಾಧ್ಯವಿಲ್ಲವೆ ?" ಎಂದು. ಅದಕ್ಕೆ ನಾನು "ಸಮಾಜವನ್ನು ಬದಲಾಯಿಸುವುದು ಸಾಧ್ಯವಷ್ಟೇ ಅಲ್ಲ; ಅದು ಸುಲಭ ಕೂಡ" ಎಂದೆ. ಅದಕ್ಕವರು ಆಶ್ಚರ್ಯದಿಂದ "ಅದು ಹೇಗೆ?" ಎಂದರು. ಅವರಿಗೆ ಅಚಾನಕ್ ಆಗಿ ನಾನು ಕೊಟ್ಟ ಉತ್ತರ ಅವರಿಗಷ್ಟೇ ಅಲ್ಲ. ನನಗೂ ಆಶ್ಚರ್ಯವನ್ನುಂಟು ಮಾಡಿತು. ಅವರಿಗೆ ಕೊಟ್ಟ ಉತ್ತರ ಹೀಗಿತ್ತು : ಇಂದಿನಿಂದ ಮನೆಗೆ ಹಿಂತಿರುಗಿದ ನಂತರ, ನೀವು ನಿಮ್ಮ ಮಕ್ಕಳಿಗೆ ಕಳಬೇಡಿ, ಕೊಲಬೇಡಿ, ಸುಳ್ಳು ಹೇಳಬೇಡಿ, ಅನ್ಯರ ಬಗ್ಗೆ ಅಸಹ್ಯಪಡಬೇಡಿ, ನಿಮ್ಮನ್ನು ನೀವು ಹೊಗಳಿಕೊಳ್ಳಬೇಡಿ, ಇತರರನ್ನು ಹಳಿಯಬೇಡಿ, ಎಂದು ನಿಷ್ಠೆಯಿಂದ, ಪ್ರಾಮಾಣಿಕವಾಗಿ, ಮನಮುಟ್ಟುವಂತೆ, ಪ್ರೀತಿಯಿಂದ ಹೇಳಿ. ಅವರು ಅದನ್ನು ಖಂಡಿತವಾಗಿ ಕಲಿಯುತ್ತಾರೆ, ಪಾಲಿಸುತ್ತಾರೆ (ಅದು ಮನೋವೈಜ್ಞಾನಿಕ ನಿಯಮ). ಆಗ ನಿಮ್ಮ ಮಕ್ಕಳು ಒಳ್ಳೆಯವರಾಗುತ್ತಾರೆ; ನಿಮ್ಮ ಕುಟುಂಬ ಒಳ್ಳೆಯದಾಗುತ್ತದೆ. ನಿಮ್ಮ ಕುಟುಂಬ ಒಳ್ಳೆಯದಾದರೆ ನಿಮ್ಮ ಸಮಾಜ ಒಳ್ಳೆಯದಾಗುತ್ತದೆ. ಈ ಮಾತುಗಳನ್ನು ಬಸವಣ್ಣ ಎಂದೋ ಹೇಳಿದ್ದ. ಅವನನ್ನು ದೇವರೆಂದು ಪೂಜಿಸುವ ನಾವು ಅವನ ಮಾತುಗಳನ್ನು ಮರೆತೆವು. ಸಮಾಜ ಬದಲಾಗಬೇಕೆನ್ನುವ ನೀವು, ನಿಮ್ಮನ್ನು ಮೊದಲು ಬದಲಾಯಿಸಿಕೊಳ್ಳಿ. ಸಮಾಜ ತಾನಾಗಿ ಬದಲಾಗುತ್ತದೆ. ದೇಶ ಬದಲಾಗುತ್ತದೆ. ಹೌದಲ್ಲವೇ?

**ಆಕರ :** ಲೂಸಿಫರ್ ಎಫೆಕ್ಟ್ (ಮನೋವೈಜ್ಞಾನಿಕ ಬರಹಗಳು) – ಎಂ. ಬಸವಣ್ಣ

* * * * *